ಗುರುವಾರ, ಡಿಸೆಂಬರ್ 12, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಂಜಾವು
ಪಶ್ಚಿಮ ಬಂಗಾಳದ ನಾದಿಯಾದಲ್ಲಿ ಚಳಿಗಾಲದ ಮುಂಜಾವಿನಲ್ಲಿ ಮಹಿಳೆ ಮತ್ತು ಮಗು ಕಂಡಿದ್ದು ಹೀಗೆ...

first circle
BROTHERHOOD IN BUSINESS

ಪರಮಪೂಜ್ಯ ಜಗದ್ಗುರು
ಶ್ರೀಶ್ರೀಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಉದ್ಯಮಿ ಒಕ್ಕಲಿಗ
UDYAMI VOKKALIGA

FC EXPO 2025

ಈ ಬಾರಿಯ ಎಫ್‌ಸಿ ಎಕ್ಸ್‌ಪೋ 2025 ಜನವರಿ ದಿನಾಂಕ 3, 4 ಮತ್ತು 5 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿರುವ ಗಾಯಿತ್ರಿ ಗ್ರಾಂಡ್ ಮತ್ತು ಗಾಯತ್ರಿ ವೃಕ್ಷದ ಸಭಾಂಗಣಗಳಲ್ಲಿ ಉದ್ಯಮಿ ಒಕ್ಕಲಿಗ ಪ್ರದರ್ಶನ–ಸಮ್ಮೇಳನ ಹಾಗೂ ಮೊದಲ ಬಾರಿಗೆ ಉದ್ಯಮಿ ಒಕ್ಕಲಿಗ ಜಿಲ್ಲಾ ಸಮ್ಮೇಳನಗಳು ಜರುಗಲಿವೆ, ಎಲ್ಲರಿಗೂ ಆದರದ ಸುಸ್ವಾಗತ.

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ॥ ನಂಜಾವಧೂತ ಮಹಾಸ್ವಾಮೀಜಿಯವರು
ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠ

ಶ್ರೀ ಹೆಚ್ ಡಿ ದೇವೇಗೌಡ
ಮಾಜಿ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ

ಶ್ರೀ ಬಿ ಎನ್ ಬಚ್ಚೇಗೌಡ
ಮಾಜಿ ಸಂಸದರು, ಚಿಕ್ಕಬಳ್ಳಾಪುರ

ಶ್ರೀ ಡಿ ಕೆ ಶಿವಕುಮಾರ್
ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಶ್ರೀ ಹೆಚ್ ಡಿ ಕುಮಾರಸ್ವಾಮಿ
ಉಕ್ಕು ಮತ್ತು ಭಾರೀ ಕೈಗಾರಿಕೆಗಳ ಸಚಿವರು
ಭಾರತ ಸರ್ಕಾರ

ಶ್ರೀಮತಿ ಶೋಭಾ ಕರಂದ್ಲಾಜೆ
ಎಂಎಸ್‌ಎಂಇ, ಕಾರ್ಮಿಕ ಮತ್ತು ಉದ್ಯೋಗ ಸಚಿವರು
ಭಾರತ ಸರ್ಕಾರ

ಶ್ರೀ ಕೃಷ್ಣ ಬೈರೇಗೌಡ
ಕಂದಾಯ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಚೆಲುವರಾಯಸ್ವಾಮಿ
ಕೃಷಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಕೆ ವೆಂಕಟೇಶ್
ಪಶುಸಂಗೋಪನೆ ಮತ್ತು ರೇಷ್ಮೆ ಕೃಷಿ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಎಂ ಸಿ ಸುಧಾಕರ್
ಉನ್ನತ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಸಿ ಎನ್ ಅಶ್ವತ್ಥನಾರಾಯಣ
ಮಾಜಿ ಉಪಮುಖ್ಯಮಂತ್ರಿ, ಕರ್ನಾಟಕ ಸರ್ಕಾರ

ಶ್ರೀ ಜಿ ಟಿ ದೇವೇಗೌಡ
ಮಾಜಿ ಸಚಿವರು
ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಶ್ರೀ ಗೋಪಾಲಯ್ಯ
ಮಾಜಿ ಸಚಿವರು
ಶಾಸಕರು, ಮಹಾಲಕ್ಷ್ಮಿ ವಿಧಾನಸಭಾ ಕ್ಷೇತ್ರ

ಶ್ರೀ ಬಿ ಎಲ್ ಶಂಕರ್
ಮಾಜಿ ಸಂಸದರು, ಚಿಕ್ಕಮಗಳೂರು

ಶ್ರೀ ಎ ಟಿ ರಾಮಸ್ವಾಮಿ
ಮಾಜಿ ಶಾಸಕರು
ಅರಕಲಗೂಡು ವಿಧಾನಸಭಾ ಕ್ಷೇತ್ರ

firstcircle
BROTHERHOOD IN BUSINESS

FC EXPO 2025
ANNUAL CONVENTION

ಉದ್ಯಮಿ ಒಕ್ಕಲಿಗ
UDYAMI VOKKALIGA

ಎಫ್‌ಸಿ ಎಕ್ಸ್‌ಪೋ 2024

ಎಫ್‌ಸಿ-ವಾರ್ಷಿಕ ಪ್ರತಿನಿಧಿಗಳ & ಹೂಡಿಕೆದಾರರು ಸಮಾವೇಶ

ಎಫ್‌ಸಿ-ಮಹಿಳಾ ಉದ್ಯಮಿಗಳು

ಎಫ್‌ಸಿ-ಮಂಡ್ಯ ಜಿಲ್ಲಾ ಸರ್ಕಲ್ ಉದ್ಘಾಟನೆ

ಎಫ್‌ಸಿ-ಕೋಲಾರ ಜಿಲ್ಲಾ ಸರ್ಕಲ್ ಉದ್ಘಾಟನೆ

ಎಫ್‌ಸಿ ಎಕ್ಸ್‌ಪೋ 2024

ಹಿರಿಯ ಉದ್ಯಮಿಗಳು

ಶ್ರೀ ಎಂ ಜಿ ಬಾಲಕೃಷ್ಣ ಅಧ್ಯಕ್ಷರು, ಎಫ್.ಕೆ.ಸಿ.ಸಿ.ಐ	**ಶ್ರೀ ಪ್ರಶಾಂತ್ ಪ್ರಕಾಶ್** ಸಹಸಂಸ್ಥಾಪಕರು ಮತ್ತು ಪಾಲುದಾರರು ಆಕ್ಸೆಲ್ ಪಾರ್ಟನರ್ಸ್	**ಡಾ॥ ಟಿ ವೆಂಕಟ್ ವರ್ಧನ್** ವ್ಯವಸ್ಥಾಪಕ ನಿರ್ದೇಶಕರು ಡಿಎನ್ಎ ಎಂಟರ್ಮೆಂಟ್ ನೆಟ್ವರ್ಕ್ ಪ್ರೈ. ಲಿ.	**ಶ್ರೀ ಸುದರ್ಶನ್ ಕಾರ್ಲೆ** ನಿರ್ದೇಶಕರು ಕಾರ್ಲೆ ಇಂಟರ್ ನ್ಯಾಷನಲ್ ಪ್ರೈ.ಲಿ.	**ಶ್ರೀ ಕೆಂಪರಾಜು** ಸೈನ್ ಪೋಸ್ಟ್ ಇಂಡಿಯಾ ಪ್ರೈ. ಲಿ.	**ಶ್ರೀ ಎಸ್ ಎ ಪುಟ್ಟರಾಜು** ವ್ಯವಸ್ಥಾಪಕ ನಿರ್ದೇಶಕರು ಸವಿರುಚಿ ಗ್ರೂಪ್ಸ್	**ಶ್ರೀ ವೆಂಕಟರಮಣ ಗೌಡರು (ಚಂದ್ರು)** ವ್ಯವಸ್ಥಾಪಕ ನಿರ್ದೇಶಕರು ಸ್ಟಾರ್ ಇನ್‌ಫ್ರಾಟೆಕ್

ಶ್ರೀ ಅರಮನೆ ಶಂಕರ್ ರಾಜಾ ಎಂಟರ್ ಪ್ರೈಸಸ್	**ಶ್ರೀ ಪ್ರಸನ್ನ ಕುಮಾರ್ ಸಿ** ವ್ಯವಸ್ಥಾಪಕ ನಿರ್ದೇಶಕರು ವಿಲ್ಕಾರ್ಟ್ ಸೆಲ್ಯೂಷನ್ಸ್ ಪ್ರೈ. ಲಿ.	**ಶ್ರೀ ಟಿ ವೆಂಕಟೇಶ್** ಅಭಿಮಾನಿ ಗ್ರೂಪ್ಸ್	**ಶ್ರೀ ನಯನಕುಮಾರ್ ಗೌಡ** ವ್ಯವಸ್ಥಾಪಕ ಪಾಲುದಾರರು ಯುನೈಟೆಡ್ ಡೆವಲಪರ್ಸ್	**ಶ್ರೀ ಚಂದ್ರಪ್ಪ ಬಿ ಸಿ** ನಿರ್ದೇಶಕರು ಎಬಿನಸ್ ಡಿಸೈನ್ ಸಲ್ಯೂಷನ್ಸ್ ಪ್ರೈ.ಲಿ.	**ಶ್ರೀ ಡಿ ಮುನಿರಾಜು** ಬೆಂಗಳೂರು ಇಂಟರ್ನ್ಯಾಷನಲ್ ಅಕಾಡೆಮಿ	**ಶ್ರೀ ರಾಜೇಶ್ ಗೌಡ** ವ್ಯವಸ್ಥಾಪಕ ನಿರ್ದೇಶಕರು ಎಸ್ಎಂಇ ಎಕ್ಸ್‌ಪ್ರೆಸ್

ಶ್ರೀ ವಿ ರಾಮಸ್ವಾಮಿ ವಿಸಿಎನ್ಆರ್ ಗ್ರೂಪ್ಸ್	**ಶ್ರೀ ಎಂ ಎ ಆನಂದ್** ಶಿಕ್ಷಣ ಉದ್ಯಮಿಗಳು	**ಶ್ರೀ ದೀಪಿಕಾ ರೆಡ್ಡಿ** ನಿರ್ದೇಶಕರು–ಒನ್ ವರ್ಲ್ಡ್	**ಶ್ರೀ ನರಸಿಂಹ ಮೂರ್ತಿ ಕೆಎನ್** ಮಾಜಿ ಅಧ್ಯಕ್ಷರು–KASSIA	**ಶ್ರೀ ಬೋರೇಗೌಡರು** ನಿರ್ದೇಶಕರು–ಹೆಚ್‌ಬಿ ಪ್ಲೈವುಡ್ ಉತ್ಪಾದಕರು	**ಶ್ರೀ ಉಮಾ ಶಂಕರ್ ವಿ** ವ್ಯವಸ್ಥಾಪಕ ನಿರ್ದೇಶಕರು ಆದರ್ಶ ಕಂಟ್ರೋಲ್ ಸಿಸ್ಟಮ್	**ಶ್ರೀ ಆಂಜಿನಪ್ಪ ಪುಟ್ಟು** ವ್ಯವಸ್ಥಾಪಕ ನಿರ್ದೇಶಕರು ಗ್ರೀನ್ ಎಕರ್ ಡೆವೆಲಪರ್ಸ್

ಸೆಕ್ಟರ್ ಅಧ್ಯಕ್ಷರು

ಕೃಷಿ ತಂತ್ರಜ್ಞಾನ	ಕೃಷಿ ತಂತ್ರಜ್ಞಾನ	ಕೃಷಿ ತಂತ್ರಜ್ಞಾನ	ಕೃಷಿ ತಂತ್ರಜ್ಞಾನ	ಸಮುದಾಯದ ಸಂಘ-ಸಂಸ್ಥೆಗಳ ನಿರ್ವಹಣೆ	ಸ್ಟಾರ್ಟ್ ಅಪ್ ಮತ್ತು ಎಂಟರ್ ಪ್ರಿನರ್‌ಶಿಪ್	ಆರೋಗ್ಯ	ಕನ್ನಡ ಚಿತ್ರರಂಗ ಮತ್ತು ಸಿನಿಮಾ ಸಂಗೀತ ಕ್ಷೇತ್ರ
ಡಾ॥ ಎಸ್ ವಿ ಸುರೇಶ ಕುಲಪತಿಗಳು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	**ಡಾ॥ ಕೆ ಸಿ ವೀರಣ್ಣ** ಉಪಕುಲಪತಿಗಳು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	**ಡಾ॥ ನಾರಾಯಣ ಗೌಡ** ಮಾಜಿ ಉಪಕುಲಪತಿಗಳು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	**ಡಾ॥ ರಾಜೇಂದ್ರ ಪ್ರಸಾದ್** ಮಾಜಿ ಉಪಕುಲಪತಿಗಳು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು	**ಶ್ರೀ ನೀಲಕಂಠ ಆರ್ ಗೌಡ** ಸಮಾಜ ಸೇವಕರು ಮಾಜಿ ನಿರ್ದೇಶಕರು ಒಕ್ಕಲಿಗ ಸಂಘ	**ಶ್ರೀ ಪ್ರಶಾಂತ್ ಪ್ರಕಾಶ್** ಸಹಸಂಸ್ಥಾಪಕರು ಮತ್ತು ಪಾಲುದಾರರು ಆಕ್ಸೆಲ್ ಪಾರ್ಟನರ್ಸ್	**ಡಾ. ಡಿ ಸಿ ಭಗವಾನ್** ಪ್ರಾಂಶುಪಾಲರು, ಕಿಮ್ಸ್ ಸಿಂಡಿಕೇಟ್ ಸದಸ್ಯ, RGUHS	**ಶ್ರೀ ಬಾ ಮ ಹರೀಶ್** ಮಾಜಿ ಅಧ್ಯಕ್ಷರು ಚಲನಚಿತ್ರ ಮಂಡಳಿ ಚಲನಚಿತ್ರ ನಿರ್ಮಾಪಕರು

ಶಿಕ್ಷಣ	ಮಹಿಳಾ ಉದ್ಯಮಿಗಳು	ರಿಯಾಲ್ಟಿ ಮತ್ತು ಕಟ್ಟಡ ನಿರ್ಮಾಣ	ರಾಜಕೀಯ ಕ್ರಿಯಾ ಸಮಿತಿ (ಎಫ್‌ಸಿ ಪ್ಯಾಕ್)	ಎಂಎಸ್ಎಂಇ	ಸಾಂಸ್ಕೃತಿಕ ವಿಭಾಗ	ಹಾಸ್ಪಿಟಾಲಿಟಿ	ವೃತ್ತಿಪರ ಮತ್ತು ತಂತ್ರಜ್ಞಾನ ಉದ್ಯೋಗಿಗಳು
ಶ್ರೀ ಮುನಿರಾಜು ಬೆಂಗಳೂರು ಇಂಟರ್ನ್ಯಾಷನಲ್ ಅಕಾಡೆಮಿ	**ಡಾ॥ ಶ್ರುತಿ ಚೇತನ್** ಮ್ಯಾನೇಜಿಂಗ್ ಟ್ರಸ್ಟೀ ರಾಯಲ್ ಕಾಂಕಾರ್ಡ್ ಗ್ರೂಪ್ಸ್ ಇನ್ಸಿಟ್ಯೂಷನ್	**ಶ್ರೀ ನಯನಕುಮಾರ್ ಗೌಡ** ವ್ಯವಸ್ಥಾಪಕ ಪಾಲುದಾರರು ಯುನೈಟೆಡ್ ಡೆವಲಪರ್ಸ್	**ಶ್ರೀ ಬಿ ಎಲ್ ಶಂಕರ್** ಅಧ್ಯಕ್ಷರು ಚಿತ್ರಕಲಾ ಪರಿಷತ್	**ಶ್ರೀ ಪ್ರವೀಣ್ ಬಿ** ಸನ್‌ಟೆಕ್ ಪ್ರೊ ಎಂಜಿನೀರ್ಸ್ (ಬಿ)	**ಶ್ರೀ ಜಯಪ್ರಕಾಶ್ ಗೌಡ** ಗೌರವ ಅಧ್ಯಕ್ಷರು ಎಫ್‌ಸಿ-ಮಂಡ್ಯ ಜಿಲ್ಲಾ	**ಶ್ರೀ ಮುಕೇಶ್ ಕೆ ಎಂ** ಮಾಲೀಕರು ಮೌಂಟನ್ ವಿವ್ಯು ರೆಸಾರ್ಟ್	**ಶ್ರೀ ಕೀರ್ತಿ ಬೂಕನಕೆರೆ ತಿಮ್ಮೇಗೌಡ** ಹೆಡ್ -ಕಾರ್ಪೊರೇಟ್ ವೆಂಚರಿಂಗ್ & ಟ್ರಾನ್ಸ್‌ಫಾರ್ಮೇಷನ್ ಡಿಜಿಟಲ್/ಟೆಕ್ನಾಲಜಿ ಗ್ರೋಥ್ ಸಿಲೆಂಟ್

ಜಿಲ್ಲಾ ಅಧ್ಯಕ್ಷರು

ಶ್ರೀ ಎಸ್ ರವಿ ಎಫ್‌ಸಿ-ರಾಮನಗರ ಜಿಲ್ಲೆ	**ಶ್ರೀ ಸಿ ಎಂ ಆರ್ ಶ್ರೀನಾಥ್** ಎಫ್‌ಸಿ-ಕೋಲಾರ ಜಿಲ್ಲೆ	**ಡಾ.ಪುಣ್ಯವತಿ ಸಿ ನಾಗರಾಜ್** ಎಫ್‌ಸಿ-ಬೆಂಗಳೂರು ಸೆಂಟ್ರಲ್	**ಶ್ರೀ ನಟರಾಜ್ ಕೆ** ಎಫ್‌ಸಿ-ಬೆಂಗಳೂರು ಗ್ರಾಮಾಂತರ	**ಶ್ರೀ ಮಂಜುನಾಥ ಎಚ್ ಎಸ್** ಎಫ್‌ಸಿ-ತುಮಕೂರು ಜಿಲ್ಲೆ	**ಶ್ರೀ ಪ್ರಶಾಂತ್ ಗೌಡ** ಎಫ್‌ಸಿ-ಮೈಸೂರು ಜಿಲ್ಲೆ	**ಶ್ರೀ ಆಂಜನೇಯರೆಡ್ಡಿ** ಎಫ್‌ಸಿ-ಚಿಕ್ಕಬಳ್ಳಾಪುರ ಜಿಲ್ಲೆ	**ಡಾ॥ ಎಸ್ ಟಿ ರಾಮಚಂದ್ರ** ಎಫ್‌ಸಿ-ಮಂಡ್ಯ ಜಿಲ್ಲೆ	**ಶ್ರೀ ಎಂ ಎ ರಮೇಶ್ ಹೆಗ್ಗಡೆ** ಎಫ್‌ಸಿ-ಶಿವಮೊಗ್ಗ ಜಿಲ್ಲೆ

ಶ್ರೀ ದಿಬ್ಬೂರು ಜಯಣ್ಣ ಎಫ್‌ಸಿ-ಬೆಂಗಳೂರು ಉತ್ತರ	**ಶ್ರೀ ರವೀಂದ್ರಪ್ಪ** ಎಫ್‌ಸಿ-ಚಿತ್ರದುರ್ಗ ಜಿಲ್ಲೆ	**ಡಾ. ಜೆ ಪಿ ಕೃಷ್ಣೇಗೌಡ** ಎಫ್‌ಸಿ-ಚಿಕ್ಕಮಗಳೂರು ಜಿಲ್ಲೆ	**ಶ್ರೀ ಕಿರಣ್** ಎಫ್‌ಸಿ-ಹಾಸನ ಜಿಲ್ಲೆ	**ಶ್ರೀ ಸುದರ್ಶನ್ ಗೌಡ** ಎಫ್‌ಸಿ-ಚಾಮರಾಜನಗರ ಜಿಲ್ಲೆ	**ಶ್ರೀ ಪಿಕೆ ರವಿ** ಎಫ್‌ಸಿ-ಕೊಡಗು	**ಶ್ರೀ ಪದ್ಮನಾಭ ಕೊಲ್ಚಾರ್** ಎಫ್‌ಸಿ-ದಕ್ಷಿಣ ಕನ್ನಡ ಜಿಲ್ಲೆ	**ಶ್ರೀ ನಾಗರಾಜ ಗೌಡ** ಜಿಲ್ಲಾ ಉಸ್ತುವಾರಿಗಳು	**ಶ್ರೀ ರವಿಕುಮಾರ್ ಕೆ** ಎಫ್‌ಸಿ-ನೆಕ್ಸ್ ಸಂಯೋಜಕರು

- 3 Days of Mega Business Technical sessions, Exhibition of Vokkaliga Entrepreneurs manufactured Goods and Services.
- Expected footfall of 25,000 plus Vokkaliga Entrepreneurs to participate from all districts of Karnataka & Tamil Nadu.
- Book your exhibition stalls and food court stalls .
- All are Welcome

ನೀವೂ ಬೆಳೆಯಿರಿ..
ನಿಮ್ಮವರನ್ನೂ ಬೆಳೆಸಿರಿ.

Scan Here
Download the app

FREE ENTRY WITH FC-NEXT APP

www.firstcircle.co.in   Follow us on: Ph: +91 81055 71730

ಗುರುವಾರ, ಡಿಸೆಂಬರ್ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 343 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಬ್ಯಾನರ್ಜಿ ಮಾತಿಗೆ ಲೋಕಸಭೆ ಕಲಾಪ ಬಲಿ 7
ಅಂಕೆಗೆ ಸಿಗದ ಹಣದುಬ್ಬರ
ಅತಿಥಿ ಶಿಕ್ಷಕರ ಗೌರವಧನ ಹೆಚ್ಚಳಕ್ಕೆ ಅಸಮ್ಮತಿ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,526	24,641	₹81,780 (ಬೆಂಗಳೂರು)	₹99,300 (ಬೆಂಗಳೂರು)	84.84

2 ಎಕರೆವರೆಗಿನ ಜಮೀನಿಗೆ ಭೂ ಪರಿವರ್ತನೆಯಿಂದ ವಿನಾಯಿತಿ: ಕಾಯ್ದೆಗೆ ತಿದ್ದುಪಡಿ

ಕೈಗಾರಿಕೆಗೆ ಕೃಷಿ ಭೂಮಿ ಸಲೀಸು?

• ರಾಜೇಶ್ ರೈ ಚಟ್ಲ

ಬೆಂಗಳೂರು: ಎರಡು ಎಕರೆವರೆಗಿನ ಕೃಷಿ ಭೂಮಿಯನ್ನು ಭೂಪರಿವರ್ತನೆ ಇಲ್ಲದೇ ಕೈಗಾರಿಕಾ ಉದ್ದೇಶಕ್ಕೆ ಬಳಸಲು ಅವಕಾಶ ಕಲ್ಪಿಸಲು ಸರ್ಕಾರ ಮುಂದಾಗಿದೆ. ಹೊಸ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಆಶಯದಿಂದ ಈ ಕ್ರಮ ಎನ್ನಲಾಗಿದೆ.

ಭೂ ಪರಿವರ್ತನೆ ಪ್ರಕ್ರಿಯೆಯಲ್ಲಿ ಆಗುತ್ತಿದ್ದ ವಿಳಂಬದಿಂದಾಗಿ, ಬಂಡವಾಳ ಹೂಡುವವರು ಹಿಂದೇಟು ಹಾಕುತ್ತಿದ್ದರು. ಇದಕ್ಕೆ ಪರಿಹಾರ ಕಂಡು ಹಿಡಿಯಲು ಮುಂದಾದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 95ಕ್ಕೆ ಈ ತಿದ್ದುಪಡಿ ತರುವಂತೆ ಪ್ರಸ್ತಾವ ಸಲ್ಲಿಸಿತ್ತು.

ಇದರ ಅನ್ವಯ, ಕಾಯ್ದೆ ತಿದ್ದುಪಡಿಗೆ ಮಸೂದೆ ಸಿದ್ಧವಾಗಿದೆ. ಶುಕ್ರವಾರ (ಡಿ. 13) ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು, ಈಗ ನಡೆಯುತ್ತಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸಲು ನಿರ್ಧರಿಸಲಾಗಿದೆ ಎಂದು ಸರ್ಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.



ಮುಖ್ಯಾಂಶಗಳು

- ಹೊಸ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ
- ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರಸ್ತಾವ
- ಬೆಳಗಾವಿ ಅಧಿವೇಶನದಲ್ಲಿಯೇ ಮಸೂದೆ ಮಂಡನೆ

ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾಗುವ ನವೋದ್ಯಮಿಗಳಿಗೆ ಪ್ರೋತ್ಸಾಹದಾಯಕ ಕ್ರಮಗಳನ್ನು ರಾಜ್ಯ ಸರ್ಕಾರ ಈ ಹಿಂದಿನ ಸಾಲಿನ (2023–24) ಬಜೆಟ್‌ನಲ್ಲಿ ಘೋಷಿಸಿತ್ತು. ಕೈಗಾರಿಕೆಗಳ ಸ್ಥಾಪನೆಗೆ ಎರಡು ಎಕರೆವರೆಗಿನ ಕೃಷಿ ಭೂಮಿಯನ್ನು ಭೂ ಪರಿವರ್ತನೆಯ ಅಗತ್ಯ ಇಲ್ಲದೆ ಬಳಸಿಕೊಳ್ಳಲು ಅನುಕೂಲ ಆಗುವಂತೆ ವಿನಾಯಿತಿ ನೀಡಲು ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ತರುವ ಮಹತ್ವದ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದರು.

ತಹಶೀಲ್ದಾರ್‌ಗೆ ಅಧಿಕಾರ: ಇದೇ ಕಾಯ್ದೆಯ ಸೆಕ್ಷನ್ 67, 104 ಮತ್ತು 136 ಅನ್ನು ಕೂಡಾ ತಿದ್ದುಪಡಿ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಸರ್ಕಾರಿ ಜಾಗವನ್ನು ಯಾರಾದರೂ ಒತ್ತುವರಿ ಮಾಡಿಕೊಂಡಿದ್ದರೆ ತೆರವುಗೊಳಿಸುವ ಅಧಿಕಾರಕ್ಕೆ ಸಂಬಂಧಿಸಿದಂತೆ ಕಾಯ್ದೆಯ ಸೆಕ್ಷನ್ 67 ಮತ್ತು 104ರಲ್ಲಿ ವಿವರಿಸಲಾಗಿದೆ. ಸೆಕ್ಷನ್ 104ರ ಅಡಿ ನೋಟಿಸ್ ನೀಡಿರುವ ಹಲವು ಪ್ರಕರಣಗಳ ವಿರುದ್ಧ ವಿವಿಧ ಕೋರ್ಟ್‌ಗಳಲ್ಲಿ ಕೇಸ್‌ಗಳು ದಾಖಲಾಗಿವೆ. ಹೀಗಾಗಿ ಈ ಎರಡೂ ಸೆಕ್ಷನ್‌ಗಳಿಗೆ ಸಂಬಂಧಿಸಿದಂತೆ ಹೆಚ್ಚು ಸ್ಪಷ್ಟತೆ ನೀಡಲು ಕಾಯ್ದೆ ತಿದ್ದುಪಡಿ ಮಾಡಲಾಗುತ್ತಿದೆ. ಮೇಲ್ಮನವಿ ಅರ್ಜಿಯೊಂದರಲ್ಲಿ ಕಾಯ್ದೆಯ ಸೆಕ್ಷನ್ 104 ಅನ್ನು ಸೆಕ್ಷನ್ 67ರ ಜೊತೆ ಪರಿಗಣಿಸಿ ಆದೇಶ ನೀಡಿರುವ ರಾಜ್ಯ ಹೈಕೋರ್ಟ್, 'ಸರ್ಕಾರಿ ಜಾಗ ಒತ್ತುವರಿ ತೆರವುಗೊಳಿಸುವಂತೆ ಜಿಲ್ಲಾಧಿಕಾರಿ ಮಾತ್ರ ನೋಟಿಸ್ ನೀಡಬಹುದು.

5ನೇ ಪುಟ ನೋಡಿ

ಮೇಲ್ಮನವಿ ನ್ಯಾಯಮಂಡಳಿಗೆ ಅವಕಾಶ

ಕರ್ನಾಟಕ ಭೂ ಕಂದಾಯ ಕಾಯ್ದೆಯ ಸೆಕ್ಷನ್ 136 (3)ರ ಅಡಿ, ಆಸ್ತಿ ಪಾಲು, ಖರೀದಿ, ವಾರಸು, ಅಡಮಾನ, ದಾನ, ಗೇಣಿ ಮೂಲಕ ಹಕ್ಕುದಾರರ ಪರ ಜಿಲ್ಲಾಧಿಕಾರಿ ಮತ್ತು ವಿಶೇಷ ಜಿಲ್ಲಾಧಿಕಾರಿ ನೀಡುವ ಆದೇಶದ ವಿರುದ್ಧ ಅನೇಕರು ಹೈಕೋರ್ಟ್ ಮೆಟ್ಟಿಲೇರುತ್ತಾರೆ. ಆದರೆ, ಅರ್ಹತೆ ಮೇಲೆ ಪ್ರಕರಣವನ್ನು ಹೈಕೋರ್ಟ್ ತೀರ್ಮಾನಿಸಲು ಸಾಧ್ಯ ಇಲ್ಲ. ಹೀಗಾಗಿ, ಈ ಹಕ್ಕುದಾರರ ಪರ ನೀಡುವ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿಗಳನ್ನು 'ಕರ್ನಾಟಕ ಕಂದಾಯ ಮೇಲ್ಮನವಿ ನ್ಯಾಯ ಮಂಡಳಿ'ಗೆ ಸಲ್ಲಿಸುವಂತೆ ಕಾಯ್ದೆ ತಿದ್ದುಪಡಿಗೂ ಪ್ರಸ್ತಾಪಿಸಲಾಗಿದೆ.

ನ್ಯಾಯಮಂಡಳಿಗೆ ಅರ್ಹತೆಯ ಮೇಲೆ ಪ್ರಕರಣಗಳನ್ನು ಪರಿಗಣಿಸಲು ಅವಕಾಶವಿದೆ. ಈ ತಿದ್ದುಪಡಿಯಿಂದ ಹೈಕೋರ್ಟ್‌ಗೆ ಇಂತಹ ಪ್ರಕರಣಗಳ ಭಾರ ಕೂಡಾ ಕಡಿಮೆ ಆಗಲಿದೆ. ಜೊತೆಗೆ ಸಂತ್ರಸ್ತರಿಗೆ ತಮ್ಮ ಅಹವಾಲುಗಳನ್ನು ಸಮರ್ಥವಾಗಿ ಮಂಡಿಸಲು ಅನುಕೂಲ ಆಗಲಿದೆ. ಈ ಕಾರಣಕ್ಕೆ ಕಾಯ್ದೆ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಎಸ್.ಎಂ.ಕೃಷ್ಣ ಅವರ ಅಂತ್ಯಕ್ರಿಯೆ ವೇಳೆ ಪತ್ನಿ ಪ್ರೇಮಾ ಅವರು ಪತಿಯ ಬಾಯಿಗೆ ಚಿನ್ನದ ನಾಣ್ಯವಿಟ್ಟು ನಮಿಸಿದರು. ಸೋಮನಾಥ ಸ್ವಾಮೀಜಿ, ಡಿ.ಕೆ.ಶಿವಕುಮಾರ್ ಪುತ್ರಿ ಐಶ್ವರ್ಯಾ, ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಹುಟ್ಟೂರಿನಲ್ಲಿ ಕೃಷ್ಣ ಲೀನ

• ಸಿದ್ದು ಆರ್.ಜಿ.ಹಳ್ಳಿ

ಸೋಮನಹಳ್ಳಿ (ಮಂಡ್ಯ ಜಿಲ್ಲೆ): ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಅಂತ್ಯಕ್ರಿಯೆ ಮದ್ದೂರು ತಾಲ್ಲೂಕಿನ ಸ್ವಗ್ರಾಮ ಸೋಮನಹಳ್ಳಿಯ ಹೊರವಲಯದಲ್ಲಿ ಬುಧವಾರ ಸಂಜೆ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು. ಇದರೊಂದಿಗೆ, ಕರ್ನಾಟಕದ ರಾಜಕಾರಣದಲ್ಲಿ ಛಾಪು ಮೂಡಿಸಿದ್ದ, ರಾಷ್ಟ್ರ ರಾಜಕಾರಣಕ್ಕೂ ಕೊಡುಗೆ ನೀಡಿದ್ದ ಸುದೀರ್ಘ ಅಧ್ಯಾಯವೊಂದು ಕೊನೆಗೊಂಡಿತು.

ಕೃಷ್ಣ ಅವರ ಪ್ರೀತಿಯ ತಾಣವಾದ 'ಕೆಫೆ ಕಾಫಿ ಡೇ' ಆವರಣದಲ್ಲಿ ಅವರ ಅಂತ್ಯಕ್ರಿಯೆ ನಡೆಸಲಾಯಿತು.

4ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಯಾದವ್ ವಿರುದ್ಧ ಗೊತ್ತುವಳಿ ಮಂಡಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ಅವರು ದ್ವೇಷ ಭಾಷಣ ಮಾಡಿದ್ದಾರೆ ಎಂದು ದೂರಿರುವ 'ಇಂಡಿಯಾ' ಗುಂಪಿನ ಪಕ್ಷಗಳ ರಾಜ್ಯಸಭಾ ಸದಸ್ಯರು, ಅವರನ್ನು ವಾಗ್ದಂಡನೆಗೆ ಗುರಿಪಡಿಸಲು ಹಾಗೂ ಅವರ ಪದಚ್ಯುತಿಗಾಗಿ ಪ್ರಕ್ರಿಯೆ ಆರಂಭಿಸಿದ್ದಾರೆ.

ಸದಸ್ಯರು ವಾಗ್ದಂಡನೆ, ಪದಚ್ಯುತಿ ಗೊತ್ತುವಳಿಯ ನೋಟಿಸ್ ಸಿದ್ಧಪಡಿಸಿದ್ದು, ಇದಕ್ಕೆ ಅವರು ಸಹಿ ಸಂಗ್ರಹಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ. ಗೊತ್ತುವಳಿಯನ್ನು ರಾಜ್ಯಸಭೆಯಲ್ಲಿ ಮಂಡಿಸಲು ಅವಕಾಶ ಸಿಗಬೇಕು ಎಂದಾದರೆ ಕನಿಷ್ಠ 50 ಸದಸ್ಯರ ಸಹಿ ಅಗತ್ಯ.

ರಾಜ್ಯಸಭೆಯ ಹಿರಿಯ ಸದಸ್ಯರಾದ ಕಪಿಲ್ ಸಿಬಲ್, ದಿಗ್ವಿಜಯ ಸಿಂಗ್, ಜೈರಾಮ್ ರಮೇಶ್, ವಿವೇಕ್ ತಂಖಾ, ರೇಣುಕಾ ಚೌಧರಿ (ಇವರೆಲ್ಲ ಕಾಂಗ್ರೆಸ್ಸಿನವರು) ಸಂತೋಷ್ ಕುಮಾರ್ ಮತ್ತು ಪಿ.ಪಿ. ಸುನೀರ್ (ಸಿಪಿಐ), ಸಾಕೇತ್ ಗೋಖಲೆ ಮತ್ತು ಸಾಗರಿಕಾ ಘೋಷ್ (ಟಿಎಂಸಿ), ಜೋಸ್ ಕೆ. ಮಾಣಿ (ಕೇರಳ ಕಾಂಗ್ರೆಸ್ –ಎಂ) ಹಾಗೂ ಇತರ ಕೆಲವು ಸದಸ್ಯರು ನೋಟಿಸ್‌ಗೆ ಸಹಿ ಮಾಡಿದ್ದಾರೆ.

10ನೇ ಪುಟ ನೋಡಿ

ದೇವಸ್ಥಾನ ಪ್ರವೇಶಕ್ಕೆ ಶಾಸಕರಿಗೆ ತಡೆ

ಕರ್ನಾಟಕದ ಶಾಸಕರು, ಮುಖಂಡರಿಗೆ ಶಿವಸೇನಾ ಕಾರ್ಯಕರ್ತರ ಮುತ್ತಿಗೆ

ದೇವಸ್ಥಾನಕ್ಕೆ ಬುಧವಾರ ಭೇಟಿ ನೀಡಿದ ಶಾಸಕರನ್ನು ಶಿವಸೇನಾ (ಉದ್ಧವ್) ಕೊಲ್ಹಾಪುರ ಜಿಲ್ಲಾ ಘಟಕದ ಅಧ್ಯಕ್ಷ ವಿಜಯ ದೇವಾನೆ ಮತ್ತಿತರರು ತಡೆದರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಶಾಸಕರಾದ ಪ್ರಭು ಚವ್ಹಾಣ, ಸುನೀಲಕುಮಾರ, ದಿನಕರ ಶೆಟ್ಟಿ, ಡಿ.ವೇದವ್ಯಾಸ ಕಾಮತ್ ಹಾಗೂ ಇತರರು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿರುವ ಮಹಾಲಕ್ಷ್ಮಿ ಅಂಬಾಬಾಯಿ ದೇವಸ್ಥಾನಕ್ಕೆ ಭೇಟಿ ನೀಡುವುದನ್ನು ಶಿವಸೇನಾ (ಉದ್ಧವ್ ಠಾಕ್ರೆ ಬಣ) ಮುಖಂಡರು ತೀವ್ರವಾಗಿ ವಿರೋಧಿಸಿದರು.

ಕರ್ನಾಟಕದ ನಾಯಕರು ಬುಧವಾರ ದೇವಸ್ಥಾನದ ಬಾಗಿಲು ಬಳಿ ಸಮೀಪಿಸುತ್ತಿದ್ದಂತೆಯೇ ಶಿವಸೇನಾ ಮುಖಂಡರು, ಕಾರ್ಯಕರ್ತರು ಮುತ್ತಿಗೆ ಹಾಕಿದರು. ಶಾಸಕರು ದೇವಸ್ಥಾನ ಪ್ರವಶಿಸುವುದಕ್ಕೆ ಕೆಲ ಹೊತ್ತು ತಡೆ ಒಡ್ಡಿದರು. ಕರ್ನಾಟಕ ಸರ್ಕಾರ ಹಾಗೂ ಕನ್ನಡಪರ ಹೋರಾಟಗಾರರ ವಿರುದ್ಧ ಘೋಷಣೆ ಮೊಳಗಿಸಿದರು.

'ಕರ್ನಾಟಕಕ್ಕೆ ನಮಗೆ ಪ್ರವೇಶ ನೀಡುವುದಿಲ್ಲ ಎಂದಾದರೆ ನಮ್ಮ ಊರಿನ ದೇವಸ್ಥಾನಕ್ಕೆ ನೀವೇಕೆ ಬರುತ್ತೀರಿ' ಎಂದೂ ಪ್ರಶ್ನೆ ಮಾಡಿದರು.

7ನೇ ಪುಟ ನೋಡಿ

ಒಳಪುಟಗಳಲ್ಲಿ

ಸಂವಿಧಾನ ಪ್ರತಿಕೃತಿ ಧ್ವಂಸ: ಭುಗಿಲೆದ್ದ ಹಿಂಸಾಚಾರ 11
ಸೋರೊಸ್ 'ಸಂಪರ್ಕ': ನಿಲ್ಲದ ವಾಗ್ವಾಳಿ 7
ಆರ್ಥಿಕ ಸ್ಥಿರತೆಗೆ ಜಪ 10

ಆತ್ಮಾಹುತಿ ಬಾಂಬ್ ದಾಳಿ: ತಾಲಿಬಾನ್ ಸಚಿವ ಸಾವು

ಇಸ್ಲಾಮಾಬಾದ್ (ಎಪಿ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ಬುಧವಾರ ಭಯೋತ್ಪಾದಕರು ನಡೆಸಿದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ತಾಲಿಬಾನ್ ನಿರಾಶ್ರಿತರ ಸಚಿವ ಮತ್ತು ಇತರ ಇಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಚಿವಾಲಯದ ಒಳಗೆ ಸ್ಫೋಟ ಸಂಭವಿಸಿದ್ದು, ನಿರಾಶ್ರಿತರ ಸಚಿವ ಖಲೀಲ್ ಹಕ್ಕಾನಿ ಹತರಾಗಿದ್ದಾರೆ. ಇವರು ತಾಲಿಬಾನ್ ಆಡಳಿತದಲ್ಲಿ ಮತ್ತೊಬ್ಬ ಪ್ರಭಾವಿ ನಾಯಕನಾಗಿರುವ ಗೃಹ ಸಚಿವ ಸಿರಾಜುದ್ದೀನ್ ಹಕ್ಕಾನಿಯವರ ಚಿಕ್ಕಪ್ಪ.

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ. ಸಿಎಒ/ಸಿಎನ್/ಬಿಎನ್‌ಸಿ/35/2024 ದಿನಾಂಕ 27/11/2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಹರಾಜನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕೆಲಸದ ಹೆಸರು	ಅಂದಾಜು ಮೌಲ್ಯ
1	2 ಲೇನ್‌ಗಳ ಆರ್‌ಒಬಿ	ರೂ. 39,32,34,417/–
	ನಿರ್ಮಾಣ. ಕಿ.ಮೀ: 95/850 ರಲ್ಲಿ 1x30ಮೀ ಕಾಂಪೋಸಿಟ್ ಗಿರ್ಡರ್ 23x18.71 ಮೀ. ಪಿಎಸ್‌ಸಿ ಗಿರ್ಡರ್ (ನಿಟ್ಟೂರು ಕೊನೆಯಲ್ಲಿ)+ ಎಲ್‌ಸಿ ನಂಬರ್ 58 ಬದಲಿಗೆ. ಮತ್ತು 8x18.71 ಮೀ ಪಿಎಸ್‌ಸಿ ಗಿರ್ಡರ್ (ಹಾರ್ನಹಳ್ಳಿ ಕೊನೆಯಲ್ಲಿ)+ ಆರ್‌ಸಿಸಿ ರಿಟೇನಿಂಗ್ ವಾಲ್ (ಅಪ್ರೋಚ್ ಸ್ಪ್ಯಾನ್) ಮತ್ತು ನಿಯಮಿತ ಎತ್ತರದ ಸಬ್‌ವೇ ನಿರ್ಮಾಣ. ಇದರ ಗಾತ್ರ 5.5x2.5 ಮೀ.ನಿಟ್ಟೂರು–ಗುಬ್ಬಿ ನಿಲ್ದಾಣಗಳ ನಡುವೆ ಇದರ ಕಾಮಗಾರಿ. (ಸಂಯೋಜಿತ ಕೆಲಸ) (ಟೆಂಡರ್ ಉಲ್ಲೇಖ ಸಂಖ್ಯೆ: ಎಎಸ್‌ಕೆ–ಟಿಕೆ–ಆರ್‌ಒಬಿ–ಎಲ್‌ಸಿ–58)	
2	ಮಲ್ಲಸಂದ್ರ	ರೂ. 20,59,28,705/–
	ಯಾರ್ಡ್‌ನಲ್ಲಿ 2ಲೇನ್‌ಗಳ ಆರ್‌ಒಬಿ ನಿರ್ಮಾಣ. ಇದು ಎಲ್‌ಸಿ ನಂಬರ್ 46 (ಮಾನವ ಸಹಿತ)ಕಿ ಮೀ 78/340 ರಲ್ಲಿ 1x42 ಮೀ ಬೋ ಸ್ಟ್ರಿಂಗ್ ಗಿರ್ಡರ್‌ನೊಂದಿಗೆ. ಮತ್ತು ತುಮಕೂರು–ಮಲ್ಲಸಂದ್ರ ನಿಲ್ದಾಣಗಳ ನಡುವೆ 5.5x2.5 ಮೀ ಗಾತ್ರದ ಸೀಮಿತ ಎತ್ತರದ ಸಬ್‌ವೇ ನಿರ್ಮಾಣ (ಸಂಯೋಜಿತ ಕೆಲಸ) ಸಂಖ್ಯೆ: ಎಎಸ್‌ಕೆ–ಟಿಕೆ–ಆರ್‌ಒಬಿ–ಎಲ್‌ಸಿ–46)	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 10.01.2025 ರಂದು 15.00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ಇಂಜನಿಯರ್/ನಿರ್ಮಾಣ/ಕಾರ್ಯಗಳು, ಬೆಂಗಳೂರು ದಂಡು

ಪಿಯುಬಿ/619/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25

South Western Railway - SWR | SWRRLY | SWRRLY

ತಾಯಿ– ಮಕ್ಕಳ ಚಿಕಿತ್ಸೆಗೆ ಮೀಸಲಾದ ಆಸ್ಪತ್ರೆ • ತಿಂಗಳಿಗೆ 350ರಿಂದ 400 ಹೆರಿಗೆ

ಘೋಷಾ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ

26,050 ಘೋಷಾ ಆಸ್ಪತ್ರೆಗೆ ಕಳೆದ 11 ತಿಂಗಳಿಂದ ಭೇಟಿ ನೀಡಿದ ಹೊರ ರೋಗಿಗಳ ಸಂಖ್ಯೆ

4,111 ಆಸ್ಪತ್ರೆಯಲ್ಲಿ 11 ತಿಂಗಳಲ್ಲಿ ಆಗಿರುವ ಹೆರಿಗೆಗಳ ಸಂಖ್ಯೆ

ಘೋಷಾ ಆಸ್ಪತ್ರೆಯಲ್ಲಿನ ವ್ಯವಸ್ಥೆ

120	80	10	30
ಆಸ್ಪತ್ರೆಯಲ್ಲಿರುವ ಒಟ್ಟು ಹಾಸಿಗೆಗಳು	ತಾಯಂದಿರ ಚಿಕಿತ್ಸೆಗೆ ಮೀಸಲಿರುವ ಹಾಸಿಗೆಗಳು	ಮಕ್ಕಳ ಚಿಕಿತ್ಸೆಗೆ ಮೀಸಲಿರುವ ಹಾಸಿಗೆಗಳು	ಸಾಮಾನ್ಯ ಹಾಸಿಗೆಗಳು

• ಖಲೀಲಅಹ್ಮದ ಶೇಖ

ಬೆಂಗಳೂರು: ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆಯಲ್ಲಿ ದಿನವೊಂದಕ್ಕೆ ಸರಾಸರಿ 20ರಿಂದ 30 ಹೆರಿಗೆಗಳನ್ನು ವೈದ್ಯರು ಯಶಸ್ವಿಯಾಗಿ ಮಾಡಿಸುತ್ತಾರೆ. ಇಲ್ಲಿಗೆ ಬರುವ ತಾಯಂದಿರು ಹಾಗೂ ಮಕ್ಕಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳ-ವಾಗುತ್ತಿದೆ. ಆದರೆ, ಎಲ್ಲವೂ ಸುಸಜ್ಜಿತವಾಗಿರುವ ಈ ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆಯೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆಯು 120 ಹಾಸಿಗೆಗಳನ್ನು ಹೊಂದಿದ್ದು, ಇದು ತಾಯಿ–ಮಕ್ಕಳ ಆಸ್ಪತ್ರೆಯಾಗಿದೆ. ಹೆರಿಗೆ ಕೊಠಡಿ, ಚಿಕಿತ್ಸಾ ವಿಭಾಗವನ್ನು ಒಳಗೊಂಡಿದ್ದು, ಇಲ್ಲಿ ಪ್ರಸೂತಿ, ಸ್ತ್ರೀರೋಗ, ಮಕ್ಕಳ ಹಾಗೂ ಶಸ್ತ್ರಚಿಕಿತ್ಸಾ ವಿಭಾಗಗಳಿವೆ. ನವಜಾತ ಶಿಶು ಆರೈಕೆ ಘಟಕ (ಎನ್‌ಐಸಿಯು) ಕೂಡ ಕಾರ್ಯನಿರ್ವಹಿಸುತ್ತಿದೆ.

ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ಪ್ರತಿನಿತ್ಯ ಸರಾಸರಿ 150ರಿಂದ 200 ಮಂದಿ ಭೇಟಿ ನೀಡುತ್ತಿದ್ದಾರೆ. ಇಲ್ಲಿ ತಾಯಿ ಮತ್ತು ಮಗುವಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತದೆ. ಶಿವಾಜಿನಗರ, ಹಲಸೂರು, ಟಸ್ಕರ್‌ಟೌನ್, ಫ್ರೇಜರ್‌ಟೌನ್, ಆರ್.ಟಿ. ನಗರ, ಕಂಟೋನ್ಮೆಂಟ್ ಸೇರಿದಂತೆ ನಗರದ ವಿವಿಧ ಭಾಗಗಳಿಂದ ಇಲ್ಲಿಗೆ ಹೆಚ್ಚಿನ ಜನ ಬರುತ್ತಾರೆ. ಬರುತೇಕ ದಿನಗಳಲ್ಲಿ ಇಲ್ಲಿ ರೋಗಿಗಳ ದಟ್ಟಣೆ ಹೆಚ್ಚಿರುತ್ತದೆ.

ಶಿವಾಜಿನಗರದಲ್ಲಿರುವ ಎಚ್‌ಎಸ್‌ಐ.ಎಸ್ ಘೋಷಾ ಸರ್ಕಾರಿ ಆಸ್ಪತ್ರೆಯ ಒಳಾಂಗಣ – ಚಿತ್ರ: ಪ್ರಶಾಂತ್ ಎಚ್‌ಜಿ

ಜನಾರೋಗ್ಯ ಸತ್ಯದರ್ಶನ 2

‘ಆಸ್ಪತ್ರೆಯಲ್ಲಿ ಶೇಕಡ 20ರಷ್ಟು ವೈದ್ಯರು, ಶೇ 30ರಷ್ಟು ಶುಶ್ರೂಷಕರು ಹಾಗೂ ‘ಡಿ’ ಗುಂಪಿನ ನೌಕರರ ಕೊರತೆ ಇದೆ. ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಈಗಾಗಲೇ ಮನವಿ ಸಲ್ಲಿಸಲಾಗಿದೆ. ಸಿಬ್ಬಂದಿ ಕೊರತೆಯ ಮಧ್ಯೆಯೂ ರೋಗಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಚಿಕಿತ್ಸೆ ನೀಡಲಾಗುತ್ತದೆ. ಆಸ್ಪತ್ರೆಯ ಹೊರಾಂಗಣ ಮತ್ತು ಒಳಾಂಗಣದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಇಲ್ಲಿ ದಾಖಲಾಗುವ ರೋಗಿಗಳನ್ನು ಭೇಟಿಯಾಗಲು ಬರುವ ಸಂಬಂಧಿಕರಿಗೆ ವಿಶೇಷ ಕೊಠಡಿ ನಿರ್ಮಿಸಲಾಗಿದೆ. ಬಿಪಿಎಲ್ ಪಡಿತರ ಚೀಟಿ ಹೊಂದಿರುವವರೆಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ, ಶಸ್ತ್ರಚಿಕಿತ್ಸೆಗಳು ಮಾಡಲಾಗುತ್ತದೆ’ ಎಂದು ವೈದ್ಯರೊಬ್ಬರು ತಿಳಿಸಿದರು.

‘ನಗರದ ಚಿಕ್ಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯು-ವವರಲ್ಲಿ ಸಂಕೀರ್ಣ ಸಮಸ್ಯೆಗಳನ್ನು ಹೊಂದಿರುವ ತಾಯಂದಿರನ್ನು ಘೋಷಾ ಆಸ್ಪತ್ರೆಗೆ ಶಿಫಾರಸು ಮಾಡಲಾಗುತ್ತದೆ. ಇಲ್ಲಿ ದಿನದ 24 ಗಂಟೆಯೂ ತುರ್ತು ಚಿಕಿತ್ಸಾ ಘಟಕ ಕಾರ್ಯನಿರ್ವಹಿಸುತ್ತದೆ. ತಿಂಗಳಿಗೆ 350ರಿಂದ 400ರವರೆಗೆ ಹೆರಿಗೆಗಳು ಆಗುತ್ತವೆ. ಬಹುತೇಕ ಎಲ್ಲ ಹೆರಿಗೆಗಳು ಸಹಜ ಹೆರಿಗೆಗಳೇ ಆಗಿವೆ. ಗಂಭೀರ ಪ್ರಕರಣಗಳಲ್ಲಿ ಮಾತ್ರ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ’ ಎಂದು ವಿವರಿಸಿದರು.

ಘೋಷಾ ಆಸ್ಪತ್ರೆಗೆ ದಾಖಲಾಗುವ ರೋಗಿಗಳನ್ನು ಬೇರೆ ಆಸ್ಪತ್ರೆಗಳಿಗೆ ಶಿಫಾರಸು ಮಾಡುವುದಿಲ್ಲ. ಇಲ್ಲಿರುವ ವೈದ್ಯಕೀಯ ಸೌಲಭ್ಯಗಳನ್ನು ಬಳಸಿಕೊಂಡು ಉತ್ತಮ ಚಿಕಿತ್ಸೆ ನೀಡಲಾಗುತ್ತದೆ

ದಯಾನಂದ್ ವಿ.ಪಿ., ಘೋಷಾ ಆಸ್ಪತ್ರೆಯ ಅಧೀಕ್ಷಕ

‘ಸಂಜೀವಿನಿ ಎದೆ ಹಾಲು ಬ್ಯಾಂಕ್’

‘ಅಗತ್ಯ ಪ್ರಮಾಣದಲ್ಲಿ ಎದೆ ಹಾಲು ಸಿಗದ ಹಾಗೂ ಎದೆ ಹಾಲು ವಂಚಿತ ಮಕ್ಕಳಿಗಾಗಿ ಘೋಷಾ ಆಸ್ಪತ್ರೆಯಲ್ಲಿ ‘ಸಂಜೀವಿನಿ’ ಎದೆ ಹಾಲು ಬ್ಯಾಂಕ್ ಕಾರ್ಯನಿರ್ವಹಿಸುತ್ತಿದೆ. ಆಸ್ಪತ್ರೆಯಲ್ಲಿ ಹೆರಿಗೆ ಆದವರು ಹಾಗೂ ಸ್ವ ಇಚ್ಛೆಯಿಂದ ಹೊರಗಿನಿಂದ ಬರುವ ತಾಯಂದಿರಿಂದ ಹೆಚ್ಚುವರಿ ಎದೆ ಹಾಲನ್ನು ಬ್ಯಾಂಕ್‌ನಲ್ಲಿ ಸಂಗ್ರಹಿಸಲಾಗುತ್ತದೆ. ವೈದ್ಯರ ಶಿಫಾರಸು ಹೊಂದಿರುವ ಶಿಶುಗಳಿಗೆ ಮಾತ್ರ ಈ ಎದೆ ಹಾಲನ್ನು ಅಗತ್ಯ ಪ್ರಮಾಣದಲ್ಲಿ ಒದಗಿಸಲಾಗುತ್ತದೆ’ ಎಂದು ವೈದ್ಯರೊಬ್ಬರು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಚಿಕ್ಕಬಾಣಾವರದಲ್ಲಿ ಇಂಟರ್‌ಸಿಟಿ ರೈಲು ತಾತ್ಕಾಲಿಕ ನಿಲುಗಡೆ

ಬೆಂಗಳೂರು: ಯಶವಂತಪುರ-ಶಿವಮೊಗ್ಗ ಇಂಟರ್ ಸಿಟಿ ಎಕ್ಸ್‌ಪ್ರೆಸ್ ರೈಲುಗಳಿಗೆ ಚಿಕ್ಕಬಾಣಾವರ ನಿಲ್ದಾಣದಲ್ಲಿ ತಾತ್ಕಾಲಿಕ ನಿಲುಗಡೆ ಒದಗಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಡಿ.16ರಿಂದ ಮಾರ್ಚ್ 15ರವರೆಗೆ ಮೂರು ತಿಂಗಳು ಪ್ರಾಯೋಗಿಕ ಆಧಾರದಲ್ಲಿ ನಿಲುಗಡೆ ನೀಡಲಾಗಿದೆ. ಶಿವಮೊಗ್ಗ ಕಡೆಯಿಂದ ಸಂಚರಿಸುವ ಇಂಟರ್‌ಸಿಟಿ ರೈಲು ಬೆಳಿಗ್ಗೆ 7.34ಕ್ಕೆ ಬಂದು 7.35ಕ್ಕೆ ನಿರ್ಗಮಿಸಲಿದೆ. ಯಶವಂತಪುರ ಕಡೆಯಿಂದ ಸಂಚರಿಸುವ ರೈಲು ಬೆಳಿಗ್ಗೆ 9.25ಕ್ಕೆ ಬಂದು ಬೆಳಿಗ್ಗೆ 9.26ಕ್ಕೆ ನಿರ್ಗಮಿಸಲಿದೆ.

ಹೂಡಿ ಹಾಲ್ಟ್: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬೆಂಗಳೂರು-ಜೋಲಾರ್‌ಪೇಟೆ ನಿಲ್ದಾಣಗಳ ನಡುವೆ ಸಂಚರಿಸುವ ಮೆಮು ರೈಲುಗಳಿಗೆ ಹೂಡಿ ಹಾಲ್ಟ್ ನಿಲ್ದಾಣದಲ್ಲಿದ್ದ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು ಆರು ತಿಂಗಳವರೆಗೆ ಅಂದರೆ ಮೇ 31ರವರೆಗೆ ಮುಂದುವರಿಸಲಾಗುವುದು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಇಂದು 9 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ರಾಜ್ಯದ ಕೆಲವೆಡೆ ಗುರುವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಒಂಬತ್ತು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ರಾಮನಗರ, ಕೊಡಗು, ಮೈಸೂರು ಹಾಗೂ ಚಾಮ ರಾಜನಗರ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಂಭವವಿದೆ. ಮಂಡ್ಯ ಜಿಲ್ಲೆಯಲ್ಲಿಯಲ್ಲಿಯೂ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಅನೇಕ ಕಡೆ ಸಾಧಾರಣ ಮಳೆಯಾಗುವ ಸಂಭವವಿದೆ. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಒಂದೆರಡು ಕಡೆ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನಲ್ಲಿ ಒಣಹವೆ ಇರಲಿದೆ.

ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ
(ಕೇಂದ್ರಿಯ ವಿಶ್ವವಿದ್ಯಾಲಯಗಳ ಕಾಯ್ದೆ, 2009ರ ಅಡಿಯಲ್ಲಿ ಸ್ಥಾಪಿತ)
ತೇಜಸ್ವಿನಿ ಹಿಲ್ಸ್, ಪೆರಿಯೆ ಅಂಚೆ, ಕಾಸರಗೋಡ್–671320

ಸಂ. ಸಿಯುಕೆ/ಆರ್‌ಸಿ/ಎಫ್‌ಒ/2023 14.11.2024

ಉದ್ಯೋಗ ಅಧಿಸೂಚನೆ
(ಬೋಧಕೇತರ)

ನೇರ ನೇಮಕಾತಿ ಆಧಾರದಲ್ಲಿ ಹಣಕಾಸು ಅಧಿಕಾರಿ ಹುದ್ದೆ ಭರ್ತಿ ಮಾಡಿಕೊಳ್ಳಲು ಅರ್ಹ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ಸಂಖ್ಯೆ, ಅಧಿಸೂಚನೆ ಸಂಖ್ಯೆ, ಪ್ರವರ್ಗ, ಅಗತ್ಯ ವಿದ್ಯಾರ್ಹತೆ, ಅನುಭವ, ವೇತನ, ಆನ್‌ಲೈನ್ ಅರ್ಜಿ ಸಲ್ಲಿಸುವ ವಿವರ ಇತ್ಯಾದಿ ವಿವರಗಳನ್ನು ಒಳಗೊಂಡಿರುವ ಅಧಿಸೂಚನೆಯು ವಿಶ್ವವಿದ್ಯಾಲಯದ www.cukerala.ac.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 31.12.2024 ರಂದು ಸಂಜೆ 5.00 ಗಂಟೆ.

CBC 21353/12/0001/2425 ರಿಜಿಸ್ಟ್ರಾರ್

ನಗರದಲ್ಲಿ ಇಂದು

ಹರಿನಾಮ ಸಂಕೀರ್ತನೆ: ಗಾಯನ: ವಿಂಧ್ಯಾ ಅಡಿಗ, ಕೀ–ಬೋರ್ಡ್: ಸೃಷ್ಟಿ ದೇಸಾಯಿ, ತಬಲಾ: ಋತುಪರ್ಣಾ ದೇಸಾಯಿತು, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಜಯನಗರ ಐದನೇ ಬಡಾವಣೆ, ಸಂಜೆ 5.30

‘ಕನ್ನಡ ಚಳವಳಿ-ಅಂದು, ಇಂದು, ಮುಂದು’ ಉಪನ್ಯಾಸ: ಗುರುದೇವ ನಾರಾಯಣ ಕುಮಾರ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

‘ಪ್ರಚಂಡ ರಾವಣ’ ನಾಟಕ ಪ್ರದರ್ಶನ: ಉದ್ಘಾಟನೆ: ಕೃಷ್ಣಪ್ಪ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಸನ್ಮಾನಿತರು: ರಂಗಶ್ರೀ ರಂಗಸ್ವಾಮಿ, ಅತಿಥಿಗಳು: ಆರ್. ರವಿಕುಮಾರ್, ಎಸ್. ಆರ್. ಮುನಿರಾಜು, ಎಸ್.ಆರ್. ತ್ಯಾಗರಾಜು, ಆಯೋಜನೆ: ಪ್ರತಿಭಾ ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

ಜೇನು ಕೃಷಿ ಪ್ರಕೃತಿ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ಣಾಯು ಆಯುರ್ವೇದ ಕೇಂದ್ರ ಮತ್ತು ರವಿ ಅರೋಮ ಎಂಟರ್‌ಪ್ರೈಸಸ್ ಸಂಯುಕ್ತ ಆಶ್ರಯದಲ್ಲಿ ಜೇನು ಕೃಷಿ ಮತ್ತು ದಿನ ನಿತ್ಯದ ಆಹಾರ ಪದ್ಧತಿಯಲ್ಲಿ ಗಿಡಮೂಲಿಕೆಗಳ ಉಪಯೋಗ ಹಾಗೂ ಜೀವನ ಶೈಲಿ ಶಿಕ್ಷಣ ಕಾರ್ಯಕ್ರಮ ಕುರಿತಂತೆ ಎರಡು ದಿನದ ಆರೋಗ್ಯ ಜಾಗೃತಿ ಕಾರ್ಯಾಗಾರ, ಮಾರ್ಗದರ್ಶನ ನಡೆಯಲಿದೆ.

ಕೆಂಪೇಗೌಡ ಲೇಔಟ್ 7ನೇ ಬ್ಲಾಕ್ ಕೊಮ್ಮಘಟ್ಟ ಪದ್ಮಶ್ರೀ ಇನ್‌ಸ್ಟಿಟ್ಯೂಷನ್ ಎದುರಿರುವ ಪೂರ್ಣಾಯುಧರ್ಾಮ-ದಲ್ಲಿ ಡಿ.13, 14 ರಂದು ತರಬೇತಿ ನೀಡಲಾಗುತ್ತದೆ. ಶಿರಸಿಯ ಜೇನು ಕೃಷಿ ತರಬೇತುದಾರ ಮತ್ತು ಪಾರಂಪರಿಕ ವೈದ್ಯ ಮಧುಕೇಶ್ವರ ಹೆಗಡೆ ಹಾಗೂ ಆಯುರ್ವೇದ ವೈದ್ಯ ಪಂಗಳ ಮುರಳೀಧರ ಭಟ್ ಭಾಗವಹಿಸಲಿದ್ದಾರೆ.

ಮಾಹಿತಿ: 7019108511

ಮಾರ್ಗದರ್ಶಿ: ಹೊಸ ಶಾಖೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಗದರ್ಶಿ ಚಿಟ್ ಫಂಡ್ ಪ್ರೈವೆಟ್ ಲಿಮಿಟೆಡ್ ಕಂಪನಿಯು ನಗರದ ಕೆಂಗೇರಿಯಲ್ಲಿ ಹೊಸ ಶಾಖೆ ಆರಂಭಿಸಿದೆ. ಈ ಶಾಖೆಯ ಆರಂಭದಿಂದ ಒಟ್ಟು ಶಾಖೆಗಳ ಸಂಖ್ಯೆ 119ಕ್ಕೇರಿದೆ.

‘ಕೆಂಗೇರಿಯಲ್ಲಿನ ಹೊಸ ಶಾಖೆ ಆರಂಭದಿಂದ ಕರ್ನಾಟಕದ ಜನರಿಗೆ ಮತ್ತಷ್ಟು ಹತ್ತಿರವಾಗಿದ್ದೇವೆ. ಜನರ ಹಣಕಾಸಿನ ಅಗತ್ಯತೆ ಪೂರೈಸಿಕೊಳ್ಳಲು ಅನುಕೂಲವಾಗಿದೆ. ಗ್ರಾಹಕರಿಗೆ ಸುರಕ್ಷತೆ, ಪಾರದರ್ಶಕತೆ ಮತ್ತು ಶಿಸ್ತುಬದ್ಧ ಸೇವೆ ಒದಗಿಸಲು ಬದ್ಧವಾಗಿದ್ದೇವೆ’ ಎಂದು ವ್ಯವಸ್ಥಾಪಕ ನಿರ್ದೇಶಕಿ ಶೈಲಜಾ ಕಿರಾನ್ ಹೇಳಿದ್ದಾರೆ.

ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡಿನಲ್ಲಿ ಶಾಖೆಗಳನ್ನು ಹೊಂದಿದ್ದು, 60 ಲಕ್ಷಕ್ಕೂ ಹೆಚ್ಚು ಚಂದಾದಾರರು ಇದ್ದಾರೆ. ₹9,396 ಕೋಟಿ ವಹಿವಾಟು ಹೊಂದಿದೆ ಎಂದಿದ್ದಾರೆ.

ಭಾರತ ಸರ್ಕಾರ

NSO INDIA Data for Development | 75 National Sample Survey — Celebrating 75 years of NSS

ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುವ ಸದಾವಕಾಶ

ಬನ್ನಿರಿ, ರಾಷ್ಟ್ರೀಯ ಸಾಂಖ್ಯಿಕ ಪ್ರಣಾಳಿಕೆಯನ್ನು ಬಲಪಡಿಸೋಣ

ರಾಷ್ಟ್ರೀಯ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಡಿಯಲ್ಲಿನ, ರಾಷ್ಟ್ರೀಯ ಸಾಂಖ್ಯಿಕ ಕಚೇರಿಯಿಂದ, ಭಾರತದಲ್ಲಿನ ಉದ್ಯೋಗ ನಿರ್ದರ್ಶನದ ಅಂಕಿಅಂಶ ನೀಡುವುದಕ್ಕಾಗಿ ನಿಯಮಿತ ಕಾರ್ಮಿ ಪಡೆ ಸರ್ವೇಕ್ಷಣೆ ಪಿರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ (ಪಿಎಲ್‌ಎಫ್‌ಎಸ್) ಕೈಗೊಳ್ಳಲಾಗುತ್ತಿದೆ.

ಪಿಎಲ್‌ಎಫ್‌ಎಸ್ ಪ್ರಮುಖ ಅಂಶಗಳು
- ಕಾರ್ಮಿಕ ಪಡೆಯ ಪಾಲ್ಗೊಳ್ಳುವಿಕೆ ದರ (ಎಲ್‌ಎಫ್‌ಪಿಆರ್)
- ಕಾರ್ಮಿಕ ಜನತೆಯ ಅನುಪಾತ (ಡಬ್ಲ್ಯುಪಿಆರ್)
- ನಿರುದ್ಯೋಗ ಪ್ರಮಾಣ (ಯುಆರ್)

ಸಮಸ್ತ ನಾಗರಿಕರು, ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಕಾರ್ಯಕರ್ತರಿಗೆ ಸಹಕಾರ ನೀಡಬೇಕು ಮತ್ತು ನಿಖರವಾದ ಅಂಕಿಅಂಶ ಒದಗಿಸಬೇಕೆಂದು ಮನವಿ ಮಾಡುತ್ತಿದ್ದೇವೆ

ಈ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರ ಮಾಹಿತಿಯನ್ನು, ಎಂಒಎಸ್‌ಪಿಐ'ನ ಎಲ್ಲಾ ವರದಿಗಳು ಮತ್ತು ಕಿರು ಅಂಕಿ ಅಂಶಗಳನ್ನು ಗೌಪ್ಯವಾಗಿ ಇರಿಸಲಾಗುತ್ತದೆ

ಎನ್‌ಎಸ್‌ಒ, ಎಂಒಎಸ್‌ಪಿಐ'ರವರ ಪಿಎಲ್‌ಎಫ್‌ಎಸ್ ವರದಿಗಳಿಗಾಗಿ, ದಯವಿಟ್ಟು ಭೇಟಿ ಕೊಡಿ www.mospi.gov.in, ಸೂಕ್ಷ್ಮ ಅಂಕಿಅಂಶಗಳು https://microdata.gov.in/nada43/index.php/home ನಲ್ಲಿ ಲಭ್ಯವಿರುತ್ತದೆ

www.mospi.gov.in @GoIStats /GoIStats Ministry of Statistics and Programme Implementation Ministry of Statistics & PI

CBC 39101/13/0008/2425

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹಾರ್ನ್‌ಬಿಲ್ ಫೆಸ್ಟಿವಲ್

ನಾಗಾಲ್ಯಾಂಡ್‌ನ ರಾಜಧಾನಿ ಕೊಹಿಮಾ ಹೊರವಲಯದ ಕಿಸಾಮಾದಲ್ಲಿ ನಡೆದ ಹಾರ್ನ್‌ಬಿಲ್ ಉತ್ಸವದಲ್ಲಿ ಸ್ಥಳೀಯ ನಾಗಾ ಬುಡಕಟ್ಟು ಕಲಾವಿದ ಕಾಣಿಸಿದ್ದು ಹೀಗೆ

ದೆಹಲಿಯಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಇಲ್ಲ: ಕೇಜ್ರಿವಾಲ್ 7
ವಿವಿಪ್ಯಾಟ್ ಪರಿಶೀಲನೆ: ಇವಿಎಂಗೆ ತಾಳೆ 11
‘ಪೊಲೀಸರೇ ಕಲ್ಲೆಸೆದು, ಲಾಠಿ ಬೀಸಿದ್ದಾರೆ’ 5
ಸಿರಿಯಾ: ತಾಯ್ನಾಡಿಗೆ ಮರಳಿ ಬನ್ನಿ– ಬಶೀರ್ 10

ಫ್ಲ್ಯಾಟ್ ವಿತರಣೆಯಲ್ಲಿ ಮೋಸ: ನಿರ್ಮಾಣ ಸಂಸ್ಥೆ ಸೇರಿ 13 ಮಂದಿ ವಿರುದ್ಧ ಎಫ್‌ಐಆರ್

₹3,300 ಕೋಟಿ ವಂಚನೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾರ್ಟ್‌ಮೆಂಟ್ ನಿರ್ಮಿಸಿ ಸಕಾಲದಲ್ಲಿ ಫ್ಲ್ಯಾಟ್ ವಿತರಣೆ ಮಾಡಲಾಗುವುದೆಂದು ಜಾಹೀರಾತು ನೀಡಿ ಖರೀದಿದಾರರಿಂದ ಹಣ ಪಡೆದು ಕೋಟ್ಯಂತರ ರೂಪಾಯಿ ವಂಚಿಸಿದ್ದ ಆರೋಪದಡಿ ನಿರ್ಮಾಣ ಸಂಸ್ಥೆ, ಸಂಸ್ಥೆಯ ಸದಸ್ಯರು, ಬ್ಯಾಂಕ್ ಅಧಿಕಾರಿಗಳು ಸೇರಿದಂತೆ 13 ಮಂದಿ ವಿರುದ್ಧ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ದೇವನಹಳ್ಳಿಯ ಓರ್ಝೋನ್ ಅರ್ಬನಾ ಬೈಯರ್ಸ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಫಾರೂಲ್ ಜಾನ್ ನರೋನಾ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ನಗರದ ಹಲಸೂರಿನಲ್ಲಿ ಕಚೇರಿ ಹೊಂದಿರುವ ಓರ್ಝೋನ್ ಅರ್ಬನಾ ಇನ್ಫ್ರಾ ಡೆವಲಪರ್ಸ್ ಸಂಸ್ಥೆ, ರಿಚ್ಮಂಡ್ ಟೌನ್‌ಶಿಪ್‌ನ ನಿವಾಸಿ ವಾಸುದೇವನ್ ಸತ್ಯಮೂರ್ತಿ, ಪ್ರಿಯಾ ವಾಸುದೇವನ್, ರಿಚ್ಮಂಡ್ ಟೌನ್‌ನ ಮ್ಯೂಸಿಯಂ ರಸ್ತೆಯ ನಿವಾಸಿ ಸತ್ಯಮೂರ್ತಿ ಸಾಯಿಪ್ರಸಾದ್, ದುರ್ಬಕುಲಾ ವಂಶಿಸಾಯಿ, ಶ್ರೀನಿವಾಸ್ ಗೋಪಾಲನ್, ಶಿವಸಾಗರ್ ನೇಮಿಚಂದ್, ರಾಜೀವ್ ಭಂಡಾರಿ, ಮಾಂಗಿಲಾಲ್ ಸಿಂಗ್, ಎಸ್.ಭಾಸ್ಕರನ್, ಗೌರವ್ ಗೋಯಲ್, ಗಣಪತಿ ಜೋಶಿ ಹಾಗೂ ವಿವಿಧ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ವಿವಿಧ ಬ್ಯಾಂಕ್‌ಗಳಲ್ಲಿ ಖರೀದಿದಾರರ ಹೆಸರಿನಲ್ಲಿ ಸುಮಾರು ₹1,500 ಕೋಟಿ ಸಾಲ (ಅಡಮಾನ ಸಾಲ), ಖರೀದಿದಾರರಿಂದ ನೇರವಾಗಿ ₹1,800 ಕೋಟಿ ಸೇರಿದಂತೆ ಒಟ್ಟು ₹3,300 ಕೋಟಿ ಪಡೆದು ಆರೋಪಿಗಳು ವಂಚಿಸಿದ್ದಾರೆ’ ಎಂಬ ಆರೋಪದ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಫಾರೂಲ್ ಜಾನ್ ಅವರು ಹೆಚ್ಚುವರಿ ಪೊಲೀಸ್ ಕಮಿಷನರ್ ಅವರಿಗೆ ದೂರು ನೀಡಿದ್ದರು. ನಂತರ, ಆ ದೂರನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ಇನ್‌ಸ್ಪೆಕ್ಟರ್ ಆರ್.ಸಂತೋಷ್ ರಾಮ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

‘ಓರ್ಝೋನ್ ಗ್ರೂಪ್’ ಎಂಬ ಕಂಪನಿಯ ನಿರ್ದೇಶಕರು, ‘ಓರ್ಝೋನ್ ಅರ್ಬನಾ ಪ್ರಾಜೆಕ್ಟ್’ ಹೆಸರಿನಲ್ಲಿ ಮನೆ ಹಾಗೂ ಫ್ಲ್ಯಾಟ್ ನಿರ್ಮಾಣ ಮಾಡುವುದಾಗಿ ಜಾಹೀರಾತು ನೀಡಿದ್ದರು. ಅಪಾರ್ಟ್‌ಮೆಂಟ್‌ಗಳ ನಿರ್ಮಾಣ ಪೂರ್ಣಗೊಳ್ಳದಿದ್ದರೂ ಬ್ಯಾಂಕ್ ಅಧಿಕಾರಿಗಳ ಜತೆಗೆ ಶಾಮೀಲಾಗಿ ಗೃಹಸಾಲ ಮಂಜೂರು ಮಾಡಿಸಿಕೊಂಡು, ಖರೀದಿದಾರರಿಂದ ಹಣ ಪಡೆದುಕೊಂಡಿದ್ದಾರೆ. ಆ ಹಣವನ್ನು ಸ್ವಂತ ಕಂಪನಿಗಳ ಖಾತೆಗೆ ವರ್ಗಾಯಿಸಿಕೊಂಡು ಮೋಸ ಮಾಡಿರುವುದು ಕಂಡುಬಂದಿದೆ’ ಎಂದು ಮೂಲಗಳು ತಿಳಿಸಿವೆ.

3ನೇ ಪುಟ ನೋಡಿ

ಗ್ರಾಹಕರಿಗೆ ಹಲವು ಆಮಿಷ

‘ಯೋಜನೆಯಡಿ ಫ್ಲ್ಯಾಟ್ ಖರೀದಿಸುವವರಿಗೆ ವಿವಿಧ ಬ್ಯಾಂಕ್, ಹೌಸಿಂಗ್ ಫೈನಾನ್ಸ್ ಕಂಪನಿಗಳು ಗೃಹಸಾಲ ಸೌಲಭ್ಯ ಕಲ್ಪಿಸಲಿವೆ. ಬ್ಯಾಂಕ್‌ನಿಂದ ಸಾಲ ಪಡೆದವರು ಯೋಜನೆ ಮುಕ್ತಾಯ ಆಗುವವರೆಗೆ ಯಾವುದೇ ಇಎಂಐ ಪಾವತಿ ಮಾಡುವಂತಿಲ್ಲ. ಕಂಪನಿಯೇ ಇಎಂಐ ಸಹ ಪಾವತಿ ಮಾಡಲಿದೆ ಎಂಬುದಾಗಿಯೂ ಆಮಿಷ ಒಡ್ಡಲಾಗಿತ್ತು’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಗ್ರಾಹಕರಿಗೆ ಹಣವನ್ನು ವಾಪಸ್ ನೀಡುವಂತೆ ಕೆ-ರೇರಾ ಆದೇಶ ಹೊರಡಿಸಿದ್ದರೂ, ಕಂಪನಿ ಅಧಿಕಾರಿಗಳು ವಾಪಸ್ ಮಾಡಿಲ್ಲ. ಓರ್ಝೋನ್ ಅರ್ಬನಾ ಇನ್ಫ್ರಾ ಡೆವಲಪರ್ಸ್ ಸಂಸ್ಥೆ, ವಾಸುದೇವನ್ ಸತ್ಯಮೂರ್ತಿ, ಪ್ರಿಯಾ ವಾಸುದೇವನ್, ಸತ್ಯಮೂರ್ತಿ ಸಾಯಿ ಪ್ರಸಾದ್ ಅವರು ಹಣ ಡ್ರಾ ಮಾಡಿಕೊಂಡಿದ್ದಾರೆ’ ಎಂದು ಉಲ್ಲೇಖಿಸಲಾಗಿದೆ.



ದೂರೇನು?

- ದೂರು ನೀಡದಂತೆ ಬೆದರಿಕೆ
- ಅವಾಚ್ಯ ಶಬ್ದಗಳಿಂದ ನಿಂದನೆ

‘ಸಭಾಪತಿಯಿಂದಲೇ ತೊಡಕು’

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಖರ್ಗೆ ವಿವರಣೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ಪಕ್ಷಪಾತಿಯಾಗಿ ವರ್ತಿಸುತ್ತಿರುವ ಕಾರಣದಿಂದ, ಉಪರಾಷ್ಟ್ರಪತಿ ಹುದ್ದೆಯಿಂದ ಅವರನ್ನು ಪದಚ್ಯುತಗೊಳಿಸಬೇಕು. ಸದನ ನಡೆಸುವುದಕ್ಕೆ ಅತಿ ದೊಡ್ಡ ತೊಡಕು ಅವರೇ ಆಗಿದ್ದಾರೆ ಎಂಬ ಕಾರಣದಿಂದ ನೋಟಿಸ್ ಸಲ್ಲಿಸಲಾಗಿದೆ ಎಂದು ವಿರೋಧ ಪಕ್ಷಗಳ ಕೆಲವು ಮುಖಂಡರು ಬುಧವಾರ ಹೇಳಿದ್ದಾರೆ.

ಮೇಲ್ಮನೆಯಲ್ಲಿ ನಿಯಮಗಳಿಗಿಂತಲೂ ಹೆಚ್ಚಾಗಿ ರಾಜಕೀಯಕ್ಕೆ ಬೆಲೆ ಬಂದಿದೆ ಎಂದು ನಾಯಕರು ಬೇಸರ ವ್ಯಕ್ತಪಡಿಸಿದ್ದಾರೆ.

‘ಧನಕರ್ ಅವರು ಸರ್ಕಾರದ ವಕ್ತಾರರ ರೀತಿಯಲ್ಲಿ, ಶಾಲೆಯ ಮುಖ್ಯೋಪಾಧ್ಯಾಯರ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ’ ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

7ನೇ ಪುಟ ನೋಡಿ

ರಾಜ್ಯಸಭೆಯ ಕಲಾಪ ಮುಂದಕ್ಕೆ

ಸಭಾಪತಿ ಜಗದೀಪ್ ಧನಕರ್ ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ನೀಡಿರುವ ನೋಟಿಸ್ ಹಾಗೂ ಜಾರ್ಜ್ ಸೋರೊಸ್ ವಿಚಾರವಾಗಿ ಸದನದಲ್ಲಿ ಕೋಲಾಹಲ ಉಂಟಾದ ಕಾರಣಕ್ಕೆ ರಾಜ್ಯಸಭೆಯ ಕಲಾಪವನ್ನು ಬುಧವಾರ ಮುಂದೂಡಲಾಯಿತು.

ನೋಟಿಸ್ ಸಲ್ಲಿಸಿರುವುದನ್ನು ಖಂಡಿಸಿದ ಸಭಾನಾಯಕ ಜೆ.ಪಿ. ನಡ್ಡಾ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ದೇಶವನ್ನು ಅಸ್ಥಿರ ಗೊಳಿಸಲು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಹೂಡಿಕೆದಾರ ಜಾರ್ಜ್ ಸೋರೊಸ್ ಜೊತೆ ಸೇರಿ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಶೂನ್ಯವೇಳೆ ಮತ್ತು ಪ್ರಶ್ನೋತ್ತರ ವೇಳೆಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರು ಪರಸ್ಪರರನ್ನು ಗುರಿಯಾಗಿಸಿಕೊಂಡು ಘೋಷಣೆ ಕೂಗುವುದರಲ್ಲಿ ನಿರತರಾದರು. ಇದರಿಂದಾಗಿ ಕಲಾಪವನ್ನು ಮುಂದೂಡಬೇಕಾಯಿತು. ಕಲಾಪವು ಬೆಳಿಗ್ಗೆ 11ಕ್ಕೆ ಆರಂಭವಾದಾಗ ಧನಕರ್ ಅವರು ಸಭಾಪತಿ ಆಸನದಲ್ಲಿದ್ದರು. ಅವರು ಸದನವನ್ನು 12ರವರೆಗೆ ಮುಂದೂಡಿದರು. ಕಲಾಪ ಮತ್ತೆ ಆರಂಭವಾದಾಗ ನಡ್ಡಾ ಅವರು, ಕಾಂಗ್ರೆಸ್ಸಿನ ನಾಯಕರು ಹಾಗೂ ಸೋರೊಸ್ ನಡುವಿನ ನಂಟಿನ ವಿಚಾರದಿಂದ ಗಮನವನ್ನು ಬೇರೆಡೆ ತಿರುಗಿಸಲು ನೋಟಿಸ್ ಸಲ್ಲಿಸಲಾಗಿದೆ ಎಂದು ಆರೋಪಿಸಿದರು.

7ನೇ ಪುಟ ನೋಡಿ

ಅಮಾನತು ರದ್ದತಿಗೆ ಜಾಮೀನಷ್ಟೇ ಆಧಾರವಲ್ಲ: ಹೈಕೋರ್ಟ್ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ನೌಕರನೊಬ್ಬ 48 ಗಂಟೆಗಳಿಗೂ ಹೆಚ್ಚು ಕಾಲ ಯಾವುದೇ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದ ಕಾಯ್ದೆಯಡಿ ಬಂಧನಕ್ಕೆ ಒಳಗಾಗಿದ್ದರೆ ಸೇವೆಯಿಂದ ತಂತಾನೆ ಅಮಾನತುಗೊಂಡಿರುತ್ತಾನೆ. ನಂತರ ಜಾಮೀನಿನ ಮೇಲೆ ಹೊರಬಂದಿದ್ದರೆ, ಸಕ್ಷಮ ಪ್ರಾಧಿಕಾರ ಅಮಾನತು ರದ್ದುಗೊಳಿಸಿ ಮುಂದಿನ ಔಪಚಾರಿಕ ಆದೇಶ ನೀಡುವತನಕ ಅಮಾನತು ಮುಂದುವರಿಯುತ್ತದೆ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ನೀಡಿದ್ದ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಕುಂದಾಣ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಡಿ.ಎಂ.ಪದ್ಮನಾಭ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠವು ಕೆಎಟಿ ಆದೇಶ ರದ್ದುಗೊಳಿಸಲು ನಿರಾಕರಿಸಿದೆ.

‘ಬಂಧನಕ್ಕೆ ಒಳಗಾಗಿದ್ದ ಸರ್ಕಾರಿ ನೌಕರನೊಬ್ಬ ಕೋರ್ಟ್‌ನಿಂದ ಜಾಮೀನು ಪಡೆದು ಹೊರಗೆ ಬಂದ ಮೇಲೆ ನೇರ ಕಚೇರಿಗೆ ಹೋಗಬಹುದೇ ಇಲ್ಲವೇ ಎಂಬುದನ್ನು 2015ರ ಸರ್ಕಾರಿ ಸುತ್ತೋಲೆಯ ಪ್ರಕಾರ ಸಕ್ಷಮ ಪ್ರಾಧಿಕಾರವೇ ನಿರ್ಧರಿಸಬೇಕು. ಅಂತಹ ನೌಕರನ ಅಮಾನತು ಆದೇಶವನ್ನು ರದ್ದುಪಡಿಸಬೇಕೊ ಬೇಡವೊ ಎಂಬ ಬಗ್ಗೆ ಪ್ರಾಧಿಕಾರವೇ ನಿರ್ಣಯ ಕೈಗೊಳ್ಳಬೇಕು’ ಎಂದಿದೆ.

3ನೇ ಪುಟ ನೋಡಿ

ಪ್ರಕರಣವೇನು?

‘ದೇವನಹಳ್ಳಿ ತಾಲ್ಲೂಕಿನ ಇಲತೊರೆ ಗ್ರಾಮದಲ್ಲಿ ಅಭಿವೃದ್ಧಿಪಡಿಸಲಾದ ಬಡಾವಣೆ ಪ್ರದೇಶದಲ್ಲಿ, ನೆಲದಾಳದಲ್ಲಿ ಎಲೆಕ್ಟ್ರಿಕಲ್ ಕೇಬಲ್ ಎಳೆಯಲು ಪದ್ಮನಾಭ ₹5 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿ ಮುಂಗಡವಾಗಿ ₹3 ಲಕ್ಷ ಪಡೆದಿದ್ದರು. ಇನ್ನೂ ₹2 ಲಕ್ಷ ಕೊಟ್ಟರೆ ಮಾತ್ರವೇ ಪರವಾನಗಿ ನೀಡುವುದಾಗಿ ತಿಳಿಸಿದ್ದರು’ ಎಂದು ಆಪಾದಿಸಿ ನೀಡಲಾಗಿದ್ದ ದೂರಿನಡಿ ಬಂಧಿಸಲಾಗಿತ್ತು. ಜಾಮೀನು ಪಡೆದು ಹೊರಬಂದಿದ್ದ ಅವರು ಅಮಾನತು ರದ್ದುಗೊಳಿಸುವಂತೆ ಕೆಎಟಿ ಮೊರೆಹೋಗಿದ್ದರು. ಕೆಎಟಿ ಇದನ್ನು ತಿರಸ್ಕರಿಸಿತ್ತು.

ಮನೆ ಕಟ್ಟಿದ್ದಕ್ಕೆ, ಅಂತರ್ಜಾತಿ ವಿವಾಹಕ್ಕೆ ಗಡಿಕಟ್ಟೆ ಯಜಮಾನರ ‘ಶಿಕ್ಷೆ’

ಎರಡು ಕುಟುಂಬಗಳಿಗೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಎರಡು ಪ್ರತ್ಯೇಕ ಪ್ರಕರಣಗಳಿಗೆ ಸಂಬಂಧಿಸಿದಂತೆ ತಾಲ್ಲೂಕಿನ ಲಿಂಗರಾಜಪುರದಲ್ಲಿ ಉಪ್ಪಾರ ಸಮಾಜದ ಎರಡು ಕುಟುಂಬಗಳಿಗೆ ಬಹಿಷ್ಕಾರ ಹಾಕಲಾಗಿದೆ. ಸಮುದಾಯದ ಗಡಿಕಟ್ಟೆ ಯಜಮಾನರು ಈ ಕುಟುಂಬಗಳಿಗೆ ಒಂದು ವರ್ಷದಿಂದ ಬಹಿಷ್ಕಾರ ಹಾಕಿದ್ದಾರೆ.



ಗೋವಿಂದ ಶೆಟ್ಟಿ

ಸಿದ್ದರಾಜು

ಗೋವಿಂದ ಶೆಟ್ಟಿ ಎಂಬುವರು ಗ್ರಾಮದಲ್ಲಿ ಮನೆ ಕಟ್ಟಿದ್ದಕ್ಕೆ ಬಹಿಷ್ಕಾರಕ್ಕೆ ಒಳಗಾಗಿದ್ದರೆ, ಮಗಳು ಅನ್ಯಜಾತಿಯ ಯುವಕನನ್ನು ಪ್ರೀತಿಸಿ ಮದುವೆಯಾಗಿದ್ದಕ್ಕೆ ಸಿದ್ದರಾಜು ಎಂಬುವರ ಕುಟುಂಬದ ಮೇಲೂ ಬಹಿಷ್ಕಾರ ಹಾಕಲಾಗಿದೆ.

‘60 ವರ್ಷಗಳಿಂದ ಗ್ರಾಮದಲ್ಲಿ ವಾಸವಿದ್ದು, ದೊಡ್ಡಪ್ಪನ ಮಗನಿಂದ ಜಾಗ ಖರೀದಿಸಿ ಮನೆ ನಿರ್ಮಿಸಿಕೊಂಡಿದ್ದೇನೆ. ಒತ್ತುವರಿ ಮಾಡಿರುವ ಕಾರಣವೊಡ್ಡಿ, ಗ್ರಾಮದ ಮುಖಂಡರು ಹಾಗೂ 16 ಊರಿನ ಕಟ್ಟೆಗಡಿ ಯಜಮಾನರು ₹55 ಸಾವಿರ ದಂಡ ಕಟ್ಟಿಸಿಕೊಂಡಿದ್ದಲ್ಲದೆ, ಮನೆಯನ್ನು ನೆಲಸಮ ಮಾಡಲು ಸೂಚಿಸಿದ್ದರು. ಒಪ್ಪದಿದ್ದಕ್ಕೆ ಬಹಿಷ್ಕಾರ ಹಾಕಿದ್ದಾರೆ’ ಎಂದು ಗೋವಿಂದ ಶೆಟ್ಟಿ ಅವರು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಅಳಲು ತೋಡಿಕೊಂಡರು.

ಅವರ ಸೊಸೆ ಲಕ್ಷ್ಮಿ ಮಾತನಾಡಿ, ‘ನಾನು ತುಂಬು ಗರ್ಭಿಣಿಯಾಗಿದ್ದು, ಬಹಿಷ್ಕಾರದಿಂದಾಗಿ ಖಿನ್ನತೆಗೆ ಒಳಗಾಗಿದ್ದೇನೆ. ಸ್ವಸಹಾಯ ಸಂಘಗಳಲ್ಲೂ ಸಾಲ ಸಿಗದಂತೆ ಮಾಡಿದ್ದಾರೆ’ ಎಂದು ದೂರಿದರು.

ಸಿದ್ದರಾಜು ಮಾತನಾಡಿ, ‘ನನ್ನ ಮಗಳು ಅಂತರ್ಜಾತಿ ವಿವಾಹವಾಗಿರುವುದು ತಪ್ಪೆಂದು ಊರಿನ ಯಜಮಾನರು, ಗಡಿಕಟ್ಟೆ ಯಜಮಾನರು ₹65 ಸಾವಿರ ದಂಡ ಕಟ್ಟಿಸಿಕೊಂಡಿದ್ದಾರೆ. ಮಗಳನ್ನು ಗ್ರಾಮಕ್ಕೆ ಕರೆತಂದರೆ ಮತ್ತೆ ₹1.20 ಲಕ್ಷ ದಂಡದ ಜೊತೆಗೆ ಬಹಿಷ್ಕಾರ ಹಾಕಬೇಕಾಗುತ್ತದೆ ಎಂದಿದ್ದಾರೆ’ ಎಂದರು.

‘ಅಂತರ್ಜಾತಿ ವಿವಾಹಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲವೇ? ನ್ಯಾಯ ತೀರ್ಮಾನಕ್ಕೆ ನ್ಯಾಯಾಲಯಗಳಿಲ್ಲವೇ? ಮಗಳನ್ನು ನೋಡಲಾಗದೆ, ಮಾತನಾಡಲಾಗದೆ ಪತ್ನಿ ಅನಾರೋಗ್ಯಕ್ಕೆ ತುತ್ತಾಗಿದ್ದಾಳೆ’ ಎಂದರು.

‘ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದು, ಸ್ಥಳ ಪರಿಶೀಲಿಸಿದ್ದು ಬಿಟ್ಟರೆ, ನೊಂದವರಿಗೆ ನ್ಯಾಯ ಕೊಡಿಸಿಲ್ಲ. ಕ್ರಮ ಕೈಗೊಳ್ಳದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಮಾಡಲಾಗುವುದು. ಗೃಹ ಸಚಿವರಿಗೆ, ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಲಾಗುವುದು’ ಎಂದು ಪ್ರಜಾ ಪರಿವರ್ತನ ವೇದಿಕೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಎಚ್.ಎಸ್.ಮುತ್ತಪ್ಪ ತಿಳಿಸಿದರು.

> ಬಹಿಷ್ಕಾರ ವಿಚಾರ ಗಮನಕ್ಕೆ ಬಂದಿಲ್ಲ, ಸ್ಥಳೀಯ ಠಾಣೆಯ ಪೊಲೀಸರನ್ನು ಗ್ರಾಮಕ್ಕೆ ಕಳುಹಿಸಿ ಪರಿಶೀಲಿಸಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು
>
> **ಬಿ.ಟಿ.ಕವಿತಾ,** ಎಸ್‌ಪಿ

Over 60 Years of Excellence 1962-2022 Margadarsi
RAMOJI GROUP

ನನ್ನ ಮಗನ ಉನ್ನತ ಶಿಕ್ಷಣ ಯಶಸ್ವಿಯಾಗಲು

ಸಲಹೆ ನೀಡಿದಕ್ಕಾಗಿ ಮಾರ್ಗದರ್ಶಿಗೆ ಧನ್ಯವಾದಗಳು

ಮುಂದೊಂದು ದಿನ ನನ್ನ ಮಗನನ್ನು ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ಕಳುಹಿಸುವೆನು ಎಂದು ನಾನು ಎಂದಿಗೂ ಊಹಿಸಿರಲಿಲ್ಲ, ಮಾರ್ಗದರ್ಶಿ ಅದನ್ನು ಸಾಕಾರಗೊಳಿಸಿದೆ. ನನ್ನ ವಿಶ್ವಾಸಾರ್ಹ ಮಾರ್ಗದರ್ಶಿ, ನನಗೆ ಹಣವನ್ನು ಉಳಿಸಲು, ಲಾಭಾಂಶಗಳನ್ನು ಗಳಿಸಲು ಸಹಾಯ ಮಾಡಿದೆ ಮತ್ತು ಈ ವಿಶೇಷ ಸಂದರ್ಭಕ್ಕಾಗಿ ನನಗೆ ಅಗತ್ಯವಿರುವಾಗ ಒಂದು ದೊಡ್ಡ ಮೊತ್ತವನ್ನು ಹಿಂಪಡೆಯಲು ನನಗೆ ನಮ್ಯತೆಯನ್ನು ಒದಗಿಸಿದೆ.

ಮಾರ್ಗದರ್ಶಿಯನ್ನು ನಿಮ್ಮ ಜೀವನದ ಒಂದು ಭಾಗವಾಗಿಸಿ. ಮಾರ್ಗದರ್ಶಿ ನಿಮ್ಮ ಎಲ್ಲಾ ಗುರಿಗಳನ್ನು ಪೂರೈಸುವ ಮಾರ್ಗದಲ್ಲಿ ನಿಮಗೆ ಮಾರ್ಗದರ್ಶನ ನೀಡವುದರಲ್ಲಿ ಅನುಭವಶಾಲಿಯಾಗಿದೆ.

1962ರಲ್ಲಿ ಸ್ಥಾಪಿತವಾಗಿದೆ
60 ಲಕ್ಷಕ್ಕಿಂತ ಹೆಚ್ಚಿನ ಚಂದಾದಾರರಿಗೆ ಸೇವೆ ಸಲ್ಲಿಸಿದ್ದೇವೆ
₹9,396 ಕೋಟಿ ಕ್ಯುಮುಲೇಟಿವ್ ಆಕ್ಷನ್ ಟರ್ನೋವರ್
ಕರ್ನಾಟಕ, ತೆಲಂಗಾಣಾ, ಆಂಧ್ರಪ್ರದೇಶ್ ಮತ್ತು ತಮಿಳುನಾಡುಗಳಲ್ಲಿ 120 ಶಾಖೆಗಳು

ಮಾರ್ಗದರ್ಶಿ
ಚಿಟ್ಸ್ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್
ಮಾರ್ಗದರ್ಶಿಯೊಂದಿಗೆ ನೀವು ಯೋಜಿಸಿದಾಗ ಜೀವನ ಸರಳ
www.margadarsi.com
For more details scan this QR-Code

ರಿಜಿಸ್ಟರ್ಡ್ ಆಫೀಸ್: ನಂ.ಎಸ್-801-802, ಮಣಿಪಾಲ್ ಸೆಂಟರ್, ನಂ.47, ಡಿಕೆನ್ಸನ್ ರೋಡ್, ಬೆಂಗಳೂರು - 560 042
ಫೋನ್: 080-25322939 | ಕರೆಮಾಡಿ 1800 425 7373 (ದರ ರಹಿತ) | ಅಥವಾ 56263ಗೆ <MARG>ಎಸ್‌ಎಂಎಸ್ ಮಾಡಿ

ಬೆಂಗಳೂರು: ಆರ್.ಓ. ಬೆಂಗಳೂರು: 080-25322939 / 25322938 / 7618795559 | ಗಾಂಧಿ ನಗರ: 080-22384676 / 85 / 7618795562 | ಜಯನಗರ: 080-22457994 / 22457374 / 7618795565 | ಇಂದಿರಾ ನಗರ: 080-25203738 / 25211048 / 7618795569 | ಬಸವೇಶ್ವರ ನಗರ: 080-23118228 / 7618795572 | ಬಿಟಿಎಂ ಲೇಔಟ್: 080-26687374 / 26687375 / 7618795573 | ಆರ್ ಟಿ ನಗರ: 080-23534949 / 22744685 / 7618795574 | ಮಾರತಹಳ್ಳಿ: 080-25401305 / 7618795575 | ಬನಶಂಕರಿ: 080-26796804 / 26790682 / 7618795576 | ಪೀಣ್ಯ: 080-28392044 / 7618795578 | ಹೆಚ್ ಎಸ್ ಆರ್ ಲೇಔಟ್: 080-25723636 / 7618795580 | ಕೆಂಗೇರಿ: 080-29904055/ 7618794468 | ಬಳ್ಳಾರಿ: 08392-268990 / 267990 / 7618795560 | ಹೊಸಪೇಟೆ: 08394-222552 / 53 / 7618795561 | ರಾಯಚೂರು: 08532-229516 / 7618795564 | ಮೈಸೂರು: 0821-2524223 / 7618795563 | ದಾವಣಗೆರೆ: 08192-251461 / 237700 7618795566 | ಹುಬ್ಬಳ್ಳಿ: 0836-2356211 / 2354149 / 7618795568 | ಶಿವಮೊಗ್ಗ: 08182-224644 / 228233 / 7618795567 | ಮಂಗಳೂರು: 0824-2442142 / 2447742 / 7618795570 | ಹಾಸನ: 08172-233576 / 233252 / 7618795571 | ತುಮಕೂರು: 0816-2255103 / 104 / 7618795577 | ಬೆಳಗಾವಿ: 0831-2431687 / 780 / 7618795579 | ಕೋಲಾರ: 08152-200566 / 7618795581 | ಹಾವೇರಿ: 08375-200543 / 7618795556 | ಚಿಕ್ಕಬಳ್ಳಾಪುರ: 08156-299911 / 7618794467

ಬೆಂಗಳೂರಿನ ಮೊದಲ ಹೋಲ್‌ಸೇಲ್ ಜ್ಯುವೆಲರಿ ತಾಣ
ಇದೀಗ ಕಮ್ಮನಹಳ್ಳಿಯಲ್ಲಿ

ಒಂದು ಶ್ರೇಷ್ಠ ಕಥೆಯ ಮನಮೋಹಕ ಆರಂಭ

Radhika Pandit...
ಬ್ರಾಂಡ್ ಅಂಬಾಸಿಡರ್- ರೀಗಲ್ ಜ್ಯುವಲರ್ಸ್

REGAL JEWELLERS
MANUFACTURER & WHOLESALERS

ವಿಶಾಲ ಉದ್ಘಾಟನೆ
ಶುಕ್ರವಾರ, 13th ಡಿಸೆಂಬರ್ 2024
at 12 PM

ಅದ್ದೂರಿ ಉದ್ಘಾಟನೆ
ಶ್ರೀಮತಿ ರಾಧಿಕಾ ಪಂಡಿತ್

ಇನೇ ಬ್ಲಾಕ್ ಹೆಚ್‌ಆರ್‌ಬಿಆರ್, ಬಿಬಿಎಂಪಿ ವಾರ್ಡ್ ನಂ ೮೯ ಕಮ್ಮನಹಳ್ಳಿ ಮುಖ್ಯರಸ್ತೆ, ಬಾಣಸವಾಡಿ, ಬೆಂಗಳೂರು, ಕರ್ನಾಟಕ 560043
regaljewellers.net | bangalore@regaljewellers.net | +91 8720 90 90 90
KARNATAKA | KERALA

14ಕ್ಕೆ 'ಬೆಂಗಳೂರು ವಾಕಥಾನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮರ್ಥನಂ ಟ್ರಸ್ಟ್ ಹಾಗೂ ಓಪನ್ ಟೆಕ್ಸ್ಟ್ ಸಹಭಾಗಿತ್ವದಲ್ಲಿ 'ಸರ್ವರಿಗೂ ಆರೋಗ್ಯ' ಎಂಬ ಘೋಷವಾಕ್ಯದಡಿ ಡಿಸೆಂಬರ್ 14ರಂದು ಜಯನಗರದ ಮೂರನೇ ಬ್ಲಾಕ್‌ನ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ 18ನೇ ಬೆಂಗಳೂರು ವಾಕಥಾನ್ ಆಯೋಜಿಸಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮರ್ಥನಂ ಟ್ರಸ್ಟ್‌ನ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ಟ್ರಸ್ಟಿ ಮಹಾಂತೇಶ್ ಜಿ. ಕಿವಡಸಣ್ಣನವರ್, 'ಬೆಂಗಳೂರು ವಾಕಥಾನ್ ಏಕತೆಯ ಸಂಭ್ರಮಾಚರಣೆಯಾಗಿದೆ. ಇದು ಎಲ್ಲರ ಆರೋಗ್ಯವನ್ನು ಉತ್ತಮವಾಗಿಸಲು ಪ್ರೇರೇಪಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಅಂಗವಿಕಲತೆಯ ಬಗ್ಗೆ ಅರಿವು ಮೂಡಿಸುವುದು, ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವುದು ಈ ವಾಕಥಾನ್ ಉದ್ದೇಶವಾಗಿದೆ' ಎಂದು ಮಾಹಿತಿ ನೀಡಿದರು.

ಭಾಗವಹಿಸಲು ಆಸಕ್ತಿ ಹೊಂದಿರುವವರು ಹೆಚ್ಚಿನ ಮಾಹಿತಿಗಾಗಿ 94808 09591 ಸಂಪರ್ಕಿಸಿ.

'ಭಾರತದಲ್ಲಿನ ಜನರ ರಕ್ಷಿಸಿ, ವಾಕ್ ಸ್ವಾತಂತ್ರ್ಯ ಮರುಸ್ಥಾಪಿಸಿ': ಮರಣ ಪತ್ರದಲ್ಲಿ ಉಲ್ಲೇಖ

ಅಮೆರಿಕ ಅಧ್ಯಕ್ಷರ ನೆರವು ಕೇಳಿದ್ದ ಟೆಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕಂಪನಿಯ ನಿರ್ದೇಶಕ, ಉತ್ತರ ಪ್ರದೇಶದ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಮಾರತ್‌ಹಳ್ಳಿ ಠಾಣೆ ಪೊಲೀಸರು ಚುರುಕುಗೊಳಿಸಿದ್ದಾರೆ.

ಅತುಲ್

ಸಹೋದರ ಬಿಕಾಸ್ ಕುಮಾರ್ ಅವರು ನೀಡಿದ ದೂರು ಆಧರಿಸಿ ಅತುಲ್ ಸುಭಾಷ್ ಅವರ ಪತ್ನಿ, ಆಕೆಯ ತಾಯಿ, ಸಹೋದರ ಹಾಗೂ ಚಿಕ್ಕಪ್ಪನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಮತ್ತೊಂದೆಡೆ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಅತುಲ್ ಸುಭಾಷ್ ಆತ್ಮಹತ್ಯೆ ಮಾಡಿಕೊಂಡ ಮಾಹಿತಿ ತಿಳಿದು, ಕುಟುಂಬಸ್ಥರು ಉತ್ತರ ಪ್ರದೇಶದಿಂದ ನಗರಕ್ಕೆ ಬಂದಿದ್ದರು ಎಂದು ಮೂಲಗಳು ಹೇಳಿವೆ.

ಕಂಪ್ಯೂಟರ್, ಐ.ಡಿ ವಾಪಸ್

ಅತುಲ್ ಸಾಯುವುದಕ್ಕೂ ಮುನ್ನ ಕಂಪ್ಯೂಟರ್ ಹಾಗೂ ಗುರುತಿನ ಚೀಟಿಗಳನ್ನು ಕಂಪನಿಗೆ ವಾಪಸ್ ನೀಡಿದ್ದರು. ಮೊಬೈಲ್‌ಗೆ ಹಾಕಿದ್ದ ಲಾಕ್ ತೆಗೆದಿದ್ದರು. ಕಾರು, ಬೈಕ್‌ನ ಕೀ ಅನ್ನು ಕಾಣುವಂತೆ ಇಟ್ಟಿದ್ದರು ಎಂದು ಮೂಲಗಳು ತಿಳಿಸಿವೆ.

ಪ್ರಾಥಮಿಕ ತನಿಖೆಯ ಪ್ರಕಾರ ಅತುಲ್ ಸುಭಾಷ್ ವೈವಾಹಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದರು ಎಂಬುದು ಗೊತ್ತಾಗಿದೆ. ಅತುಲ್ ಸಾವಿಗೆ ಕಾರಣರಾದವರನ್ನು ತಕ್ಷಣವೇ ಬಂಧಿಸಬೇಕು ಎಂದು ಟೆಕಿಗಳು ಆಗ್ರಹಿಸಿದ್ದಾರೆ.

ಕೌಟುಂಬಿಕ ಕಲಹಕ್ಕೆ ಬೇಸತ್ತಿದ್ದ ಅತುಲ್ ಸುಭಾಷ್ ಅವರು ಸುಮಾರು 26 ಪುಟಗಳ ಮರಣ ಪತ್ರ ಬರೆದು, ಅದನ್ನು ಸುಪ್ರೀಂ ಕೋರ್ಟ್, ಹೈಕೋರ್ಟ್, ಕಚೇರಿ, ಸರ್ಕಾರೇತರ ಎಸ್‌ಐಎಫ್‌ಎಫ್ ಸಂಸ್ಥೆ, ಕುಟುಂಬ ಸದಸ್ಯರಿಗೆ ಇ–ಮೇಲ್ ಕಳುಹಿಸಿ ಮಾರತ್‌ಹಳ್ಳಿಯ ಮಂಜುನಾಥ್ ಲೇಔಟ್‌ನ ಅಪಾರ್ಟ್‌ಮೆಂಟ್ ತಮ್ಮ ಫ್ಲ್ಯಾಟ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

'ಪತ್ನಿ ನಿಖಿತಾ ಹಾಗೂ ಆಕೆಯ ಕುಟುಂಬದವರು ಚಿತ್ರಹಿಂಸೆ ನೀಡುತ್ತಿದ್ದರು. ತಪ್ಪು ಇಲ್ಲದಿದ್ದರೂ ನನ್ನ ವಿರುದ್ಧ ಒಂಬತ್ತು ಪ್ರಕರಣ ದಾಖಲು ಮಾಡಿದ್ದರು. ಹೈಕೋರ್ಟ್ ಸೇರಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಎಂಟು ಪ್ರಕರಣಗಳ ವಿಚಾರಣೆ ನಡೆಯುತ್ತಿದೆ. ಒಂದು ಪ್ರಕರಣವನ್ನು ಆಕೆ ವಾಪಸ್ ಪಡೆದುಕೊಂಡಿದ್ದರು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅಲ್ಲದೇ ಆತ್ಮಹತ್ಯೆಗೂ ಮುನ್ನ ವಿಡಿಯೊ ಮಾಡಿಟ್ಟು ನೆರವು ನೀಡುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಟೆಸ್ಲಾ ಕಂಪನಿ ಸಿಇಒ ಇಲಾನ್ ಮಸ್ಕ್ ಅವರ ಬಳಿ ಸಹಾಯ ಕೇಳಿದ್ದಾರೆ.

'ಭಾರತದಲ್ಲಿ ನರಮೇಧ ನಡೆಯುತ್ತಿದೆ. ಜನರನ್ನು ರಕ್ಷಿಸಿ ವಾಕ್ ಸ್ವಾತಂತ್ರ್ಯ ಮರುಸ್ಥಾಪಿಸಿ' ಎಂದೂ ಆ ವಿಡಿಯೊದಲ್ಲಿ ಮನವಿ ಮಾಡಿದ್ದಾರೆ.

ಪ್ರತಿ ತಿಂಗಳು ₹2 ಲಕ್ಷಕ್ಕೆ ಬೇಡಿಕೆ

'ಅತುಲ್ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದರು. ಅಲ್ಲದೇ ವರದಕ್ಷಿಣೆ ಸೇರಿದಂತೆ ವಿವಿಧ ಪ್ರಕರಣಗಳನ್ನು ಬಗೆಹರಿಸಿಕೊಳ್ಳಲು ₹3 ಕೋಟಿಗೆ ಬೇಡಿಕೆ ಇಡಲಾಗಿತ್ತು. ಪ್ರತಿ ತಿಂಗಳು ಜೀವನಾಂಶಕ್ಕೆ ₹2 ಲಕ್ಷಕ್ಕೆ ಬೇಡಿಕೆ ಇಡಲಾಗಿತ್ತು. ಇದರಿಂದ ಅತುಲ್ ಅವರು ಮಾನಸಿಕ, ದೈಹಿಕವಾಗಿ ಮನನೊಂದಿದ್ದರು. ನಾಲ್ವರ ಪ್ರಚೋದನೆಯಿಂದಲೇ ಮೃತಪಟ್ಟಿದ್ದಾರೆ' ಎಂದು ದೂರು ನೀಡಲಾಗಿದೆ.

90 ನಿಮಿಷಗಳ ವಿಡಿಯೊ ಮಾಡಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ವಿಡಿಯೊವನ್ನು ಕಂಪನಿಯ ಸಹೋದ್ಯೋಗಿಗಳಿಗೆ ಕಳುಹಿಸಿದ್ದರು. ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಅಂತ್ಯಕ್ರಿಯೆಗೆ ಪತ್ನಿ ಬರುವುದು ಬೇಡ: 'ತನ್ನ ಮಗನನ್ನು ಪೋಷಕರಿಗೆ ಒಪ್ಪಿಸಿ. ಯಾವುದೇ ಕಾರಣಕ್ಕೂ ಪತ್ನಿ ಹಾಗೂ ಆಕೆಯ ಮನೆಯವರು ಮೃತದೇಹವನ್ನು ನೋಡಬಾರದು' ಎಂದು ಉಲ್ಲೇಖಿಸಿದ್ದಾರೆ. ನಾಲ್ಕು ವರ್ಷದ ಪುತ್ರನಿಗೆ ಉಡುಗೊರೆ ತಲುಪಿಸಿ. ನ್ಯಾಯಾಲಯದಲ್ಲೂ ನ್ಯಾಯ ಸಿಗುತ್ತಿಲ್ಲ ಎಂದು ಪತ್ರದಲ್ಲಿ ಬರೆದುಕೊಂಡಿದ್ದಾರೆ.

'ನ್ಯಾಯ ಸಿಗುವುದು ಬಾಕಿಯಿದೆ' ಎಂಬ ಪೋಸ್ಟರ್ ಅನ್ನು ಗೋಡೆಗೆ ಅಂಟಿಸಿ, ತಾನು ಪೂರ್ಣಗೊಳಿಸಿರುವ ಕೆಲಸಗಳ ಪಟ್ಟಿ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

'ನ್ಯಾಯ ಸಿಗುವವರೆಗೂ ಚಿತಾಭಸ್ಮವನ್ನು ನೀರಿನಲ್ಲಿ ಬಿಡುವುದು ಬೇಡ. ನ್ಯಾಯ ಕೊಡಲು ಸಾಧ್ಯ ಆಗದಿದ್ದರೆ ಚಿತಾಭಸ್ಮವನ್ನು ನ್ಯಾಯಾಲಯದ ಎದುರು ಚರಂಡಿಗೆ ಹಾಕಿ' ಎಂದು ಹೇಳಿಕೊಂಡಿದ್ದಾರೆ. ಈ ಸಂಬಂಧ ಪ್ರತಿಕ್ರಿಯೆ ನೀಡಲು ಅತುಲ್ ಪೋಷಕರು ನಿರಾಕರಿಸಿದ್ದಾರೆ.

ಸುದ್ದಿ 2 ನಿಮಿಷ

ಕನಕಲಕ್ಷ್ಮಿ ಜಾಮೀನು ಅರ್ಜಿ ವಜಾ

ಬೆಂಗಳೂರು: ವಕೀಲೆ, ಉದ್ಯಮಿ ಜೀವಾ ಆತ್ಮಹತ್ಯೆ ಪ್ರಕರಣದಲ್ಲಿ ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮಿ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು 23ನೇ ಸಿಸಿಎಚ್ ಕೋರ್ಟ್ ವಜಾಗೊಳಿಸಿದೆ.

ಭೋವಿ ನಿಗಮದ ಅಕ್ರಮ ಪ್ರಕರಣದ ತನಿಖೆಯನ್ನು ಸಿಐಡಿ ನಡೆಸುತ್ತಿದೆ. ಒಟ್ಟು ಪ್ರಕರಣಗಳು ದಾಖಲಾಗಿದ್ದು ಪ್ರಕರಣವೊಂದರಲ್ಲಿ ಕನಕಲಕ್ಷ್ಮಿ ಅವರು ತನಿಖಾಧಿಕಾರಿ ಆಗಿದ್ದರು.

'ವಿಚಾರಣೆ ನೆಪದಲ್ಲಿ ತನ್ನ ಬಳಿ ₹25 ಲಕ್ಷಕ್ಕೆ ಬೇಡಿಕೆಯಿಟ್ಟು ಮಾನಸಿಕ ಕಿರುಕುಳ ನೀಡಿದ್ದರು. ಜತೆಗೆ ವಿವಸ್ತ್ರಗೊಳಿಸಿ ಅಮಾನವೀಯವಾಗಿ ನಡೆದುಕೊಂಡಿದ್ದರು' ಎಂದು ಆರೋಪಿಸಿ ಜೀವಾ ಮರಣ ಪತ್ರ ಬರೆದು ಆತ್ಮಹತ್ಯೆ ಮಾಡಿಕೊಂಡಿದ್ದರು. ಮರಣ ಪತ್ರದಲ್ಲಿ ಡಿವೈಎಸ್ಪಿ ಹೆಸರು ಉಲ್ಲೇಖಿಸಿದ್ದರು.

ಮೃತ ಜೀವಾ ಸಹೋದರಿ ಸಂಗೀತಾ ನೀಡಿದ ದೂರು ಆಧರಿಸಿ ಬನಶಂಕರಿ ಪೊಲೀಸರು ಪ್ರಕರಣ ದಾಖಲಾಗಿತ್ತು. ನಗರ ಪೊಲೀಸ್ ಆಯುಕ್ತ ದಯಾನಂದ ಪ್ರಕರಣವನ್ನು ಸಿಸಿಬಿಗೆ ವರ್ಗಾಯಿಸಿದ್ದರು. ಮತ್ತೊಂದೆಡೆ ಸಿಬಿಐ ತನಿಖೆ ಕೋರಿ ವಕೀಲರ ಸಂಘ ಸಲ್ಲಿಸಿದ್ದ ಅರ್ಜಿ ಸಂಬಂಧ ವಿಚಾರಣೆ ನಡೆಸಿದ್ದ ಹೈಕೋರ್ಟ್ ಪ್ರತ್ಯೇಕ ಎಸ್‌ಐಟಿ ರಚಿಸಿತ್ತು.

ವಿಶೇಷ ತಂಡ ರಚನೆಯ ಬೆನ್ನಲ್ಲೇ ಕನಕಲಕ್ಷ್ಮಿ ಅವರು ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ, ವಿಚಾರಣೆ ನಡೆಸಿದ ಕೋರ್ಟ್, ಪ್ರಕರಣ ಗಂಭೀರ ಸ್ವರೂಪದಿಂದ ಕೂಡಿದ್ದು ಜಾಮೀನು ನೀಡಲು ಸಾಧ್ಯವಿಲ್ಲ ಎಂದು ಹೇಳಿದೆ.

14ರಿಂದ ಜಾಗತಿಕ ಯೋಗ ಶೃಂಗ

ಬೆಂಗಳೂರು: ರೋಟರಿ ಬೆಂಗಳೂರು ಗ್ಲೋಬಲ್ ಯೋಗ ಕ್ಲಬ್, ರೋಟರಿ ಅಂತರರಾಷ್ಟ್ರೀಯ ಜಿಲ್ಲೆ 3192 ಮತ್ತು 3191 ನೇತೃತ್ವದಲ್ಲಿ ಇದೇ 14 ಮತ್ತು 15ರಂದು ಜಿಕೆವಿಕೆ ಆವರಣದಲ್ಲಿರುವ ಡಾ. ಬಾಬುರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಮೂರನೇ ಆವೃತ್ತಿಯ ಜಾಗತಿಕ ಯೋಗ ಶೃಂಗ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯೋಗ ಶೃಂಗದ ಅಧ್ಯಕ್ಷ ಬಿ.ಎಲ್. ನಾಗೇಂದ್ರ ಪ್ರಸಾದ್, 'ಯೋಗ ಮತ್ತು ಸ್ವಯಂ ಆರೈಕೆಯ ಮೂಲಕ ಪರಿಪೂರ್ಣ ಬದುಕಿನ ಆಶಯದೊಂದಿಗೆ ಸಾಮಾಜಿಕ ಸಾಮರಸ್ಯವನ್ನು ಪಸರಿಸುವ ನಿಟ್ಟಿನಲ್ಲಿ ಈ ಶೃಂಗ ಆಯೋಜಿಸಲಾಗಿದೆ. 50ಕ್ಕೂ ಹೆಚ್ಚು ದೇಶಗಳ 5 ಸಾವಿರ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಡಿ. 14ರಂದು ಮೇಘಾಲಯದ ರಾಜ್ಯಪಾಲರಾದ ಸಿ.ಎಚ್. ವಿಜಯಶಂಕರ್ ಅವರು ಶೃಂಗವನ್ನು ಉದ್ಘಾಟಿಸಲಿದ್ದಾರೆ. ನಿರಂಜನಾನಂದಪುರಿ ಸ್ವಾಮೀಜಿ, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ವಿನಯ್ ಗುರೂಜಿ ಭಾಗವಹಿಸಲಿದ್ದಾರೆ. ಡಿ. 15ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಶಿಲ್ಪಿ ಅರುಣ್ ಯೋಗಿರಾಜ್, ಸಚಿವರಾದ ಕೃಷ್ಣ ಬೈರೇಗೌಡ, ಎನ್. ಚಲುವರಾಯಸ್ವಾಮಿ, ದಿನೇಶ್ ಗುಂಡೂರಾವ್ ಭಾಗವಹಿಸಲಿದ್ದಾರೆ' ಎಂದರು.

ನೋಂದಣಿಗೆ ಸಂಪರ್ಕಿಸಿ: 98868 01666, 63632 21012

ಆತ್ಮಹತ್ಯೆಗೆ ಪ್ರಚೋದನೆ: ಶಿಕ್ಷೆಗೆ ಕಿರುಕುಳದ ಆರೋಪ ಸಾಕಾಗದು- ಸುಪ್ರೀಂಕೋರ್ಟ್

ನವದೆಹಲಿ: 'ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪಗಳನ್ನು ಯಾವುದೇ ವ್ಯಕ್ತಿ ಮೇಲೆ ಹೊರಿಸಲು ಕೇವಲ ಕಿರುಕುಳ ನೀಡಿದ ಆರೋಪಗಳು ಸಾಕಾಗುವುದಿಲ್ಲ. ಬಲವಾದ ಸಾಕ್ಷ್ಯಗಳು ಬೇಕಾಗುತ್ತವೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಪ್ರಸನ್ನ ಬಿ. ವರಾಳೆ ಅವರಿದ್ದ ಪೀಠವು, ತನ್ನ ಪತ್ನಿಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಲ್ಲಿ ಬಂಧನಕ್ಕೆ ಒಳಗಾಗಿದ್ದ ವ್ಯಕ್ತಿ ಮತ್ತು ಆತನ ಹೆತ್ತವರನ್ನು ಬಿಡುಗಡೆಗೊಳಿಸಿತು. ಈ ಪ್ರಕರಣದಲ್ಲಿ ಮಹಿಳೆಯ ಆತ್ಮಹತ್ಯೆಯಲ್ಲಿ ಆಕೆಯ ಪತಿ ಮತ್ತು ಆತನ ಪೋಷಕರು ಕಾರಣವಾಗಿರುವ ಅಂಶಗಳು ಕಂಡುಬಂದಿಲ್ಲ ಎಂದು ಹೇಳಿದೆ.

'ಸೆಕ್ಷನ್ 306 ಐಪಿಸಿ (ಆತ್ಮಹತ್ಯೆಗೆ ಪ್ರಚೋದನೆ) ಅಡಿಯಲ್ಲಿ ಶಿಕ್ಷೆಗೆ ಗುರಿಪಡಿಸಲು, ಆತ್ಮಹತ್ಯೆಗೆ ಪ್ರಚೋದನೆಯ ಪ್ರತ್ಯಕ್ಷ ಅಥವಾ ಪರೋಕ್ಷ ಕ್ರಿಯೆಗಳ ಸ್ಪಷ್ಟ ಪುರಾವೆಗಳು ಇರಬೇಕು. ಆತ್ಮಹತ್ಯೆಯ ಕಾರಣ, ವಿಶೇಷವಾಗಿ ಪ್ರಚೋದನೆಯ ಸಂದರ್ಭದಲ್ಲಿ, ವ್ಯಕ್ತಿಯ ನಡವಳಿಕೆ ಮತ್ತು ಪ್ರತಿಕ್ರಿಯೆಗಳ ಸಂಕೀರ್ಣ ಗುಣಲಕ್ಷಣಗಳನ್ನು ಒಳಗೊಂಡಿರುತ್ತದೆ. ಕೃತ್ಯವನ್ನು ಪ್ರಚೋದಿಸುವಲ್ಲಿ ಆರೋಪಿ ವಹಿಸಿದ ಪಾತ್ರದ ಬಗ್ಗೆ ಸಮರ್ಥ ಮತ್ತು ಮನವರಿಕೆ ಆಗುವಂತಹ ಪುರಾವೆಗಳು ಬೇಕಾಗುತ್ತದೆ' ಎಂದು ಪೀಠವು ಮಂಗಳವಾರ ನೀಡಿರುವ ತನ್ನ ತೀರ್ಪಿನಲ್ಲಿ ಹೇಳಿದೆ.

'ಆರೋಪಿಗಳು ಕುಮ್ಮಕ್ಕು ನೀಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ ಎಂಬುದನ್ನು ಪ್ರಾಸಿಕ್ಯೂಷನ್ ಅನುಮಾನಕ್ಕೆ ಆಸ್ಪದವಿಲ್ಲದಂತೆ ಸಾಬೀತುಪಡಿಸಬೇಕು. ಆತ್ಮಹತ್ಯೆಗೆ ಪ್ರಚೋದನೆ ನೀಡಿರುವುದರಲ್ಲಿ ಅಥವಾ ಕಾರಣವಾಗಿರುವುದರಲ್ಲಿ ಆರೋಪಿಯ ಸಕ್ರಿಯ ಪಾತ್ರವಿದೆ ಎಂಬುದಕ್ಕೆ ಸ್ಪಷ್ಟ ಪುರಾವೆಗಳಿಲ್ಲದೆ, ಸೆಕ್ಷನ್ 306 ಐಪಿಸಿ ಅಡಿಯಲ್ಲಿ ಶಿಕ್ಷೆ ವಿಧಿಸಲು ಸಾಧ್ಯವಿಲ್ಲ' ಎಂದು ಪೀಠ ಹೇಳಿದೆ.

ಆಕೆ/ಅವನು ತನ್ನ ಜೀವ ಕಳೆದುಕೊಂಡರೆ, ಅದಕ್ಕೆ ಕುಮ್ಮಕ್ಕು ನೀಡಿದ ಆರೋಪಿ ಸಕ್ರಿಯ ಅಥವಾ ನೇರ ಭಾಗಿಯಾಗಿದ್ದಾನೆ ಎಂಬುದನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಬೇಕು ಎಂದಿದೆ.

ಜಯದೀಪ್‌ಸಿನ್ಹ್ ಪ್ರವಿನ್‌ಸಿನ್ಹ್ ಚಾವ್ಡಾ ಮತ್ತು ಇತರರು ಗುಜರಾತ್ ಹೈಕೋರ್ಟ್ 2024ರ ಮೇ 9ರಂದು ನೀಡಿದ್ದ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಅಪರಾಧದಲ್ಲಿ ಆರೋಪಿಯನ್ನು ಬಿಡುಗಡೆ ಮಾಡಿದೆ. ಆದರೆ, ಮಹಿಳೆಯ ಮೇಲೆ ಕ್ರೌರ್ಯ ನಡೆಸಿದ ಆರೋಪವನ್ನು ಎತ್ತಿಹಿಡಿದಿದೆ.

ಸನ್ಮಾನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ನಿಯೋಜಿತ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ ಅವರನ್ನು ಸನ್ಮಾನಿಸಲಾಯಿತು. ವೂಡೇ ಪಿ. ಕೃಷ್ಣ, ರಾಣಿ ಸತೀಶ್, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿ. ಸೋಮಶೇಖರ್, ಸಿದ್ಧಲಿಂಗ ಸ್ವಾಮೀಜಿ ಹಾಗೂ ಕೆ.ವಿ. ನಾಗರಾಜಮೂರ್ತಿ ಹಾಜರಿದ್ದರು — ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

IN THE COURT OF THE HON'BLE PRL. CIVIL JUDGE AND JMFC AT SRINIVASPURA
FDP. NO. 06/2022
BETWEEN Syed Rehman Barid and others..... Petitioners
And
Azgar Barid by his LR's and others... Respondents
1. (a)(i)(a) Syed Vadood Barid S/o Late Davood Barid, R/at Thadigol Village, Ronur Hobli. Srinivaspura Taluk, Kolar District. 2. (b) Rizwana Begum, W/o Late Syed Afsar Basha, R/at IInd Floor, 16th Main Road, 2nd Stage BTM Layout, Bangalore-560076. 3. (c) Salma Banu W/o Habeebulla.K, R/at #123, Byrappa Layout, Govindapura, Arabic College Post, Bangalore-560045. 4.(d) Asma Banu W/o Amjad Matheen Sattar, R/at 1st Stage, 5th Block, HBR Layout, Kalyan Nagar, Bangalore-560043. 5. (e) Tasneem Banu W/o Shaik Rahamatullah, R/at #247, 14th Cross, Umar Nagar, Govindapura, Bangalore-560045. 6. (f) Yasmeen Bano D/o Syed Dawood Barid, R/at #40, 2nd Floor, 1st Cross, Sai Baba Layout, Vaddarapalya, Horamavu, Bangalore - 560043. 7.(g) Tahseen Banu W/o Mohammed Ammar, R/at "B" Block, Nagawara Main Road, Arabic College Post, Bangalore-560045.
NOTICE TO THE INTERESTED PERSONS UNDER ORDER 5 RULE 20 OF CPC
The petitioner herein above named filed this petition Under order 20 rule 18 of CPC R/w Section 54 of the CPC 1908 before this Hon'ble court in FDP. No. 06/2022 prays for grant final decree proceedings in respect of schedule properties for actual division for appointment of court commissioner as contemplated under order 26 of CPC in favour of the petitioners/Plaintiffs of their share as ordered by the Hon'ble High Court of Karnataka in RSA No. 160/1995 dated 17-03-2009 and direct the Deputy Commissioner Kolar or any other authorized Officer directing for effecting partition in accordance with law under section 54 of CPC and also order for mense profits from the LR's of Defendant No. 1 from the date of suit till realization of the amount of the income of the properties and draw decree accordingly.
Hence this Hon'ble court fixed the date of for appearance of the interested persons through their advocate that day 06-01-2025 at 11.00.am to file your objections if any. Failing which the matter will be heard and determined exparte.
Given under my hand and the seal of the court on this 6th Day of December 2024.
Place: Srinivaspura
Date: 6/12/2024
Advocates for petitioners
K. Vinay Kumar
N. Lakshmi Narasimhaiah
Advocates, Srinivaspur
By Order of the Court
SHERESTHEDAR
Prl.Civil Judge & JMFC Court. Srinivasapura

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

JOB OPPORTUNITIES

Multiple Vacancy

HIRING
We are Hiring for Sewage Treatment Plant Projects
Experienced Engineers, Technicians, Electricians, Marketing Executives
for sewage treatment plant projects
Experince Required: 2-10 years
Contact Us:
9449039259

BUILDERS ESSENTIAL

Doors & Windows

STEEL DOOR with hardware now available @13000 Contact 9482111666

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats,Converted& Agriculture Lands
Call:7204995189

PERSONAL

Change of Name

I, ARTI Raina W/o Suraj Raina aged about 39 years resident of No B-401, MRKR MERA, Whitefield Hosakote Road, Seegehalli Kadugodi Post. Bengaluru 560067. Have changed my name to Arti Razdan vide affidavit dated 10.12.2024 before Notary Manjunath T Bengaluru. Henceforth I Shall be called as Arti Razdan only.

CHANGE OF NAME
I, ROOPA. G, Residing at # 6, 3rd Cross, Dasappa Garden, Lingaiah Palya, Halasuru, Bangalore-560008 have changed my minor son's name from BHUVAN KUMAAR.I, to BHUVAN KUMAAR SINGH vide affidavit dated 03.12.2024 before Notary A.R. Muneer, Bangalore. Henceforth he shall be known as BHUVAN KUMAAR SINGH only.

CHANGE OF NAME
I, SEEMA ASHOK W/o. Raju Ashok Dustur,Aged about 60 years, resident of No.212, 1st E Cross, Near Jyothi School, HRBR Layout 3rd Block, Bangalore North, St. Thomas Town, Bangalore - 560084, Karnataka, India.have Changed My Name from SEEMA ASHOK to SEEMA vide Affidavit Date: 10-12-2024 SWORN BEFORE Notary: D.S CHANDRAKANTH Henceforth, I shall be known as SEEMA,for all future purposes.
Place: Bangalore

I, HARSHITHA_S D/o.Venugopal R/a#237, 3rd`Byrappa Block, Shanimahatma Temple Thyagarajanagara Bengaluru 560028 have`changed my Name_to HARSHITHA CHALICHEEMALA vide`affidavit dated:11.12.2024 before_Notary H.G.Padmanabha Rao Bangalore

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
*Conditions apply
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
9901641752
9845114560
9900428036
9731810277

ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಫಿನಾಲೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಆವೃತ್ತಿಯ ವಿಶ್ವದ ಅತಿದೊಡ್ಡ ಓಪನ್ ಇನೊವೇಷನ್ ಮಾದರಿಯ ಎರಡು ದಿನಗಳ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್–2024' ಫಿನಾಲೆಗೆ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನಲ್ಲಿ (ಆರ್‌ಯುಎಎಸ್) ಬುಧವಾರ ಚಾಲನೆ ನೀಡಲಾಯಿತು.

ಆರ್‌ಯುಎಎಸ್‌ನ ಕುಲಪತಿ ಎಂ.ಆರ್. ಜಯರಾಮ್ ಮಾತನಾಡಿ, 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್'ನಲ್ಲಿ ವಿದ್ಯಾರ್ಥಿಗಳ ತಾಂತ್ರಿಕ ಪ್ರಾವೀಣ್ಯ ಪ್ರದರ್ಶಿಸುವುದಲ್ಲದೇ, ಟೀಮ್ ವರ್ಕ್, ಪರಸ್ಪರ ಸಹಯೋಗ, ದೈನಂದಿನ ಜೀವನದ ಮೇಲೆ ಪರಿಣಾಮ ಬೀರುವ ಸವಾಲುಗಳಿಗೆ ಪ್ರಾಯೋಗಿಕವಾಗಿ ಪರಿಹಾರಗಳ ಅಭಿವೃದ್ಧಿಪಡಿಸುವುದಕ್ಕೆ ಉತ್ತೇಜನ ನೀಡುತ್ತದೆ. ಯುವ ಆವಿಷ್ಕಾರಿಗಳಲ್ಲಿ ಸಮಸ್ಯೆ ಪರಿಹರಿಸುವ ಮತ್ತು ವಿಮರ್ಶಾತ್ಮಕ ಚಿಂತನೆಯ ಮನೋಭಾವವನ್ನು ಬೆಳೆಸುತ್ತದೆ' ಎಂದು ಹೇಳಿದ್ದಾರೆ.

ಎಐಸಿಟಿಇ ಸಲಹೆಗಾರ ಎನ್.ಎಚ್. ಸಿದ್ಧಲಿಂಗಸ್ವಾಮಿ (ಎಡದಿಂದ ನಾಲ್ಕನೆಯವರು) ಅವರನ್ನು ಸನ್ಮಾನಿಸಲಾಯಿತು. ಆರ್‌ಯುಎಎಸ್ ಸಹ ಡೀನ್ ನಯನಾ ಪಾಟೀಲ್, ಸಂಯೋಜಕಿ ಮೋನಿಕಾ, ಗೋಕುಲ ಎಜುಕೇಷನ್ ಫೌಂಡೇಷನ್ ಗೌರವ ಅಧ್ಯಕ್ಷ, ಆರ್‌ಯುಎಎಸ್ ಕುಲಪತಿ ಎಂ.ಆರ್. ಜಯರಾಮ್, ಫೌಂಡೇಷನ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ.ಆರ್. ಶ್ರೀನಿವಾಸಮೂರ್ತಿ, ಕುಲದೀಪ್ ಕುಮಾರ್ ರೈನಾ, 'ಜೆ'– ಯು.ಆರ್. ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ಜೀವನ್ ಕುಮಾರ್ ಪಂಡಿತ್, ಆರ್‌ಯುಎಎಸ್–ಐಐಸಿ ಸಂಚಾಲಕ ಕಿರಣ್ ಕುಮಾರ್ ಬಿ.ಎಂ ಭಾಗವಹಿಸಿದ್ದರು

ದೇಶದಲ್ಲಿರುವ ಬುದ್ಧಿವಂತ ವಿದ್ಯಾರ್ಥಿಗಳನ್ನು ಈ ಕಾರ್ಯಕ್ರಮದ ಮೂಲಕ ಒಂದೇ ಸೂರಿನಡಿ ಸೇರಿಸಲಾಗುತ್ತದೆ. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು, ಸಮಸ್ಯೆ ಪರಿಹರಿಸುವ ಕೌಶಲ ಹಾಗೂ ಪ್ರತಿಭೆಯನ್ನು ಉತ್ತೇಜಿಸುವ ಸಂಸ್ಥೆಯ ನಿರಂತರವಾದ ಬದ್ಧತೆಗೆ ಇದು ಪ್ರಮುಖ ಮೈಲುಗಲ್ಲು ಆಗಲಿದೆ. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ ಸಾಫ್ಟ್‌ವೇರ್ ಆವೃತ್ತಿಯ ನೋಡಲ್ ಕೇಂದ್ರವಾಗಿ ಕೆಲಸ ಮಾಡುತ್ತಿದೆ ಎಂದು ಆರ್‌ಯುಎಎಸ್ ಉಪಕುಲಪತಿ ಕುಲದೀಪ್ ರೈನಾ ತಿಳಿಸಿದ್ದಾರೆ.

'14 ರಾಜ್ಯಗಳನ್ನು ಪ್ರತಿನಿಧಿಸುವ 102 ಪ್ರತಿಭಾವಂತ ವಿದ್ಯಾರ್ಥಿಗಳು ಈ ಹ್ಯಾಕಥಾನ್‌ನಲ್ಲಿ ಭಾಗವಹಿಸಿದ್ದಾರೆ. ಇವರು ದೇಶದಾದ್ಯಂತ 17ಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವವರು, 16 ಉದ್ಯಮ ಹಾಗೂ ಶಿಕ್ಷಣ ತಜ್ಞರು ಮಾರ್ಗದರ್ಶನ ನೀಡಲಿದ್ದಾರೆ. ಹ್ಯಾಕಥಾನ್‌ನಲ್ಲಿ ಮಂಡಿಸಿದ ಪರಿಹಾರಗಳ ಮೌಲ್ಯಮಾಪನ ಮಾಡಲು 9 ವಿಶೇಷ ತೀರ್ಪುಗಾರರು ಇದ್ದಾರೆ. ನೀರಿಗೆ ಸಂಬಂಧಿಸಿದ ಮೂರು ವಿಷಯಾಧಾರಿತ ಸಮಸ್ಯೆಗಳನ್ನು ಕೇಂದ್ರ ಜಲಶಕ್ತಿ ಸಚಿವಾಲಯ ನೀಡಿದೆ. ಈ ಹ್ಯಾಕಥಾನ್ ಆಯೋಜನೆ ಅವಕಾಶ ಸಿಕ್ಕಿರುವುದು ನಮ್ಮ ಸಂಸ್ಥೆಗೆ ಒದಗಿರುವ ದೊಡ್ಡ ಗೌರವ' ಎಂದು ಹೇಳಿದ್ದಾರೆ.

ಬೆಂಗಳೂರು ಸಾಹಿತ್ಯ ಉತ್ಸವ 14-15ಕ್ಕೆ

ಬೆಂಗಳೂರು: ಬೆಂಗಳೂರು ಸಾಹಿತ್ಯ ಉತ್ಸವದ 13ನೇ ಆವೃತ್ತಿಯನ್ನು ಇದೇ 14 ಮತ್ತು 15ರಂದು ಕುಮಾರಕೃಪಾ ರಸ್ತೆಯಲ್ಲಿರುವ ಲಲಿತ್ ಅಶೋಕ ಹೋಟೆಲ್‌ನಲ್ಲಿ ಏರ್ಪಡಿಸಲಾಗಿದೆ.

ಉತ್ಸವದಲ್ಲಿ ವಿಚಾರ ಸಂಕಿರಣ ಮತ್ತು ಸಂವಾದಗಳು ಬೆಳಿಗ್ಗೆ 9ರಿಂದ ಸಂಜೆ 7.30ರವರೆಗೆ ನಡೆಯಲಿವೆ. 350 ಲೇಖಕರು ಹಾಗೂ ಭಾಷಣಕಾರರು ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ. ಏಕಕಾಲದಲ್ಲಿ ಐದು ವೇದಿಕೆಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಪ್ರಸ್ತುತ ವಿದ್ಯಮಾನಗಳು, ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಸಂಗೀತ, ಸಿನಿಮಾ, ಆಹಾರ, ಆರ್ಥಿಕತೆ, ನವೋದ್ಯಮ ಕುರಿತು ತಜ್ಞರು ಚರ್ಚಿಸಲಿದ್ದಾರೆ.

ವಿವಿಧ ಭಾಷೆಯ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಮಕ್ಕಳಿಗೆ ಪ್ರತ್ಯೇಕ ವೇದಿಕೆ ಇರಲಿದೆ. 'ನೊಬೆಲ್ ಪ್ರಶಸ್ತಿ' ಪುರಸ್ಕೃತರಾದ ಅಭಿಜಿತ್ ಬ್ಯಾನರ್ಜಿ, ವೆಂಕಿ ರಾಮಕೃಷ್ಣನ್, 'ಬುಕರ್ ಪ್ರಶಸ್ತಿ' ಪುರಸ್ಕೃತರಾದ ಕಿರಣ್ ದೇಸಾಯಿ, ಲೇಖಕ ಉಪಮನ್ಯು ಚಟರ್ಜಿ, ಗಾಯಕಿ ಹಾಗೂ ನಟಿ ಇಳಾ ಅರುಣ್, ಸಂಗೀತಗಾರ ಎಲ್. ಸುಬ್ರಮಣ್ಯಂ, ಪತ್ರಕರ್ತರಾದ ಅನುಪ್ರೀತಾ ದಾಸ್, ಬಚ್ಚಿ ಕರ್ಕಾರಿಯಾ, ರಾಜ್‌ದೀಪ್ ಸರ್ದೇಸಾಯಿ, ಲೇಖಕರಾದ ಚೇತನ್ ಭಗತ್, ವಿಕಾಸ್ ಸ್ವರೂಪ್, ರಾಮ್ ಮಾಧವ್, ರಾಮಚಂದ್ರ ಗುಹಾ, ಸುಧಾ ಮೂರ್ತಿ, ಅರುಣಾ ರಾಯ್ ಸೇರಿ ಹಲವರು ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

ಸುಮಿತ್ರಾ ನಿತಿನ್ ಅವರಿಂದ ಕರ್ನಾಟಕ ಸಂಗೀತ, ಅನಘಾ ಭಟ್ ಅವರಿಂದ ಹಿಂದೂಸ್ತಾನಿ ಸಂಗೀತ ಹಾಗೂ ಹರ್‌ಪ್ರೀತ್ ಅವರಿಂದ ಸೂಫಿ ಕಾವ್ಯಾತ್ಮಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

'ಈ ಉತ್ಸವದಲ್ಲಿ ಅರ್ಥಪೂರ್ಣ ಸಂವಾದ, ಆರೋಗ್ಯಕರ ಚರ್ಚೆಗಳು ನಡೆಯಲಿವೆ. ಉತ್ಸವದ ಪ್ರವೇಶ ಉಚಿತ ಇರುತ್ತದೆ. ಈ ಉತ್ಸವವು ಸಾಹಿತ್ಯಿಕ ಲೋಕದ ವೈವಿಧ್ಯವನ್ನು ಅನಾವರಣ ಮಾಡಲಿದೆ. ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಪ್ರಮುಖರು, ಓದುಗರು, ಪ್ರಕಾಶಕರು, ವಿದ್ಯಾರ್ಥಿಗಳು ಮತ್ತು ಯುವ ವೃತ್ತಿಪರರನ್ನು ಒಂದೆಡೆ ಸೇರಿಸಲು ಈ ಉತ್ಸವ ಸಹಕಾರಿಯಾಗಲಿದೆ' ಎಂದು ಉತ್ಸವದ ನಿರ್ದೇಶಕಿ ಶೈನಿ ಆಂಟೋನಿ ತಿಳಿಸಿದ್ದಾರೆ.

'ಸಾಹಿತ್ಯದ ಜತೆಗೆ ಸಂಗೀತ, ಸಿನಿಮಾ, ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ದೇಶ–ವಿದೇಶಗಳಿಂದ ಬರಲಿದ್ದಾರೆ. ಸಾಹಿತ್ಯಿಕ ಅನುಭವಗಳನ್ನು ಒಟ್ಟುಗೂಡಿಸುವುದು ಈ ಉತ್ಸವದ ಮುಖ್ಯ ಉದ್ದೇಶ' ಎಂದು ಹೇಳಿದ್ದಾರೆ.

ವಿವರಕ್ಕೆ: www.bangaloreliteraturefestival.org

ಬಾವಿಗೆ ಬಿದ್ದು ಇಬ್ಬರು ಬಾಲಕಿಯರ ಸಾವು

ಕೊಪ್ಪ (ಚಿಕ್ಕಮಗಳೂರು): ತಾಲ್ಲೂಕಿನ ಅಮ್ಮಡಿ ಬಳಿಯ ಕಾಫಿ ಎಸ್ಟೇಟ್‌ನಲ್ಲಿ ಕಾರ್ಮಿಕರ ಲೈನ್‌ಮನೆ ಬಳಿ ಆಟವಾಡುತ್ತಿದ್ದ ಇಬ್ಬರು ಹೆಣ್ಣುಮಕ್ಕಳು ಕಾಲುಜಾರಿ ಬಾವಿಗೆ ಬಿದ್ದು ಮೃತಪಟ್ಟಿದ್ದಾರೆ.

ಮಧ್ಯಪ್ರದೇಶದ ಸುನಿತಾ ಬಾಯಿ–ಅರ್ಜುನ್ ಸಿಂಗ್ ದಂಪತಿ ಪುತ್ರಿಯರಾದ ಸೀಮಾ(6), ರಾಧಿಕಾ(2) ಮೃತಪಟ್ಟ ಮಕ್ಕಳು.

ಅರ್ಜುನ್ ಸಿಂಗ್ ನಜಿರಾಬಾದ್‌ನಲ್ಲಿ ವಾಸವಿದ್ದು, ಮೂವರು ಮಕ್ಕಳೊಂದಿಗೆ ಸುನಿತಾ ಇಲ್ಲಿನ ಕ್ಲಾಸಿಕ್ ಎಸ್ಟೇಟ್‌ಗೆ ಕೂಲಿ ಅರಸಿ ಬಂದಿದ್ದರು. ಅವರು ಲೈನ್ ಮನೆಯಲ್ಲಿ ವಾಸವಿದ್ದರು.

ಮಿಡ್‌ನೈಟ್ ಮ್ಯಾರಥಾನ್ ಸಂಚಾರ ಮಾರ್ಗ ಬದಲಾವಣೆ

ಬೆಂಗಳೂರು: ಮಹದೇವಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕೆಟಿಪಿಒ ರಸ್ತೆ ಮತ್ತು ಇಪಿಐಪಿ ರಸ್ತೆಗಳಲ್ಲಿ ರೋಟರಿ ಕ್ಲಬ್ ಆಫ್ ಬೆಂಗಳೂರು ಹಾಗೂ ಐ.ಟಿ ಕಾರಿಡಾರ್ ವತಿಯಿಂದ 17ನೇ ವರ್ಷದ ಮಿಡ್‌ನೈಟ್ ಮ್ಯಾರಥಾನ್ ಆಯೋಜಿಸಲಾಗಿದ್ದು, ವಿವಿಧ ಮಾರ್ಗದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಡಿ.14ರ ಮಧ್ಯಾಹ್ನ 3ರಿಂದ ಡಿ.15ರ ಬೆಳಿಗ್ಗೆ 5ರವರೆಗೆ ಈ ನಿರ್ಬಂಧ ಜಾರಿಯಲ್ಲಿ ಇರಲಿದೆ.

ನಿರ್ಬಂಧಿತ ರಸ್ತೆಗಳು: ಕುಂದಲಹಳ್ಳಿ ಮುಖ್ಯ ರಸ್ತೆಯ ಕುಂದಲಹಳ್ಳಿ ಮೆಟ್ರೊ ನಿಲ್ದಾಣದ ಬಳಿಯಿರುವ ಜಿಂಜರ್ ಹೋಟೆಲ್ ಜಂಕ್ಷನ್‌ನಿಂದ ಐಟಿಪಿಎಲ್ ಬ್ಯಾಕ್ ಗೇಟ್‌ವರೆಗೆ ಎಡಭಾಗದ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಗ್ರಾಫೈಟ್ ಇಂಡಿಯಾ ಜಂಕ್ಷನ್‌ನಿಂದ ವೈದೇಹಿ, ಐಟಿಪಿಎಲ್ ಕಡೆಗೆ ಸಂಚರಿಸುವ ವಾಹನ ಸವಾರರು/ಚಾಲಕರು ಕುಂದಲಹಳ್ಳಿ ಮೆಟ್ರೊ ನಿಲ್ದಾಣದ ಬಳಿಯಿರುವ ಜಿಂಜರ್ ಹೋಟೆಲ್ ಬಳಿ ಬಲಕ್ಕೆ ತಿರುವು ಪಡೆದು ಐಟಿಪಿಎಲ್ ಬ್ಯಾಕ್ ಗೇಟ್‌ವರೆಗೆ ಬಲಕ್ಕೆ ತಿರುವು ಪಡೆದು, ಐಟಿಪಿಎಲ್ ಬ್ಯಾಕ್ ಗೇಟ್‌ವರೆಗೆ ಬಲಭಾಗದ ರಸ್ತೆಯಲ್ಲಿ ಸಂಚರಿಸಬಹುದು.

ಬಿಗ್ ಬಜಾರ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ಹೂಡಿ ಕಡೆಗೆ ತೆರಳಲು ಸಂಚರಿಸಬಹುದಾಗಿದೆ. ಹೋಪ್ ಫಾರಂ ಕಡೆಗೆ ತೆರಳಲು ಶಾಂತಿನಿಕೇತನ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ಹೋಪ್ ಫಾರಂ ಹಾಗೂ ಚನ್ನಸಂದ್ರದ ಕಡೆಗೆ ಸಂಚರಿಸಬಹುದು.

ಕುಂದಲಹಳ್ಳಿ ಕಡೆಯಿಂದ ವೈದೇಹಿ ಕಡೆಗೆ ಸಂಚರಿಸುವ ಬಿಎಂಟಿಸಿ ಬಸ್‌ಗಳು ಗ್ರಾಫೈಟ್ ಇಂಡಿಯಾ ಜಂಕ್ಷನ್‌ನಲ್ಲಿ ಸಂಚರಿಸಿ ನೆಟ್ ಆಫ್ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ಐಟಿಪಿಎಲ್ ಮತ್ತು ಹೋಪ್ ಫಾರಂ ಕಡೆಗೆ ಸಂಚರಿಸಬಹುದು ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರದ್ಧಾಂಜಲಿ ಸಭೆಯಲ್ಲಿ ಮಹೇಶ ಜೋಶಿ ನುಡಿ ನಮನ

'ಸಮ್ಮೇಳನದ ವೇದಿಕೆಗೆ ಕೃಷ್ಣ ಹೆಸರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಎಸ್.ಎಂ.ಕೃಷ್ಣ ಅವರ ಉಪಸ್ಥಿತಿ ಸಮ್ಮೇಳನದ ಮೆರಗು ಹೆಚ್ಚಿಸುತ್ತಿತ್ತು. ಆದರೆ, ಈಗ ಅವರ ಹೆಸರನ್ನು ವೇದಿಕೆಗೆ ಇಡುವಂತಹ ಸಂದರ್ಭ ಬಂದಿರುವುದು ನಿಜಕ್ಕೂ ವಿಷಾದಕರ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಕಸಾಪ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಎಸ್.ಎಂ.ಕೃಷ್ಣ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, '87ನೇ ಸಾಹಿತ್ಯ ಸಮ್ಮೇಳನ ನಡೆಯಲಿರುವ ನೆಲದಿಂದ ಬಂದಿದ್ದ ಎಸ್.ಎಂ. ಕೃಷ್ಣ ಅವರನ್ನು ಸಮ್ಮೇಳನಕ್ಕೆ ಕರೆತರಬೇಕೆಂದು ಸಾಕಷ್ಟು ಪ್ರಯತ್ನಿಸಿದ್ದೆ. ಇದಕ್ಕೆ ಸಕಾರಾತ್ಮಕ ಸ್ಪಂದನೆಯೂ ದೊರಕಿತ್ತು. ಸಮ್ಮೇಳನ ಘೋಷಣೆಯಾದ ದಿನದಿಂದಲೂ ಉತ್ಸಾಹ ತೋರಿದ್ದ ಅವರು, ಹಲವು ಉಪಯುಕ್ತ ಸಲಹೆಗಳನ್ನು ನೀಡಿದ್ದರು. ಎಲ್ಲ ರೀತಿಯ ಸಹಕಾರ ನೀಡುವ ಭರವಸೆಯನ್ನೂ ನೀಡಿದ್ದರು. ಈಗ ಅವರ ನಿಧನ ದೊಡ್ಡ ಶೂನ್ಯವನ್ನು ಸೃಷ್ಟಿಸಿದೆ' ಎಂದು ವಿಷಾದ ವ್ಯಕ್ತಪಡಿಸಿದರು.

'ಸುಸಂಸ್ಕೃತ ರಾಜಕಾರಣಿಯಾಗಿದ್ದ ಅವರು, ಕಲೆ ಮತ್ತು ಸಾಹಿತ್ಯದ ಬಗ್ಗೆ ಅಪಾರ ಪ್ರೇಮ ಇಟ್ಟುಕೊಂಡಿದ್ದರು. ಹಲವು ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನ ನಡೆಸಿದ್ದ ಅವರು, ಕನ್ನಡ ಸಾಹಿತ್ಯ ಪರಿಷತ್ತಿನ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಾಲ್ಕು ಸಾಹಿತ್ಯ ಸಮ್ಮೇಳನಗಳು ಯಶಸ್ವಿಯಾಗಿ ನಡೆದಿದ್ದವು' ಎಂದು ಸ್ಮರಿಸಿಕೊಂಡರು.

ಎಸ್.ಎಂ.ಕೃಷ್ಣ ಅವರ ಭಾವಚಿತ್ರಕ್ಕೆ ಮಹೇಶ ಜೋಶಿ, ತಲಕಾಡು ಚಿಕ್ಕರಂಗೇಗೌಡ ಹಾಗೂ ಕಸಾಪ ಪದಾಧಿಕಾರಿಗಳು ಪುಷ್ಪ ನಮನ ಸಲ್ಲಿಸಿದರು

ಸಂಶೋಧಕ ತಲಕಾಡು ಚಿಕ್ಕರಂಗೇಗೌಡ, 'ಎಸ್.ಎಂ.ಕೃಷ್ಣ ಅವರು ಉತ್ತಮ ತಬಲಾ ವಾದಕರೂ, ಹವ್ಯಾಸಿ ರಂಗಭೂಮಿ ನಟರೂ ಆಗಿದ್ದರು' ಎಂದು ಹೇಳಿ, ಜೀವನಶೈಲಿ, ಉಡುಗೆ ತೊಡುಗೆಗಳಲ್ಲಿ ಅವರಿಗಿದ್ದ ಅಭಿರುಚಿಯನ್ನು ವಿವರಿಸಿದರು.

ಕಸಾಪ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು ಉಪಸ್ಥಿತರಿದ್ದರು.

ಡಿಸೆಂಬರ್ 20ರೊಳಗೆ ಹೆಸರು ನೋಂದಾಯಿಸಿಕೊಳ್ಳಲು ಅವಕಾಶ: ಸುರಳ್ಕರ್ ವಿಕಾಸ್ ಕಿಶೋರ್

ರಸ್ತೆಬದಿ ವ್ಯಾಪಾರಿಗಳ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಎಂಟೂ ವಲಯಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆ ಡಿಸೆಂಬರ್ 20ಕ್ಕೆ ಮುಗಿಯಲಿದೆ ಎಂದು ಬಿಬಿಎಂಪಿ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಬೀದಿ ಬದಿ ವ್ಯಾಪಾರಿಗಳ ಯೋಜನೆ-2020ರಂತೆ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ ಕಾಯ್ದೆ-2014 ಮತ್ತು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ, ಬೀದಿ ಬದಿ ವ್ಯಾಪಾರದ ನಿಯಂತ್ರಣ ಮತ್ತು ಪರವಾನಗಿ) ಜೀವನೋಪಾಯ ಯೋಜನೆ-2020ರ ಅಡಿಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು ಮೊಬೈಲ್ ತಂತ್ರಾಂಶದ ಮೂಲಕ ನಡೆಸಲಾಗುತ್ತಿದೆ. ಇದುವರೆಗೆ 23 ಸಾವಿರ ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಅರ್ಹ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಅಲ್ಲದೆ ವಲಯಮಟ್ಟದಲ್ಲಿ 'ಪಟ್ಟಣ ಮಾರಾಟ ಸಮಿತಿ'ಗಳನ್ನು ರಚಿಸಿ, ಬೀದಿ ಬದಿ ವ್ಯಾಪಾರಿಗಳ ಯೋಜನೆಯನ್ನು

ಸಾಂದರ್ಭಿಕ ಚಿತ್ರ

ಅನುಷ್ಠಾನಗೊಳಿಸಲಾಗುತ್ತದೆ. ಗಣತಿದಾರರು ಸಮೀಕ್ಷೆ ಮಾಡುವ ಸಮಯದಲ್ಲಿ ಬೀದಿ ಬದಿ ವ್ಯಾಪಾರಿಗಳು ಸಹಕಾರ ನೀಡಬೇಕು. ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಪುಸ್ತಕ, ಕುಟುಂಬ ಪಡಿತರ ಚೀಟಿ, ಕುಟುಂಬ ಸದಸ್ಯರ ಮಾಹಿತಿ, ಸ್ವಯಂ ಘೋಷಣೆ ಪ್ರಮಾಣ ಪತ್ರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಬೀದಿ ಬದಿ ವ್ಯಾಪಾರಿಗಳ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳಿದ್ದು, ಅವುಗಳನ್ನು ತಲುಪಿಸಲು ಸಮೀಕ್ಷಾ ಕಾರ್ಯ ನಡೆಸಲಾಗುತ್ತಿದೆ. ಪ್ರಧಾನ ಮಂತ್ರಿ ಸ್ವನಿಧಿ ಮಾತ್ರವಲ್ಲದೆ, ಪಾಲಿಕೆಯ ಕಲ್ಯಾಣ ವಿಭಾಗದಿಂದ ಇ-ಮಾರಾಟ, ವಾಹನ ಖರೀದಿಗೆ ಸಹಾಯಧನ, ಒಂಟಿ ಮನೆ/ ಅಮೃತ ಮಹೋತ್ಸವ ಮನೆ ಯೋಜನೆಗೆ ಸಹಾಯಧನ, ಗಂಭೀರ ಸ್ವರೂಪ ಕಾಯಿಲೆಗಳಿಗೆ ವೈದ್ಯಕೀಯ ವೆಚ್ಚ ಮರು ಪಾವತಿ, ಕೌಶಲ ತರಬೇತಿ, ಮಕ್ಕಳ ಶಿಕ್ಷಣಕ್ಕೆ ಶುಲ್ಕ ಮರುಪಾವತಿ ಸೌಲಭ್ಯಗಳಿವೆ ಎಂದು ತಿಳಿಸಿದ್ದಾರೆ.

ಅಮಾನತು ರದ್ದತಿಗೆ ಜಾಮೀನಷ್ಟೇ ಆಧಾರವಲ್ಲ: ಕೋರ್ಟ್

ಎರಡನೇ ಮುಖಪುಟದಿಂದ...

'ಕರ್ನಾಟಕ ನಾಗರಿಕ ಸೇವಾ ನಿಯಮಗಳು–1957ರ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 10 (2) (ಎ) ನಿಯಮಗಳ ಪ್ರಕಾರ 48 ಗಂಟೆಗಳಿಗೂ ಹೆಚ್ಚು ಕಾಲ ಬಂಧನದಲ್ಲಿದ್ದರೆ ಆತ ಸೇವೆಯಿಂದ ತಂತಾನೆ ಅಮಾನತುಗೊಳ್ಳುತ್ತಾನೆ. ಹೀಗಾಗಿ, ಸಕ್ಷಮ ಪ್ರಾಧಿಕಾರ ಎಲ್ಲಿಯವರೆಗೆ ಅಮಾನತು ರದ್ದುಗೊಳಿಸುವ ಬಗ್ಗೆ ನಿರ್ಣಯ ಮಾಡುವುದಿಲ್ಲವೊ ಅಲ್ಲಿಯವರೆಗೆ ಆತನ ಅಮಾನತು ಆದೇಶ ಮುಂದುವರಿಯುತ್ತದೆ. ಹಾಗಾಗಿ, ನಾನು ಜಾಮೀನು ಪಡೆದು ಹೊರಗೆ ಬಂದಿದ್ದೇನೆ ಎಂಬ ಏಕೈಕ ಕಾರಣದಿಂದ ಅಮಾನತು ಕೊನೆಗೊಂಡಂತಾಗುತ್ತದೆ ಎಂದು ಭಾವಿಸತಕ್ಕದ್ದಲ್ಲ. ಇದು ಎಲ್ಲಾ ಸಾರ್ವಜನಿಕ ಸೇವಕರಿಗೂ ಅನ್ವಯವಾಗುತ್ತದೆ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪಾಯಲ್ ಕಪಾಡಿಯಾ ರವರ ಚಲನಚಿತ್ರ, ಎರಡು ಗೋಲ್ಡನ್ ಗ್ಲೋಬ್ ಪ್ರಶಸ್ತಿಗೆ ನಾಮನಿರ್ದೇಶನವಾಗಿದೆ!

ಫ್ಲ್ಯಾಟ್ ಖರೀದಿದಾರರಿಗೆ ₹3,300 ಕೋಟಿ ವಂಚನೆ

ಎರಡನೇ ಮುಖಪುಟದಿಂದ...

'ಓರ್ಝೋನ್ ಅರ್ಬನಾ ಡೆವಲಪರ್ಸ್ ಸಂಸ್ಥೆಯವರು 2012ರಲ್ಲಿ ದೇವನಹಳ್ಳಿ ತಾಲ್ಲೂಕಿನ ಪೂಜನಹಳ್ಳಿ ಹಾಗೂ ಕನ್ನಮಂಗಲದಲ್ಲಿ ಓರ್ಝೋನ್ ಹೆಸರಿನಲ್ಲಿ ಯೋಜನೆ ಕೈಗೆತ್ತಿಕೊಂಡಿದ್ದರು. 2017ಕ್ಕೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿ ಫ್ಲ್ಯಾಟ್‌ಗಳನ್ನು ಹಸ್ತಾಂತರ ಮಾಡಬೇಕಿತ್ತು. ಆದರೆ, ಅಪಾರ್ಟ್‌ಮೆಂಟ್ ಕಾಮಗಾರಿ ಪೂರ್ಣಗೊಳಿಸದೇ ಮೋಸ ಮಾಡಲಾಗಿದೆ' ಎಂಬ ದೂರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ರಸ್ತೆ ಗುಂಡಿ ಮುಚ್ಚಲು 'ಇಕೊಫಿಕ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲದಲ್ಲಿ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಲು ಪ್ರಾಯೋಗಿಕವಾಗಿ ಇಕೊಫಿಕ್ಸ್ ಮಿಶ್ರಣ ಬಳಕೆ ಮಾಡಲಾಗಿದೆ ಎಂದು ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಬಿ.ಎಸ್ ಪ್ರಹ್ಲಾದ್ ತಿಳಿಸಿದರು.

ರಸ್ತೆ ಗುಂಡಿಗಳ ಸಮಸ್ಯೆಯು ಸಂಚಾರದಟ್ಟಣೆ ಜೊತೆಗೆ ಅಪಘಾತಗಳಿಗೆ ಕೂಡ ಕಾರಣವಾಗುತ್ತದೆ. ಈ ಸವಾಲನ್ನು ಎದುರಿಸಲು ರಸ್ತೆ ಸಂಶೋಧನಾ ಸಂಸ್ಥೆ ಸಿಎಸ್‌ಆರ್‌ಐ, ರಮುಕ ಗ್ಲೋಬಲ್ ಸರ್ವೀಸ್ ಸಹಯೋಗದೊಂದಿಗೆ ಬಿಬಿಎಂಪಿಯು ಇಕೊಫಿಕ್ಸ್ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಬಳಸಿಕೊಂಡು ಅವೆನ್ಯೂ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿದೆ ಎಂದು ಹೇಳಿದರು.

ಮಳೆಗಾಲದಲ್ಲಿ ಹಾಟ್ ಮಿಕ್ಸ್ ಘಟಕಗಳು ಕಾರ್ಯನಿರ್ವಹಿಸಲು ಸಾಧ್ಯವಾಗದ ಸಂದರ್ಭದಲ್ಲಿ,

ಅವೆನ್ಯೂ ರಸ್ತೆಯಲ್ಲಿನ ಗುಂಡಿಗಳನ್ನು ಬಿಬಿಎಂಪಿ ಸಿಬ್ಬಂದಿ ಇಕೊಫಿಕ್ಸ್ ತಂತ್ರಜ್ಞಾನ ಬಳಸಿಕೊಂಡು ಮುಚ್ಚಿದರು

ಪರಿಸರ ಸ್ನೇಹಿ ರೀತಿಯಲ್ಲಿ ಬಾಳಿಕೆ ಬರುವಂತೆ ರಸ್ತೆ ದುರಸ್ತಿ ಮಾಡಲು ಇಕೊಫಿಕ್ಸ್ ತಂತ್ರಜ್ಞಾನವು ವರದಾನವಾಗಲಿದೆ ಎಂದರು.

ಇಕೊಫಿಕ್ಸ್ ಅನ್ನು ಉಕ್ಕಿನ ಕೈಗಾರಿಕೆಗಳ ಕೈಗಾರಿಕಾ ತ್ಯಾಜ್ಯ ಅಂದರೆ, ಕಬ್ಬಿಣ ಮತ್ತು ಉಕ್ಕಿನ ಸ್ಲ್ಯಾಗ್ ಬಳಸಿ ಅಭಿವೃದ್ಧಿಪಡಿಸಲಾಗಿದೆ. ಯಾವುದೇ ನಿರ್ಜಲೀಕರಣದ ಅಗತ್ಯವಿಲ್ಲದೇ ನೀರು ತುಂಬಿದ ಗುಂಡಿಯನ್ನು ಸರಿಪಡಿಸಬಹುದಾಗಿದೆ. ದುರಸ್ತಿಯಾದ ಕೂಡಲೇ ಸಂಚಾರಕ್ಕೆ ಅವಕಾಶ ನೀಡಬಹುದಾಗಿದೆ. ಸಂಸ್ಕರಿತ ಕಬ್ಬಿಣ ಮತ್ತು ಉಕ್ಕಿನ ಸ್ಲ್ಯಾಗ್ ಮತ್ತು ವಿಶೇಷವಾಗಿ ರೂಪಿಸಿದ ಬೈಂಡರ್ ಅನ್ನು ಬಳಸಿಕೊಂಡು ಇಕೊಫಿಕ್ಸ್ ಮಿಶ್ರಣವನ್ನು ತಯಾರಿಸಲಾಗಿದೆ. ಸಾಮಾನ್ಯ ಮೇಲ್ಮೈ ರಸ್ತೆಗಿಂತ ಹೆಚ್ಚು ಬಾಳಿಕೆ ಬರುತ್ತದೆ ಎಂದು ವಿವರಿಸಿದರು.

ಗುಜರಾತ್, ಜಾರ್ಖಂಡ್, ಮಹಾರಾಷ್ಟ್ರ ಮತ್ತು ಅರುಣಾಚಲ ಪ್ರದೇಶದಲ್ಲಿ ಈ ತಂತ್ರಜ್ಞಾನ ಬಳಕೆಆಗುತ್ತಿದೆ. ಇಕೊಫಿಕ್ಸ್ ತಂತ್ರಜ್ಞಾನವನ್ನು ನಗರದಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಸಿಎಸ್‌ಐಆರ್‌ನ ವಿಜ್ಞಾನಿ ಸತೀಶ್ ಪಾಂಡೆ ಅವರು ಸಮ್ಮತಿ ನೀಡಿದ್ದಾರೆ ಎಂದರು.

ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ, ಅಮೆರಿಕದ ಟೆಕ್ಸಾಸ್ ವಿಶ್ವವಿದ್ಯಾಲಯ ಸಹಯೋಗದೊಂದಿಗೆ ಆಯೋಜಿಸಿದ್ದ 'ಐಸಿಎಂಎಎಂಎಸ್' ವಿಚಾರ ಸಂಕಿರಣದಲ್ಲಿ ಸಂಚಿಕೆ ಬಿಡುಗಡೆ ಮಾಡಲಾಯಿತು

'ವಿಜ್ಞಾನ, ತಂತ್ರಜ್ಞಾನ ಸದ್ಬಳಕೆಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಗವಾಗಿ ಬೆಳೆಯುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನಗಳ ಸದ್ಬಳಕೆಯಾಗಬೇಕು ಎಂದು ವಿಜ್ಞಾನಿ ವಿ.ಕೆ. ಅತ್ರೆ ತಿಳಿಸಿದರು.

ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ, ಅಮೆರಿಕದ ಟೆಕ್ಸಾಸ್ ವಿಶ್ವವಿದ್ಯಾಲಯ ಸಹಯೋಗದೊಂದಿಗೆ ಆಯೋಜಿಸಿದ್ದ 'ಐಸಿಎಂಎಎಂಎಸ್' ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ವೈರ್‌ಲೆಸ್ ತಂತ್ರಜ್ಞಾನದ ಸಹಾಯದಿಂದ ಇಂದು ದೇಶ ವಿದೇಶದಿಂದ ಸಂಪರ್ಕ ಸಾಧಿಸಲು ಸಾಧ್ಯವಾಗಿದೆ. ಇದೇ ರೀತಿ ಸೂಪರ್ ಕಂಪ್ಯೂಟರ್ ಅಭಿವೃದ್ಧಿಗೊಂಡಿದೆ. ವಿಜ್ಞಾನ, ತಂತ್ರಜ್ಞಾನಗಳ ಬೆಳವಣಿಗೆಯಲ್ಲಿ ಅನುಕೂಲದ ಜೊತೆಗೆ ತೊಂದರೆಗಳೂ ಇವೆ. ನಾವು ಒಳ್ಳೆಯ ಕಾರ್ಯಕ್ಕೆ ಮಾತ್ರ ಇವುಗಳನ್ನು ಬಳಸಬೇಕು' ಎಂದು ಕಿವಿಮಾತು ಹೇಳಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗೆ ತಂತ್ರಜ್ಞಾನ ಕಾರಣವಾಗಿದೆ. ಸಾಮಾನ್ಯ ಶಸ್ತ್ರಚಿಕಿತ್ಸೆಯಿಂದ ರೊಬಾಟಿಕ್ ಸರ್ಜರಿವರೆಗೆ ಬೆಳೆದಿದೆ. ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ಪಡೆಯಲು ಸಾಧ್ಯವಾಗಿದೆ ಎಂದು ಹೇಳಿದರು.

ಗೋಕುಲ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಎಂ.ಆರ್. ಜಯರಾಂ ಮಾತನಾಡಿ, 'ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ ನೀಡುವ ಉದ್ದೇಶದಿಂದ ಸ್ಕಿಲ್ ಲ್ಯಾಬ್ ತೆರೆಯಲಾಗಿದೆ. ಇದರಲ್ಲಿ ವಿದ್ಯಾರ್ಥಿಗಳು ತರಬೇತಿ ಪಡೆಯಬಹುದು. ಅಲ್ಲದೆ, ನಮ್ಮ ವಿಶ್ವವಿದ್ಯಾಲಯದಲ್ಲಿ ಕೇಂದ್ರ ಸರ್ಕಾರ ಆಯೋಜಿತ ಹಲವು ಯೋಜನೆಗಳು ನಡೆಯುತ್ತಿವೆ' ಎಂದರು.

ಟೆಕ್ಸಾಸ್ ಎ. ಮತ್ತು ಎಂ. ವಿಶ್ವವಿದ್ಯಾಲಯದ ಜೆ.ಎನ್. ರೆಡ್ಡಿ, ಇಟಲಿಯ ಪಾಲಿಟೆಕ್ನಿಕ್ ಡಿ ಟೂರಿನೊ ಕಾಲೇಜಿನ ಪ್ರಾಧ್ಯಾಪಕ ಎರ್ರೊನೋ ಕ್ಯಾರಿರಾ, ಗೋಕುಲ ಎಜುಕೇಷನ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಮುಖ್ಯ ಕಾರ್ಯನಿರ್ವಾಹಕ ಎಂ.ಆರ್. ಶ್ರೀನಿವಾಸ ಮೂರ್ತಿ, ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ ಆರ್‌ಐಟಿ ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಚ್. ವಿ. ಪಾರ್ಶ್ವನಾಥ ಅವರು ಭಾಗವಹಿಸಿದ್ದರು.

ಕಮ್ಮನಹಳ್ಳಿ: ರೀಗಲ್ ಜ್ಯುವೆಲ್ಲರಿ ಮಳಿಗೆ ಉದ್ಘಾಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಮ್ಮನಹಳ್ಳಿಯಲ್ಲಿ ಡಿಸೆಂಬರ್ 13ರಂದು ಮಧ್ಯಾಹ್ನ 12ಗಂಟೆಗೆ ರೀಗಲ್ ಜ್ಯುವೆಲ್ಲರಿಯ ಹೊಸ ಮಳಿಗೆಯನ್ನು ನಟಿ ರಾಧಿಕಾ ಪಂಡಿತ್ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ಕೇರಳದ ರೀಗಲ್ ಜ್ಯುವೆಲ್ಲರಿಯು ಆಭರಣಗಳ ಸಗಟು ಮಾರಾಟ ಮತ್ತು ತಯಾರಿಕೆಯಲ್ಲಿ ಪ್ರಸಿದ್ಧಿ ಪಡೆದಿದೆ. ಈ ಹೊಸ ಮಳಿಗೆಯ ಬಳಿಕ ಮಲ್ಲೇಶ್ವರ ಸೇರಿ ಬೆಂಗಳೂರಿನ ವಿವಿಧೆಡೆ ಮಳಿಗೆಗಳನ್ನು ತೆರೆಯುವ ಗುರಿ ಹೊಂದಲಾಗಿದೆ ಎಂದು ರೀಗಲ್ ಜ್ಯುವೆಲ್ಲರಿ ತಿಳಿಸಿದೆ.

1978ರಲ್ಲಿ ಶಿವದಾಸ್ ತಾಮರಸ್ಸೇರಿ ಅವರು ಈ ಜ್ಯುವೆಲ್ಲರಿಯನ್ನು ಸ್ಥಾಪಿಸಿದರು. ಕೇರಳದ ಅತಿದೊಡ್ಡ ಆಭರಣ ಮಾರಾಟಗಾರರಲ್ಲಿ ಇದು ಕೂಡ ಒಂದಾಗಿದೆ.

ಈ ಜ್ಯುವೆಲ್ಲರಿಯಲ್ಲಿ ಸಾಕಷ್ಟು ಆಭರಣಗಳ ಸಂಗ್ರಹವಿದೆ. ನವೀನ ವಿನ್ಯಾಸದ ಆಭರಣಗಳು ಲಭ್ಯವಿವೆ. ಹಾಲ್‌ಮಾರ್ಕ್ ಇರುವ ಚಿನ್ನ ಮತ್ತು ವಜ್ರದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ. ಗ್ರಾಹಕರಿಗೆ ಕಮ್ಮನಹಳ್ಳಿ ಮಳಿಗೆಯಲ್ಲಿ ಪ್ರೀಮಿಯಂ ಶಾಪಿಂಗ್ ಅನುಭವ ಕಲ್ಪಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

'ಬಾಂಗ್ಲಾದೇಶದಲ್ಲಿನ ಹಿಂದೂಗಳು: ವರ್ತಮಾನದ ಸ್ಥಿತಿಗತಿ, ಸವಾಲುಗಳು ಮತ್ತು ಮುಂದಿನ ಹಾದಿ' ಕುರಿತು ಶಾಮಪ್ರಸಾದ್ ಮುಖರ್ಜಿ ಸಂಶೋಧನಾ ಫೌಂಡೇಷನ್ ಅಧ್ಯಕ್ಷ ಅನಿರ್ಬನ್ ಗಂಗೂಲಿ ಮಾತನಾಡಿದರು. ಮಂಥನ ಕರ್ನಾಟಕದ ಸದಸ್ಯ ದೇವದಾಸ ಬಾಳಿಗ ಉಪಸ್ಥಿತರಿದ್ದರು

'ಬಾಂಗ್ಲಾ: ಅಲ್ಪಸಂಖ್ಯಾತರ ಸ್ಥಿತಿ ಶೋಚನೀಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಂಗ್ಲಾದೇಶದಲ್ಲಿ ಹಿಂದೂಗಳು, ಕ್ರಿಶ್ಚಿಯನ್ನರು, ಬೌದ್ಧರು, ಬುಡಕಟ್ಟು ಜನರು ಸೇರಿದಂತೆ ಎಲ್ಲ ಅಲ್ಪಸಂಖ್ಯಾತರ ಸ್ಥಿತಿ ಶೋಚನೀಯವಾಗಿದೆ' ಎಂದು ಶಾಮಪ್ರಸಾದ್ ಮುಖರ್ಜಿ ಸಂಶೋಧನಾ ಫೌಂಡೇಷನ್ ಅಧ್ಯಕ್ಷ ಅನಿರ್ಬನ್ ಗಂಗೂಲಿ ಅವರು ತಿಳಿಸಿದರು.

ಮಂಥನ ಬೆಂಗಳೂರು ವತಿಯಿಂದ 'ಬಾಂಗ್ಲಾದೇಶದಲ್ಲಿನ ಹಿಂದೂಗಳು: ವರ್ತಮಾನದ ಸ್ಥಿತಿಗತಿ, ಸವಾಲುಗಳು ಮತ್ತು ಮುಂದಿನ ಹಾದಿ' ವಿಷಯದ ಕುರಿತು ಆಯೋಜಿಸಲಾದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅಲ್ಪಸಂಖ್ಯಾತರ ಮೇಲೆ ಕೆಲವೇ ತಿಂಗಳಲ್ಲಿ 2000ಕ್ಕೂ ಅಧಿಕ ಆಕ್ರಮಣಗಳಾಗಿವೆ. ಚರ್ಚ್‌ಗಳ ಮೇಲೆ ದಾಳಿಗಳಾಗಿವೆ. ಬೌದ್ಧರ ಗ್ರಾಮಗಳಲ್ಲೂ ದಾಳಿ ನಡೆಸಿ ಹಿಂಸಿಸಲಾಗಿದೆ. ಬುಡಕಟ್ಟು ಸಮುದಾಯಗಳ ಮೇಲೆ ದಾಳಿ ನಡೆಸಿ ಅವರ ಜಮೀನುಗಳನ್ನು ಅತಿಕ್ರಮಿಸಲಾಗಿದೆ' ಎಂದು ಹೇಳಿದರು.

'ಅಲ್ಲಿನ ವಿಶ್ವವಿದ್ಯಾಲಯ ಕುಲಪತಿಗಳು, ಸಹಕುಲಪತಿಗಳು ಹಿಂದೂಗಳಾಗಿದ್ದಲ್ಲಿ ಅವರಿಗೆ ಬಂದೂಕು ತೋರಿಸಿ ರಾಜೀನಾಮೆ ಕೊಡಿಸಲಾಗಿದೆ. ಬೇರೆ ಬೇರೆ ಶೈಕ್ಷಣಿಕ ಸಂಸ್ಥೆಗಳಲ್ಲಿ 1500ಕ್ಕೂ ಅಧಿಕ ಶಿಕ್ಷಕರ ರಾಜೀನಾಮೆ ಪಡೆಯಲಾಗಿದೆ. ಪೊಲೀಸ್ ಇಲಾಖೆಯಲ್ಲಿರುವ ಹಿಂದೂಗಳನ್ನು ಅಮಾನತು ಮಾಡಲಾಗಿದೆ. ದುರ್ಗಾಪೂಜೆಗಳನ್ನು ನಿಯಂತ್ರಿಸಲಾಗಿದೆ' ಎಂದು ಅವರು ಹೇಳಿದರು.

ಕನಿಷ್ಠ ಕೂಲಿಗೆ ಸಮನಾದ ಸಂಭಾವನೆಗೆ ಆಗ್ರಹ ● ಶಾಲಾ ಶಿಕ್ಷಣ ಇಲಾಖೆ ಪ್ರಸ್ತಾವ ● ಆರ್ಥಿಕ ಇಲಾಖೆ ತಿರಸ್ಕಾರ

ಅತಿಥಿ ಶಿಕ್ಷಕರ ಗೌರವಧನ ಏರಿಕೆಗೆ ಅಸಮ್ಮತಿ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಶಿಕ್ಷಕರು, ಉಪನ್ಯಾಸಕರಿಗೆ ಗೌರವ ಧನ ಹೆಚ್ಚಳ ಮಾಡುವ ಶಿಕ್ಷಣ ಇಲಾಖೆ ಪ್ರಸ್ತಾವಕ್ಕೆ ಆರ್ಥಿಕ ಇಲಾಖೆ ಅಸಮ್ಮತಿ ಸೂಚಿಸಿದೆ.

ಪ್ರಸ್ತುತ ಪ್ರಾಥಮಿಕ ಶಾಲೆಗಳ ಅತಿಥಿ ಶಿಕ್ಷಕರಿಗೆ ₹10 ಸಾವಿರ, ಪ್ರೌಢಶಾಲೆಗೆ ₹10,500 ಹಾಗೂ ಪಿಯು ಕಾಲೇಜಿಗೆ ₹12 ಸಾವಿರ ನೀಡಲಾಗುತ್ತಿದೆ. ಈ ಗೌರವಧನ ಅತ್ಯಂತ ಕಡಿಮೆ ಇದೆ. ಅಲ್ಲದೇ, ಕಾಯಂ ಶಿಕ್ಷಕರು, ಉಪ ನ್ಯಾಸಕರ ಸುಮಾರು 50 ಸಾವಿರ ಹುದ್ದೆ ಗಳು ಖಾಲಿ ಇವೆ. ಹಾಗಾಗಿ, ಸರ್ಕಾರವೇ ನಿಗದಿಪಡಿಸಿದ ಕನಿಷ್ಠ ಕೂಲಿಗೆ ಸರಿಸಮಾನವಾಗಿ ಗೌರವ ಸಂಭಾವನೆ ನೀಡುವಂತೆ ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರ ಸಂಘಟನೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು. ವಿಧಾನಪರಿಷತ್‌ನಲ್ಲಿ ಈ ಸಮುದಾಯವನ್ನು ಪ್ರತಿನಿಧಿಸುವ ಸದಸ್ಯರು ಒತ್ತಾಯಿಸಿದ್ದರು.

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು, ಶೈಕ್ಷಣಿಕ ಹಿತ ದೃಷ್ಟಿಯಿಂದ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವ ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರಿಗೆ ₹15 ಸಾವಿರ, ಪ್ರೌಢಶಾಲಾ ಅತಿಥಿ ಶಿಕ್ಷಕರಿಗೆ ₹16 ಸಾವಿರ ನೀಡಲು ಶಾಲಾ ಶಿಕ್ಷಣ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು.

'ಅತಿಥಿ'ಗಳ ಗೌರವ ಸಂಭಾವನೆಯನ್ನು ಹಿಂದೆ ಸಲ್ಲಿಸಿದ್ದ ಪ್ರಸ್ತಾವದಂತೆ ಜೂನ್ 2022ರಲ್ಲಿ ಒಮ್ಮೆ ಹೆಚ್ಚಳ ಮಾಡಿರುವ ಕಾರಣ ಮತ್ತೆ ಹೆಚ್ಚಳ ಮಾಡಲು ಸಾಧ್ಯವಿಲ್ಲ' ಎಂದು ಪ್ರಸ್ತಾವ ತಿರಸ್ಕರಿಸಿರುವುದಕ್ಕೆ ಆರ್ಥಿಕ ಇಲಾಖೆ ಕಾರಣ ನೀಡಿದೆ.

ಒಳಮೀಸಲಾತಿವರೆಗೆ ನೇಮಕಾತಿ ಇಲ್ಲ: ಸರ್ಕಾರಿ ಶಾಲೆಗಳಲ್ಲಿ 63 ಸಾವಿರ ಹಾಗೂ ಪಿಯು ಕಾಲೇಜುಗಳಲ್ಲಿ 4,561 ಹುದ್ದೆಗಳು ಖಾಲಿ ಇದ್ದವು. ಕಳೆದ ವರ್ಷ 13 ಸಾವಿರ ಶಿಕ್ಷಕರನ್ನು ಶಾಲಾ ಶಿಕ್ಷಣ ಇಲಾಖೆ ನೇಮಕ ಮಾಡಿಕೊಂಡಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ಭಾಗದ 5,267 ಹುದ್ದೆಗಳ ನೇಮಕ ಪ್ರಕ್ರಿಯೆ ಆರಂಭಿಸಲಾಗಿದೆ. ಉಳಿದ 50ಸಾವಿರ ಶಿಕ್ಷಕರು ಹಾಗೂ ಉಪ ನ್ಯಾಸಕರ ನೇಮಕಾತಿಯನ್ನು ಒಳಮೀಸಲಾತಿ ನಿರ್ಧಾರವಾಗುವವರೆಗೆ ಭರ್ತಿ ಮಾಡದಂತೆ ಸರ್ಕಾರ ಸೂಚಿಸಿದೆ.

ಅಲ್ಲಿಯವರೆಗೂ ಗುಣಮಟ್ಟದ ಶಿಕ್ಷಣ ನೀಡುವ ಜವಾಬ್ದಾರಿ 'ಅತಿಥಿ'ಗಳ ಮೇಲಿದೆ. ಹಾಗಾಗಿ, ಗೌರವಧನ ಹೆಚ್ಚಳ ಮಾಡಿದರೆ ಸಂಪೂರ್ಣ ಸಮಯ ಮೀಸಲಿಟ್ಟು ಕಲಿಕೆಗೆ ಒತ್ತು ನೀಡಬಹುದು ಎನ್ನುವುದು ಶಿಕ್ಷಕರು ಮತ್ತು ಉಪನ್ಯಾಸಕರ ಸಂಘಟನೆಗಳ ಬೇಡಿಕೆ.

ಕಾರ್ಯಭಾರ ಕೊರತೆ; ಕೆಲಸದಿಂದ ಬಿಡುಗಡೆ

ಅನುದಾನಿತ ಪಿಯು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕೊರತೆಯ ಕಾರಣ ಕಾರ್ಯಭಾರದ ಹೊರೆ ಕಡಿಮೆಯಾದರೆ ಅಲ್ಲಿನ ಕಾಯಂ ಉಪನ್ಯಾಸಕರನ್ನು ಇತರೆ ಅನುದಾನಿತ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನಿಯೋಜನೆ ಮಾಡಲಾಗುತ್ತಿದೆ. ಒಂದು ವೇಳೆ ಎಲ್ಲೂ ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದರೆ ಅವರನ್ನು ಕೆಲಸದಿಂದ ಬಿಡುಗಡೆ ಮಾಡುವಂತೆ ಸರ್ಕಾರ ಆದೇಶ ಹೊರಡಿಸಿದೆ.

'ಕಾರ್ಯಭಾರದ ಕೊರತೆ ಇರುವ ಅನುದಾನಿತ ಕಾಲೇಜುಗಳ ಸುಮಾರು 400 ಉಪನ್ಯಾಸಕರಿಗೆ ನಾಲ್ಕು ತಿಂಗಳಿನಿಂದ ವೇತನ ತಡೆ ಹಿಡಿಯಲಾಗಿದೆ. ಅವರ ಬದುಕು ದುಸ್ತರವಾಗಿದೆ. ಶಾಲಾ ಶಿಕ್ಷಣ ಇಲಾಖೆ 2022ರಲ್ಲಿ ಹೊರಡಿಸಿದ ಆದೇಶದಂತೆ ಅವರನ್ನು ಸರ್ಕಾರಿ ಪಿಯು ಕಾಲೇಜುಗಳಿಗೆ ನಿಯೋಜನೆಯನ್ನೂ ಮಾಡುವಂತಿಲ್ಲ. ಅವರಿಗೆ ವೇತನ ನೀಡಬೇಕು. ಕೆಲಸದಿಂದ ಬಿಡುಗಡೆ ಮಾಡದಂತೆ ತಿದ್ದುಪಡಿ ಆದೇಶ ಹೊರಡಿಸಬೇಕು. ಸೇವಾ ಭದ್ರತೆ ಒದಗಿಸಬೇಕು' ಎಂದು ಒತ್ತಾಯಿಸುತ್ತಾರೆ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ.

44 ಪಿಯು ಕಾಲೇಜು ಬಂದ್

ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) 2022–23 ಹಾಗೂ 2023–24ನೇ ಸಾಲಿನಲ್ಲಿ 254 ಹೊಸ ಪದವಿಪೂರ್ವ ಕಾಲೇಜುಗಳಿಗೆ ಮಂಜೂರಾತಿ ನೀಡಿತ್ತು. 8,725 ಮಕ್ಕಳು ದಾಖಲಾಗಿದ್ದರು. ಎರಡೇ ವರ್ಷಗಳಲ್ಲಿ ಮಕ್ಕಳ ದಾಖಲಾತಿ ಕೊರತೆಯ ಕಾರಣ ನೀಡಿ 44 ಕಾಲೇಜುಗಳು ಬಾಗಿಲು ಮುಚ್ಚಿವೆ.

ಒಂದೂವರೆ ವರ್ಷಗಳ ಹಿಂದಷ್ಟೇ ಗೌರವಧನ ಪರಿಷ್ಕರಣೆ ಮಾಡಲಾಗಿತ್ತು. ಹೆಚ್ಚಳ ಮಾಡಲು ಆರ್ಥಿಕ ಇಲಾಖೆಗೆ ಮತ್ತೊಮ್ಮೆ ಪ್ರಸ್ತಾವ ಸಲ್ಲಿಸಲಾಗುವುದು
ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಕನಿಷ್ಠ ₹20 ಸಾವಿರ ಗೌರವಧನ ನಿಗದಿ ಮಾಡಬೇಕು. ಪ್ರತಿ ವರ್ಷ ಮಾರ್ಚ್ ಅಂತ್ಯದವರೆಗೂ ಸೇವೆ ಮುಂದುವರಿಸಬೇಕು
ರಾಜೇಶ್ ಭಟ್, ಕಾರ್ಯದರ್ಶಿ, ಸರ್ಕಾರಿ ಪಿಯು ಕಾಲೇಜು ಅತಿಥಿ ಉಪನ್ಯಾಸಕರ ಸಂಘಟನೆ

ಅಂಕಿ ಅಂಶ

35,000 ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರು

8,968 ಪ್ರೌಢಶಾಲಾ ಅತಿಥಿ ಶಿಕ್ಷಕರು

4,689 ಪಿಯು ಕಾಲೇಜು ಅತಿಥಿ ಉಪನ್ಯಾಸಕರು

ಸುದ್ದಿ 2 ನಿಮಿಷ

ದೇವನೂರ ಮಹಾದೇವಗೆ ವೈಕಂ ಪ್ರಶಸ್ತಿ; ಇಂದು ಪ್ರದಾನ

ಮೈಸೂರು: ತಮಿಳುನಾಡು ಸರ್ಕಾರದ 2024ನೇ ಸಾಲಿನ 'ವೈಕಂ' ಪ್ರಶಸ್ತಿಗೆ ಸಾಹಿತಿ ದೇವನೂರ ಮಹಾದೇವ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹5 ಲಕ್ಷ ನಗದು ಹಾಗೂ ಸ್ವರ್ಣಲೇಪಿತ ಪದಕವನ್ನು ಒಳಗೊಂಡಿದೆ.

ಗುರುವಾರ (ಡಿ.12) ಕೇರಳದ ವೈಕಂನಲ್ಲಿ ನಡೆಯಲಿರುವ, ವೈಕಂ ಹೋರಾಟದಲ್ಲಿ ಪೆರಿಯಾರ್ ಪಾಲ್ಗೊಂಡಿದ್ದರ ಶತಮಾನೋತ್ಸವ ಸಮಾರೋಪ ಸಮಾರಂಭ ಹಾಗೂ ಪೆರಿಯಾರ್ ಸ್ಮಾರಕ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪಾಲ್ಗೊಳ್ಳಲಿದ್ದಾರೆ.

ದೇಶದಾದ್ಯಂತ ತುಳಿತಕ್ಕೆ ಒಳಗಾದ ವರ್ಗಗಳ ಕಲ್ಯಾಣಕ್ಕೆ ಶ್ರಮಿಸುವ ವ್ಯಕ್ತಿಗಳು ಹಾಗೂ ಸಂಘ–ಸಂಸ್ಥೆಗಳಿಗೆ ತಮಿಳುನಾಡು ಸರ್ಕಾರವು ಈ ಪ್ರಶಸ್ತಿ ನೀಡುತ್ತಿದೆ.

ವಯನಾಡ್ ಸಂತ್ರಸ್ತರಿಗೆ ಮನೆ ಪಿಣರಾಯಿಗೆ ಸಿ.ಎಂ ಪತ್ರ

ಬೆಂಗಳೂರು: 'ಕಳೆದ ಜುಲೈನಲ್ಲಿ ವಯನಾಡ್‌ನಲ್ಲಿ ಸಂಭವಿಸಿದ ಭೂ ಕುಸಿತದಿಂದ ಸಂತ್ರಸ್ತರಾದ ಕುಟುಂಬಗಳಿಗೆ 100 ಮನೆ ನಿರ್ಮಿಸಿ ಕೊಡುವ ಭರವಸೆಯಂತೆ, ಮನೆ ನಿರ್ಮಿಸಲು ಅಗತ್ಯವಾದ ಭೂಮಿ ಖರೀದಿಯ ವೆಚ್ಚವನ್ನು ಭರಿಸಲು ಕೂಡಾ ಸಿದ್ಧ' ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

ಡಿ. 9ರಂದು ಈ ಪತ್ರ ಬರೆದಿರುವ ಸಿದ್ದರಾಮಯ್ಯ, ಭೂ ಕುಸಿತದಿಂದಾಗಿ ಬದುಕಿನ ನೆಲೆ ಕಳೆದುಕೊಂಡ ಜನರಿಗೆ ಹೊಸ ಬದುಕು ಕಟ್ಟಿಕೊಡುವ ದೃಷ್ಟಿಯಿಂದ ಕರ್ನಾಟಕ ಸರ್ಕಾರದ ಕಡೆಯಿಂದ 100 ಮನೆ ಕಟ್ಟಿಕೊಡುವ ಭರವಸೆಗೆ ಬದ್ಧವಾಗಿರುವುದಾಗಿ ಪತ್ರದಲ್ಲಿ ತಿಳಿಸಿದ್ದಾರೆ. ಈ ಪ್ರಯತ್ನಕ್ಕೆ ತಮ್ಮ ಸಹಕಾರ ಮತ್ತು ಸಹಯೋಗ ಅಗತ್ಯವಿದೆ ಎಂದೂ ಹೇಳಿದ್ದಾರೆ.

'ನಿಮ್ಮ ಸೇವೆ ಕರ್ನಾಟಕಕ್ಕೊ, ಗಾಂಧಿ ಕುಟುಂಬಕ್ಕೊ?': 'ನಿಮ್ಮ ಸೇವೆ ಕರ್ನಾಟಕದ ಜನರಿಗೊ, ಗಾಂಧಿ ಕುಟುಂಬಕ್ಕೊ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಕೇರಳ ಮುಖ್ಯಮಂತ್ರಿಗೆ ಪತ್ರ ಬರೆದಿರುವುದನ್ನು ಉಲ್ಲೇಖಿಸಿ 'ಎಕ್ಸ್' ಮೂಲಕ ಹರಿಹಾಯಿದ್ದಾರೆ.

ನಿಮ್ಮ ಮಾನವೀಯ ಕಳಕಳಿ ಪ್ರಿಯಾಂಕಗಾಂಧಿ ಪ್ರತಿನಿಧಿಸುತ್ತಿರುವ ವಯನಾಡಿಗೆ ಮಾತ್ರ ಸೀಮಿತವಾಗಿರುವುದು ಮಾನಸಿಕ ಗುಲಾಮಗಿರಿಯ ಸಂಕೇತ ಎಂದು ವಿಧಾನಪರಿಷತ್‌ನ ಸದಸ್ಯ ಸಿ.ಟಿ. ರವಿ ಟೀಕಿಸಿದ್ದಾರೆ.

ಪ್ರಜಾವಾಣಿ ರಸಪ್ರಶ್ನೆ

ಹುಬ್ಬಳ್ಳಿಯ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ ಬುಧವಾರ ನಡೆದ ಹುಬ್ಬಳ್ಳಿ ವಲಯಮಟ್ಟದ 'ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್' ವಿಜೇತರಾದ ಧಾರವಾಡದ ಸರ್ಕಾರಿ ಆದರ್ಶ ವಿದ್ಯಾಲಯದ ಸಮರ್ಥ್ ಪತ್ತಾರ ಮತ್ತು ಪ್ರಣವ್ ಕೋಲ್ಕಾರ ಅವರಿಗೆ ಐಸಿಎಸ್ ಮಹೇಶ ಪಿಯು ಕಾಲೇಜು ಪ್ರಾಂಶುಪಾಲ ಬಸನಗೌಡ ಪಾಟೀಲ ಹಾಗೂ ಪೈಲಟ್ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕ ಮಹೇಶ ಕುಮಾರ್ ಪ್ರಶಸ್ತಿ ಮತ್ತು ಪ್ರಮಾಣಪತ್ರ ವಿತರಿಸಿದರು. ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಹಾಜರಿದ್ದರು. ಈ ಶಾಲೆಯ ತಂಡ ಸತತ ಎರಡನೇ ಬಾರಿಗೆ ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಅಂತಿಮ ಸುತ್ತಿನ ಸ್ಪರ್ಧೆಗೆ ಆಯ್ಕೆ ಆಗಿದೆ

ಬಿಜೆಪಿ ಪದಾಧಿಕಾರಿಗಳು ಬದಲು?

ಪ್ರಜಾವಾಣಿ ವಾರ್ತೆ

ಬೆಳಗಾವಿ: ಹೊಸ ವರ್ಷಾರಂಭದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಬದಲಾವಣೆ ಆಗಲಿದ್ದು, ಆ ಬಳಿಕ ರಾಜ್ಯದಲ್ಲೂ ಪದಾಧಿಕಾರಿಗಳ ಬದಲಾವಣೆ ಆಗಲಿದೆ.

ವಿವಿಧ ರಾಜ್ಯ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳ ಬದಲಾವಣೆ ಬಹುತೇಕ ಜನವರಿಯಲ್ಲಿ ಆರಂಭವಾಗ ಬಹುದು. ಆಗ ಕರ್ನಾಟಕದಲ್ಲೂ ಆಗಲಿದೆ ಎಂದು ಮೂಲಗಳು ಹೇಳಿವೆ.

ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಬಂಡೆದ್ದಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ರಾಷ್ಟ್ರೀಯ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬಹುದು. ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಹುದ್ದೆಯ ಜತೆಗೆ ಯಾವುದಾದರೂ ರಾಜ್ಯದ ಉಸ್ತುವಾರಿ ನೀಡಬಹುದು ಎಂದು ಮೂಲಗಳು ತಿಳಿಸಿವೆ.

ಉತ್ಸಾಹದಿಂದ ಕೆಲಸ ಮಾಡದ ಹಾಗೂ ನಿಷ್ಕ್ರಿಯ ಪದಾಧಿಕಾರಿಗಳನ್ನು ಕೈಬಿಡುವ ಸಾಧ್ಯತೆ ಇದೆ. ಅನುಭವಿಗಳು ಮತ್ತು ಸಂಘಟನೆಗಾಗಿ ದುಡಿಯುವವರನ್ನು ನೇಮಿಸಲಾಗುವುದು ಎಂದು ಬಿಜೆಪಿ ನಾಯಕರೊಬ್ಬರು ಹೇಳಿದರು.

ವಿವಿಧ ರಾಜ್ಯಗಳಲ್ಲಿ ಚುನಾವಣೆ ಇದ್ದ ಕಾರಣ ಕರ್ನಾಟಕದ ಸಮಸ್ಯೆಗಳ ಬಗ್ಗೆ ವರಿಷ್ಠರು ಗಮನಹರಿಸಲು ಸಾಧ್ಯವಾಗಿರಲಿಲ್ಲ. ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ಅಧಿಕಾರ ಗ್ರಹಣವೂ ಆಗಿದೆ. ಇನ್ನು ಸಂಘಟನೆಯಲ್ಲಿ ಬದಲಾವಣೆಗಳ ಕಾರ್ಯಕ್ಕೆ ಕೈ ಹಾಕಲಿದ್ದಾರೆ. ಹಲವು ರಾಜ್ಯ ಘಟಕಗಳ ಅಧ್ಯಕ್ಷರ, ಪದಾಧಿಕಾರಿಗಳ ಬದಲಾವಣೆ ಬಾಕಿ ಉಳಿದಿದೆ. ಕರ್ನಾಟಕದಲ್ಲಿ ಪಕ್ಷದ ಒಳ ಜಗಳದ ಸಂಪೂರ್ಣ ಮಾಹಿತಿ ಅವರ ಗಮನದಲ್ಲಿದೆ. ಸೂಕ್ತ ಕ್ರಮ ತೆಗೆದುಕೊಳ್ಳುವ ಸಮಯ ಸನ್ನಿಹಿತವಾಗಿದೆ ಎಂದು ಅವರು ಹೇಳಿದರು.

'ಬಣ ಜಗಳಕ್ಕೆ ಅಂತ್ಯ ಹಾಡುವುದು ನಿಶ್ಚಿತ. ಪಕ್ಷ ಮತ್ತು ಸಿದ್ಧಾಂತ ನಿಷ್ಠರನ್ನು ದೂರ ಇಡುವ ಕೆಲಸ ಮಾಡುವುದಿಲ್ಲ. ಅವಿಶ್ವಾಸದ ಕೊರತೆ ನೀಗಿಸಲು ಪ್ರಮುಖ ನಾಯಕರನ್ನು ಕರೆಸಿ ಮಾತುಕತೆ ನಡೆಸಲಿದ್ದಾರೆ' ಎಂದು ತಿಳಿಸಿದರು.

ರಾಷ್ಟ್ರೀಯ ಅಧ್ಯಕ್ಷರಾಗಿ ಅನುರಾಗ್?: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಕೇಂದ್ರದ ಮಾಜಿ ಸಚಿವ, ಸಂಸದ ಅನುರಾಗ್ ಸಿಂಗ್ ಠಾಕೂರ್ ನೇಮಕವಾಗುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ.

'ಕೇಂದ್ರ ಸಚಿವರಾಗಿ ವಿವಿಧ ಖಾತೆಗಳಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದ್ದ ಅನುರಾಗ್ ಪಕ್ಷ ಸಂಘಟನೆಯಲ್ಲೂ ಪಳಗಿದ್ದಾರೆ. ಅವರನ್ನು ಅಧ್ಯಕ್ಷರಾಗಿ ನೇಮಿಸಲು ಈ ಬಾರಿ ಸಂಪುಟಕ್ಕೆ ಸೇರ್ಪಡೆಗೊಳಿಸಿಲ್ಲ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಭ್ರಷ್ಟಾಚಾರ ನಿಯಂತ್ರಣಕ್ಕೆ ಕ್ರಮ ● ಸೇವಾ ನಿಯಮಗಳ ತಿದ್ದುಪಡಿಗೆ ಪ್ರಸ್ತಾವ

ಅಬಕಾರಿ ಇಲಾಖೆ: ವರ್ಗಾವಣೆಗೆ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ಇಲಾಖೆಯ ಅಧಿಕಾರಿಗಳ ವರ್ಗಾವಣೆಯಲ್ಲಿ ಭ್ರಷ್ಟಾಚಾರ, ರಾಜಕೀಯ ಹಸ್ತಕ್ಷೇಪ ತಡೆಯುವ ಉದ್ದೇಶದಿಂದ ಅಬಕಾರಿ ಇನ್‌ಸ್ಪೆಕ್ಟರ್‌ಗಳೂ ಸೇರಿದಂತೆ ಇಲಾಖೆಯಲ್ಲಿನ 'ಸಿ' ಗುಂಪಿನ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ನಡೆಸಲು ರಾಜ್ಯ ಸರ್ಕಾರ ಮುಂದಾಗಿದೆ.

ಪ್ರಸಕ್ತ ವರ್ಷ ಅಬಕಾರಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಯ ವರ್ಗಾವಣೆಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಎದುರಾಗಿತ್ತು. ₹700 ಕೋಟಿ ಅಕ್ರಮ ನಡೆದಿದೆ ಎಂದು ವಿರೋಧ ಪಕ್ಷ ಬಿಜೆಪಿ ಆಪಾದಿಸಿತ್ತು. ರಾಜ್ಯದ ಅಬಕಾರಿ ಇಲಾಖೆಯೊಳಗಿನ ಭ್ರಷ್ಟಾಚಾರದ ಆರೋಪವನ್ನು ನೆರೆಯ ಮಹಾರಾಷ್ಟ್ರ ರಾಜ್ಯ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರೇ ಪ್ರಸ್ತಾಪಿಸಿದ್ದರು. ಅದರ ಬೆನ್ನಲ್ಲೇ, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ ಮತ್ತು ಅವರ ಸಚಿವಾಲಯದ ಅಧಿಕಾರಿಗಳ ವಿರುದ್ಧವೂ ದೂರುಗಳು ಹರಿದಾಡಿದ್ದವು.

'ಕೌನ್ಸೆಲಿಂಗ್ ಮೂಲಕ ಅಬಕಾರಿ ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆ ಆರಂಭಿಸಲು ಸಚಿವ ತಿಮ್ಮಾಪೂರ ಅವರೇ ಸ್ವಯಂ ಆಸಕ್ತಿಯಿಂದ ಮುಖ್ಯಮಂತ್ರಿಯವರ ಮುಂದೆ ಪ್ರಸ್ತಾವ ಮಂಡಿಸಿದ್ದರು. ಈ ಕುರಿತು ಕೆಲವು ಸಭೆಗಳನ್ನೂ ನಡೆಸಲಾಗಿದೆ. ಅಬಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ವರ್ಗಾವಣೆಗೆ ಸಂಬಂಧಿಸಿದಂತೆ ನಿಯಮಗಳಿಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ. ಈ ಕುರಿತ ಪ್ರಸ್ತಾವವನ್ನು ಸಂಪುಟದ ಮುಂದಿನ ಸಭೆಯಲ್ಲಿ ಮಂಡಿಸಲಾಗುವುದು' ಎಂದು ರಾಜ್ಯ ಸರ್ಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಶಿಕ್ಷಕರ ವರ್ಗಾವಣೆಯು ಹಲವು ವರ್ಷಗಳಿಂದ ಕೌನ್ಸೆಲಿಂಗ್ ಮೂಲಕವೇ ನಡೆಯುತ್ತಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಮತ್ತು ಉಪ ನೋಂದಣಾಧಿಕಾರಿಗಳ ವರ್ಗಾವಣೆಯಲ್ಲೂ ಪ್ರಸಕ್ತ ವರ್ಷದಿಂದ ಕೌನ್ಸೆಲಿಂಗ್ ಜಾರಿಗೊಳಿಸಲಾಗಿದೆ. ಆರೋಗ್ಯ ಇಲಾಖೆಯಲ್ಲೂ ಕೆಲವು ವೃಂದದ ಸಿಬ್ಬಂದಿಯ ವರ್ಗಾವಣೆ ಆನ್‌ಲೈನ್ ಮೂಲಕವೇ ನಡೆಯುತ್ತಿದೆ. ಅದೇ ಮಾದರಿಯಲ್ಲಿ ಅಬಕಾರಿ ಅಧಿಕಾರಿಗಳು, ಸಿಬ್ಬಂದಿ ವರ್ಗಾವಣೆಯಲ್ಲಿ ಕೌನ್ಸೆಲಿಂಗ್ ಪದ್ಧತಿ ಅಳವಡಿಸುವ ಪ್ರಸ್ತಾವ ರಾಜ್ಯ ಸರ್ಕಾರದ ಮುಂದಿದೆ.

ಅಬಕಾರಿ ಇನ್‌ಸ್ಪೆಕ್ಟರ್‌ಗಳು, ಅಬಕಾರಿ ಸಬ್ ಇನ್‌ಸ್ಪೆಕ್ಟರ್‌ಗಳು, ಕಚೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಹಿರಿಯ ಮತ್ತು ಕಿರಿಯ ಕಾನ್‌ಸ್ಟೆಬಲ್‌ಗಳು, ವಾಹನ ಚಾಲಕರು ಸೇರಿದಂತೆ 'ಸಿ' ವೃಂದದಲ್ಲಿರುವ ಎಲ್ಲ ಅಧಿಕಾರಿಗಳು, ಸಿಬ್ಬಂದಿಯ ವರ್ಗಾವಣೆಗೆ ಕೌನ್ಸೆಲಿಂಗ್ ಅಳವಡಿಸುವ ಪ್ರಸ್ತಾವವಿದೆ. ರಾಜ್ಯದಲ್ಲಿ ಒಟ್ಟು 500 ಅಬಕಾರಿ ಇನ್‌ಸ್ಪೆಕ್ಟರ್ ಹುದ್ದೆಗಳ ಹುದ್ದೆಗಳಿವೆ.

	ಇಲಾಖೆಯ ಹುದ್ದೆಗಳು	ಸಿ ವೃಂದದ ಹುದ್ದೆಗಳು
ಮಂಜೂರಾದ ಹುದ್ದೆಗಳು	5,811 ಅಬಕಾರಿ ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆ	5,422 'ಸಿ' ವೃಂದದಲ್ಲಿ ಮಂಜೂರಾದ ಹುದ್ದೆಗಳು
ಭರ್ತಿಯಾಗಿರುವ ಹುದ್ದೆಗಳು	4,087	3,831
ಖಾಲಿ ಇರುವ ಹುದ್ದೆಗಳು	1,724	1,591

ಗುಜರಾತ್‌ನಲ್ಲಿ ಲಾರಿ ಹರಿದು ಕೆಆರ್‌ಎಸ್ ಪಕ್ಷದ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್‌ನ ಭರೂಚ್‌ನಲ್ಲಿ ಪಾದಯಾತ್ರಿಗಳ ಮೇಲೆ ಬುಧವಾರ ಸಂಜೆ ಲಾರಿ ಹರಿದು ಕರ್ನಾಟಕ ರಾಷ್ಟ್ರ ಸಮಿತಿ(ಕೆಆರ್‌ಎಸ್) ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಎಚ್.ಎಚ್. ಲಿಂಗೇಗೌಡ (49) ಹಾಗೂ ಪಕ್ಷದ ಸದಸ್ಯ ಕುಂಞಿ ಮೂಸಾ (38) ಅವರು ಮೃತಪಟ್ಟಿದ್ದಾರೆ.

ಲಿಂಗೇಗೌಡ

ಲಿಂಗೇಗೌಡ ಅವರು ಮಂಡ್ಯ ಜಿಲ್ಲೆಯ ಮದ್ದೂರಿನ ಸೋಂಪುರ ಗ್ರಾಮದವರು. ಮೂಸಾ ಮಂಗಳೂರಿನವರು. ಲಿಂಗೇಗೌಡ ಅಬಕಾರಿ ಇನ್‌ಸ್ಪೆಕ್ಟರ್ ಹುದ್ದೆಯಲ್ಲಿದ್ದರು. ಕೆಲವು ವರ್ಷಗಳ ಹಿಂದೆ ಸರ್ಕಾರಿ ಉದ್ಯೋಗಕ್ಕೆ ರಾಜೀನಾಮೆ ಸಲ್ಲಿಸಿ, ಚಳವಳಿ, ರಾಜಕಾರಣ ಪ್ರವೇಶಿಸಿದ್ದರು.

ಅತ್ಯಾಚಾರ ಆರೋಪದ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ಮಾಡಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎಂದು ರಾಷ್ಟ್ರಪತಿ ಮತ್ತು ಪ್ರಧಾನಿಯವರನ್ನು ಭೇಟಿಯಾಗಿ ಮನವಿ ನೀಡಲು ಮಂಗಳೂರಿನಿಂದ ದೆಹಲಿಗೆ ಐವರ ತಂಡ ಪಾದಯಾತ್ರೆಯ ಮೂಲಕ ಹೊರಟಿತ್ತು. 55ನೇ ದಿನದ ಪಾದಯಾತ್ರೆಯು ಗುಜರಾತಿನ ಭರೂಚ್ ನಗರವನ್ನು ಬುಧವಾರ ತಲುಪಿತ್ತು.

ಗುರುವಾರ ಸಂಜೆ ವೇಳೆಗೆ ಮೃತ ದೇಹಗಳನ್ನು ರಾಜ್ಯಕ್ಕೆ ತರಲಾಗುವುದು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹುಟ್ಟೂರಿನಲ್ಲಿ ಕೃಷ್ಣ ಲೀನ

ಒಂದನೇ ಪುಟದಿಂದ...

ಅಪಾರ ಜನರ ಅಶ್ರುತರ್ಪಣದ ನಡುವೆ, ಸಂಜೆ 5.33ಕ್ಕೆ ಒಕ್ಕಲಿಗ ಸಂಪ್ರದಾಯದಂತೆ ಅಂತ್ಯಕ್ರಿಯೆ ನೆರವೇರಿತು. ಮೊಮ್ಮಗ ಅಮರ್ತ್ಯ ಹೆಗ್ಡೆ ಚಿತೆಗೆ ಸಂಜೆ 5.23ಕ್ಕೆ ಅಗ್ನಿಸ್ಪರ್ಶ ಮಾಡಿದರು.

ಬೆಂಗಳೂರಿನ ಸದಾಶಿವನಗರ ಮನೆಯಿಂದ ಬೆಳಿಗ್ಗೆ ಆರಂಭವಾದ ಪಾರ್ಥಿವ ಶರೀರದ ಮೆರವಣಿಗೆ ರಾಮನಗರ, ಚನ್ನಪಟ್ಟಣ ಮುಖಾಂತರ ಮಧ್ಯಾಹ್ನ 2ಕ್ಕೆ ಸೋಮನಹಳ್ಳಿ ತಲುಪಿತು. ಮಧ್ಯಾಹ್ನ 3.15ರವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಮಾರ್ಗದಲ್ಲಿ ಪ್ರಮುಖ ಪಟ್ಟಣಗಳ ಬಳಿ ಜನರು ಸರದಿ ಸಾಲಿನಲ್ಲಿ ನಿಂತು ಅಂತಿಮ ದರ್ಶನ ಪಡೆದರು. ಊರಿನ ಮಗನನ್ನು ಕೊನೆಯದಾಗಿ ನೋಡಿ, ನಮಿಸಿದರು.

ಪೊಲೀಸ್ ಬ್ಯಾಂಡ್ ರಾಷ್ಟ್ರಗೀತೆ ನುಡಿಸಿದ ನಂತರ, ಸಿ.ಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಸಚಿವರು ಮತ್ತು ವಿವಿಧ ಮುಖಂಡರು ಪುಷ್ಪಗುಚ್ಛ ಇರಿಸಿ ನಮನ ಸಲ್ಲಿಸಿದರು. ನಂತರ, ಪೊಲೀಸರು ಮೂರು ಸುತ್ತು ತೋಪು ಸಿಡಿಸಿ, ಗೌರವ ಸಲ್ಲಿಸಿದರು. ಪೊಲೀಸ್ ಬ್ಯಾಂಡ್ ಗೌರವ ವಂದನೆ ಸಲ್ಲಿಸಿತು.

ಬಳಿಕ, ಕೃಷ್ಣ ಅವರ ಪಾರ್ಥಿವ ಶರೀರಕ್ಕೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಅವರ ಪತ್ನಿ ಪ್ರೇಮಾ ಅವರಿಗೆ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಜಿ.ಪರಮೇಶ್ವರ ಹಸ್ತಾಂತರಿಸಿದರು.

ಕೊನೆಯ ಬಾರಿಗೆ ಕೃಷ್ಣ ಅವರಿಗೆ ಆರತಿ ಬೆಳಗಿ, ಮುಖವನ್ನು ನೋಡಿ ಕಣ್ತುಂಬಿಕೊಂಡ ಪತ್ನಿ ಪ್ರೇಮಾ ಮತ್ತು ಮಕ್ಕಳಾದ ಮಾಳವಿಕಾ, ಶಾಂಭವಿ ಭಾವುಕರಾದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿ, ವಿವಿಧ ಮಠಾಧೀಶರು ಗಂಧದ ಚಕ್ಕೆ ಇಟ್ಟು ಅಂತಿಮ ನಮನ ಸಲ್ಲಿಸಿದರು.

ಪ್ರಧಾನಿ ನರೇಂದ್ರ ಮೋದಿ ಪರವಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪುಷ್ಪನಮನ ಸಲ್ಲಿಸಿದರು.

ಎಸ್.ಎಂ. ಕೃಷ್ಣ ಅವರ ಪಾರ್ಥಿವ ಶರೀರದ ಮೆರವಣಿಗೆ ವೇಳೆ ಕೆಂಗೇರಿ ಬಳಿ ನೂರಾರು ಜನರು ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ: ರಂಜು ಪಿ

ಬಿಕ್ಕಿ ಬಿಕ್ಕಿ ಅತ್ತ ಡಿ.ಕೆ.ಶಿವಕುಮಾರ್

ಎಸ್.ಎಂ.ಕೃಷ್ಣ ಅವರ ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸುವಾಗ ಸಂಬಂಧಿಯೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಬಿಕ್ಕಿ ಬಿಕ್ಕಿ ಅತ್ತರು.

ಚಟ್ಟಕ್ಕೆ ಹೆಗಲು ಕೊಟ್ಟು ನಡೆದ ಅವರು ನಂತರ ಚಿತೆಯ ಮೇಲೆ ಶ್ರೀಗಂಧದ ತುಂಡುಗಳನ್ನಿಟ್ಟು ನಮಿಸಿ ಭಾವುಕರಾದರು.

ಅಗ್ನಿಸ್ಪರ್ಶಕ್ಕೆ ಸಮಯ ಮೀರುತ್ತಿದ್ದುದರಿಂದ, ಪ್ರಧಾನ ವೈದಿಕ ಭಾನುಪ್ರಕಾಶ್ ಬಿಟ್ಟು ಚಿತೆ ಕಟ್ಟೆ ಮೇಲೆ ನಿಂತಿದ್ದ ಸಂಬಂಧಿಕರು ಮತ್ತು ಪುರೋಹಿತರು ಕೆಳಗಿಳಿಯಲು ತಾಕೀತು ಮಾಡಿದರು. ಕೆಲ ಪುರೋಹಿತರು ಅಲ್ಲೇ ನಿಂತಿದ್ದನ್ನು ಕಂಡು, 'ಎಲ್ಲ ವಿಧಿವಿಧಾನ ನನಗೆ ಗೊತ್ತಿದೆ, ಕಟ್ಟೆಯಿಂದ ಕೆಳಗಿಳಿಯಿರಿ' ಎಂದು ಗರಂ ಆದರು.

ಮೈಕ್ ಹಿಡಿದು, ಸೂಚನೆ ನೀಡುತ್ತಾ ಜನರನ್ನು ನಿಯಂತ್ರಿಸಿದರು. ಜನ ಗದ್ದಲ ಮಾಡಿದಾಗ ಗದರಿ ನಿಯಂತ್ರಿಸಿದರು.

ಪಿಜಿ ಆಯುಷ್: ನೋಂದಣಿಗೆ ಡಿ.13 ಕೊನೆ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ಆಯುಷ್ ಕೋರ್ಸ್‌ನ 'ಸ್ಟ್ರೇ ವೇಕೆನ್ಸಿ' ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹರು ಡಿ. 13ರೊಳಗೆ ನೋಂದಣಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ಕಲ್ಪಿಸಿದೆ.

ನೋಂದಣಿ ಮಾಡಿ, ಶುಲ್ಕ ಪಾವತಿಸುವ ಅಭ್ಯರ್ಥಿಗಳು ಡಿ.14ರಂದು ಮೂಲ ದಾಖಲೆಗಳ ಸಮೇತ ಕೆಇಎ ಕಚೇರಿಗೆ ಬಂದು ಪರಿಶೀಲನೆ ಮಾಡಿಸಿಕೊಳ್ಳಬೇಕು. ಡಿ. 16ರವರೆಗೆ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ. ಡಿ. 16ರಂದು ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಪ್ರಕಟಿಸಲಾಗುತ್ತದೆ. 17ರಂದು ಅಂತಿಮ ಫಲಿತಾಂಶ ಪ್ರಕಟಿಸಲಿದ್ದು, 19ರೊಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ವಿವರ ನೀಡಿದ್ದಾರೆ.

'ಬಾಕಿ ಮೊತ್ತವನ್ನು ಮಧ್ಯವರ್ತಿಗಳು ಸಕಾಲದಲ್ಲಿ ನೀಡಲಿಲ್ಲ ಎಂದರೆ ಹೇಗೆ?'

ರೈತರ ಬದುಕಿನ ಜೊತೆ ಚೆಲ್ಲಾಟ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಉತ್ಪನ್ನಗಳ ಖರೀದಿ ಮತ್ತು ಹಣ ಸಂದಾಯ ಮಧ್ಯವರ್ತಿಗಳ ಮೂಲಕವೇ ಆಗುತ್ತಿದ್ದು, ಕೊನೆಯಲ್ಲಿ ರೈತನಿಗೆ ಸಿಗುವ ಹಣವೇ ಅತ್ಯಲ್ಪ. ಅದರಲ್ಲೂ ಬಾಕಿ ಮೊತ್ತವನ್ನು ಮಧ್ಯವರ್ತಿಗಳು ಸಕಾಲದಲ್ಲಿ ನೀಡಲಿಲ್ಲ ಎಂದರೆ ಹೇಗೆ? ಇವರೆಲ್ಲಾ ರೈತರ ಬದುಕಿನ ಜೊತೆ ಆಟವಾಡುತ್ತಾರೆ' ಎಂದಿರುವ ಹೈಕೋರ್ಟ್, 'ರೈತರಿಗೆ ಅನ್ಯಾಯವಾಗುವಂತಹ ಯಾವುದೇ ಅರ್ಜಿಯನ್ನು ಪರಿಗಣಿಸುವುದಿಲ್ಲ' ಎಂದು ಸ್ಪಷ್ಟವಾಗಿ ನುಡಿದಿದೆ.

'ಕೋವಿಡ್ ಸಂದರ್ಭದಲ್ಲಿ ನಾವು ರೈತರಿಂದ ಟೊಮೆಟೊ ಖರೀದಿಸಿದ್ದೆವು. ಟೊಮೆಟೊ ಖರೀದಿಸಿದ್ದ ರೈತರಿಗೆ ನಾವಿನ್ನೂ ಬಾಕಿ ಹಣ ಪಾವತಿಸಿಲ್ಲ ಎಂಬ ಕಾರಣಕ್ಕೆ ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು ಅದನ್ನು ರದ್ದುಪಡಿಸಬೇಕು' ಎಂದು ಕೋರಿ ಕೋಲಾರ ನಗರದ ಮೆಹಬೂಬ್ ಪಾಷಾ ಮತ್ತು ಮುಬಾರಕ್ ಪಾಷಾ ಅಲಿಯಾಸ್ ಆಯನ್ ಖಾನ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಅರ್ಜಿದಾರರ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ. ಅರ್ಜಿದಾರರು ತರಕಾರಿ ಮಾರಾಟಗಾರರಾಗಿದ್ದು, ಕೋವಿಡ್ ಸಂದರ್ಭದಲ್ಲಿ ರೈತರಿಂದ ಟೊಮೆಟೊ ಖರೀದಿಸಿದ್ದರು. ಟೊಮೆಟೊ ಕೊಳೆತು ಹೋದ ಪರಿಣಾಮ ಮಾರಾಟವಾಗಲಿಲ್ಲ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕೋವಿಡ್ ಸಂದರ್ಭವಾಗಲಿ, ಯಾವುದೇ ಸಂದರ್ಭವಾಗಲಿ; ಖರೀದಿಸಿದ ಟೊಮೆಟೊ ಮಾರಾಟವಾಗಲಿಲ್ಲ ಎಂದು ರೈತರಿಗೆ ಅದನ್ನು ವಾಪಸು ಕೊಡಲಾಗುತ್ತದೆಯೇ? ಬಡ ರೈತರನ್ನು ನೀವು ವಂಚಿಸುತ್ತಿದ್ದೀರಲ್ಲವೇ? ಹೀಗಾದರೆ, ರೈತರ ಗತಿ ಏನು' ಎಂದು ಪ್ರಶ್ನಿಸಿತು.

'ಈ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ಪಾವತಿಯಾಗಿದ್ದು ಎಷ್ಟು ಮತ್ತು ಬಾಕಿ ಎಷ್ಟು ಎಂದು ಅದರಲ್ಲಿ ವಿವರಿಸಲಾಗಿದೆ. ಈ ಪ್ರಕರಣದಲ್ಲಿ ವಿಚಾರಣೆಗೆ ತಡೆ ನೀಡುವುದಿರಲಿ, ಈ ಅರ್ಜಿಗೆ ಆದ್ಯತೆಯನ್ನೇ ನೀಡುವುದಿಲ್ಲ' ಎಂದ ನ್ಯಾಯಪೀಠ, 'ಬೇಕಿದ್ದರೆ ನೀವು ವಿಚಾರಣಾ ನ್ಯಾಯಾಲಯದಲ್ಲಿಯೇ ಪರಿಹಾರ ಕಂಡುಕೊಳ್ಳಿ' ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತು.

ಲೈಂಗಿಕ ದೌರ್ಜನ್ಯ ಆರೋಪ: ನಿರ್ದೇಶಕ ರಂಜಿತ್ ವಿರುದ್ಧದ ಪ್ರಕರಣಕ್ಕೆ ತಡೆ

'ಯುವಕನೊಬ್ಬನ ಮೇಲೆ ಅಸ್ವಾಭಾವಿಕ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮಲಯಾಳ ಚಿತ್ರರಂಗದ ಖ್ಯಾತ ನಿರ್ದೇಶಕ ರಂಜಿತ್ ಬಾಲಕೃಷ್ಣನ್ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಪ್ರಕರಣ ರದ್ದುಗೊಳಿಸುವಂತೆ ಕೋರಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತರೂ ಆದ ಕೇರಳದ ಕೊಯಿಕ್ಕೋಡ್ ಜಿಲ್ಲೆ ಕರುಮಾಲ ಗ್ರಾಮದ ಖ್ಯಾತ ಸಿನಿಮಾ ನಿರ್ದೇಶಕ, ನಿರ್ಮಾಪಕ ಮತ್ತು ನಟ ರಂಜಿತ್ ಬಾಲಕೃಷ್ಣನ್ (60) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಂಜಿತ್ ಬಾಲಕೃಷ್ಣನ್ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, 'ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮುಂಭಾಗದಲ್ಲಿರುವ ಪ್ರತಿಷ್ಠಿತ ಪಂಚತಾರಾ, ತಾಜ್ ಹೋಟೆಲ್‌ನಲ್ಲಿ 2012ರಲ್ಲಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ ಎಂದು ಆರೋಪಿಸಿ 31 ವರ್ಷದ ಪುರುಷ ಎರಡು ತಿಂಗಳ ಹಿಂದೆಯಷ್ಟೇ ರಂಜಿತ್ ವಿರುದ್ಧ ದೂರು ದಾಖಲಿಸಿದ್ದಾರೆ. ವಿಮಾನ ನಿಲ್ದಾಣದ ಮುಂದಿರುವ ತಾಜ್ ಹೋಟೆಲ್ ಕಾರ್ಯಾರಂಭ ಮಾಡಿರುವುದೇ 2016ರಲ್ಲಿ' ಎಂದರು.

'ಮಲಯಾಳ ಚಿತ್ರರಂಗದ ನಟ ಮಮ್ಮೂಟಿ ಅವರು ರಂಜಿತ್ ಬಾಲಕೃಷ್ಣನ್ ಅವರಿಗೆ ನನ್ನನ್ನು ಪರಿಚಯ ಮಾಡಿಕೊಟ್ಟಿದ್ದರು ಎಂದು ದೂರುದಾರರು ಹೇಳಿದ್ದಾರೆ. ಸಿನಿಮಾದಲ್ಲಿ ನಟಿಸುವ ಹಂಬಲ ಹೊಂದಿದ್ದ ದೂರುದಾರನಿಗೆ ರಂಜಿತ್ ಅವಕಾಶ ನೀಡುವುದಾಗಿ ಹೇಳಿದ್ದರು. ಆದರೆ, ಅವಕಾಶ ನೀಡಿಲ್ಲ ಎಂಬ ಕಾರಣಕ್ಕೆ ಈ ಸುಳ್ಳು ದೂರು ನೀಡಿರಬೇಕು. ಅದೂ 12 ವರ್ಷಗಳ ಬಳಿಕ ಇಂತಹ ಆಪಾದನೆ ಮಾಡಲಾಗಿದೆ. ಆದ್ದರಿಂದ, ಪ್ರಕರಣಕ್ಕೆ ತಡೆ ನೀಡಬೇಕು' ಎಂದು ಪ್ರಭುಲಿಂಗ ನಾವದಗಿ ಕೋರಿದರು.

ವಾದ ಆಲಿಸಿದ ನ್ಯಾಯಪೀಠ, 'ದೂರುದಾರರ ಮಾತುಮಾತಿನಲ್ಲೂ ಸುಳ್ಳಿದೆ' ಎಂಬ ಲ್ಯಾಟಿನ್ ನ್ಯಾಯ ತತ್ವವನ್ನು ಉಲ್ಲೇಖಿಸುವ ಮೂಲಕ ಪ್ರಕರಣದ ಮುಂದಿನ ನ್ಯಾಯಿಕ ಪ್ರಕ್ರಿಯೆಗಳಿಗೆ ತಡೆ ನೀಡಿತು. ಅಂತೆಯೇ ದೂರುದಾರ ಪುರುಷನಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು 2025ರ ಜನವರಿ 17ಕ್ಕೆ ನಿಗದಿಗೊಳಿಸಿತು.

ಹಿಂದೂಸ್ತಾನಿ ಗಾಯಕ ಪಂಡಿತ ವೆಂಕಟೇಶ ಕುಮಾರ ಅವರಿಗೆ 'ಆಳ್ವಾಸ್ ವಿರಾಸತ್–2024' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ಣ ಬೆಳಗೆರೆ, ಶ್ರೀಪತಿ ಭಟ್, ಪಿ.ಜಿ.ಆರ್.ಸಿಂಧ್ಯಾ, ಡಾ. ಮೋಹನ ಆಳ್ವ, ಎಲ್.ಎಚ್. ಮಂಜುನಾಥ, ಪ್ರೊ. ಪಿ.ಎಲ್.ಧರ್ಮ, ಕ್ಯಾ.ಗಣೇಶ್ ಕಾರ್ಣಿಕ್, ಪ್ರೊ. ನರೇಂದ್ರ ನಾಯಕ್ ಹಾಜರಿದ್ದರು

'ಆಳ್ವಾಸ್ ವಿರಾಸತ್ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಮುಸ್ಸಂಜೆಯ ನಸುಗತ್ತಲನ್ನು ಸೀಳಿ ಝಗಮಗಿಸಿದ ಬೆಳಕಿನ ಸುಂದರ ವೇದಿಕೆಯಲ್ಲಿ ಹಿಂದೂಸ್ತಾನಿ ಗಾಯಕ ಪಂಡಿತ ವೆಂಕಟೇಶ ಕುಮಾರ ಅವರಿಗೆ 'ಆಳ್ವಾಸ್ ವಿರಾಸತ್-2024' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶ್ರೀಮತಿ ವನಜಾಕ್ಷಿ ಕೆ. ಶ್ರೀಪತಿ ಭಟ್ ಬಯಲು ರಂಗಮಂಟಪದಲ್ಲಿ ನಡೆಯುತ್ತಿರುವ 30ನೇ ವರ್ಷದ ಆಳ್ವಾಸ್ ವಿರಾಸತ್‌ನ ಎರಡನೇ ದಿನವಾದ ಬುಧವಾರ, ಸಂಗೀತದಾರತಿ, ಪುಷ್ಪ ವೃಷ್ಟಿಯೊಂದಿಗೆ ₹1 ಲಕ್ಷ ನಗದು ನೀಡಿ ಅವರನ್ನು ಗೌರವಿಸಲಾಯಿತು.

'ಪಂಡಿತ ಪುಟ್ಟರಾಜ ಗವಾಯಿಗಳು. ನನ್ನಂತಹ ಅನೇಕ ಬಡ ವಿದ್ಯಾರ್ಥಿಗಳಿಗೆ ಆಶ್ರಮದಲ್ಲಿ ಆಸರೆ ನೀಡಿ, ಬೆಳೆಸಿದ್ದಾರೆ. ನನಗೆ ಲಭಿಸಿದ ಪ್ರಶಸ್ತಿಯನ್ನು ಗುರುಗಳಿಗೆ ಅರ್ಪಣೆ ಮಾಡುತ್ತೇನೆ' ಎಂದು ವೆಂಕಟೇಶ ಕುಮಾರ ಭಾವುಕರಾಗಿ ಹೇಳಿದರು.

ಪುಟ್ಟರಾಜ ಗವಾಯಿಗಳು ರಾಜ್ಯದಲ್ಲಿ ಹಿಂದೂಸ್ತಾನಿ ಸಂಗೀತ ಪಸರಿಸಲು ಕಾರಣರಾದವರು. 'ಪ್ರಶಸ್ತಿ ಹುಡುಕಿಕೊಂಡು ಬರಬೇಕು, ನಾವು ಅದರ ಹಿಂದೆ ಹೋಗಬಾರದು' ಎಂಬ ಗುರುಗಳ ಮಾತು ಇಂದಿನ ಪ್ರಶಸ್ತಿಯ ಮೂಲಕ ಸಾರ್ಥಕವಾಗಿದೆ ಎಂದರು.

ಸಿದ್ದರಾಮಯ್ಯ ಲಿಂಗಾಯತ ವಿರೋಧಿ ಸಿ.ಎಂ: ಬಸವಜಯ ಮೃತ್ಯುಂಜಯ ಸ್ವಾಮೀಜಿ ಆರೋಪ

‘ಪೊಲೀಸರೇ ಕಲ್ಲೆಸೆದು, ಲಾಠಿ ಬೀಸಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಪಂಚಮಸಾಲಿ ಸಮಾಜದವರು ಶಾಂತಿಯುತವಾಗಿ ಹೋರಾಟ ನಡೆಸುತ್ತಿದ್ದರು. ಸಾರ್ವಜನಿಕರ ವೇಷದಲ್ಲಿ ಬಂದ ಪೊಲೀಸರೇ ನಮ್ಮವರ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಸಮವಸ್ತ್ರದಲ್ಲಿದ್ದವರು ಲಾಠಿಚಾರ್ಜ್ ನಡೆಸಿದ್ದಾರೆ. ಇದು ವ್ಯವಸ್ಥಿತ ಷಡ್ಯಂತ್ರ’ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಆರೋಪಿಸಿದರು.

‘ಹೋರಾಟಗಾರರಿಗೆ ರಕ್ಷಣೆ ನೀಡಬೇಕಿದ್ದ ಪೊಲೀಸರೇ ಕಲ್ಲು ತೂರಿದ್ದಾರೆ. ಇದರಿಂದ ಹಲವರು ಗಾಯಗೊಂಡಿದ್ದಾರೆ. ಸಾಲದೆಂಬಂತೆ ಕಲ್ಲು ತೂರಿದ ಆರೋಪವನ್ನೂ ನಮ್ಮವರ ಮೇಲೆ ಹೊರಿಸಿ, ಪ್ರಕರಣ ದಾಖಲಿಸಿದ್ದಾರೆ’ ಎಂದು ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಹೋರಾಟ ನಿಯಂತ್ರಣ ತಪ್ಪುವ ಸಾಧ್ಯತೆ ಇದ್ದರೆ ಜಲಫಿರಂಗಿ ಬಳಸಬಹುದಿತ್ತು. ಲಾಠಿಚಾರ್ಜ್ ಮಾಡಲೇಬೇಕು ಎಂದು ಏಕೆ ನಿರ್ಧರಿಸಿದರು? ಸ್ವತಃ ಮುಖ್ಯಮಂತ್ರಿಯೇ ಲಾಠಿಚಾರ್ಜ್‌ಗೆ ಆದೇಶ ನೀಡಿದ್ದಾರೆ. ಅವರು ಆದೇಶ ನೀಡಿಲ್ಲ ಎಂದಾದರೆ; ಸಂಬಂಧಿಸಿದ ಪೊಲೀಸ್ ಅಧಿಕಾರಿಯನ್ನು ಅಮಾನತು ಮಾಡಲಿ’ ಎಂದೂ ಹೇಳಿದರು.

‘ಇದು ಸಮಾಜದ ಮೇಲಿನ ದೌರ್ಜನ್ಯವೇ ಸರಿ. ನಮ್ಮವರನ್ನೇ ಹೊಡೆದು ಅವರ ಮೇಲೆಯೇ ಪ್ರಕರಣ ದಾಖಲಿಸಿದ್ದಾರೆ. ಕೂಡಲೇ ಎಲ್ಲರ ಮೇಲಿನ ಪ್ರಕರಣ ಹಿಂಪಡೆಯಬೇಕು. ಇಲ್ಲದಿದ್ದರೆ ಡಿ.16ರಂದು ಇಡೀ ದಿನ ಸುವರ್ಣ ವಿಧಾನಸೌಧದ ಎದುರಿನಲ್ಲಿ ಧರಣಿ ಮಾಡುತ್ತೇನೆ’ ಎಂದರು.

ಮುಖ್ಯಮಂತ್ರಿ ಹೇಳಿಕೆ ಸುಳ್ಳು: ‘ಹೋರಾಟಗಾರರನ್ನು ಮಾತುಕತೆಗೆ ಆಹ್ವಾನಿಸಿದರೂ ಬಂದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದು ಶುದ್ಧ ಸುಳ್ಳು. ನಾವು ಇಡೀ ದಿನ ಕಾದರೂ ಅವರು ಸ್ಥಳಕ್ಕೆ ಬರಲಿಲ್ಲ. ನಾವೇ ಭೇಟಿಯಾಗಲು ಹೊರಟರೆ ಲಾಠಿಚಾರ್ಜ್ ಮಾಡಿಸಿದ್ದಾರೆ. ಸಿದ್ದರಾಮಯ್ಯ ಪರವಾಗಿ ಬಂದಿದ್ದ ನಾಲ್ವರು ಸಚಿವರೂ ನಮ್ಮನ್ನು ಮಾತುಕತೆಗೆ ಆಹ್ವಾನಿಸಿಲ್ಲ’ ಎಂದು ಸ್ವಾಮೀಜಿ ಕಿಡಿ ಕಾರಿದರು.

ಸದ್ಯಕ್ಕೆ 2ಡಿ ಜಾರಿ ಮಾಡಿ: ‘ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲು ಆಗದಿದ್ದರೆ; ಈ ಹಿಂದೆ ಬಿಜೆಪಿ ಸರ್ಕಾರ ನೀಡಿದ್ದ 2ಡಿ ಮೀಸಲಾತಿಯನ್ನಾದರೂ ಸದ್ಯಕ್ಕೆ ಜಾರಿಗೆ ಮಾಡಬೇಕು’ ಎಂದೂ ಸ್ವಾಮೀಜಿ ಆಗ್ರಹಿಸಿದರು.

‘ಸರ್ಕಾರ ಏನೇ ಮಾಡಿದರೂ ಹೋರಾಟ ನಿಲ್ಲಿಸುವುದಿಲ್ಲ. ಡಿಸೆಂಬರ್ 12ರಂದು ಹತ್ತರಗಿ, ಹಿರೇಬಾಗೇವಾಡಿ ಟೋಲ್‌ನಾಕಾ ಬಳಿ ಹೆದ್ದಾರಿ ತಡೆದು ಪ್ರತಿಭಟನೆ ಮಾಡುತ್ತೇವೆ’ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಪಂಚಮಸಾಲಿ ಸಮಾಜದ ಪ್ರಭಾರಿ ಜಿಲ್ಲಾ ಘಟಕದ ಅಧ್ಯಕ್ಷ ನಿಂಗಪ್ಪ ಪಿರೋಜಿ, ರೋಹಿಣಿ ಪಾಟೀಲ, ಮೃಣಾಲ್ ಹೆಬ್ಬಾಳಕರ, ಕಾಕಾಗೌಡ ಪಾಟೀಲ, ಗುಂಡು ಪಾಟೀಲ, ಆರ್.ಪಿ.ಪಾಟೀಲ ಇದ್ದರು.

‘ಲಿಂಗಾಯತರನ್ನು ಹೊಡೆದ ಮೊದಲ ಮುಖ್ಯಮಂತ್ರಿ’


ಬಸವಜಯ ಮೃತ್ಯುಂಜಯ ಸ್ವಾಮೀಜಿ

‘ಈವರೆಗಿನ ಯಾವುದೇ ಸರ್ಕಾರ ಲಿಂಗಾಯತರ ಮೇಲೆ ದಾಳಿ ಮಾಡಿರಲಿಲ್ಲ. ಸಿದ್ದರಾಮಯ್ಯ ಅವರೇ ಲಿಂಗಾಯತರ ಮೇಲೆ ಲಾಠಿ ಎತ್ತಿದ ಮೊದಲ ಮುಖ್ಯಮಂತ್ರಿ. ಇವರೊಬ್ಬ ಲಿಂಗಾಯತ ವಿರೋಧಿ ನಾಯಕ’ ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ದೂರಿದರು.

‘ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದರು. ಅವರ ಅನುಯಾಯಿಗಳ ಮೇಲೆಯೇ ದಾಳಿ ಮಾಡಿಸಿದ್ದಾರೆ. ಸಿದ್ದರಾಮಯ್ಯ ಸರ್ವಾಧಿಕಾರಿಯಂತೆ ನಡೆದುಕೊಂಡಿದ್ದಾರೆ’ ಎಂದು ಕಿಡಿಕಾರಿದರು.

‘ನಾಲ್ಕು ವರ್ಷದಿಂದ ಬಸವಣ್ಣನಂತೆ ಶಾಂತಿಯುತ ಹೋರಾಟ ಮಾಡಿದ್ದೇವೆ. ಇನ್ನು ಮುಂದೆ ಚನ್ನಮ್ಮನಂತೆ ಕ್ರಾಂತಿಯಿಂದ ಹೋರಾಡುತ್ತೇವೆ. ಧೈರ್ಯ ಇದ್ದವರು ನಮ್ಮನ್ನು ತಡೆಯಿರಿ’ ಎಂದೂ ಸ್ವಾಮೀಜಿ ಸವಾಲು ಎಸೆದರು.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ 6 ಲಕ್ಷಕ್ಕೂ ಹೆಚ್ಚು ಜನ ಇದೇ ಸುವರ್ಣ ಸೌಧದ ಸ್ಥಳದಲ್ಲಿ ಹೋರಾಟ ಮಾಡಿದ್ದೆವು. ಆಗ ಎಡಿಜಿಪಿ ಅಲೋಕ್‌ಕುಮಾರ್ ಸಮಾಧಾನದಿಂದ ಎಲ್ಲ ನಿಯಂತ್ರಣ ಮಾಡಿದ್ದರು. ಈಗಿನ ಎಡಿಜಿಪಿ, ಕಮಿಷನರ್‌ಗಳೇ ಲಾಠಿ ಹಿಡಿದು ಹಲ್ಲೆ ಮಾಡಿದ್ದಾರೆ’ ಎಂದು ಆರೋಪಿಸಿದರು.

‘ಸರ್ವಾಧಿಕಾರಿ ಸಿದ್ದರಾಮಯ್ಯ’

‘ಪಂಚಮಸಾಲಿ ಹೋರಾಟಗಾರರ ಮೇಲೆ ನಡೆದ ಲಾಠಿಚಾರ್ಜ್ ಅಮಾನುಷ. ಅತ್ಯಂತ ಖಂಡನೀಯ. ಸಿದ್ದರಾಮಯ್ಯ ಅವರ ಈ ಸರ್ವಾಧಿಕಾರಿ ಧೋರಣೆಗೆ ಧಿಕ್ಕಾರ’ ಎಂದು ಸಂಸದ ಜಗದೀಶ ಶೆಟ್ಟರ್ ಕಿಡಿ ಕಾರಿದ್ದಾರೆ.

‘ಧರಣಿ ನಿರತರನ್ನು ಚದುರಿಸಲು ಲಾಠಿ ಬೀಸುವಂತೆ ಮಾಡಿ, ಸಮಾಜದ ಮುಖಂಡರನ್ನು ವಶಕ್ಕೆ ಪಡೆದಿರುವುದು ಹಾಗೂ ಭಯದ ವಾತಾವರಣ ಸೃಷ್ಟಿಸುವ ಹುನ್ನಾರ. ಹೋರಾಟ ತಡೆಯಲು ಪ್ರಯತ್ನಿಸಿರುವುದು ಆಘಾತಕಾರಿ. ಪಂಚಮಸಾಲಿ ಸಮುದಾಯದವರ ಬೆಂಬಲಕ್ಕೆ ಇದ್ದೇನೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮೀಸಲಾತಿ ಹೋರಾಟದಲ್ಲಿ ರಾಜಕಾರಣಿಗಳು ಬೇಡ’

ಕೊಪ್ಪಳ: ‘2ಎ ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟದಲ್ಲಿ ರಾಜಕಾರಣಿಗಳು ಪಾಲ್ಗೊಳ್ಳುವುದು ಬೇಡ. ರಾಜಕಾರಣಿಗಳು ಭಾಗಿಯಾಗುವುದಕ್ಕಿಂತ ಗುರುಪೀಠದವರೇ ಮುಂಚೂಣಿಯಲ್ಲಿದ್ದು ಹೋರಾಡಿದರೆ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ’ ಎಂದು ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ರಾಜ್ಯಾಧ್ಯಕ್ಷ ಸೋಮನಗೌಡ ಎಂ. ಪಾಟೀಲ ಹೇಳಿದರು.

ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಕಾಂಗ್ರೆಸ್ ಹಾಗೂ ಬಿಜೆಪಿಯ ಕುತಂತ್ರದಿಂದಾಗಿ ಬೆಳಗಾವಿಯಲ್ಲಿ ಹಿಂಸಾಚಾರ ನಡೆದಿದೆ. ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಸಮುದಾಯದ ಎಲ್ಲರ ಜೊತೆಗೂ ಚರ್ಚಿಸಿ ಯೋಜನೆ ರೂಪಿಸಬೇಕು. ಇದಕ್ಕಾಗಿ ಡಿ. 14ರಂದು ಚಿತ್ರದುರ್ಗದಲ್ಲಿ ಪಂಚಮಸಾಲಿ ಸಂಘದ ಪ್ರಮುಖರ ಸಭೆ ಕರೆಯಲಾಗಿದೆ’ ಎಂದರು.

‘ಬೇಡಿಕೆ ಪರಿಗಣಿಸಿದರೆ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ಪ್ರವರ್ಗ- 2ಎಗೆ ಸೇರಿಸಲೇಬಾರದು ಎಂದು ಆಗ್ರಹಿಸಿ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.

ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿದ ಒಕ್ಕೂಟದ ಪದಾಧಿಕಾರಿಗಳು, ಪಂಚಮ ಸಾಲಿ ಸಮುದಾಯದ ಬೇಡಿಕೆಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಬಾರದು. ಪರಿಗಣಿಸಿದರೆ ರಾಜ್ಯದಾದ್ಯಂತ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮನವಿಯಲ್ಲಿ ಏನಿದೆ?: ಪಂಚಮಸಾಲಿ ಲಿಂಗಾಯತ ಸಮುದಾಯ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಮುಂದುವರಿದಿದೆ. ಡಾ. ನಾಗನಗೌಡ ಸಮಿತಿ, ಎಲ್. ಜಿ. ಹಾವನೂರು, ವೆಂಕಟಸ್ವಾಮಿ, ನ್ಯಾಯಮೂರ್ತಿ ಒ. ಚಿನ್ನಪ್ಪರೆಡ್ಡಿ ವರದಿ ಸೇರಿದಂತೆ ಎಲ್ಲ ವರದಿಗಳಲ್ಲೂ ಪಂಚಮಸಾಲಿ ಸಮುದಾಯವು ಮುಂದುವರಿದ ಸಮಾಜ ಎಂದು ದಾಖಲಿಸಲಾಗಿದೆ.

ಪಂಚಮಸಾಲಿ ಲಿಂಗಾಯತ ಸಮುದಾಯವನ್ನು ಪ್ರವರ್ಗ-2ಎ ಮೀಸಲಾತಿಯಲ್ಲಿ ಸೇರಿಸಿದರೆ, ಹಾಲಿ ಇರುವ ಪ್ರವರ್ಗ-2ಎ ಅಡಿ ಬರುವ ತೀರಾ ಹಿಂದುಳಿದ ಜಾತಿಗಳಾದ ಅಗಸ, ಸವಿತಾ, ತಿಗಳ, ಈಡಿಗ, ಕುರುಬ, ದೇವಾಂಗ ಸೇರಿದಂತೆ ಇತರೆ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಸಿಗುವುದಿಲ್ಲ. ಪಂಚಮಸಾಲಿ ಸಮುದಾಯವೇ ಎಲ್ಲ ಉದ್ಯೋಗ, ಶಿಕ್ಷಣ ಹಾಗೂ ರಾಜಕೀಯ ಮೀಸಲಾತಿಯನ್ನು ಪಡೆದುಕೊಳ್ಳುತ್ತದೆ. ಇದರಿಂದ ಪ್ರವರ್ಗ 2ಎಯಲ್ಲಿ ಇರುವ ಜಾತಿಗಳಿಗೆ ಮೀಸಲಾತಿಯೇ ಸಿಗುವುದಿಲ್ಲ ಎಂದು ಒಕ್ಕೂಟ ಆತಂಕ ವ್ಯಕ್ತಪಡಿಸಿದೆ.

TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.
Ph.: 04324-277001 (10 Lines). Email : purchase.recycle@tnpl.co.in

NOTICE INVITING TENDER

Tender No.	Material Description	Due date
242513 005040	Procurement of 5000 MT ± 5% Office Waste Paper (White Records) in Bale form from Karnataka for TNPL Unit-I at Kagithapuram.	18.12.2024

Corrigendum if any will be issued in TNPL Website & NIC Portal only. Detailed Terms & conditions, tender fee, EMD etc., are available in the tender document which can be downloaded from websites : www.tnpl.com / https://tntenders.gov.in/nicgep/app

DIPR/5433/Tender/2024 — TNPL - Maker of bagasse based eco-friendly Paper

6 ಮಂದಿ ವಿರುದ್ಧ ಕೊಲೆ ಯತ್ನ ಕೇಸ್

ಪಂಚಮಸಾಲಿ ಹೋರಾಟ ವೇಳೆ ಕಲ್ಲು ತೂರಾಟ ಆರೋಪ

ಪ್ರಜಾವಾಣಿ ವಾರ್ತೆ

ಹಿರೇಬಾಗೇವಾಡಿ (ಬೆಳಗಾವಿ ಜಿಲ್ಲೆ): ಸುವರ್ಣ ವಿಧಾನಸೌಧದ ಎದುರು ಮಂಗಳವಾರ ನಡೆದ ಘರ್ಷಣೆಗೆ ಸಂಬಂಧಿಸಿದಂತೆ, ಲಿಂಗಾಯತ ಪಂಚಮಸಾಲಿ ಸಮಾಜದ ಆರು ಹೋರಾಟಗಾರರ ಮೇಲೆ ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಲಾಗಿದೆ.

ಕಲ್ಲು ತೂರಾಟ ಮಾಡಿದ್ದಾರೆ ಎಂಬ ಆರೋಪದಡಿ ನಿಂಗಪ್ಪ ಶಿವಪ್ಪ ಬನದ, ರಾಮಗೌಡ ರುದ್ರಗೌಡ ಫಕೀರಗೌಡ್ರ, ಉಮೇಶ ಗುರುಲಿಂಗಪ್ಪ ಇಂಗಳೇವಾರ, ಮಂಜುನಾಥ ಬೆಂಡಿಗೇರಿ, ಮಂಜುನಾಥ ಶಂಕರಪ್ಪ ಗುಮ್ಮಗೋಳ ಹಾಗೂ ರುದ್ರಗೌಡ ಪಂಚಪ್ಪ ಅವರ ಮೇಲೆ ಎಫ್‌ಐಆರ್ ದಾಖಲಾಗಿದೆ.

‘ಬೆಳಗಾವಿ ತಾಲ್ಲೂಕಿನ ಕೊಂಡಸಕೊಪ್ಪ ಗ್ರಾಮದ ಹತ್ತಿರದ ರಾಷ್ಟ್ರೀಯ ಹೆದ್ದಾರಿ ಮೇಲೆ ಪ್ರತಿಭಟನೆ ಮಾಡಿ, ಕಾನೂನು ಉಲ್ಲಂಘನೆ ಮಾಡಿದ್ದಾರೆ. ಕಲ್ಲೆಸೆದು ಪೊಲೀಸ್ ವಾಹನ ಮತ್ತು ಕೆಎಸ್‌ಆರ್‌ಟಿಸಿ ಬಸ್ ಸೇರಿದಂತೆ ಏಳು ವಾಹನಗಳನ್ನು ಜಖಂಗೊಳಿಸಿದ್ದಾರೆ. ಪೊಲೀಸ್ ಅಧಿಕಾರಿಗಳನ್ನೂ ಗಾಯಗೊಳಿಸಿ, ಕೊಲೆಗೆ ಯತ್ನ ನಡೆಸಿದ್ದಾರೆ. ಕರ್ತವ್ಯ ನಿರತ ನೌಕರರಿಗೆ ಅಡ್ಡಿಪಡಿಸಿ, ಸಾರ್ವಜನಿಕ ಆಸ್ತಿಗೆ ಹಾನಿಮಾಡಿದ್ದಾರೆ’ ಎಂಬ ಆರೋಪ ಹೊರಿಸಲಾಗಿದೆ.

ಕಲ್ಲು ತೂರಾಟದಿಂದ ಶ್ರೀದೇವಿ ಮೇಖಳಿ, ಶೋಭಾ ದಳವಾಯಿ, ಅಣ್ಣಪ್ಪ ಪಾಟೀಲ, ಸುನೀತಾ ನೆರಲೇಕರ, ಮಾರತೇಶ ಕುಂಬಾರ, ಲಕ್ಷ್ಮಣ ಕಡೋಲ್ಕರ, ಮಂಜುನಾಥ ಭಜಂತ್ರಿ, ಬಸವರಾಜ ಬನ್ನಿಗೋಳ, ಪ್ರದೀಪ ಘರಳೆ, ವಿಶ್ವನಾಥ ಮಾಳಗೆ ಸೇರಿ 17 ಪೊಲೀಸ್ ಸಿಬ್ಬಂದಿ ಗಾಯಗೊಂಡು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಆರೋಪಿಗಳ ಮೇಲೆ ಬಿಎನ್‌ಎಸ್ ಕಲಂ 115 (2), 109(1), 118(2), 117(2), 352, 351(2), 132, 121, 223, 324, 189, 190, 189(3), 181(2) ಅಡಿ ಹಿರೇಬಾಗೇವಾಡಿ ಇನ್‌ಸ್ಪೆಕ್ಟರ್ ಆರ್.ಆರ್. ಪಾಟೀಲ ಅವರು ಸ್ವಯಂ ಪ್ರೇರಿತ ದೂರು ದಾಖಲಿಸಿದ್ದಾರೆ.

ಕಲ್ಲು ತೂರಾಟಕ್ಕೆ ಸಂಬಂಧಿಸಿದಂತೆ ಡ್ರೋನ್ ವಿಡಿಯೊಗಳು, ಮಾಧ್ಯಮಗಳಲ್ಲಿ ಪ್ರಸಾರವಾದ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ. ಇನ್ನಷ್ಟು ಆರೋಪಿಗಳ ಮೇಲೆ ದೂರು ದಾಖಲಿಸಲಾಗುವುದು ಎಂದೂ ಮೂಲಗಳು ತಿಳಿಸಿವೆ.

‘ಸದನದ ಒಳಹೊರಗೆ ಬಿಜೆಪಿ ಧರಣಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿರುವುದನ್ನು ಖಂಡಿಸಿ ಗುರುವಾರ ವಿಧಾನಮಂಡಲದ ಒಳಗೆ ಮತ್ತು ಹೊರಗೆ ಹೋರಾಟ ನಡೆಸಲು ಬಿಜೆಪಿ ನಿರ್ಧರಿಸಿದೆ.

‘ಪ್ರತಿಭಟನೆಯನ್ನು ವ್ಯವಸ್ಥಿತವಾಗಿ ದಮನ ಮಾಡಲು ಸರ್ಕಾರ ಉದ್ದೇಶಿಸಿದ್ದು, ಇದಕ್ಕಾಗಿ ಮೊದಲಿಗೆ ಅನುಮತಿ ನೀಡಲಿಲ್ಲ. ಬಳಿಕ ಶಾಂತಿಯುತ ಹೋರಾಟಗಾರರ ಮೇಲೆ ಪೊಲೀಸರು ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ. ಇದನ್ನು ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಹೋರಾಟದ ಸ್ವರೂಪ ಹೇಗಿರಬೇಕೆಂಬ ಬಗ್ಗೆ ಗುರುವಾರ ಬೆಳಿಗ್ಗೆ ಎಲ್ಲ ನಾಯಕರೂ ಸೇರಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದು ಅವರು ಹೇಳಿದರು.

ಹೇಳಿಕೆ ತಿರುಚಿದ ಸಿ.ಎಂ: ಬೊಮ್ಮಾಯಿ



ಬೆಂಗಳೂರು: ‘ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಹಂಚಿಕೆ ವಿಚಾರದಲ್ಲಿ ನಮ್ಮ ಆದೇಶವನ್ನು ಪೂರ್ಣ ಪ್ರಮಾಣದಲ್ಲಿ ಹಿಂದಕ್ಕೆ ಪಡೆಯುತ್ತೇವೆ ಎಂದು ಸುಪ್ರೀಂ-ಕೋರ್ಟ್‌ನಲ್ಲಿ ನಮ್ಮ ಸರ್ಕಾರ ಹೇಳಿರಲಿಲ್ಲ. ತಾತ್ಕಲಿಕವಾಗಿ ತಡೆ ಹಿಡಿಯುತ್ತೇವೆ ಎಂದು ಮಾತ್ರ ಹೇಳಿದ್ದೆವು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದನ್ನು ತಿರುಚಿದ್ದಾರೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕುರಿತು ‘ಎಕ್ಸ್’ ಮೂಲಕ ಹೇಳಿಕೆ ನೀಡಿರುವ ಅವರು, ‘ಪಂಚಮಸಾಲಿ ಮೀಸಲಾತಿಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು ಈ ವಿಷಯದಲ್ಲಿ ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.

ಅಧಿಕಾರಿಗಳ ಅಮಾನತ್ತಿಗೆ ಒತ್ತಾಯ: ಪಂಚಮಸಾಲಿ ಸಮುದಾಯದ ಹೋರಾಟದಲ್ಲಿ ಹಿಂಸಾಚಾರ ಆಗಿರುವುದು ಅಲ್ಲಿಯ ಅಧಿಕಾರಿಗಳು ದುರ್ನಡತೆ, ದರ್ಪವೇ ಕಾರಣ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಕೂಡಲೇ ಲಾಠಿ ಪ್ರಹಾರ ನಡೆಸಿದ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಪಂಚಮಸಾಲಿ ಸಮಾಜದ ಮುಖಂಡರನ್ನು ಮತ್ತು ಹಿರಿಯರನ್ನು ಮಾತುಕತೆಗೆ ಕರೆಸಿ ಸೌಹಾರ್ದತೆಯಿಂದ ಬಗೆಹರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕರ್ನಾಟಕ ಸರ್ಕಾರ — ಜಿಲ್ಲಾ ಪಂಚಾಯತ್, ಚಿತ್ರದುರ್ಗ

ಕಾರ್ಯಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.

ಇ-ಮೇಲ್:zped.cta@gmail.com ದೂರವಾಣಿ ಸಂ:08194-222372

ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2024-25/2043 ದಿನಾಂಕ:07.12.2024

ಟೆಂಡರ್ ಪ್ರಕಟಣೆ

(Through e-Procurement Portal Only)

ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ಯೋಜನೆಯಡಿಯಲ್ಲಿ ವ್ಯಾಪ್ತಿಯ ವಿವಿಧ ಯೋಜನೆಯಡಿಯಲ್ಲಿ ಅನುಮೋದನೆಯಾದ 13 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ.6.00ಲಕ್ಷ ಗರಿಷ್ಠ ರೂ.41.70ಲಕ್ಷಗಳು ಒಟ್ಟು ರೂ: 196.09ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:-

ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 20.12.2024ರ : ಸಮಯ: 11.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 21.12.2024ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.12.2024ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 24.12.2024ರ : ಸಮಯ 16.02

ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194-222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

RO.No.427:DIPR/CTA/KSMCA/2024-25

ಸಹಿ/- ಕಾರ್ಯಪಾಲಕ ಅಭಿಯಂತರರು
ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

‘ಗೀತಾ ಸಂದೇಶ’

ಉಡುಪಿಯ ಕೃಷ್ಣ ಮಠದ ರಾಜಾಂಗಣದಲ್ಲಿ ಪರ್ಯಾಯ ಪುತ್ತಿಗೆ ಮಠದ ವತಿಯಿಂದ ಗೀತೋತ್ಸವದ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಗೀತಾ ಜಯಂತಿ ಕಾರ್ಯಕ್ರಮದಲ್ಲಿ ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರು ನವದೆಹಲಿಯ ಬಿಎಪಿಎಸ್ ಸ್ವಾಮಿನಾರಾಯಣ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕ ಸಾಧು ಭದ್ರೇಶ ದಾಸ್ ಅವರಿಗೆ ಕೋಟಿ ಗೀತಾ ಲೇಖನ ದೀಕ್ಷೆ ನೀಡಿದರು. ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್, ಮಹಾಭಾರತ ಧಾರಾವಾಹಿಯ ಶ್ರೀಕೃಷ್ಣ ಪಾತ್ರಧಾರಿ ನಿತೀಶ್ ಭಾರದ್ವಾಜ್, ಕಿರಿಯ ಯತಿ ಸುಶ್ರೀಂದ್ರ ತೀರ್ಥ ಸ್ವಾಮೀಜಿ, ಚಿತ್ರನಟ ಮಾಸ್ಟರ್ ಆನಂದ್ ಉಪಸ್ಥಿತರಿದ್ದರು

ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿ ಸಾವು ವೈದ್ಯರ ನಿರ್ಲಕ್ಷ್ಯ ಆರೋಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಿಸೇರಿಯನ್ ನಂತರ ಸರಿಯಾಗಿ ಹೊಲಿಗೆ ಹಾಕಿಲ್ಲ
- ವೈದ್ಯರು ₹4,000 ಲಂಚ ಪಡೆದಿದ್ದಾರೆ -ಆರೋಪ

ರೋಜಾ

ಚಿತ್ರದುರ್ಗ: ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಮಂಗಳವಾರ ಸಂಜೆ ಬಾಣಂತಿ ಯೊಬ್ಬರು ಮೃತಪಟ್ಟಿದ್ದು, ಇದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಮೃತ ಮಹಿಳೆಯ ಕುಟುಂಬ ಸದಸ್ಯರು, ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಜಿಲ್ಲಾ ಆಸ್ಪತ್ರೆ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಚಳ್ಳಕೆರೆ ತಾಲ್ಲೂಕು ಜಾಗನೂರಹಟ್ಟಿ ಗ್ರಾಮದ ರೋಜಾ (25) ಮೃತ ಬಾಣಂತಿ.

ಜಿಲ್ಲಾ ಆಸ್ಪತ್ರೆ ವೈದ್ಯೆ ಡಾ.ರೂಪಶ್ರೀ ಅವರು ಅ.30ರಂದು ಸಿಸೇರಿಯನ್ ಮೂಲಕ ಇವರಿಗೆ ಹೆರಿಗೆ ಮಾಡಿಸಿದ್ದರು. ಹೆರಿಗೆ ನಂತರ ರೋಜಾ ಅವರು ಮನೆಗೆ ತೆರಳಿದ್ದರು. ಆದರೆ ಸಿಸೇರಿಯನ್‌ಗಾಗಿ ಹೊಲಿಗೆ ಹಾಕಿದ್ದ ಹೊಟ್ಟೆಯ ಭಾಗದಲ್ಲಿ ನೋವು ಕಾಣಿಸಿಕೊಂಡಿತ್ತು.

ಗಾಯದ ಸೋಂಕು ಹೆಚ್ಚಾದ ಕಾರಣ ಅವರು ಮಂಗಳವಾರ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದರು. ತೀವ್ರ ವಾಂತಿ, ಭೇದಿಯಿಂದಲೂ ಅವರು ಬಳಲುತ್ತಿದ್ದರು. ಹೊಟ್ಟೆ ನೋವು ಹಾಗೂ ತೀವ್ರ ಬಳಲಿಕೆಯಿಂದ ಮೃತಪಟ್ಟರು.

ಪ್ರತಿಭಟನೆ: ‘ಡಾ.ರೂಪಶ್ರೀ ಅವರು ಸಿಸೇರಿಯನ್ ನಂತರ ಸರಿಯಾಗಿ ಹೊಲಿಗೆ ಹಾಕಿಲ್ಲ. ಗಾಯದಲ್ಲಿ ಕೀವು ತುಂಬಿಕೊಂಡು ರಕ್ತಸ್ರಾವವಾಗಿತ್ತು. ಸಿಸೇರಿಯನ್ ಮಾಡುವಾಗ ವೈದ್ಯರು ₹4,000 ಲಂಚವನ್ನೂ ಪಡೆದಿದ್ದಾರೆ. ಶಸ್ತ್ರಚಿಕಿತ್ಸೆ ನಂತರ ಹಲವು ಬಾರಿ ಜಿಲ್ಲಾ ಆಸ್ಪತ್ರೆಗೆ ಬಂದರೂ ಸರಿಯಾಗಿ ಚಿಕಿತ್ಸೆ ನೀಡಿಲ್ಲ. ಮಹಿಳೆ ಸಾವಿಗೆ ವೈದ್ಯರೇ ಕಾರಣರಾಗಿದ್ದು ಅವರ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಆರೋಪಿಸಿ ರೋಜಾ ಕುಟುಂಬ ಸದಸ್ಯರು, ಕರವೇ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

‘ಜಿಲ್ಲಾ ಆಸ್ಪತ್ರೆಯಲ್ಲಿ ಆಗಾಗ ಇಂಥ ಪ್ರಕರಣಗಳು ನಡೆಯುತ್ತಿದ್ದರೂ ವೈದ್ಯರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ವೈದ್ಯರು ಲಂಚ ಪಡೆಯುತ್ತಿರುವ ಬಗ್ಗೆ ಹಲವು ಬಾರಿ ದೂರು ಕೊಟ್ಟರೂ ಪ್ರಯೋಜನವಾಗುತ್ತಿಲ್ಲ. ಸರ್ಕಾರ ರೋಜಾ ಅವರ ಸಾವಿನ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಹೆರಿಗೆಯಾಗಿ 42 ದಿನಗಳಾಗಿದ್ದು, ಇದನ್ನು ಬಾಣಂತಿ ಸಾವು ಎಂದು ಪರಿಗಣಿಸಲು ಸಾಧ್ಯವಿಲ್ಲ. ಆದರೂ ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ಸಾವಿನ ಕಾರಣ ತಿಳಿಯಲಿದೆ. ಇಲಾಖೆಗೆ ಎಲ್ಲಾ ರೀತಿಯ ಮಾಹಿತಿ ನೀಡಲಾಗಿದೆ’ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ರವೀಂದ್ರ ತಿಳಿಸಿದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-34/576/2024-25 ದಿನಾಂಕ: 10.12.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : 1) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ (ಐಟಿಐಆರ್) ಬೋರ್‌ವೆಲ್ ಪಾಯಿಂಟ್‌ಗಳಿಗೆ ಸಬ್ಮರ್ಸಿಬಲ್ ಪಂಪ್‌ಸೆಟ್‌ಗಳನ್ನು ಸರಬರಾಜು, ಅಳವಡಿಸುವುದು, ಪರೀಕ್ಷೆ ಮತ್ತು ಕಾರ್ಯಾಚಾರಣೆ ಹಾಗೂ ಬೋರ್‌ವೆಲ್ ನೀರು ಸರಬರಾಜಿಗಾಗಿ ವಿದ್ಯುತ್ ಸರಬರಾಜು ಮಾಡುವ ಕಾಮಗಾರಿ. 2) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶಕ್ಕೆ ಹಾಲಿ ಇರುವ ಕೊಳವೆ ಬಾವಿಯಿಂದ ಜಿ.ಎಲ್.ಎಸ್.ಆರ್ ವರೆಗೆ ನೀರು ಸರಬರಾಜು ಕಲ್ಪಿಸುವ ಕಾಮಗಾರಿ. 3) ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೈ- ಟೆಕ್, ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್ 2ನೇ ಹಂತದಲ್ಲಿ ಪ್ಲಾಟ್ ಸಂಖ್ಯೆ. 26-ಬಿ ಗೆ 24 ಮೀ ಅಗಲದ ರಸ್ತೆ ನಿರ್ಮಾಣ ಹಾಗೂ ಚರಂಡಿ ನಿರ್ಮಾಣ ಮಾಡುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23.12.2024 ಸಂಜೆ 4.30 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು

DIPR/CP/3724/Zen/2024-25

ಮುರುಡೇಶ್ವರ: 3 ಶವ ಪತ್ತೆ 6 ಶಿಕ್ಷಕರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮುರುಡೇಶ್ವರದ ಸಮುದ್ರದಲ್ಲಿ ಮುಳುಗಿ ಕಣ್ಮರೆಯಾಗಿದ್ದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಎಂ.ಕೊತ್ತೂರು ಗ್ರಾಮದ ಮೊರಾರ್ಜಿ ವಸತಿ ಶಾಲೆಯ ಮೂವರು ವಿದ್ಯಾರ್ಥಿಗಳ ಮೃತದೇಹ ಬುಧವಾರ ಪತ್ತೆಯಾಗಿದೆ.

ಒಟ್ಟಾರೆ ನಾಲ್ವರು ವಿದ್ಯಾರ್ಥಿನಿಯರು ಮೃತಪಟ್ಟಿದ್ದಾರೆ. ಶ್ರಾವಂತಿ ಎಂಬ ವಿದ್ಯಾರ್ಥಿನಿಯ ಮೃತದೇಹ ಮಂಗಳವಾರ ಪತ್ತೆಯಾಗಿತ್ತು. ವಿದ್ಯಾರ್ಥಿಗಳ ಸುರಕ್ಷತೆ ಮರೆತ ಆರು ಶಿಕ್ಷಕರ ವಿರುದ್ಧ ಮುರುಡೇಶ್ವರ ಪೊಲೀಸ್ ಠಾಣೆಯಲ್ಲಿ ಪೊಲೀಸರು ಸ್ವಯಂ ದೂರು ದಾಖಲಿಸಿಕೊಂಡಿದ್ದಾರೆ.

ದೀಕ್ಷಾ ಜೆ. (15), ಲಾವಣ್ಯ (15) ಹಾಗೂ ವಂದನಾ (15) ಅವರ ಮೃತದೇಹ ಮುರುಡೇಶ್ವರದ ಸಮುದ್ರದಲ್ಲಿ ಪತ್ತೆಯಾಗಿದೆ. ಕರಾವಳಿ ಕಾವಲು ಪೊಲೀಸ್ ಪಡೆ ಹಾಗೂ ಸ್ಥಳೀಯ ಮೀನುಗಾರರ ಸಹಾಯದಿಂದ ಮೃತದೇಹದ ಪತ್ತೆ ಕಾರ್ಯಾಚರಣೆ ಆರಂಭಿಸಲಾಗಿತ್ತು.

‘ವಸತಿ ಶಾಲೆಯ ಪ್ರಾಂಶುಪಾಲೆ ಶಶಿಕಲಾ (40), ಸಹ ಶಿಕ್ಷಕರಾದ ಸುನೀಲ್ ಆರ್. (33), ಚೌಡಪ್ಪ ಎಸ್. (34), ವಿಶ್ವನಾಥ ಎಸ್. (27), ಶಾರದಮ್ಮ ಸಿ.ಎನ್. (34) ಹಾಗೂ ನರೇಶ ಕೆ. (30) ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮುಳಬಾಗಿಲು ವರದಿ: ಕರ್ತವ್ಯಲೋಪ, ಹಾಗೂ ಬೇಜವಾಬ್ದಾರಿ ಕಾರಣಕ್ಕೆ ಪ್ರಾಂಶುಪಾಲೆ ಮಹರ್ ಶಶಿಕಲಾ ಅವರನ್ನು ಅಮಾನತುಗೊಳಿಸಿದ್ದು, ಐವರು ಅತಿಥಿ ಶಿಕ್ಷಕರು ಮತ್ತು ‘ಡಿ’ ದರ್ಜೆ ಸಿಬ್ಬಂದಿಯನ್ನು ವಜಾಗೊಳಿಸಲಾಗಿದೆ ಎಂದು ಕ್ರೈಸ್ ಕಾರ್ಯನಿರ್ವಾಹಕ ನಿರ್ದೇಶಕ ಕಾಂತರಾಜ್ ತಿಳಿಸಿದ್ದಾರೆ.

₹5 ಲಕ್ಷ ಪರಿಹಾರ: ದುರ್ಘಟನೆಯಲ್ಲಿ ಮಡಿದ ನಾಲ್ವರು ವಿದ್ಯಾರ್ಥಿಗಳ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಕುಂಬ್ಳೆ ಸಂಸ್ಮರಣೆ ಪ್ರಶಸ್ತಿಗೆ ಆಯ್ಕೆ

ಅರುವ ಕೊರಗಪ್ಪ ಶೆಟ್ಟಿ

ಮಂಗಳೂರು: ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಕೀರ್ತಿಶೇಷ ಕುಂಬ್ಳೆ ಸುಂದರ ರಾವ್ ಸಂಸ್ಮರಣ ವೇದಿಕೆ ಜಂಟಿಯಾಗಿ ನೀಡುವ ‘ಕುಂಬ್ಳೆ ಸುಂದರ ರಾವ್ ಸಂಸ್ಮರಣೆ ಪ್ರಶಸ್ತಿ’ಗೆ ಹಿರಿಯ ಯಕ್ಷಗಾನ ಕಲಾವಿದ ಅರುವ ಕೊರಗಪ್ಪ ಶೆಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ನಗರದ ಕೆನರಾ ಪದವಿ ಪೂರ್ವ ಕಾಲೇಜಿನ ತೆರೆದ ಸಭಾಂಗಣದಲ್ಲಿ 14ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ‘ರಂಗ ಸಂಗಾತಿ’ಯ ಅಧ್ಯಕ್ಷ ಗೋಪಾಲಕೃಷ್ಣ ಶೆಟ್ಟಿ ತಿಳಿಸಿದ್ದಾರೆ.

ಕೈಗಾರಿಕೆಗೆ ಕೃಷಿ ಭೂಮಿ ಸಲೀಸು?

ಒಂದನೇ ಪುಟದಿಂದ...

ತಹಶೀಲ್ದಾರ್ ಅಲ್ಲ’ ಎಂದು ಹೇಳಿದೆ. ಹೀಗಾಗಿ, ಸೆಕ್ಷನ್ 104 ಬಗ್ಗೆ ಸ್ಪಷ್ಟತೆ ನೀಡುವ ಉದ್ದೇಶದಿಂದ ಕಾಯ್ದೆ ತಿದ್ದುಪಡಿಗೆ ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ.

ಸೆಕ್ಷನ್ 67ರಲ್ಲಿ ಸ್ವತ್ತಿನ ಹಕ್ಕಿನ ಬಗ್ಗೆ ವಿವರಿಸಲಾಗಿದ್ದು, ಸಾರ್ವಜನಿಕ ರಸ್ತೆಗಳು, ಕೆರೆಗಳು ಹೀಗೆ ಸರ್ಕಾರಕ್ಕೆ ಸೇರಿದ ಜಾಗದ ಮೇಲೆ ಯಾರಾದರು ತಮ್ಮ ಹಕ್ಕು ಪ್ರತಿಪಾದಿಸಿದ್ದರೆ ಜಿಲ್ಲಾಧಿಕಾರಿ ಅಥವಾ ಜಿಲ್ಲಾಧಿಕಾರಿ ದರ್ಜೆಗೆ ಕಡಿಮೆ ಇರದ ದರ್ಜೆಯ ಮೋಜಣಿ ಅಧಿಕಾರಿಯು ತನಿಖೆ ನಡೆಸಿ ತೀರ್ಮಾನ ತೆಗೆದುಕೊಂಡು ಆದೇಶ ಹೊರಡಿಸುವ ಅಧಿಕಾರ ನೀಡಲಾಗಿದೆ. ಆದರೆ, ಸೆಕ್ಷನ್ 104ರಲ್ಲಿ ಸರ್ಕಾರಿ ಜಾಗವನ್ನು ಅನಧಿಕೃತವಾಗಿ ಅಥವಾ ಅಕ್ರಮವಾಗಿ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ ನೋಟಿಸ್ ನೀಡಿ ಮುಟ್ಟುಗೋಲು ಹಾಕಿಕೊಳ್ಳಲು ತಹಶೀಲ್ದಾರ್‌ಗೆ ಅಧಿಕಾರ ನೀಡಲಾಗಿದೆ. ಎರಡೂ ಸೆಕ್ಷನ್‌ಗಳಲ್ಲಿರುವ ಈ ಅಂಶಗಳು ಗೊಂದಲಕ್ಕೆ ಕಾರಣವಾಗಿವೆ.

ಜಿಲ್ಲಾಧಿಕಾರಿಗಳಿಗೆ ಕೆಲಸದ ಹೆಚ್ಚಿನ ಹೊರೆ ಇರುವುದರಿಂದ ಪ್ರತಿಯೊಂದು ಒತ್ತುವರಿ ಪ್ರಕರಣಗಳನ್ನು ಗಮನಿಸಿ, ವಿಚಾರಣೆ ನಡೆಸಿ ಆದೇಶ ನೀಡಲು ಕಷ್ಟ. ಹೀಗಾಗಿ, ಸರ್ಕಾರಿ ಜಾಗ ಒತ್ತುವರಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ತಹಶೀಲ್ದಾರ್‌ಗೆ ವಹಿಸಲು ಈ ಎರಡು ಸೆಕ್ಷನ್‌ಗಳ ತಿದ್ದುಪಡಿಗೆ ಪ್ರಸ್ತಾಪಿಸಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯರಗಟ್ಟಿ

ಸಂಖ್ಯೆ: ಕೃಮಾಇ/ಕೃಉಮಾಸ(ಯ)/ಅಭಿಕೆ/ 668 /2024-25 ದಿನಾಂಕ: 12/12/2024

ಇ-ಟೆಂಡರ ಪ್ರಕಟಣೆ

2024-25ನೇ ಸಾಲಿನಲ್ಲಿ ಯರಗಟ್ಟಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ಈ ಕೆಳಕಾಣಿಸಿದ ಕಾಮಗಾರಿಗೆ ಕೆ.ಪಿ.ಪಿ.ಪಿ ಪೋರ್ಟಲ್‌ನ ಮೂಲಕ ಟೆಂಡರ್‌ನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿ ಹೆಸರು	ಟೆಂಡರಗಿಟ್ಟ ಮೊತ್ತ ಜಿ.ಎಸ್.ಟಿ. ಹೊರತು ಪಡಿಸಿ (ಲಕ್ಷಗಳಲ್ಲಿ)	ಪ್ರಿ-ಬಿಡ್ ದಿನಾಂಕ & ಸಮಯ	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್	ಟೆಂಡರ್ ತೆರೆಯುವ ದಿನಾಂಕ: ಆರ್ಥಿಕ ಬಿಡ್
1	Supplying, Installing, Testing, Commissioning, Stamping as per Technical Specification of Electronic Weigh bridge (80MT Capacity) including all necessary Civil (Foundation, Ramp, Control Room, Approach Road etc.,) AT MMY YARAGATTI of APMC, YARAGATTI.	57.70	24.12.2024 ಬೆಳಿಗ್ಗೆ 11.30 ಗಂಟೆಗೆ	30.12.2024 ಸಂಜೆ 5.30 ಗಂಟೆಗೆ	01.01.2025 ಬೆಳಿಗ್ಗೆ 11.00 ಗಂಟೆಗೆ	10.01.2025 ಸಂಜೆ 4.30 ಗಂಟೆಗೆ

ಇ.ಎಂ.ಡಿ. ಮೊತ್ತ ಹಾಗೂ ಟೆಂಡರ್ ಷರತ್ತು ಹಾಗೂ ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-22501216 /25501227 ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃಉಮಾಸ, ಯರಗಟ್ಟಿ
ಸಹಿ/- ಅಧ್ಯಕ್ಷರು, ಕೃಉಮಾಸ, ಯರಗಟ್ಟಿ

DIP/RO No. 1287

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ - ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ತ್ಯಾಜ್ಯ ನೀರು ನಿರ್ವಹಣೆ-ಪಶ್ಚಿಮ) 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560 009.					
1	(ತ್ಯಾನೀನಿ-ಎಸ್‌ಟಿಪಿ) ವಿ.ವ್ಯಾಲಿ	ಬೆಂಜಮಂ/ಕಾನಿಅ (ತ್ಯಾನೀನಿ-ಎಸ್‌ಟಿಪಿ) ವಿ.ವ್ಯಾಲಿ/ಪಿಬಿ/409/2024-25 ದಿನಾಂಕ 02.12.2024	₹ 56,15,049/- / ₹ 1,13,300/-	27.12.2024 ರ ಸಂಜೆ 5:30 ಗಂಟೆಯವರೆಗೆ	30.12.2024 ರ ಸಂಜೆ 4:00 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ-ಎಸ್‌ಟಿಪಿ) ವಿ.ವ್ಯಾಲಿ					
2	(ತ್ಯಾನೀನಿ-ಎನ್) ವಿ.ವ್ಯಾಲಿ	ಬೆಂಜಮಂ/ಕಾನಿಅ (ತ್ಯಾನೀನಿ-ಎನ್-ವಿ.ವ್ಯಾಲಿ)/ಪಿಬಿ/1034/2024-25 ದಿನಾಂಕ 09.12.2024	₹ 31.22 Lakhs / ₹ 62,500/-	19.12.2024 ರ ಸಂಜೆ 4:00 ಗಂಟೆಯವರೆಗೆ	21.12.2024 ರ ಸಂಜೆ 4:00 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ-ಎನ್) ವಿ.ವ್ಯಾಲಿ					
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ ಮತ್ತು ಗುಣ ಆಶ್ವಾಸನೆ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560 009.					
3	ಡಿಇ & ಪಿಎಸ್	ಬೆಂಜಮಂ/ಇಡಿಇಪಿಎಸ್‌ಟಿಇ/ಸಅ/741/2024-25 ದಿನಾಂಕ: 04.12.2024	₹ 98,71,751/- / ₹ 1,97,500/-	27.12.2024 ರ ಬೆಳಿಗ್ಗೆ 11:00 ಗಂಟೆಯವರೆಗೆ	28.12.2024 ರ ಬೆಳಿಗ್ಗೆ 11:15 ಗಂಟೆಯ ನಂತರ
4	ಡಿಇ & ಪಿಎಸ್	ಬೆಂಜಮಂ/ಇಡಿಇಪಿಎಸ್‌ಟಿಇ/ಸಅ/742/2024-25 ದಿನಾಂಕ: 04.12.2024	₹ 96,62,270/- / ₹ 1,93,300/-	27.12.2024 ರ ಬೆಳಿಗ್ಗೆ 11:00 ಗಂಟೆಯವರೆಗೆ	28.12.2024 ರ ಬೆಳಿಗ್ಗೆ 11:15 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಡಿಇ & ಪಿಎಸ್)					
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560 009.					
5	ಉತ್ತರ ಪಶ್ಚಿಮ-2	ಬೆಂಜಮಂ/ಕಾನಿಅ(ಉಪ-2)/ತಾಂಅ/ಪಿಬಿ/4172/2024-25 ದಿನಾಂಕ: 10.12.2024	₹ 26,11,667/- / ₹ 52,300/-	26.12.2024 ರ ಸಂಜೆ 4:00 ಗಂಟೆಯವರೆಗೆ	27.12.2024 ರ ಸಂಜೆ 4:30 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ ಪಶ್ಚಿಮ-2)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/MIA/3719/2024-25

ಸ್ಪರ್ಧಾ ವಾಣಿ

ಕರ್ನಾಟಕದಲ್ಲಿ ಆರಂಭವಾದ ಬ್ಯಾಂಕುಗಳು

ಗುರುಶಂಕರ್ ಕೆ.ಪಿ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್

- ಸ್ಥಾಪನೆ - ಮೈಸೂರು ನಗರದಲ್ಲಿ ಈ ಬ್ಯಾಂಕನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ ಸಂದರ್ಭದಲ್ಲಿ 1913ರಲ್ಲಿ ಸ್ಥಾಪಿಸಲಾಯಿತು.
- ಮೈಸೂರಿನಲ್ಲಿ ಸ್ಥಾಪನೆಯಾದ ನಂತರ ಬೆಂಗಳೂರಿನಲ್ಲಿ ತನ್ನ ಪ್ರಧಾನ ಕಚೇರಿಯನ್ನು ಪ್ರಾರಂಭಿಸಲಾಯಿತು.
- ಪ್ರಾರಂಭವಾದ ಹಂತದಲ್ಲಿ ಈ ಬ್ಯಾಂಕನ್ನು ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು. 1954 ರಲ್ಲಿ ಈ ಬ್ಯಾಂಕನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಎಂದು ಮರುನಾಮಕರಣ ಮಾಡಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಹವರ್ತಿ ಬ್ಯಾಂಕ್ ಆಗಿ ಸ್ಥಾಪಿಸಲಾಯಿತು.
- ಸರ್ ಎಂ. ವಿಶ್ವೇಶ್ವರಯ್ಯ ಅವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿದ್ದ ಬ್ಯಾಂಕಿಂಗ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್ ಸ್ಥಾಪಿಸಲಾಯಿತು.
- ಏಪ್ರಿಲ್ 1, 2017ರಂದು ಈ ಬ್ಯಾಂಕನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಳಿಸಲಾಯಿತು. ವಿಶೇಷ ಸೂಚನೆ - ಬೆಂಗಳೂರಿನಲ್ಲಿ ಮುಖ್ಯ ಕಚೇರಿಯನ್ನು 1913 ರಲ್ಲಿ ಪ್ರಾರಂಭಿಸಲಾಯಿತು.

ಕರ್ನಾಟಕ ಬ್ಯಾಂಕ್ ಲಿಮಿಟೆಡ್

- ಸ್ಥಾಪನೆ - ಫೆಬ್ರವರಿ 18, 1924.
- ಪ್ರಧಾನ ಕಛೇರಿ - ಮಂಗಳೂರು. ಧ್ಯೇಯವಾಕ್ಯ - ಭಾರತದಾದ್ಯಂತ ನಿಮ್ಮ ಕುಟುಂಬದ ಬ್ಯಾಂಕ್ (Your family bank across India)
- ಕರ್ನಾಟಕ ಬ್ಯಾಂಕ್ ಖಾಸಗಿ ವಲಯದ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದ್ದು ಭಾರತೀಯ ರಿಸರ್ವ್ ಬ್ಯಾಂಕ್ ಇದಕ್ಕೆ ವಾಣಿಜ್ಯ ಬ್ಯಾಂಕ್ ಎನ್ನುವ ಸ್ಥಾನಮಾನವನ್ನು ಕಲ್ಪಿಸಿದೆ. ವಿಶೇಷ ಸೂಚನೆ - ಮಹಿಳಾ ಸಿಬ್ಬಂದಿಗಳನ್ನು ಮಾತ್ರ ಹೊಂದಿರುವ ಕರ್ನಾಟಕ ಬ್ಯಾಂಕಿನ ಮೊದಲ ಶಾಖೆಯನ್ನು ಬೆಂಗಳೂರಿನ ಬಸವನಗುಡಿಯಲ್ಲಿ ಸ್ಥಾಪಿಸಲಾಗಿದೆ.
- ಬ್ಯಾಂಕಿನ ಸಂಸ್ಥಾಪಕರು - ವ್ಯಾಸರಾಯ ಆಚಾರ್ ಮತ್ತು ಕೆ ಸೂರ್ಯನಾರಾಯಣ ಅಡಿಗ.

ವಿಜಯ ಬ್ಯಾಂಕ್

- ಸ್ಥಾಪನೆ - ಅಕ್ಟೋಬರ್ 23, 1931 (ಮಂಗಳೂರಿನಲ್ಲಿ ಸ್ಥಾಪನೆಯಾಯಿತು).
- ಕೇಂದ್ರ ಕಚೇರಿ - ಬೆಂಗಳೂರು.
- ಎಸ್ ಬಿ ಶೆಟ್ಟಿ ಹಾಗೂ ಕೆಲ ಪ್ರಗತಿಪರ ರೈತರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಹವ್ಯಾಸವನ್ನು ಮತ್ತು ಉದ್ಯಮ ಶೀಲತೆಯನ್ನು ರೈತರಲ್ಲಿ ಉತ್ತೇಜಿಸಲು ಮತ್ತು ರೈತರ ಅವಶ್ಯಕತೆಗಳಿಗೆ ಅನುಗುಣವಾಗಿ ಸಾಲದ ಸವಲತ್ತನ್ನು ಕಲ್ಪಿಸುವ ಉದ್ದೇಶದಿಂದ ಈ ಬ್ಯಾಂಕನ್ನು ಸ್ಥಾಪಿಸಿದರು.
- 1980 ಏಪ್ರಿಲ್ 15 ರಂದು ವಿಜಯ ಬ್ಯಾಂಕ್ ರಾಷ್ಟ್ರೀಕರಣವಾಯಿತು.
- ವಿಜಯ ಬ್ಯಾಂಕ್, ಬ್ಯಾಂಕ್ ಆಫ್ ಬರೋಡದೊಂದಿಗೆ ವಿಲೀನವಾಗುವ ಮುನ್ನ ಕೆಲ ಹೆಗ್ಗಳಿಕೆಗಳನ್ನು ಹೊಂದಿದ್ದು, 100 ಡಿಜಿಟಲ್ ಶಾಖೆ, 100 ಡಿಜಿಟಲ್ ಹಳ್ಳಿ ಮತ್ತು 100 ಎಟಿಎಂ ಗಳು ಎನ್ನುವ ಯೋಜನೆಯನ್ನು 2017ರಲ್ಲಿ ಜಾರಿಗೆ ತಂದಿದ್ದು, ಡಿಜಿಟಲೀಕರಣ ಪ್ರಕ್ರಿಯೆಯನ್ನು 2017 ರಲ್ಲಿಯೇ ಪ್ರಾರಂಭಿಸಿತು. ಇದರೊಂದಿಗೆ ವಿಜಯ ಬ್ಯಾಂಕಿನ ಉತ್ತೇಜನದಿಂದ ಮಂಡ್ಯ ಜಿಲ್ಲೆಯ ಚಾಂದ್ಗಲ್ಲು ಗ್ರಾಮವನ್ನು ಕರ್ನಾಟಕದ ಮೊದಲ ಡಿಜಿಟಲ್ ಗ್ರಾಮವಾಗಿ 2017ರಲ್ಲಿ ಉದ್ಘಾಟಿಸಲಾಯಿತು.
- ಏಪ್ರಿಲ್ 1, 2019 ರಂದು ವಿಜಯ ಬ್ಯಾಂಕ್ ಅನ್ನು ಬ್ಯಾಂಕ್ ಆಫ್ ಬರೋಡದೊಂದಿಗೆ ವಿಲೀನಗೊಳಿಸಲಾಯಿತು.

ಸಿಂಡಿಕೇಟ್ ಬ್ಯಾಂಕ್

- 1925ರಲ್ಲಿ, ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಎನ್ನುವ ಹೆಸರಿನಲ್ಲಿ ಈ ಬ್ಯಾಂಕನ್ನು ಉಡುಪಿಯಲ್ಲಿ ಸ್ಥಾಪಿಸಲಾಯಿತು.
- ಸಂಸ್ಥಾಪಕರು - ಉಪೇಂದ್ರ ಅನಂತ ಪೈ, ವಾಮನ್ ಶ್ರೀನಿವಾಸ್ ಕೊಡವ ಮತ್ತು ಡಾ. ಟಿ. ಎಮ್. ಎ. ಪೈ.
- ಕೇಂದ್ರ ಕಚೇರಿ - ಮಣಿಪಾಲ
- ಜುಲೈ 19, 1969 ರಲ್ಲಿ ಸಿಂಡಿಕೇಟ್ ಬ್ಯಾಂಕ್ ಅನ್ನು ರಾಷ್ಟ್ರೀಕರಣಗೊಳಿಸಲಾಯಿತು.
- ಬ್ಯಾಂಕಿನ ವಿಶೇಷತೆಗಳು: ಭಾರತದಲ್ಲಿ ಪಿಗ್ಮಿ ಸ್ಕೀಮ್ ಅನ್ನು ಜಾರಿಗೆ ತಂದ ಮೊದಲ ಬ್ಯಾಂಕ್ ಎನ್ನುವ ಹೆಗ್ಗಳಿಕೆ.
- 1975 ರಲ್ಲಿ ಉತ್ತರ ಪ್ರದೇಶದ ಔರಂಗಬಾದ್ ಜಿಲ್ಲೆಯಲ್ಲಿ ಭಾರತದ ಮೊದಲ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗೆ ಪ್ರಾಯೋಜಕತ್ವವನ್ನು ನೀಡಿ ಸ್ಥಾಪಿಸಲಾಯಿತು. 2020 ಏಪ್ರಿಲ್ 1 ರಂದು ಸಿಂಡಿಕೇಟ್ ಬ್ಯಾಂಕ್ ಅನ್ನು ಕೆನರಾ ಬ್ಯಾಂಕ್‌ನ ಅಡಿಯಲ್ಲಿ ವಿಲೀನಗೊಳಿಸಲಾಗಿದೆ.

ಕೆನರಾ ಬ್ಯಾಂಕ್

- ಸ್ಥಾಪನೆಯಾದ ವರ್ಷ - 1906.
- ಹಿಂದೂ ಶಾಶ್ವತ ನಿಧಿ ಎನ್ನುವ ಹೆಸರಿನಲ್ಲಿ ಈ ಬ್ಯಾಂಕನ್ನು ಮಂಗಳೂರಿನಲ್ಲಿ ಸ್ಥಾಪಿಸಲಾಯಿತು.
- ಸಂಸ್ಥಾಪಕರು – ಎ. ಸುಬ್ಬರಾವ್ ಪೈ.
- 1910 ರಲ್ಲಿ ಕೆನರಾ ಬ್ಯಾಂಕ್ ಲಿಮಿಟೆಡ್ ಎಂದು ಮರುನಾಮಕರಣ.
- ಜುಲೈ 19, 1969 ರಂದು ಕೆನರಾ ಬ್ಯಾಂಕ್ ಎಂದು ಮರುನಾಮಕರಣವಾಗಿ ರಾಷ್ಟ್ರೀಕರಣವಾಯಿತು.

ಕಾರ್ಪೋರೇಷನ್ ಬ್ಯಾಂಕ್

- ಸ್ಥಾಪನೆಯ ವರ್ಷ- 1906.
- ಈ ಬ್ಯಾಂಕನ್ನು ಉಡುಪಿಯಲ್ಲಿ ಸ್ಥಾಪಿಸಲಾಯಿತು.
- ಕೇಂದ್ರ ಕಚೇರಿ - ಮಂಗಳೂರು.
- ಏಪ್ರಿಲ್ 15, 1980ರಂದು ಈ ಬ್ಯಾಂಕನ್ನು ರಾಷ್ಟ್ರೀಕರಣಗೊಳಿಸಲಾಯಿತು.
- ಏಪ್ರಿಲ್ 1, 2020 ರಲ್ಲಿ ಈ ಬ್ಯಾಂಕನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಅಡಿಯಲ್ಲಿ ವಿಲೀನಗೊಳಿಸಲಾಗಿದೆ.

ವೈಶ್ಯ ಬ್ಯಾಂಕ್

- ಸ್ಥಾಪನೆಯ ವರ್ಷ - 1930.
- ಸ್ಥಾಪನೆಯಾದ ಸ್ಥಳ - ಬೆಂಗಳೂರು.
- ಕೇಂದ್ರ ಕಚೇರಿ - ಬೆಂಗಳೂರು. 2002 ರಿಂದ ವೈಶ್ಯ ಬ್ಯಾಂಕ್ ಐ ಎನ್ ಜಿ ಸಂಸ್ಥೆಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಇದರ ಹೆಸರನ್ನು ಐ ಎನ್ ಜಿ ವೈಶ್ಯ ಬ್ಯಾಂಕ್ ಎಂದು ಮರುನಾಮಕರಣ ಮಾಡಲಾಗಿದೆ.
- ಕರ್ನಾಟಕದಲ್ಲಿ ಪ್ರಾರಂಭವಾದ ಬಹುತೇಕ ಬ್ಯಾಂಕುಗಳು ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಮತ್ತು ಮಂಗಳೂರಿನಲ್ಲಿ ಸ್ಥಾಪನೆಯಾದ ಕಾರಣದಿಂದ ಮಂಗಳೂರು ಜಿಲ್ಲೆಯನ್ನು 'ಭಾರತದ ಬ್ಯಾಂಕಿಂಗ್ ತೊಟ್ಟಿಲು' (The cradle of India) ಎಂದು ಕರೆಯಲಾಗುತ್ತದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ರಾಣಿ ದುರ್ಗಾವತಿ ಅವರ ಕೆಳಗಿನ ಯಾವ ಸಾಮ್ರಾಜ್ಯದ ಆಳ್ವಿಕೆಯನ್ನು ನಡೆಸುತ್ತಿದ್ದರು?
ಎ. ಗುಪ್ತ ಸಾಮ್ರಾಜ್ಯ. ಬಿ. ಚೋಳ ಸಾಮ್ರಾಜ್ಯ.
ಸಿ. ಚೇರ ಸಾಮ್ರಾಜ್ಯ. ಡಿ. ಗಾಂಡ್ವನ ಸಾಮ್ರಾಜ್ಯ.
ಉತ್ತರ : ಡಿ

2. ಕೆಳಗಿನ ಯಾವ ವಿಚಾರಗಳಲ್ಲಿ ಅಮೆರಿಕ ಭಾರತಕ್ಕೆ ವಿಶೇಷ ವಿನಾಯತಿಗಳನ್ನು ಕಲ್ಪಿಸಿದೆ?
1. ಪರಮಾಣು ಪ್ರಸರಣ ರಹಿತ ಒಪ್ಪಂದಕ್ಕೆ ಒತ್ತಡವನ್ನು ಹೇರಿರುವುದಿಲ್ಲ.
2. ಸಮಗ್ರ ಪರಮಾಣು ಪರೀಕ್ಷೆ ನಿಷೇಧ ಒಪ್ಪಂದಕ್ಕೂ ಕೂಡ ಯಾವುದೇ ಒತ್ತಡವನ್ನು ಹೇರಿರುವುದಿಲ್ಲ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಡಿ

3. ಕೆಳಗಿನ ಯಾವ ಒಪ್ಪಂದದ ಅನ್ವಯ ಭಾರತ-ಅಮೆರಿಕ ಅಣ್ವಸ್ತ್ರ ಒಪ್ಪಂದ ಜಾರಿಗೆ ಬಂದಿತು?
ಎ. 1 2 3 ಒಪ್ಪಂದ. ಬಿ. 1 3 2 ಒಪ್ಪಂದ.
ಸಿ. 1 1 2 ಒಪ್ಪಂದ. ಡಿ. 2 3 4 ಒಪ್ಪಂದ.
ಉತ್ತರ : ಎ

4. ಗ್ರಾಮೋದ್ಯೋಗ ವಿಕಾಸ ಯೋಜನೆ ಕೆಳಗಿನ ಯಾವ ವಲಯಗಳಿಗೆ ಬೆಂಬಲವನ್ನು ಸೂಚಿಸುತ್ತಿದೆ?
1. ಕೈಯಿಂದ ತಯಾರಾಗಿರುವ ಕಾಗದದ ಗ್ರಾಮ ಕೈಗಾರಿಕೆಗಳು.
2. ಚರ್ಮದ ಉದ್ದಿಮೆಯಲ್ಲಿ ತೊಡಗಿಕೊಂಡಿರುವ ಗ್ರಾಮ ಕೈಗಾರಿಕೆಗಳು.
3. ಕೃಷಿ ಉತ್ಪನ್ನ ಆಧಾರಿತ ಗ್ರಾಮ ಕೈಗಾರಿಕೆಗಳು.
4. ಆಹಾರ ಸಂಸ್ಕರಣಾ ವಲಯದಲ್ಲಿ ತೊಡಗಿಕೊಂಡಿರುವ ಗ್ರಾಮ ಕೈಗಾರಿಕೆಗಳು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2, 3 ಮತ್ತು 4
ಸಿ. 2 ಮತ್ತು 4 ಡಿ. 3 ಮತ್ತು 4
ಉತ್ತರ : ಬಿ

5. ಇತ್ತೀಚೆಗೆ ಕೇಂದ್ರದ ಯಾವ ಸಚಿವಾಲಯ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಗ್ನಿಶಾಮಕ ಸೇವೆಗಳ ಆಧುನಿಕರಣಕ್ಕೆ ಮುಂದಾಗಿದೆ?
ಎ. ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ.
ಬಿ. ಕೇಂದ್ರ ಸಂಪುಟ ಕಾರ್ಯಾಲಯ.
ಸಿ. ಪ್ರಧಾನ ಮಂತ್ರಿ ಕಾರ್ಯಾಲಯ.
ಬಿ. ಕೇಂದ್ರ ಬಂಧೀಖಾನೆ ಸಚಿವಾಲಯ.
ಉತ್ತರ : ಎ

6. ಕಾಕತೀಯ ಯೋಜನೆಯನ್ನು ಕೆಳಗಿನ ಯಾವ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ?
ಎ. ಒಡಿಶಾ. ಬಿ. ಆಂಧ್ರಪ್ರದೇಶ.
ಸಿ. ತೆಲಂಗಾಣ. ಡಿ. ತಮಿಳುನಾಡು.
ಉತ್ತರ : ಸಿ

7. ಕೆಳಗಿನ ಯಾವ ರಾಜ್ಯಗಳು ಮೊಟ್ಟಮೊದಲ ಜಲಸಂಪನ್ಮೂಲಗಳ ಮುಂಗಡಪತ್ರವನ್ನು ಜಾರಿಗೆ ತಂದಿರುವ ಕೀರ್ತಿಯನ್ನು ಹೊಂದಿದೆ?
ಎ. ಕೇರಳ. ಬಿ. ಉತ್ತರ ಪ್ರದೇಶ.
ಸಿ. ಮಧ್ಯಪ್ರದೇಶ. ಡಿ. ರಾಜಸ್ಥಾನ್.
ಉತ್ತರ : ಎ

8. ಕೆಳಗಿನ ಯಾವ ಸ್ಥಳಗಳನ್ನು ಮಾನವ ವಸಾಹತುಗಳಿಂದ ಸಂಪೂರ್ಣವಾಗಿ ಮುಕ್ತಗೊಳಿಸಲಾಗಿದೆ?
1. ದೆಬ್ರಿ ಘರ್ ವನ್ಯಜೀವಿಧಾಮ.
2. ಚಿಲ್ಕಾ ಸರೋವರ.
3. ನಾಗರ ಹೊಳೆ ಅಭಯಾರಣ್ಯ.
4. ಮುಳ್ಳಯ್ಯನಗಿರಿ ಬೆಟ್ಟಗಳು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ.1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು2 ಡಿ. 2 ಮತ್ತು3
ಉತ್ತರ : ಸಿ

9. ಭಾರತೀಯ ಪ್ರಾಕೃತಿಕ ಕೃಷಿ ಪದ್ಧತಿ ಯೋಜನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಭಾರತೀಯ ಪ್ರಾಕೃತಿಕ ಕೃಷಿ ಪದ್ಧತಿ, ಪರಂಪರಾಗತ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.
2.ಯೋಜನೆಯನ್ನು ಆರು ವರ್ಷಗಳ ಅವಧಿಗೆ ಅನುಷ್ಠಾನಗೊಳಿಸಲಾಗುತ್ತದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಸಿ

10. ಸಹಿ ಫಸಲ್ ಅಭಿಯಾನವನ್ನು ಕೆಳಗಿನ ಯಾವ ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ?
ಎ. ಜಲ ಸಂಪನ್ಮೂಲಗಳ ಕೊರತೆ ಇರುವ ಸ್ಥಳಗಳು.
ಬಿ. ನೀರಾವರಿ ಸವಲತ್ತುಗಳನ್ನು ಹೊಂದಿರುವ ಪ್ರದೇಶಗಳು.
ಸಿ. ಅರಣ್ಯ ಪ್ರದೇಶಗಳು.
ಡಿ. ಮರುಭೂಮಿಕರಣ ಹೆಚ್ಚಾಗುತ್ತಿರುವ ಪ್ರದೇಶಗಳು.
ಉತ್ತರ : ಎ

11. ಭಾರತೀಯ ಆಹಾರ ನಿಗಮವನ್ನು ಕೆಳಗಿನ ಯಾವ ಕಾಯ್ದೆಗಳಿಗೆ ಅನುಗುಣವಾಗಿ ಸ್ಥಾಪಿಸಲಾಯಿತು?
ಎ. ಭಾರತೀಯ ಆಹಾರ ನಿಗಮ ಕಾಯ್ದೆ-1965.
ಬಿ. ಭಾರತೀಯ ಆಹಾರ ನಿಗಮ ಕಾಯ್ದೆ-1970.
ಸಿ. ಭಾರತೀಯ ಆಹಾರ ನಿಗಮ ಕಾಯ್ದೆ-1975.
ಡಿ. ಭಾರತೀಯ ಆಹಾರ ನಿಗಮ ಮತ್ತು ಪೂರೈಕೆ ಕಾಯ್ದೆ-1990.
ಉತ್ತರ : ಎ

12. ಆಹಾರ ಧಾನ್ಯಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದರಿಂದ ಕೆಳಗಿನ ಯಾವ ಉಪಯುಕ್ತತೆಗಳು ಉಂಟಾಗುತ್ತದೆ?
1. ಆಹಾರ ಧಾನ್ಯಗಳ ಸೂಕ್ತ ಸದ್ಬಳಕೆ.
2. ಸರ್ಕಾರಕ್ಕೆ ಆದಾಯದ ಉತ್ಪತ್ತಿ.
3. ಆಹಾರ ಧಾನ್ಯಗಳ ದರಗಳ ಸ್ಥಿರತೆಯನ್ನು ಕಾಯ್ದುಕೊಳ್ಳಲು.
4. ಆಹಾರ ಭದ್ರತೆಯನ್ನು ಕಾಪಾಡುವ ನಿಟ್ಟನಲ್ಲಿ ಅನುಕೂಲಕರವಾಗಿರುತ್ತದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ.1 ಮಾತ್ರ ಬಿ. 2 ಮಾತ್ರ
ಸಿ. 1, 2, 3 ಮತ್ತು 4 ಡಿ. 3 ಮತ್ತು 4
ಉತ್ತರ : ಸಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Prose The Concert

Read the lesson carefully and represent the events/incidents in the flow chart. You may have as many boxes in between as you think appropriate.

Smita reads the newspaper
↓
↓
↓
↓
↓
↓
↓
Pandit Ravi Shankar and Ustad Allah Rakha performed for the boy

Ans:-

Smita reads the newspaper
↓
The boy said that they mustn't miss the chance.
↓
Mother console her son and said to lie down
↓
Smita stood at the window, looking at the traffic.
↓
Smita was walking in the park
↓
Smita was sitting beside her father in the gallery.
↓
A large moustachioed man made boring speech.
↓
Smitha was standing before PRS and UAR
↓
Pandit Ravishankar and Ustad Allah Rakha performed for the boy

****

Poem -5 Jazz Poem Two

1. Read the first stanza and see how closely the description of the Jazz – the player is made and filled in the columns in the table

Ans:

1. Face :- Wrinkled old face, full of worries, rough unshaven face
2. Eyes :- Closed Eyes, Still down eyes
3. Ears:- Still closed ears
4. Shirt:- a faded-blue old shirt, turn dark with sweat.
5. Collar:- Frayed Collar
6. Jacket:- Worn out, old Jacket
7. Shoes run:-down shoes had paper in them

2) Why do you think the Jazz player keeps his head down? [Line 1-6]
Ans: Jazz player was very old and he had no interest in life. He was alone and had pain in his heart. So he kept his head down.

3) The word 'old' has been repeated several times in the first two stanzas. What does this suggest?
Ans: The word old suggests belonging to the past. Jazz player was aged and the things are worn out or outdated.

4) What description do the lines from 13 to 18 suggest about the jazz, player?
Ans: Jazz player had lost his interest in the Jazz player had lost his interest in life. He didn't care to wear the tom dress. He had more pain that could be seen in each wrinkle of his face. He was alone.

5) a) Read the lines from 19 to 25 carefully. Is there any change in the stature of the Jazz player?
b) Now read the lines from 31 to 35. Can you guess what he is meditating on?
Ans:(a) Yes, we found some changes in Jazz player. He put his still down and eyes still closed but ears brighter up. He was started to play some religious musical notes in a low voice.
b) He was meditating that he wanted to tell that he was a Black Man to all the world..

6) How has he held his instrument?
Ans: His instrument saxophone was hung from his neck by a wire coat hanger.

7) Read the lines from 29 to 41. It gives a picture. Can you imagine that? Try to get that picture in your mind. If you can, draw the picture.
Ans: Lines 29-41 create the picture of the man playing his instrument. The minute he puts his musical instrument to his mouth, he undergoes a transformation. As he preaches his Black Gospel of Jazz through his music, he changes from being a black man to a bird, soaring high in the sky. This transformation is symbolic of the liberating spirit of music. It also shows that music has no divisive boundaries.

8) 'Preaching it with words' (line 35). What does 'it' stand for here?
Ans: 'it' stands for the Black Gospel of Jazz.

9) 'He is no longer a man', says the poet (line 37). Who else is he supposed to be if he is no longer man?
Ans: The poet said that if he is no longer a man, he became a bird.

10) Read the last ten words of the poem. You may observe a change in the tone. What is that about?
Ans: The tone in the last ten words is of despondence (loss of hope). The speaker says that the Jazz player, who transformed himself into a bird with the power of music, may once again *(Contd….)*

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

Coordination Compound

25. Explain the violet colour of the complex $[Ti(H_2O)_6]^{3+}$ on the basis of crystal field theory
Ans: The stability of a coordination compound in a solution is the degree/level of association among the species involved in a state of equilibrium. Stability can also be written quantitatively in terms of formation constant or stability constant.
$M+3L \Leftrightarrow L_3$
Stability constant , β =

$$\frac{[ML_3]}{[M][L]^3}$$

The greater the value of β, the stronger the metal-ligand bond is
Factors responsible for the stability of a complex:
(1) Charge on the central metal ion – the bigger the charge, the more stable the complex is.
(2) Nature of ligand – chelating ligand produces a more stable complex.
(3) The basic strength of ligand – the more basic a ligand, the more stable its complex.

26. What is meant by the chelate effect? Give an example.
Ans: When a polydentate or a bidentate ligand fastens itself to a metal ion in such a way that it assumes the shape of a ring, the metal-ligand bond becomes more stable. These rings are called chelate rings.
From here, we can infer that complexes with chelate rings are more stable than complexes without the rings. This phenomenon is termed the chelate effect.
$Ni^{2+}(aq)+6NH_3 \leftrightarrow [Ni(NH_3)_6]^{2+}(aq)$
$\log\beta = 7.99$
$Ni^{2+}(aq) + 3en(aq) \leftrightarrow [Ni(en)_3]^{2+}(aq)$
$\log\beta = 18.1$ (more stable)



27. Discuss briefly giving an example in each case of the role of coordination compounds in: (i) biological systems, (ii) medicinal chemistry, (iii) analytical chemistry and (iv) extraction /metallurgy of metals.
Ans: (i) **Role in biological systems:** In the body of animals, there are several very important coordination compounds. For example, haemoglobin is a coordination compound of iron. In plants, chlorophyll pigment is a coordination compound of magnesium.
(ii) Role in medicinal chemistry: So many coordinate compounds are used for curing purposes. For example, a coordination compound of platinum, cis-platin, is used to check the growth of tumours.
(iii) Role in analytical chemistry: Determination of the hardness of the water.
(iv) Role in metallurgy or extraction: During metal extraction from ores, complexes are formed. For example, gold combines with cyanide ions in an aqueous solution. Gold is then extracted from this complex using zinc.

28. How many ions are produced from the complex $Co(NH_3)_6Cl_2$ in the solution?
(i) 6 (ii) 4
(iii) 3 (iv) 2
Ans: (iii) 3
Expln:-
The given complex $[Co(NH_3)_6]Cl_2$ ionises to give **three ions**, viz one $[Co(NH_3)_6]^+$ and two Cl^- ions.

29.Which of the following ions has the highest magnetic moment value?
(i) $[Cr(H_2O)_6]^{3+}$ (ii) $[Fe(H_2O)_6]^{2+}$
(iii) $[Zn(H_2O)_6]^{2+}$
Ans: (i) $[Cr(H_2O)_6]^{3+}$
number of unpaired electrons, n = 3
Magnetic moment, μ =
$\sqrt{3(3+2)}$
$\sqrt{3(3+2)}$
=
$\sqrt{15}$
≈ 4BM
(ii) $[Fe(H_2O)_6]^{2+}$
number of unpaired electrons, n = 4
Magnetic moment, μ =
$\sqrt{4(4+2)}$
$\sqrt{4(4+2)}$
=
$\sqrt{24}$
≈ 5 BM
(iii) $[Zn(H_2O)_6]^2$
n = 0
Thus,$[Fe(H_2O)_6]^{2+}$ has the highest magnetic moment value.

30. What is the oxidation number of cobalt in $K[Co(CO)_4]$?
Ans: $K[Co(CO)_4] = K^+[Co(CO)_4]^-$
We know,
=> x + 0 = – 1 [Where x is the oxidation number.]
x = -1

31. Amongst the following, the most stable complex is (i) $[Fe(H_2O)_6]^{3+}$ (ii) $[Fe(NH_3)_6]^{3+}$ (iii) $[Fe(C_2O_4)_3]^{3-}$ (iv) $[FeCl_6]^{3-}$
Ans: In all the cases, Fe has an oxidation state of +3. $(C_2O_4)_3$ is a bidentate chelating ligand, and it forms chelating rings. Thus, (iii) is the most stable complex.

32. What will be the correct order for the wavelengths of absorption in the visible region for the following:
$[Ni(NO_2)_6]^{4-}$, $[Ni(NH_3)_6]^{2+}$, $[Ni(H_2O)_6]^{2+}$?
Ans: All of the complexes have the same metal ion, so the energy absorption depends upon the CFSE values of the ligands. *(Contd)*

ರೈಲ್ವೆ ಕಾಯ್ದೆ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಅಂಗೀಕಾರ

ನವದೆಹಲಿ (ಪಿಟಿಐ): ರೈಲ್ವೆಯ ಖಾಸಗೀಕರಣಕ್ಕೆ ಅವಕಾಶ ನೀಡಬಾರದು ಎಂದು ಸರ್ಕಾರವನ್ನು ಒತ್ತಾಯಿಸಿದ ಬಳಿಕ ಲೋಕಸಭೆಯು ರೈಲ್ವೆ ಕಾನೂನುಗಳ ತಿದ್ದುಪಡಿ ಮಸೂದೆಗೆ ಬುಧವಾರ ಅಂಗೀಕಾರ ನೀಡಿತು.

ರೈಲ್ವೆ ತಿದ್ದುಪಡಿ ಮಸೂದೆ ಮೇಲಿನ ಚರ್ಚೆಗೆ ಪ್ರತಿಕ್ರಿಯಿಸಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು, ತಿದ್ದುಪಡಿಯಿಂದ ರೈಲ್ವೆಯನ್ನು ಖಾಸಗೀಕರಿಸಲಾಗುತ್ತದೆ ಎಂಬುದು ನಕಲಿ ನಿರೂಪಣೆಯಾಗಿದೆ ಎಂದು ಹೇಳಿದರು.

ಸಂವಿಧಾನದ ಬಗ್ಗೆ ವಿರೋಧ ಪಕ್ಷದವರ ನಕಲಿ ನಿರೂಪಣೆಯು ವಿಫಲವಾಗಿದೆ. ಈಗ ಇದು ಸಹ ವಿಫಲವಾಗಲಿದೆ ಎಂದು ಅವರು ತಿಳಿಸಿದರು.

ರೈಲ್ವೆ (ತಿದ್ದುಪಡಿ) ಮಸೂದೆ– 2024, ರೈಲ್ವೆ ಮಂಡಳಿಯ ಕಾರ್ಯ ನಿರ್ವಹಣೆ ಮತ್ತು ಸ್ವಾತಂತ್ರ್ಯವನ್ನು ಹೆಚ್ಚಿಸುತ್ತದೆ. ಈ ಮಸೂದೆಯನ್ನು ಕಳೆದ ಅಧಿವೇಶನದಲ್ಲಿ ಮಂಡಿಸಲಾಗಿತ್ತು. ಅದು ಧ್ವನಿ ಮತದ ಮೂಲಕ ಬುಧವಾರ ಅಂಗೀಕಾರವಾಯಿತು.

ವೇಟಿಂಗ್ ಲಿಸ್ಟ್‌ನ ಟಿಕೆಟ್ ರದ್ದಾದರೂ 'ಕ್ಲರ್ಕೇಜ್' ಶುಲ್ಕ

ನವದೆಹಲಿ (ಪಿಟಿಐ): ವೇಟಿಂಗ್ ಲಿಸ್ಟ್‌ನಲ್ಲಿರುವ ಟಿಕೆಟ್‌ಗಳನ್ನು ರದ್ದುಪಡಿಸಿದಾಗ ವಿಧಿಸುವ 'ಕ್ಲರ್ಕೇಜ್ ಶುಲ್ಕ' ಸೇರಿದಂತೆ ಇತರ ಮೂಲಗಳಿಂದ ಬರುವ ಆದಾಯವನ್ನು ಕಾರ್ಯನಿರ್ವಹಣೆ ಕುರಿತ ಕೆಲಸದ ವೆಚ್ಚಗಳಿಗೆ ಬಳಸಲಾಗುತ್ತದೆ ಎಂದು ರೈಲ್ವೆ ಸಚಿವಾಲಯ ಲೋಕಸಭೆಗೆ ತಿಳಿಸಿದೆ.

ರೈಲು ಪ್ರಯಾಣಿಕರ (ಟಿಕೆಟ್‌ಗಳ ರದ್ದತಿ ಮತ್ತು ಶುಲ್ಕ ಮರು ಪಾವತಿ) ನಿಯಮಗಳು– 2015ರ ಪ್ರಕಾರ ಐಆರ್‌ಟಿಸಿ ವೆಬ್‌ಸೈಟ್ ಮೂಲಕ ರದ್ದಾದ ಟಿಕೆಟ್‌ಗಳೂ ಸೇರಿದಂತೆ ಎಲ್ಲ ವೇಟಿಂಗ್ ಲಿಸ್ಟ್‌ನಲ್ಲಿರುವ ಟಿಕೆಟ್‌ಗಳ ರದ್ದತಿಗೆ 'ಕ್ಲರ್ಕೇಜ್ ಶುಲ್ಕ' ವಿಧಿಸಲಾಗುತ್ತದೆ ಎಂದು ರೈಲ್ವೆ ಸಚಿವರು ತಿಳಿಸಿದ್ದಾರೆ.

ಎಸ್‌ಪಿ ಸಂಸದ ಇಕ್ರಾ ಚೌಧರಿ ಅವರ ಪ್ರಶ್ನೆಗೆ ಅವರು ಉತ್ತರ ನೀಡಿದ್ದಾರೆ.

'ವೇಟಿಂಗ್ ಲಿಸ್ಟ್‌ನಲ್ಲಿರುವ ಟಿಕೆಟ್‌ಗಳನ್ನು ಸೀಟುಗಳ ಕೊರತೆ ಕಾರಣದಿಂದ ರೈಲ್ವೆಯೇ ರದ್ದುಗೊಳಿಸಿದ್ದರೂ ಶುಲ್ಕ ವಿಧಿಸಲಾಗುತ್ತಿದೆ. ಅದನ್ನು ಮನ್ನಾ ಮಾಡಲು ಸರ್ಕಾರ ಯೋಜಿಸಿದೆಯೇ' ಎಂದು ಸಂಸದ ಇಕ್ರಾ ಪ್ರಶ್ನಿಸಿದ್ದರು.

ರೈಲ್ವೆಯೇ ಪ್ರಯಾಣಿಕರು ಅಪ್‌ಗ್ರೇಡೇಷನ್ ಯೋಜನೆಯಡಿ ಅಪ್‌ಗ್ರೇಡ್ ಮಾಡಿಕೊಳ್ಳಲು ಅಥವಾ 'ವಿಕಲ್ಪ್' ಯೋಜನೆಯಡಿ ಪರ್ಯಾಯ ರೈಲಿಗೆ ವರ್ಗಾಯಿಸಿಕೊಳ್ಳುವ ಆಯ್ಕೆ ಹೊಂದಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ಕ್ಷಮೆ ಯಾಚಿಸಿದರೂ ತಣ್ಣಗಾಗದ ವಿವಾದ; ಆಡಳಿತ– ವಿರೋಧ ಪಕ್ಷಗಳ ಸದಸ್ಯರ ನಡುವೆ ಮಾತಿನ ಸಮರ

ಬ್ಯಾನರ್ಜಿ ಮಾತಿಗೆ ಲೋಕಸಭೆ ಕಲಾಪ ಬಲಿ

ಕೇಂದ್ರ ಸಚಿವರಾದ ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ನಿತ್ಯಾನಂದ ರಾಯ್ ಅವರು ಟಿಎಂಸಿ ಸದಸ್ಯ ಕಲ್ಯಾಣ್ ಬ್ಯಾನರ್ಜಿ ಮಾತಿಗೆ ಲೋಕಸಭೆಯಲ್ಲಿ ಬುಧವಾರ ಆಕ್ಷೇಪ ವ್ಯಕ್ತಪಡಿಸಿದರು ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಟಿಎಂಸಿ ಸದಸ್ಯ ಕಲ್ಯಾಣ್ ಬ್ಯಾನರ್ಜಿ ಅವರು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ಉದ್ದೇಶಿಸಿ ಆಡಿದ ಮಾತು ಲೋಕಸಭೆಯಲ್ಲಿ ಗಲಾಟೆ ಸೃಷ್ಟಿಸಿತು. ಇದರಿಂದಾಗಿ ಬುಧವಾರ ಸದನದ ಕಲಾಪವನ್ನು ಮತ್ತೆ ಮತ್ತೆ ಮುಂದೂಡಲಾಯಿತು. ಬ್ಯಾನರ್ಜಿ ಅವರು ತಮ್ಮ ಮಾತಿಗೆ ಕ್ಷಮೆ ಯಾಚಿಸಿದರೂ, ವಿವಾದ ಮಾತ್ರ ತಣ್ಣಗಾಗಲಿಲ್ಲ. ಹೀಗಾಗಿ ಕಲಾಪವನ್ನು ದಿನದಮಟ್ಟಿಗೆ ಮುಂದೂಡಲಾಯಿತು.

ವಿಪತ್ತು ನಿರ್ವಹಣಾ ಕಾಯ್ದೆಯ ತಿದ್ದುಪಡಿ ಕುರಿತ ಚರ್ಚೆಯಲ್ಲಿ ಭಾಗವಹಿಸಿದ ಬ್ಯಾನರ್ಜಿ ಅವರು ಆಡಿದ ಮಾತೊಂದು ಸಮಸ್ಯೆಗೆ ಮೂಲವಾಯಿತು. ಕೋವಿಡ್–19 ಸಾಂಕ್ರಾಮಿಕದ ಅವಧಿಯಲ್ಲಿ ಕೇಂದ್ರ ಸರ್ಕಾರವು ಅಸಹಕಾರ ತೋರಿತ್ತು ಎಂದು ಬ್ಯಾನರ್ಜಿ ದೂರಿದರು.

ಆದರೆ, ಎಲ್ಲ ರಾಜ್ಯಗಳಿಗೂ ನೆರವು ನೀಡಿದ್ದು ಹಾಗೂ ಸಾಂಕ್ರಾಮಿಕವನ್ನು ಯಶಸ್ವಿಯಾಗಿ ನಿಭಾಯಿಸಿದ್ದು ಪ್ರಧಾನಿ ನರೇಂದ್ರ ಮೋದಿ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ತಿರುಗೇಟು ನೀಡಿದರು. ರಾಯ್ ಅವರಿಗೆ ಬೆಂಬಲವಾಗಿ ಬಂದ ಸಿಂಧಿಯಾ, ಸಾಂಕ್ರಾಮಿಕದ ಸಂದರ್ಭದಲ್ಲಿ ನೆರವಿನ ಅಗತ್ಯವಿದ್ದ ಎಲ್ಲ ದೇಶಗಳಿಗೆ ಭಾರತವು ಸಹಾಯ ಮಾಡಿ, ವಿಶ್ವಬಂಧು ಎಂದು ಕರೆಸಿಕೊಂಡಿತು ಎಂದರು.

> **ಕಾಂಗ್ರೆಸ್, ಬಿಜೆಪಿ ಕಲಾಪ ಮುಂದೂಡುವಂತೆ ಮಾಡುತ್ತವೆ. ಹೀಗಾಗಿ ಬೇರೆ ಪಕ್ಷಗಳಿಗೆ ತಮ್ಮ ವಿಷಯ ಪ್ರಸ್ತಾಪಿಸಲು ಅವಕಾಶ ಸಿಗುವುದಿಲ್ಲ**
> **ಕಲ್ಯಾಣ್ ಬ್ಯಾನರ್ಜಿ,** ಟಿಎಂಸಿ ಸಂಸದ

ಆಗ ಬ್ಯಾನರ್ಜಿ ಅವರು ಸಿಂಧಿಯಾ ವಿರುದ್ಧ ವಾಗ್ದಾಳಿ ನಡೆಸಿದರು. ಸಿಂಧಿಯಾ ಕುರಿತಾಗಿ ಅವರು ಆಡಿದ ಕೆಲವು ಮಾತುಗಳನ್ನು ಸ್ಪೀಕರ್ ಓಂ ಬಿರ್ಲಾ ಕಲಾಪದ ಕಡತದಿಂದ ತೆಗೆಸಿದರು. ಆ ಸಂದರ್ಭದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ ಮಾತಿನ ಸಮರ ನಡೆದ ಕಾರಣ ಕಲಾಪವನ್ನು ಮುಂದೂಡಲಾಯಿತು.

ಸದನ ಮತ್ತೆ ಸೇರಿದಾಗ ಬ್ಯಾನರ್ಜಿ ಅವರು ತಮ್ಮ ಮಾತುಗಳಿಗೆ ಕ್ಷಮೆ ಯಾಚಿಸಿದರು. ಆದರೆ, ಅದನ್ನು ಒಪ್ಪಲು ಸಿಂಧಿಯಾ ನಿರಾಕರಿಸಿದರು.

'ನಾವೆಲ್ಲರೂ ಇಲ್ಲಿ ಆತ್ಮಗೌರವ ಇಟ್ಟುಕೊಂಡು ಬಂದಿರುತ್ತೇವೆ... ನಮ್ಮ ನೀತಿ, ದೃಷ್ಟಿಕೋನದ ಬಗ್ಗೆ ಟೀಕೆ ಮಾಡಿ. ಆದರೆ ವೈಯಕ್ತಿಕ ಮಟ್ಟದಲ್ಲಿ ಮಾತನಾಡಿದರೆ ಪ್ರತಿಕ್ರಿಯೆ ಪಡೆಯಲು ಸಿದ್ಧರಾಗಿರಿ' ಎಂದು ಸಿಂಧಿಯಾ ಹೇಳಿದರು.

ಕಾಂಗ್ರೆಸ್ ನಾಯಕರು ಮತ್ತು ಹೂಡಿಕೆದಾರ ಜಾರ್ಜ್ ಸೋರೊಸ್ ಅವರ ನಡುವೆ ನಂಟಿದೆ ಎಂಬ ಆರೋಪದ ವಿಚಾರವಾಗಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ ಶೂನ್ಯ ವೇಳೆಯಲ್ಲಿ ಮಾತಿನ ಚಕಮಕಿ ನಡೆಯಿತು. ಈ ಕಾರಣಕ್ಕಾಗಿಯೂ ಸದನದ ಕಲಾಪ ಮುಂದೂಡಬೇಕಾಯಿತು.

'ಸಭಾಪತಿಯಿಂದಲೇ ತೊಡಕು'

ಒಂದನೇ ಪುಟದಿಂದ...

ರಾಜ್ಯಸಭೆಯ ಕಲಾಪಗಳಿಗೆ ಅಡ್ಡಿ ಉಂಟಾಗುವುದಕ್ಕೆ ಧನಕರ್ ಅವರೇ ಹೊಣೆ ಎಂದು ಹೇಳಿದರು.

'ರಾಜ್ಯಸಭೆ ಸಭಾಪತಿಯ ನಡತೆಯು ಅವರು ಹೊಂದಿರುವ ಹುದ್ದೆಯ ಘನತೆಗೆ ತಕ್ಕುದಾಗಿ ಇಲ್ಲ. ಅವರು ವಿರೋಧ ಪಕ್ಷಗಳನ್ನು ಗುರಿಯಾಗಿಸಿಕೊಳ್ಳುತ್ತಾರೆ, ಸರ್ಕಾರವನ್ನು ಯಾವಾಗಲೂ ಹೊಗಳುತ್ತಿರುತ್ತಾರೆ. ಹಿಂದೆ ಈ ಹುದ್ದೆಯಲ್ಲಿದ್ದ ಯಾರೊಬ್ಬರೂ ಪಕ್ಷಪಾತಿಯಾಗಿ ಇರಲಿಲ್ಲ' ಎಂದರು.

ಆಡಳಿತಾರೂಢ ಬಿಜೆಪಿಯು ಪ್ರಜಾತಂತ್ರ ವ್ಯವಸ್ಥೆ ಮೇಲೆ ಮುಲಾಜಿಲ್ಲದೆ ದಾಳಿ ನಡೆಸುತ್ತಿದೆ ಎಂದು ಡಿಎಂಕೆ ನಾಯಕ ತಿರುಚ್ಚಿ ಶಿವ ಆರೋಪಿಸಿದರು.

ರಾಜ್ಯಸಭೆಯ ಕಲಾಪ ಮುಂದಕ್ಕೆ

ಒಂದನೇ ಪುಟದಿಂದ...

ದೇಶದ ಸಮಗ್ರತೆಗೆ ಬೆದರಿಕೆ ಒಡ್ಡುವವರ ಕೈಯಲ್ಲಿ ಕಾಂಗ್ರೆಸ್ಸಿಗರು ಒಂದು ಅಸ್ತ್ರವಾಗಿದ್ದಾರೆ ಎಂದು ಕೂಡ ನಡ್ಡಾ ದೂರಿದರು. ನಡ್ಡಾ ಮಾತಿಗೆ ವಿರೋಧ ಪಕ್ಷಗಳ ಸದಸ್ಯರು ಭಾರಿ ವಿರೋಧ ವ್ಯಕ್ತಪಡಿಸಿದರು.

'ವಿರೋಧ ಪಕ್ಷಗಳಿಗೆ ಪ್ರಜಾತಂತ್ರದಲ್ಲಿ ನಂಬಿಕೆಯಿಲ್ಲ. ಅವರು ಸಭಾಪತಿಯ ಸೂಚನೆ ಪಾಲಿಸುವುದಿಲ್ಲ... ಸಭಾಪತಿಯ ಸೂಚನೆ ಪಾಲಿಸಲಾಗದು ಎಂದಾದರೆ ನಿಮಗೆ ರಾಜ್ಯಸಭೆಯ ಸದಸ್ಯರಾಗುವ ಹಕ್ಕು ಕೂಡ ಇಲ್ಲ' ಎಂದು ರಿಜಿಜು ಆಕ್ರೋಶ ವ್ಯಕ್ತಪಡಿಸಿದರು.

ಸೋರೊಸ್ ಮತ್ತು ಕಾಂಗ್ರೆಸ್ ನಡುವೆ ಒಂದು ನಂಟಿದೆ ಎಂದು ಆರೋಪಿಸಿದರು. 'ನೀವು ಅವರ ಜೊತೆಯಾಗಿ ಕೆಲಸ ಮಾಡುತ್ತಿದ್ದೀರಿ... ನೀವು ಭಾರತ ವಿರೋಧಿ ಶಕ್ತಿಗಳ ಜೊತೆ ನಿಂತು, ಸಭಾಧ್ಯಕ್ಷರ ವಿರುದ್ಧ ನೋಟಿಸ್ ನೀಡುತ್ತೀರಿ' ಎಂದು ರಿಜಿಜು ಆರೋಪಿಸಿದರು.

ತಾವು ಪ್ರಜಾತಂತ್ರವನ್ನು ಉಳಿಸುತ್ತಿರುವುದಾಗಿ ವಿರೋಧ ಪಕ್ಷದ ಸದಸ್ಯರೊಬ್ಬರು ಹೇಳಿದಾಗ, 'ನೀವು ಯಾರನ್ನು ಉಳಿಸುತ್ತಿದ್ದೀರಿ ಎಂಬುದು ನನಗೆ ಗೊತ್ತಾಗುತ್ತಿಲ್ಲ' ಎಂದು ಧನಕರ್ ಪ್ರತಿಕ್ರಿಯಿಸಿದರು

ಸೋರೊಸ್ 'ಸಂಪರ್ಕ': ನಿಲ್ಲದ ವಾಗ್ದಾಳಿ

ಬಿ.ಕೆ.ನೆಹರೂ ಅಮೆರಿಕದಲ್ಲಿ ಭಾರತದ ರಾಯಭಾರಿ ಆಗಿದ್ದ ಕಾಲದಿಂದಲೂ ಸಂಪರ್ಕ– ಬಿಜೆಪಿ

ನವದೆಹಲಿ (ಪಿಟಿಐ): 'ಅಮೆರಿಕದ ಉದ್ಯಮಿ ಜಾರ್ಜ್ ಸೋರೊಸ್ ಜೊತೆಗೆ ನೆಹರೂ–ಗಾಂಧಿ ಕುಟುಂಬವು ನಿಕಟವಾದ ಸಂಪರ್ಕವನ್ನು ಹೊಂದಿದೆ' ಎಂಬ ಆರೋಪ ಪುನರುಚ್ಚರಿಸಿರುವ ಬಿಜೆಪಿ ಬುಧವಾರ ಕಾಂಗ್ರೆಸ್ ಪಕ್ಷದ ವಿರುದ್ಧದ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಿತು.

ಫೋರಂ ಆಫ್ ಡೆಮಾಕ್ರಟಿಕ್ ಲೀಡರ್ಸ್ –ಏಷ್ಯಾ ಪೆಸಿಫಿಕ್ (ಎಫ್‌ಡಿಎಲ್–ಎಪಿ) ವೇದಿಕೆಯ ಸಹ ಅಧ್ಯಕ್ಷೆಯಾಗಿ ಸೋನಿಯಾ ಗಾಂಧಿ ಅವರು ಹೊಂದಿರುವ 'ಪಾತ್ರ'ವನ್ನೂ ಮೀರಿ ಈ ಸಂಪರ್ಕವು ಬೇರೂರಿದೆ ಎಂದು ಬಿಜೆಪಿ ಗಂಭೀರವಾದ ಆರೋಪ ಮಾಡಿದೆ.

'ಎಕ್ಸ್' ಮೂಲಕ ಆರೋಪ ತೀವ್ರಗೊಳಿಸಿರುವ ಆಡಳಿತ ಪಕ್ಷವು, ಪೂರಕವಾಗಿ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿದೆ. 'ಸೋರೊಸ್ ಹಂಗೇರಿಯವರು. ಫೋರಿ ನೆಹರೂ ಕೂಡ ಅದೇ ದೇಶದವರಾಗಿದ್ದರು. ಅವರು ಜವಾಹರಲಾಲ್ ನೆಹರೂ ದಾಯಾದಿ ಬಿ.ಕೆ.ನೆಹರೂ ಅವರನ್ನು ವಿವಾಹವಾಗಿದ್ದರು. ಹೀಗಾಗಿ ಅವರು ರಾಹುಲ್ ಗಾಂಧಿ ಅವರಿಗೂ ಸಂಬಂಧಿ ಆಗುತ್ತಾರೆ' ಎಂದು ಹೇಳಿದೆ.

ಜಾರ್ಜ್ ಸೋರೊಸ್ ಅವರು ಫೋರಿ ನೆಹರೂ ಜೊತೆಗೆ ಸಂಪರ್ಕ ಹೊಂದಿದ್ದರು. ವ್ಯಾವಹಾರಿಕ ಬಾಂಧವ್ಯವೂ ಇತ್ತು. ಬಿ.ಕೆ.ನೆಹರೂ ಅವರು ಅಮೆರಿಕದಲ್ಲಿ ಭಾರತದ ರಾಯಭಾರಿ ಆಗಿದ್ದ ಅವಧಿಯಿಂದಲೂ ಇದ್ದ ಈ ವ್ಯಾವಹಾರಿಕ ಸಂಬಂಧ ಈಗಲೂ ಮುಂದುವರಿದಿದೆ ಎಂದು ಆರೋಪಿಸಿದೆ.



ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಸಂಸತ್ ಭವನ ಪ್ರವೇಶಿಸುವ ಸಂದರ್ಭದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ತ್ರಿವರ್ಣದ ಕಾರ್ಡ್ ನೀಡಿ ವಿನೂತನವಾಗಿ ಪ್ರತಿಭಟಿಸಿದರು ಪಿಟಿಐ ಚಿತ್ರ

ಕಾರ್ಡ್, ಗುಲಾಬಿ ನೀಡಿ ಪ್ರತಿಭಟನೆ

ವಿರೋಧ ಪಕ್ಷಗಳಿಗೆ ಸೇರಿದ ಹಲವು ಸಂಸದರು ಬಿಜೆಪಿಯ ಸಂಸದರಿಗೆ ಬುಧವಾರ ತ್ರಿವರ್ಣಗಳ ಕಾರ್ಡ್ ಮತ್ತು ಕೆಂಪು ಬಣ್ಣದ ಗುಲಾಬಿ ಹೂವು ನೀಡಿದರು. ಅದಾನಿ ವಿಚಾರ ಸೇರಿದಂತೆ ಎಲ್ಲ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಯುವಂತೆ ನೋಡಿಕೊಳ್ಳಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು, ಬಿಜೆಪಿಯ ಸದಸ್ಯರನ್ನು ಈ ಮೂಲಕ ಒತ್ತಾಯಿಸಿದರು.

ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿದಿನ ನಡೆಯುತ್ತಿರುವ ವಿನೂತನ ಪ್ರತಿಭಟನೆಗಳ ಸಾಲಿಗೆ ಇದು ಹೊಸ ಸೇರ್ಪಡೆ. ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಸಂಸತ್ ಭವನ ಪ್ರವೇಶಿಸುತ್ತಿದ್ದ ಸಂದರ್ಭದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತ್ರಿವರ್ಣದ ಕಾರ್ಡ್ ಒಂದನ್ನು ನೀಡಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ಸಿನ ಸಂಸದರು, ಡಿಎಂಕೆ, ಜೆಎಂಎಂ ಮತ್ತು ಎಡ ಪಕ್ಷಗಳ ಸಂಸದರು ಕೈಯಲ್ಲಿ ತ್ರಿವರ್ಣದ ಕಾರ್ಡ್ ಹಿಡಿದು ಸಂಸತ್ ಭವನದ ಮಕರ ದ್ವಾರದ ಮೆಟ್ಟಿಲುಗಳ ಮೇಲೆ ನಿಂತಿದ್ದರು. ಕೆಲವರ ಕೈಯಲ್ಲಿ 'ದೇಶವನ್ನು ಮಾರಲು ಬಿಡಬೇಡಿ' ಎಂಬ ಬರಹ ಇರುವ ಫಲಕಗಳು ಇದ್ದವು.

ಪ್ರಧಾನಿ ಮೋದಿ ಮತ್ತು ಉದ್ಯಮಿ ಗೌತಮ್ ಅದಾನಿ ವ್ಯಂಗ್ಯಚಿತ್ರ ಹಾಗೂ 'ಮೋದಿ ಅದಾನಿ ಭಾಯಿ ಭಾಯಿ' ಎಂಬ ಬರಹ ಇರುವ ಜೋಳಿಗೆ ಹಿಡಿದು ವಿಪಕ್ಷಗಳ ಸಂಸದರು ಸಂಸತ್ತಿನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ್ದರು.

ಅವಹೇಳನದ ಮಾತು ಕಡತದಿಂದ ತೆಗೆಯಲು ಸ್ಪೀಕರ್‌ಗೆ ರಾಹುಲ್ ಗಾಂಧಿ ಮನವಿ

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರನ್ನು ಬುಧವಾರ ಭೇಟಿ ಮಾಡಿದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ತಮ್ಮ ವಿರುದ್ಧ ಬಿಜೆಪಿಯ ಸದಸ್ಯರು ಆಡಿರುವ ಕೆಲವು ಮಾತುಗಳನ್ನು ಕಲಾಪದ ಕಡತಗಳಿಂದ ತೆಗೆಯಬೇಕು ಎಂದು ಮನವಿ ಮಾಡಿದರು. ಸದನದಲ್ಲಿ ಕಲಾಪವು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಕೋರಿದರು.

ಅದಾನಿ ವಿಚಾರದಲ್ಲಿ ಗಮನವನ್ನು ಬೇರೆಡೆ ತಿರುಗಿಸುವ ಉದ್ದೇಶದಿಂದ ಬಿಜೆಪಿಯು ತಮ್ಮ ವಿರುದ್ಧ ಆಧಾರವಿಲ್ಲದೆ ಆರೋಪಗಳನ್ನು ಮಾಡುತ್ತಿದೆ ಎಂದು ರಾಹುಲ್ ಹೇಳಿದರು. ಲೋಕಸಭೆಯಲ್ಲಿ ಶುಕ್ರವಾರದಿಂದ ಸಂವಿಧಾನದ ಬಗ್ಗೆ ಚರ್ಚೆ ಶುರುವಾಗಬೇಕು ಎಂಬುದು ತಮ್ಮ ಪಕ್ಷದ ಬಯಕೆ, ಸದನದ ಕಲಾಪವು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು ತಮ್ಮ ಹೊಣೆ ಅಲ್ಲದಿದ್ದರೂ ಕಲಾಪ ಸುಗಮವಾಗಿ ನಡೆಯುವಂತೆ ತಾವು ಖಾತರಿ ಪಡಿಸುವುದಾಗಿ ರಾಹುಲ್ ಹೇಳಿದರು.

'ಸ್ಪೀಕರ್ ಜೊತೆ ನಾನು ಮಾತುಕತೆ ನಡೆಸಿದೆ. ನನ್ನ ವಿರುದ್ಧದ ಅವಹೇಳನಕಾರಿ ಮಾತುಗಳನ್ನು ಕಡತದಿಂದ ತೆಗೆಯಬೇಕು ಎಂದು ನಮ್ಮ ಪಕ್ಷ ಹೇಳುತ್ತಿರುವುದನ್ನು ಅವರಿಗೆ ತಿಳಿಸಿದೆ. ಪರಿಶೀಲಿಸುವುದಾಗಿ ಸ್ಪೀಕರ್ ಹೇಳಿದರು. ಬಿಜೆಪಿಯವರು ಆಧಾರವಿಲ್ಲದ ಆರೋಪ ಮಾಡುವುದನ್ನು ಮುಂದುವರಿಸಿದರೂ, ಕಲಾಪ ನಡೆಯಬೇಕು ಎಂಬುದು ನಮ್ಮ ತೀರ್ಮಾನ' ಎಂದು ರಾಹುಲ್ ಸುದ್ದಿಗಾರರ ಬಳಿ ಹೇಳಿದರು.

'ಬಿಜೆಪಿಯ ಸದಸ್ಯರು ನನ್ನ ವಿರುದ್ಧ ಯಾವ ವಿಷಯ ಬೇಕಿದ್ದರೂ ಪ್ರಸ್ತಾಪಿಸಿ ಮಾತನಾಡಬಹುದು. ಆದರೆ ಸಂವಿಧಾನದ ಕುರಿತ ಚರ್ಚೆ ನಡೆಯಲೇಬೇಕು' ಎಂದು ಅವರು ಒತ್ತಾಯಿಸಿದರು.

ಮೈತ್ರಿ ನಾಯಕತ್ವ ಕುರಿತು ಮಮತಾ ಬ್ಯಾನರ್ಜಿ ಮಾತು

'ಇಂಡಿಯಾ ಒಗ್ಗಟ್ಟಾಗಿರಲಿ'

ದಿಘಾ, ಪಶ್ಚಿಮ ಬಂಗಾಳ (ಪಿಟಿಐ): 'ಬಿಜೆಪಿಯೇತರ ಮೈತ್ರಿಕೂಟದ ನಾಯಕಿಯಾಗಿ ಬೆಂಬಲ ನೀಡಿದ ಎಲ್ಲರಿಗೂ ಋಣಿ. 'ಇಂಡಿಯಾ' ಮೈತ್ರಿಕೂಟ ಒಗ್ಗಟ್ಟಾಗಿರಬೇಕು ಎಂದು ನಾನು ಬಯಸುತ್ತೇನೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಪೂರ್ವ ಮೇದಿನಾಪುರ ಜಿಲ್ಲೆಯ,ಕರಾವಳಿಯ ದಿಘಾ ಪಟ್ಟಣದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಮೈತ್ರಿಕೂಟ ಮತ್ತು ಎಲ್ಲ ನಾಯಕರ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತೇನೆ ಎಂದು ಅವರು ಹೇಳಿದರು. ಆದರೆ, 'ಇಂಡಿಯಾ' ಮೈತ್ರಿಕೂಟದ ನಾಯಕತ್ವ ಕುರಿತು ಹೆಚ್ಚು ಪ್ರತಿಕ್ರಿಯಿಸಲು ಮಮತಾ ಬ್ಯಾನರ್ಜಿ ನಿರಾಕರಿಸಿದರು.

ಕಳೆದ ವಾರ ಸುದ್ದಿವಾಹಿನಿಯೊಂದರ ಜೊತೆ ಮಾತನಾಡಿದ್ದ ಅವರು, 'ನಾವು 'ಇಂಡಿಯಾ' ಮೈತ್ರಿಕೂಟ ಸ್ಥಾಪಿಸಿದ್ದೇವೆ. ಅದರ ನಿರ್ವಹಣೆ ಈಗ ಅದನ್ನು ಮುನ್ನಡೆಸುವವರಿಗೆ ಸೇರಿದ್ದು. ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯಬೇಕು ಎಂದು ಬಯಸುತ್ತೇನೆ' ಎಂದಿದ್ದರು.

ಮಮತಾ ಬ್ಯಾನರ್ಜಿ ನಾಯಕತ್ವ ವಹಿಸಿಕೊಳ್ಳಬೇಕು ಎಂಬ ಬೇಡಿಕೆಗೆ ಎನ್‌ಸಿಪಿ (ಎಸ್‌ಪಿ) ನಾಯಕ ಶರದ್ ಪವಾರ್, ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ದನಿಗೂಡಿಸಿದ್ದಾರೆ. ಮಮತಾ ಉತ್ತಮ ಆಯ್ಕೆ ಎಂದು ವೈಎಸ್‌ಆರ್‌ಸಿಪಿ ಸಂಸದ ವಿಜಯಸಾಯಿ ರೆಡ್ಡಿ ಹೇಳಿದ್ದಾರೆ.

ಬಿಜೆಪಿ ಸೋಲಿಸುವ ಸಾಮರ್ಥ್ಯ ಮಮತಾಗಿದೆ –ಟಿಎಂಸಿ

ಸುಶ್ಮಿತಾ ದೇವ್

ನವದೆಹಲಿ (ಪಿಟಿಐ): ಬಿಜೆಪಿಯನ್ನು ಸೋಲಿಸಲು ಇಂಡಿಯಾ ಒಕ್ಕೂಟ ಒಗ್ಗಟ್ಟಾಗಿದೆ ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಾಯಕಿ ಸುಶ್ಮಿತಾ ದೇವ್ ಅವರು ಹೇಳಿದ್ದಾರೆ.

'ಇಂಡಿಯಾ' ನಾಯಕತ್ವದ ಬಗ್ಗೆ ಒಲವು ವ್ಯಕ್ತಪಡಿಸಿರುವ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರನ್ನು ಬೆಂಬಲಿಸಿ ಅವರು ಈ ಹೇಳಿಕೆ ನೀಡಿದ್ದಾರೆ.

'ಚುನಾವಣೆಯಲ್ಲಿ ಬಿಜೆಪಿ ಸೋಲಿಸುವ ಸಾಮರ್ಥ್ಯ ಮಮತಾ ಅವರಿಗೆ ಇದೆ. ಹೀಗಾಗಿಯೇ ಅವರಿಗೆ ಒಕ್ಕೂಟದ ನಾಯಕತ್ವ ವಹಿಸಲು ಇತರೆ ನಾಯಕರು ಆಸಕ್ತಿ ತೋರಿದ್ದಾರೆ' ಎಂದು ರಾಜ್ಯಸಭೆಯ ಸದಸ್ಯೆಯೂ ಆದ ಸುಶ್ಮಿತಾ ಹೇಳಿದ್ದಾರೆ.

'ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ಸಾಮರ್ಥ್ಯ ಮಮತಾ ಅವರಿಗಿದೆ. 7 ಬಾರಿ ಸಂಸದೆ, ನಾಲ್ಕು ಬಾರಿ ಕೇಂದ್ರ ಸಚಿವೆ ಮತ್ತು ಮೂರು ಬಾರಿ ಮುಖ್ಯಮಂತ್ರಿಯಾಗಿ ಅವರು ಅನುಭವ ಹೊಂದಿದ್ದಾರೆ' ಎಂದು ಸುಶ್ಮಿತಾ ಹೇಳಿದ್ದಾರೆ.

ಬಿಹಾರ: 'ಮೈತ್ರಿ ಸರ್ಕಾರ ಬಂದರೆ ಇಬ್ಬರು ಡಿಸಿಎಂ'

ಪಟ್ನಾ (ಪಿಟಿಐ): 'ಕಾಂಗ್ರೆಸ್ ಮತ್ತು ಆರ್‌ಜೆಡಿ ಮೈತ್ರಿಕೂಟ ಮುಂದೆ ರಾಜ್ಯದಲ್ಲಿ ಸರ್ಕಾರ ರಚಿಸಿದಲ್ಲಿ ಕಾಂಗ್ರೆಸ್ ಮುಸ್ಲಿಂ ಸಮುದಾಯದ ಒಬ್ಬರು ಸೇರಿ ಇಬ್ಬರು ಉಪ ಮುಖ್ಯಮಂತ್ರಿಗಳನ್ನು ಹೊಂದಿರಲಿದೆ' ಎಂದು ಆ ಪಕ್ಷದ ನಾಯಕ ಶಾನವಾಜ್ ಆಲಂ ಹೇಳಿದ್ದಾರೆ.

ಮೈತ್ರಿ ಧರ್ಮವನ್ನು ಉಲ್ಲಂಘಿಸಿ ಮೈತ್ರಿ ಪಕ್ಷದ ಮೇಲೆ ಪ್ರಾಬಲ್ಯ ಹೊಂದಲು ಯತ್ನಿಸುತ್ತಿದ್ದಾರೆ ಎಂಬ ಟೀಕೆಗಳು ಆಲಂ ವಿರುದ್ಧ ವ್ಯಕ್ತವಾಗಿವೆ.

ಸದ್ಯ ರಾಜ್ಯ ಪ್ರವಾಸದಲ್ಲಿರುವ ಆಲಂ, ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ, 'ಇದು ಪಕ್ಷದ ಸಂಕಲ್ಪ. ತೇಜಸ್ವಿ ಯಾದವ್ ಅವರೇ ಮುಂದೆ ಸರ್ಕಾರದ ನೇತೃತ್ವ ವಹಿಸಬೇಕು. ಕಾಂಗ್ರೆಸ್ ಪಕ್ಷದಿಂದ ಇಬ್ಬರು ಉಪಮುಖ್ಯಮಂತ್ರಿ ಇರಬೇಕು. ಅದರಲ್ಲಿ ಒಬ್ಬರು ಮುಸ್ಲಿಂ ಇರಬೇಕು' ಎಂದರು.

ಆಮರಣಾಂತ ಉಪವಾಸಕ್ಕೆ 16ನೇ ದಿನ

ಡಲ್ಲೇವಾಲ್

ಚಂಡೀಗಢ (ಪಿಟಿಐ): ಪಂಜಾಬ್‌ನ ರೈತ ಮುಖಂಡ ಜಗಜಿತ್ ಸಿಂಗ್ ಡಲ್ಲೇವಾಲ್ ಅವರು ಖನೌರಿ ಗಡಿಯಲ್ಲಿ ನಡೆಸುತ್ತಿರುವ ಆಮರಣಾಂತ ಉಪವಾಸ ಸತ್ಯಾಗ್ರಹ ಬುಧವಾರ 16 ದಿನ ಪೂರೈಸಿತು.

ಡಲ್ಲೇವಾಲ್ ತೂಕದಲ್ಲಿ 11 ಕೆ.ಜಿ. ಯಷ್ಟು ಕಡಿಮೆಯಾಗಿದ್ದು, ರಕ್ತದಲ್ಲಿನ ಸಕ್ಕರೆಯ ಮಟ್ಟವು ಏರಿಳಿತಗೊಳ್ಳುತ್ತಿದೆ. ವೈದ್ಯರ ತಂಡ ನಿಗಾವಹಿಸಿದೆ ಎಂದು ರೈತ ಮುಖಂಡರು ತಿಳಿಸಿದ್ದಾರೆ.

ಆಮರಣಾಂತ ಉಪವಾಸ ನಡೆಸುತ್ತಿರುವ ಡಲ್ಲೇವಾಲ್ ಸುತ್ತಲೂ ರೈತರು ಭದ್ರಕೋಟೆಯನ್ನು ನಿರ್ಮಿಸಿದ್ದಾರೆ.

ಪಂಜಾಬ್– ಹರಿಯಾಣ ನಡುವಿನ ಶಂಭು ಹಾಗೂ ಖನೌರಿ ಗಡಿಯಲ್ಲಿ ನಡೆದಿರುವ ಹೋರಾಟದ ಯಶಸ್ಸಿಗಾಗಿ ಮತ್ತು ಡಲ್ಲೇವಾಲ್ ಅವರ ಆರೋಗ್ಯದ ಚೇತರಿಕೆಗಾಗಿ ರೈತರು ಪ್ರಾರ್ಥಿಸಿದರು.

ರೈತರು ಬೆಳೆದ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯ ಕಾನೂನಾತ್ಮಕ ಖಾತರಿ ಸೇರಿದಂತೆ ಕೃಷಿಕರ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಿಕ್ಕಾಗಿ, ಪಂಜಾಬ್‌ನ ರೈತ ಮುಖಂಡರಾದ ಜಗಜಿತ್ ಸಿಂಗ್ ಡಲ್ಲೇವಾಲ್ ಆಮರಣಾಂತ ಉಪವಾಸ ನಡೆಸುತ್ತಿದ್ದಾರೆ.

ದೆಹಲಿ ಚಲೋಗೆ ಭದ್ರತಾ ಸಿಬ್ಬಂದಿಯು ತಡೆಯೊಡ್ಡಿರುವುದರಿಂದ ಕಳೆದ ಫೆ. 13ರಿಂದಲೂ ರೈತರು, ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ಬ್ಯಾನರ್‌ನಡಿ ಶಂಭು ಹಾಗೂ ಖನೌರಿ ಗಡಿಯಲ್ಲಿ ಬೀಡುಬಿಟ್ಟಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಂಜಾಬ್‌ನ ರೈತರ ಬಗ್ಗೆ ಕಳಕಳಿಯಿದೆ. ಆದ್ದರಿಂದಲೇ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಿದ್ದಾರೆ. ನಿಮಗೆ ಕೈಮುಗಿದು ಬೇಡಿಕೊಳ್ಳುವೆ, ಮಾತುಕತೆಗೆ ಬನ್ನಿ' ಎಂದು ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ಪಟಿಯಾಲದಲ್ಲಿ ಪುನರುಚ್ಚರಿಸಿದರು.

ತಿಮಿಂಗಿಲ ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ಪಂಬನ್ ಕಡಲತೀರದಲ್ಲಿ ಬುಧವಾರ ದಡಕ್ಕೆ ತೇಲಿಬಂದ ನೀಲಿ ತಿಮಿಂಗಿಲದ ಕಳೇಬರವನ್ನು ಜೆಸಿಬಿ ಯಂತ್ರದಿಂದ ತೆರವುಗೊಳಿಸಲಾಯಿತು ಪಿಟಿಐ ಚಿತ್ರ

ಅಪಾಯದಲ್ಲಿ ಪ್ರಜಾಪ್ರಭುತ್ವ; ಪಟೋಲೆ

ನಾಗ್ಪುರ (ಪಿಟಿಐ): ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾ ದೇಶಗಳ ರೀತಿಯಲ್ಲಿಯೇ ಭಾರತದಲ್ಲಿಯೂ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಹೇಳಿದರು.

ಈ ವಿಷಯ ಜಾಗತಿಕವಾಗಿಯೂ ಚರ್ಚೆಗೆ ಒಳಪಟ್ಟಿದೆ ಎಂದರು.

ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, 'ಸೋಲಾಪುರ ಜಿಲ್ಲೆಯ ಮರಕಡವಾಡಿ ನಿವಾಸಿಗಳು ಇವಿಎಂ ಬಗ್ಗೆ ಸಂದೇಹ ವ್ಯಕ್ತಪಡಿಸಿದ್ದಾರೆ ಮತ್ತು ಮತಪತ್ರ ಬಳಸಿ ಮರು ಚುನಾವಣೆ ನಡೆಸಲು ಬಯಸಿದ್ದಾರೆ. ಈ ಬಗ್ಗೆ ಬೃಹತ್ ಚಳವಳಿಯೇ ರೂಪುಗೊಂಡಿದೆ' ಎಂದು ಹೇಳಿದರು.

ಮರು ಚುನಾವಣೆಗೆ ಯೋಜನೆ ರೂಪಿಸಿದ ಆರೋಪದ ಮೇಲೆ ಹಲವು ಗ್ರಾಮಸ್ಥರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದನ್ನು ಉಲ್ಲೇಖಿಸಿ, ಮರಕಡವಾಡಿ ಜನರ ಧ್ವನಿಯನ್ನು ಸರ್ಕಾರ ಹತ್ತಿಕ್ಕುತ್ತಿದೆ ಎಂದು ನಾನಾ ಪಟೋಲೆ ಅವರು ಆರೋಪಿಸಿದರು.

ದೇವಸ್ಥಾನ ಪ್ರವೇಶಕ್ಕೆ ಶಾಸಕರಿಗೆ ತಡೆ

ಒಂದನೇ ಪುಟದಿಂದ...

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ನಿಧನದ ಕಾರಣ ಬುಧವಾರ ಬೆಳಗಾವಿಯ ಚಳಿಗಾಲದ ಅಧಿವೇಶನಕ್ಕೆ ರಜೆ ನೀಡಲಾಗಿತ್ತು. ಬಿಡುವು ಸಿಕ್ಕಿದ್ದರಿಂದ ಹಲವು ನಾಯಕರು ಕೊಲ್ಹಾಪುರಕ್ಕೆ ಪ್ರವಾಸ ಕೈಗೊಂಡಿದ್ದರು. ಶಿವಸೇನಾ ಕೊಲ್ಹಾಪುರ ಜಿಲ್ಲಾ ಘಟಕದ ಅಧ್ಯಕ್ಷ ವಿಜಯ ದೇವಾನೆ, ಮುಖಂಡರಾದ ಸಂಜಯ ಪವಾರ, ಸುನೀಲ್ ಮೋದಿ ಮತ್ತಿತರರ ನೇತೃತ್ವದಲ್ಲಿ ಹಲವರು ದೇವಸ್ಥಾನದ ಆವರಣದಲ್ಲಿ ಜಮಾಯಿಸಿದರು. ಬೆಳಗಾವಿ, ಬೀದರ್, ಭಾಲ್ಕಿ, ಕಾರವಾರ, ನಿಪ್ಪಾಣಿ ಸೇರಿದಂತೆ ಮರಾಠಿ ಭಾಷಿಕ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೇ ಸೇರಿಸಬೇಕು ಎಂದು ಘೋಷಣೆ ಮೊಳಗಿಸಿದರು.

'ಕರ್ನಾಟಕದಲ್ಲಿ ಮರಾಠಿ ಭಾಷಿಕರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಡಿಸೆಂಬರ್ 9ರಂದು ಬೆಳಗಾವಿಯಲ್ಲಿ ಆಯೋಜಿಸಿದ್ದ 'ಮಹಾ ಮೇಳಾವ್' ನಿರ್ಬಂಧಿಸಲಾಗಿದೆ. ಮುಖಂಡರನ್ನು ಬಂಧಿಸಲಾಗಿದೆ. ಮರಾಠಿ ಮಾತನಾಡುವ ಜನರ ಭಾವನೆಗಳನ್ನು ವ್ಯಕ್ತಪಡಿಸಲು ಮಹಾಮೇಳಾವ್ ಮಾಡುವುದು ತಪ್ಪೇ? ಮರಾಠರ ಪ್ರತಿಭಟನೆಯ ಹಕ್ಕನ್ನೂ ಕರ್ನಾಟಕ ಸರ್ಕಾರ ಕಿತ್ತುಕೊಂಡಿದೆ' ಎಂದೂ ಕಾರ್ಯಕರ್ತರು ಆಕ್ರೋಶ ಹೊರಹಾಕಿದರು.

'ಎಂಇಎಸ್‌ಗೆ ಬೆಂಬಲ ವ್ಯಕ್ತಪಡಿಸಲು, ಮರಾಠರ ಭಾವನೆಗಳಿಗೆ ಸ್ಪಂದಿಸಲು ನಾವು ಬೆಳಗಾವಿಗೆ ಹೋಗಲು ಆಗುತ್ತಿಲ್ಲ. ಅಪರಾಧಿಗಳು ಎಂಬಂತೆ ನಮ್ಮ ಪ್ರವೇಶ ನಿರ್ಬಂಧಿಸಿದ್ದಾರೆ. ನಾವು ಶಾಂತಿಯುತ ಮೆರವಣಿಗೆ ಮಾಡಿಕೊಂಡು ಕರ್ನಾಟಕ ಪ್ರವೇಶ ಮಾಡುತ್ತಿದ್ದೆವು. ನಿಪ್ಪಾಣಿ ಬಳಿಯೇ ತಡೆದು, ಬಂಧಿಸಿದ್ದಾರೆ. ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಮುಗಿಯುವರೆಗೂ ಆ ಪ್ರದೇಶವನ್ನು ಕೇಂದ್ರಾಡಳಿತ ಪ್ರದೇಶ ಮಾಡಬೇಕು ಎಂಬ ಬೇಡಿಕೆಗೆ ಈಗಲೂ ನಾವು ಬದ್ಧ. ಕರ್ನಾಟಕದಲ್ಲಿ ಮರಾಠಿಗರ ಮೇಲೆ ದೌರ್ಜನ್ಯ ನಡೆಯುತ್ತಿದ್ದು, ಅದನ್ನು ತಡೆಯಲು ಶಾಸಕರು ಸರ್ಕಾರದ ಗಮನ ಸೆಳೆಯಬೇಕು' ಎಂದೂ ಆಗ್ರಹಿಸಿದರು.

ಮನವಿ ಆಲಿಸಿದ ಬಳಿಕ ಶಾಸಕರು ದೇವಸ್ಥಾನಕ್ಕೆ ಹೋಗಿ ದರ್ಶನ ಪಡೆದರು.

'ವೋಟ್ ಜಿಹಾದ್' ಪದ ಪರಿಶೀಲನೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯ ಪ್ರಚಾರದಲ್ಲಿ ಕೆಲವು ರಾಜಕೀಯ ಪಕ್ಷಗಳು ಬಳಸಿದ್ದ ವಿವಾದಾತ್ಮಕ ಪದ 'ವೋಟ್– ಜಿಹಾದ್' ಬಗ್ಗೆ ಚುನಾವಣಾ ಆಯೋಗವು ಸಮಗ್ರ ಪರಿಶೀಲನೆ ನಡೆಸುತ್ತಿದೆ ಎಂದು ಮಹಾರಾಷ್ಟ್ರ ಹೆಚ್ಚುವರಿ ಮುಖ್ಯ ಚುನಾವಣಾ ಅಧಿಕಾರಿ ಡಾ.ಕಿರಣ್ ಕುಲಕರ್ಣಿ ಬುಧವಾರ ಹೇಳಿದರು

'ರಾಜ್ಯದಲ್ಲಿ ಚುನಾವಣೆ ಸಂದರ್ಭದಲ್ಲಿ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದ 650ಕ್ಕೂ ಹೆಚ್ಚು ಪ್ರಕರಣ ದಾಖಲಾಗಿವೆ' ಎಂದರು.

'ಮುಂದಿನ ಕ್ರಮ ತೆಗೆದುಕೊಳ್ಳುವ ಮೊದಲು ಕಾನೂನು, ಭಾಷಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ 'ವೋಟ್–ಜಿಹಾದ್' ಪದ ಬೀರುವ ಪರಿಣಾಮಗಳನ್ನು ಆಯೋಗವು ವಿಶ್ಲೇಷಿಸುತ್ತಿದೆ. 'ವೋಟ್ ಜಿಹಾದ್'ನಂತಹ ಪದಗಳಿಂದ ಜಾಗರೂಕರಾಗಿರಬೇಕು. ಏಕೆಂದರೆ, ಅದು ದೂರಗಾಮಿ ಪರಿಣಾಮ ಬೀರಬಲ್ಲ ಪದಗಳು' ಎಂದು ಹೇಳಿದರು.

ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಹೇಳಿಕೆ

ದೆಹಲಿ: ಕಾಂಗ್ರೆಸ್ ಜೊತೆ ಮೈತ್ರಿ ಇಲ್ಲ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಜೊತೆಗೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆಗಳನ್ನು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ತಳ್ಳಿಹಾಕಿದ್ದಾರೆ.

ಮತ್ತೊಂದೆಡೆ ದೆಹಲಿ ಕಾಂಗ್ರೆಸ್ ಮುಖ್ಯಸ್ಥ ದೇವೇಂದರ್ ಯಾದವ್ ಅವರು, 'ತಮ್ಮ ಪಕ್ಷ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲಿದೆ. ಗೆಲ್ಲುವ ಸಾಧ್ಯತೆಗಳು ಇವೆ' ಎಂದಿದ್ದಾರೆ.

ಎಎಪಿ ಏಕಾಂಗಿಯಾಗಿ ಸ್ಪರ್ಧಿಸಲಿದೆ. ಕಾಂಗ್ರೆಸ್ ಜೊತೆಗೆ ಮೈತ್ರಿ ಹೊಂದುವ ಯಾವುದೇ ಸಾಧ್ಯತೆ ಇಲ್ಲ ಎಂದು ಕೇಜ್ರಿವಾಲ್ ಈ ಕುರಿತು 'ಎಕ್ಸ್'ನಲ್ಲಿ ಅಭಿಪ್ರಾಯಹಂಚಿಕೊಂಡಿದ್ದಾರೆ.

ಜಾಮೀನು ಕುರಿತ ಅರ್ಜಿ: ಜ. 17ಕ್ಕೆ ವಿಚಾರಣೆ ಮುಂದೂಡಿಕೆ

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎಎಪಿ ಮುಖಂಡ ಅರವಿಂದ ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿರುವುದನ್ನು ಜಾರಿ ನಿರ್ದೇಶನಾಲಯ (ಇ.ಡಿ) ಪ್ರಶ್ನಿಸಿದ್ದು, ಆ ಅರ್ಜಿಯ ವಿಚಾರಣೆಯನ್ನು 2025ರ ಜನವರಿ 17ಕ್ಕೆ ದೆಹಲಿ ಹೈಕೋರ್ಟ್ ಮುಂದೂಡಿದೆ.

ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಲಭ್ಯರಿಲ್ಲದ ಕಾರಣ ವಿಚಾರಣೆಯನ್ನು ಮುಂದೂಡುವಂತೆ ಇ.ಡಿ ಪರ ವಕೀಲರು ನ್ಯಾಯಮೂರ್ತಿ ಮನೋಜ್ ಕುಮಾರ್ ಓಹ್ರಿ ಅವರನ್ನು ಕೇಳಿಕೊಂಡರು. ಕೇಜ್ರಿವಾಲ್ ಅವರನ್ನು ಪ್ರತಿನಿಧಿಸಿರುವ ವಕೀಲ ವಿಕ್ರಮ್ ಚೌಧರಿ ಇದನ್ನು ವಿರೋಧಿಸಿದರು. 'ನೆತ್ತಿ ಮೇಲೆ ತೂಗುಗತ್ತಿ ಸದಾ ಇರುವಂತೆ ಮಾಡಬಾರದು' ಎನ್ನುವ ಮೂಲಕ ಅರ್ಜಿಯನ್ನು ಬೇಗ ನಿರಾಕರಿಸಬೇಕು ಎಂದು ಕೇಳಿಕೊಂಡರು.

ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್ ವಿಚಾರಣೆಯನ್ನು ಮುಂದಿನ ವರ್ಷ ಜನವರಿ 12ಕ್ಕೆ ಮುಂದೂಡಿತು.

ಸಿಸೋಡಿಯಾ: ನಿರ್ಬಂಧ ಸಡಿಲಿಸಿದ 'ಸುಪ್ರೀಂ'

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಪಡೆದಿರುವ ಎಎಪಿ ಮುಖಂಡ ಮನೀಷ್ ಸಿಸೋಡಿಯಾ ಅವರ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಸುಪ್ರೀಂ ಕೋರ್ಟ್ ಬುಧವಾರ ಸಡಿಲಿಸಿದೆ.

ವಾರಕ್ಕೆ ಎರಡು ದಿನ ತನಿಖಾ ಅಧಿಕಾರಿಗಳ ಎದುರು ಹಾಜರಾಗಬೇಕು ಎಂಬ ಷರತ್ತನ್ನು ಅವರಿಗೆ ಜಾಮೀನು ನೀಡಿದ ಸಂದರ್ಭದಲ್ಲಿ ವಿಧಿಸಲಾಗಿತ್ತು. ಈಗ, ಸಿಸೋಡಿಯಾ ನಿಯಮಿತವಾಗಿ ವಿಚಾರಣೆಗೆ ಹಾಜರಾದರೆ ಸಾಕು ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠ ಹೇಳಿದೆ.

22 ಸಾವಿರ ಮತದಾರರ ಹೆಸರು ಅಳಿಸಲು ಅರ್ಜಿ

ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಬಿಜೆಪಿಯು ಮತದಾರರ ಹೆಸರುಗಳನ್ನು ತೆಗೆದುಹಾಕಲು ರಾಶಿ ಅರ್ಜಿಗಳನ್ನು ಸಲ್ಲಿಸುತ್ತಿದೆ ಎಂದು ಎಎಪಿ ಮುಖಂಡ ಮನೀಷ್ ಸಿಸೋಡಿಯಾ ಮತ್ತೆ ಆರೋಪಿಸಿದ್ದಾರೆ.

ರಾಜ್ಯಸಭಾ ಸದಸ್ಯ ರಾಘವ್ ಛಡ್ಡಾ ಅವರ ಜತೆ ಬುಧವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ಸಿಸೋಡಿಯಾ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಏಳು ವಿಧಾನಸಭಾ ಕ್ಷೇತ್ರಗಳಲ್ಲಿ 22 ಸಾವಿರ ಮತದಾರರ ಹೆಸರುಗಳನ್ನು ತೆಗೆದುಹಾಕುವಂತೆ ಅರ್ಜಿಗಳನ್ನು ಸಲ್ಲಿಸಲಾಗಿದೆ. ನ್ಯಾಯಯುತವಾಗಿ ಚುನಾವಣೆ ಎದುರಿಸಲಾಗದೆ ಬಿಜೆಪಿ ಈ ದಾರಿ ಹುಡುಕಿಕೊಂಡಿದೆ ಎಂದು ಆರೋಪಿಸಿದರು.

ಚುನಾವಣೆಗೆ ಎರಡು ತಿಂಗಳು ಇರುವಾಗ ಇಷ್ಟೊಂದು ಮತದಾರರ ಹೆಸರುಗಳನ್ನು ತೆಗೆಸಿಹಾಕಲು ಇಷ್ಟು ಉತ್ಸಾಹ ತೋರಿಸುತ್ತಿರುವುದು ಯಾಕೆ ಎಂಬ ಪ್ರಶ್ನೆಗೆ ಬಿಜೆಪಿ ಉತ್ತರಿಸಿಲ್ಲ. ಎಎಪಿ ಮುಖಂಡ ಅರವಿಂದ ಕೇಜ್ರಿವಾಲ್ ಅವರ ನೇತೃತ್ವದಲ್ಲಿ ನಿಯೋಗವೊಂದು ಚುನಾವಣಾ ಆಯೋಗಕ್ಕೆ ಸದ್ಯದಲ್ಲೇ ಮನವಿ ಸಲ್ಲಿಸಿ, ಈ ನಡೆಯನ್ನು ಪ್ರಶ್ನಿಸಲಿದೆ ಎಂದೂ ಹೇಳಿದರು.

'ನಮ್ಮ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹಣ ಮೀಸಲಿರಿಸಿ'

ಇಂಫಾಲ್ (ಪಿಟಿಐ): 'ಕುಕಿ–ಜೊ ಬುಡಕಟ್ಟು ಸಮುದಾಯದ ಜನರು ವಾಸಿಸುವ ಜಿಲ್ಲೆಗಳಲ್ಲಿನ ಅಭಿವೃದ್ಧಿ ಯೋಜನೆಗಳಿಗಾಗಿ ಬಜೆಟ್‌ನಲ್ಲಿ ಹಣ ಮೀಸಲಿರಿಸಿ' ಎಂದು ಕೋರಿ ಈ ಸಮುದಾಯಕ್ಕೆ ಸೇರಿದ ಹತ್ತು ಮಂದಿ ಶಾಸಕರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

'ರಾಜ್ಯ ಸರ್ಕಾರವಂತೂ ನಮ್ಮ ಸಮುದಾಯದ ಜನರನ್ನು ಅಭಿವೃದ್ಧಿಯಿಂದ ವಂಚಿತರನ್ನಾಗಿ ಮಾಡಿದೆ. ಆದ್ದರಿಂದ ಬಜೆಟ್‌ನಲ್ಲಿ ಹಣ ಮೀಸಲಿರಿಸಿ ಮತ್ತು ನಾವು ವಾಸಿಸುವ ಜಿಲ್ಲೆಗಳಲ್ಲಿ ಸ್ಥಗಿತಗೊಂಡಿರುವ ಅಭಿವೃದ್ಧಿ ಕಾರ್ಯಗಳಿಗೆ ಮರುಜೀವ ನೀಡಲು, ಹೊಸ ಯೋಜನೆಗಳನ್ನು ಜಾರಿ ಮಾಡಲು ಹಣಕಾಸಿನ ನೆರವು ನೀಡಲು ಮಧ್ಯಂತರ ಯೋಜನೆ ರೂಪಿಸಿ' ಎಂದು ಪತ್ರದಲ್ಲಿ ಕೋರಲಾಗಿದೆ.

'ಕೇಂದ್ರ ರಸ್ತೆ ಮತ್ತು ಮೂಲ ಸೌಕರ್ಯ ಅನುದಾನದಲ್ಲಿ ಬೆಟ್ಟಗಳಿಂದ ಆವೃತವಾಗಿರುವ ಜಿಲ್ಲೆಗಳಲ್ಲಿ ಸುಮಾರು ₹201.50 ಕೋಟಿ ವೆಚ್ಚದಲ್ಲಿ 57 ರಸ್ತೆಗಳನ್ನು ನಿರ್ಮಿಸುವ ಯೋಜನೆಗೆ ಇತ್ತೀಚೆಗಷ್ಟೇ ಒಪ್ಪಿಗೆ ದೊರೆತಿತ್ತು. ಆದರೆ, ಈ ಯೋಜನೆ ಈಗ ಸ್ಥಗಿತಗೊಂಡಿದೆ' ಎಂದು ಪತ್ರದಲ್ಲಿ ತಿಳಿಸಲಾಗಿದೆ.

❦ ಸುಭಾಷಿತ ❦

ಗುರಿ ತಪ್ಪಿದರೂ ಹಾದಿ ತಪ್ಪಬಾರದು.

–ಎಸ್.ವಿ.ಪರಮೇಶ್ವರ ಭಟ್ಟ

ನ್ಯಾಯಮೂರ್ತಿಯ ಅನುಚಿತ ಮಾತು ನ್ಯಾಯಾಂಗದ ಘನತೆಗೆ ಚ್ಯುತಿ

ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ಅವರು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾಡಿದ ಭಾಷಣದಲ್ಲಿನ ಮಾತುಗಳು ಕಳವಳ ಮೂಡಿಸುವಂತಹವು. ಆ ಮಾತುಗಳಲ್ಲಿ ಆಳವಾದ ಪೂರ್ವಗ್ರಹಗಳು ಹಾಗೂ ಅಲ್ಪಸಂಖ್ಯಾತ ಸಮುದಾಯದ ಕುರಿತ ದ್ವೇಷ ಕಾಣಿಸುತ್ತಿವೆ. ನ್ಯಾಯಾಂಗದಲ್ಲಿ ದೊಡ್ಡ ಹುದ್ದೆಗಳಲ್ಲಿ ಇರುವವರು ರಾಜಕೀಯ ವಿಚಾರಗಳ ಬಗ್ಗೆ ಬಹಿರಂಗವಾಗಿ ಮಾತನಾಡುವುದು ಅಪೇಕ್ಷಣೀಯವಲ್ಲ. ಯಾವುದೇ ವಿಷಯದ ಬಗ್ಗೆ ಮಾತನಾಡುವಾಗ ಅವರು ಸಂಯಮ ಪ್ರದರ್ಶಿಸಬೇಕು. ಏಕೆಂದರೆ ಅವರು ವ್ಯಕ್ತಪಡಿಸುವ ಅಭಿಪ್ರಾಯಗಳು, ಅವರು ನ್ಯಾಯದಾನದ ಸ್ಥಾನದಲ್ಲಿ ಕುಳಿತು ನೀಡುವ ತೀರ್ಪು, ಆದೇಶಗಳ ಮೇಲೆ ಪ್ರಭಾವ ಬೀರುತ್ತವೆ ಎಂಬ ಅನುಮಾನ ಯಾರಲ್ಲೂ ಬರಬಾರದು. ವಿವಾದಕ್ಕೆ ಎಡೆಮಾಡಿಕೊಡುವಂತಹ ಕೆಲಸಗಳನ್ನು ಮಾಡಿರುವ, ನಿಲುವುಗಳನ್ನು ತಾಳಿರುವ ಬಲಪಂಥೀಯ ಸಂಘಟನೆಯೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಸ್ಥಾನದಲ್ಲಿ ಇರುವವರು ಭಾಗವಹಿಸಿದ್ದೇ ತಪ್ಪು. ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಳ್ಳುವುದಾಗಿ ನ್ಯಾಯಮೂರ್ತಿಗಳು ಪ್ರಮಾಣ ಮಾಡಿರುತ್ತಾರೆ. ಅವರು ಈ ಮಾತಿಗೆ ಬದ್ಧವಾಗಿ ನಡೆದುಕೊಳ್ಳಬೇಕು. ಸಮಾನತೆ, ಭ್ರಾತೃತ್ವ, ನ್ಯಾಯದ ತತ್ವಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂಬುದು ಈ ರೀತಿ ಪ್ರಮಾಣ ಮಾಡುವುದರ ಉದ್ದೇಶ.

ನ್ಯಾಯಮೂರ್ತಿ ಸ್ಥಾನದಲ್ಲಿ ಇರುವ ವ್ಯಕ್ತಿಗೆ ಇಂತಹ ಮಾತುಗಳನ್ನು ಆಡಲು ಧೈರ್ಯ ಕೊಡುವ ವ್ಯವಸ್ಥೆಯೊಂದು ದೇಶದಲ್ಲಿ ಸಕ್ರಿಯವಾಗಿ ಇರುವುದು ಕಳವಳಕಾರಿ

ಆದರೆ ನ್ಯಾಯಮೂರ್ತಿ ಯಾದವ್ ಅವರು ತಮ್ಮ ಸ್ಥಾನಕ್ಕೆ ಸೂಕ್ತವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ. ದ್ವೇಷದ ಮಾತುಗಳ ಮೂಲಕ ಅವರು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ವರ್ತಿಸಿದ್ದಾರೆ. ಅವರು ತಮ್ಮನ್ನು ಹಿಂದೂ ಸಮುದಾಯದ ಜೊತೆ ಬಹಿರಂಗವಾಗಿ ಗುರುತಿಸಿಕೊಂಡಿದ್ದಾರೆ, ಮುಸ್ಲಿಮರ ಕುರಿತು ಅಸಹಿಷ್ಣುತೆಯನ್ನು ತೋರಿಸಿದ್ದಾರೆ. 'ಇದು ಹಿಂದೂಸ್ತಾನ ಎಂದು ಹೇಳುವಲ್ಲಿ ನನಗೆ ಯಾವ ಅಳುಕೂ ಇಲ್ಲ; ಹಿಂದೂಸ್ತಾನದಲ್ಲಿ ಇರುವ ಬಹುಸಂಖ್ಯಾತರ ಇಚ್ಛೆಗೆ ಅನುಗುಣವಾಗಿ ಈ ದೇಶ ವರ್ತಿಸುತ್ತದೆ. ಇದು ಕಾನೂನು' ಎಂದು ಅವರು ಹೇಳಿದ್ದಾರೆ. ಮುಸ್ಲಿಮರನ್ನು ಗುರಿಯಾಗಿಸಿಕೊಂಡ ಒರಟಾದ ನಿಂದನೆ ಇರುವ ಮಾತನ್ನು ಕೂಡ ಅವರು ಆಡಿದ್ದಾರೆ. ಒಂದು ಸಮುದಾಯದ ಮಕ್ಕಳಿಗೆ ಸಹಿಷ್ಣುತೆ, ಕರುಣೆ, ಅಹಿಂಸೆಯನ್ನು ಕಲಿಸಲಾಗುತ್ತದೆ. ಮತ್ತೊಂದು ಸಮುದಾಯದ ಮಕ್ಕಳು ಪ್ರಾಣಿ ಬಲಿಯನ್ನು ನೋಡುವ ಕಾರಣ ಅವರು ಸಹಿಷ್ಣುಗಳಾಗಲಿ ಎಂದು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ. ಅವರು ಮಾಡಿದ ಭಾಷಣದ ವಿಷಯ ಏಕರೂಪ ನಾಗರಿಕ ಸಂಹಿತೆಯ ಸಾಂವಿಧಾನಿಕ ಅಗತ್ಯದ ಕುರಿತು. ದೇಶವು ಏಕರೂಪಿ ಕಾನೂನನ್ನು ಖಂಡಿತವಾಗಿಯೂ ತರುತ್ತದೆ, ಅದನ್ನು ಬಹಳ ಬೇಗ ತರಲಾಗುತ್ತದೆ ಎಂದೂ ನ್ಯಾಯಮೂರ್ತಿ ಯಾದವ್ ಹೇಳಿದ್ದಾರೆ.

ನ್ಯಾಯಮೂರ್ತಿ ಯಾದವ್ ಅವರು ಆಡಿದ ಮಾತುಗಳನ್ನು ಸಾಮಾನ್ಯ ವ್ಯಕ್ತಿಯೊಬ್ಬ ಆಡಿದ್ದಿದ್ದರೆ ಅದನ್ನು ದ್ವೇಷದ ಮಾತು ಎಂದು ಪರಿಗಣಿಸಲಾಗುತ್ತಿತ್ತು. ಈ ಮಾತುಗಳ ವಿಚಾರವಾಗಿ ಕ್ರಮ ಜರುಗಿಸುವ ಅಗತ್ಯ ಇದೆ. ಏಕೆಂದರೆ, ಈ ಮಾತುಗಳು ನ್ಯಾಯಾಂಗದ ಮೇಲೆ ಪರಿಣಾಮ ಉಂಟುಮಾಡಬಹುದು. ನ್ಯಾಯಮೂರ್ತಿ ಯಾದವ್ ಅವರು ಈ ಹಿಂದೆಯೂ ವಿವಾದಾತ್ಮಕ ಮಾತುಗಳನ್ನು ಆಡಿದ್ದಾರೆ. ಈ ಮಾತುಗಳು ನ್ಯಾಯಾಂಗದ ಅಧಿಕಾರಿಯಾಗಿ ಅವರ ನಡತೆಯ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿವೆ. ಮುಸ್ಲಿಂ ವ್ಯಕ್ತಿಯೊಬ್ಬರ ಅರ್ಜಿಯು ನ್ಯಾಯಮೂರ್ತಿ ಯಾದವ್ ಅವರ ಮುಂದೆ ವಿಚಾರಣೆಗೆ ಬಂದರೆ ಆ ವ್ಯಕ್ತಿಗೆ ನ್ಯಾಯ ಸಿಗುವ ವಿಶ್ವಾಸ ಇರುವುದಿಲ್ಲ. ನ್ಯಾಯಮೂರ್ತಿ ಯಾದವ್ ಆಡಿರುವ ಮಾತುಗಳನ್ನು ಗಮನಿಸಿರುವ ಸುಪ್ರೀಂ ಕೋರ್ಟ್, ಅಲಹಾಬಾದ್ ಹೈಕೋರ್ಟ್‌ನಿಂದ ವಿವರ ಕೇಳಿದೆ. ನ್ಯಾಯಮೂರ್ತಿ ಯಾದವ್ ಅವರು ನ್ಯಾಯಾಂಗದ ವಿಶ್ವಾಸಾರ್ಹತೆಗೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸಿರುವ ಕಾರಣಕ್ಕೆ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಈಗ ಅವರ ವಿರುದ್ಧ ವಾಗ್ದಂಡನೆ ಪ್ರಕ್ರಿಯೆಗೆ ಸಿದ್ಧತೆ ನಡೆದಿದೆ ಎಂದು ವರದಿಗಳು ಹೇಳಿವೆ. ನ್ಯಾಯಮೂರ್ತಿ ಸ್ಥಾನದಲ್ಲಿ ಇರುವ ವ್ಯಕ್ತಿಗೆ ಇಂತಹ ಮಾತುಗಳನ್ನು ಆಡಲು ಧೈರ್ಯ ಕೊಡುವ ವ್ಯವಸ್ಥೆಯೊಂದು ದೇಶದಲ್ಲಿ ಸಕ್ರಿಯವಾಗಿ ಇರುವುದು ಕಳವಳಕಾರಿ. ಇಂತಹ ನ್ಯಾಯಮೂರ್ತಿಯು ಕರ್ತವ್ಯದಲ್ಲಿ ಇರಲು ಅವಕಾಶ ಮಾಡಿಕೊಡುವ ವ್ಯವಸ್ಥೆಯು ನ್ಯಾಯಸಮ್ಮತವಾಗಿ ಇದೆ ಎಂದು ಪರಿಗಣಿತವಾಗದು.

ದಿನದ ಟ್ವೀಟ್

ರಜೆ ನೀಡಿಕೆ: ಪರಾಮರ್ಶೆ ನಡೆಯಲಿ

ವ್ಯಕ್ತಿಯೊಬ್ಬರು ನಿಧನ ಹೊಂದಿದರೆಂಬ ಕಾರಣಕ್ಕೆ ಮಕ್ಕಳಿಗೆ ಶಿಕ್ಷಣವನ್ನು ನಿರಾಕರಿಸುವುದು ಏಕೆ? ನಾನು ಸಾಯುವುದಕ್ಕಿಂತ ಮುನ್ನ ಅಷ್ಟರಮಟ್ಟಿಗೆ ಖ್ಯಾತಿ ಗಳಿಸಿದ್ದೇ ಆದರೆ, ಮಕ್ಕಳು ಒಂದು ದಿನದ ಶಾಲೆಯನ್ನು ಕಳೆದುಕೊಂಡು ನನ್ನನ್ನು ನೆನಪಿಸಿಕೊಳ್ಳಬೇಕೆಂಬುದನ್ನು ದ್ವೇಷಿಸುತ್ತೇನೆ.

ದೀಪಕ್ ಶೆಣೈ, ಸಿಇಒ, ಕ್ಯಾಪಿಟಲ್‌ಮೈಂಡ್ ಸಂಸ್ಥೆ

ಕಿಡಿನುಡಿ



ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಮಂಡಳಿ (ಡಿಡಿಸಿಎ) ಚುನಾವಣೆಯಿಂದ ಈ ವಿಷಯ ಬಹಿರಂಗ ಆಗಿದೆ: ಇಲ್ಲಿಯೂ ಇದೆ ಭ್ರಷ್ಟಾಚಾರ. 16 ಮತ್ತು 19 ವರ್ಷದೊಳಗಿನವರ ತಂಡದಲ್ಲಿ ತಮ್ಮ ಮಕ್ಕಳು ಆಯ್ಕೆಯಾಗಲು ಅನುವಾಗುವಂತೆ ಪೋಷಕರು ತಮಗೆ ಬೇಕಾದವರ ಪರ ವೋಟುಗಳನ್ನು ಕಲೆ ಹಾಕುತ್ತಾರೆ... ಕೀರ್ತಿ ಆಜಾದ್ ಸಮಿತಿ ಮಾತ್ರ ಭ್ರಷ್ಟಾಚಾರದ ವಿಷಯವನ್ನು ಪ್ರಸ್ತಾಪಿಸುತ್ತಿದೆ. ಪ್ರಾಮಾಣಿಕರು ಎಲ್ಲಿಯಾದರೂ ಗೆಲ್ಲಲು ಸಾಧ್ಯವೇ?

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಭಾನುವಾರ, 12-12-1999

● **ಆಂಟನಿ ಸಮಿತಿ ವರದಿ: ಕಾಂಗ್ರೆಸ್ ಚರ್ಚೆ ಆರಂಭ**

ನವದೆಹಲಿ, ಡಿ. 11 (ಪಿಟಿಐ)– ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿ ಸಂಬಂಧ ಕಾಂಗ್ರೆಸ್ ತಾಳಿದ ನಿಲುವು; ಹರಿಯಾಣದಲ್ಲಿ ಬನ್ಸಿಲಾಲ್ ಸರ್ಕಾರಕ್ಕೆ ನೀಡಿದ ಬೆಂಬಲ; ಆನಂತರ ಅದನ್ನು ವಾಪಸ್ ಪಡೆದ ಕ್ರಮ ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭವಿಷ್ಯಕ್ಕೆ ಮಾರಕವಾಯಿತು ಎಂದು ಎ.ಕೆ.ಆಂಟನಿ ಸಮಿತಿ ಹೇಳಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿಗೆ ಕಾರಣಗಳೇನು ಮತ್ತು ಪಕ್ಷವನ್ನು ಬಲಿಷ್ಠಗೊಳಿಸಲು ಯಾವ ತುರ್ತು ಕ್ರಮ ಕೈಗೊಳ್ಳಬೇಕು ಎಂಬುದನ್ನು ಶಿಫಾರಸು ಮಾಡಿ ಆಂಟನಿ ಸಮಿತಿ ಸಲ್ಲಿಸಿರುವ ವರದಿ ಕುರಿತು ಕಾಂಗ್ರೆಸ್ ಕಾರ್ಯಕಾರಿಣಿ ಇಂದು ವ್ಯಾಪಕ ಚರ್ಚೆ ನಡೆಸಿತು.

ವಾಜಪೇಯಿ ನೇತೃತ್ವದ ಸರ್ಕಾರ ಪತನವಾಗುವುದಕ್ಕೆ ಮೊದಲಿನ ಪರಿಸ್ಥಿತಿ ಹಾಗೂ ಆನಂತರದ ಬೆಳವಣಿಗೆಯು ಕಾಂಗ್ರೆಸ್ ಅಸ್ಥಿರ ಶಕ್ತಿಯಾಗಿದ್ದು ಬೇಜವಾಬ್ದಾರಿಯಾಗಿ ನಡೆದುಕೊಳ್ಳುತ್ತಿದೆ ಎಂಬ ಭಾವನೆ ಮೂಡಿಸಿತು ಎಂದು ವರದಿ ತಿಳಿಸಿದೆ.

● **ಹಿರಿಯೂರು ಮಾರುಕಟ್ಟೆ ಆವರಣದಲ್ಲಿ ಉದ್ರಿಕ್ತ ಶೇಂಗಾ ರೈತರ ದಾಂದಲೆ**

ಹಿರಿಯೂರು, ಡಿ.11– ಇಲ್ಲಿನ ಆರ್‌ಎಂಸಿ ಯಾರ್ಡ್‌ನಲ್ಲಿ ತಮ್ಮ ಶೇಂಗಾಕ್ಕೆ ಟೆಂಡರ್ ಹಾಕಿಲ್ಲ, ಬೆಲೆ ಕಡಿಮೆ ನಿಗದಿಗೊಳಿಸಿದ್ದಾರೆ ಎಂದು ಉದ್ರಿಕ್ತಗೊಂಡ ಸಾವಿರಾರು ರೈತರು ಸಂಜೆ 5 ಗಂಟೆಯಲ್ಲಿ ಮಾರುಕಟ್ಟೆ ಕಚೇರಿಯ ಬಾಗಿಲು ಒಡೆದುಹಾಕಿ, ಕಿಟಕಿ ಗಾಜುಗಳನ್ನು ಪುಡಿ ಮಾಡಿ, ದಲ್ಲಾಳಿಯೊಬ್ಬರ ಅಂಗಡಿಯ ತೂಕದ ಸ್ಕೇಲ್ ಹಾಗೂ ಇನ್ನಿತರ ವಸ್ತುಗಳಿಗೆ ಹಾನಿ ಮಾಡಿದ ಘಟನೆ ನಡೆದಿದೆ.

50 ವರ್ಷಗಳ ಹಿಂದೆ

ಗುರುವಾರ, 12-12-1974

● **ನೇತಾಜಿ ಇದ್ದಾರೆಯೇ? ಹಾಗಾದರೆ ಎಲ್ಲಿ?**

ನವದೆಹಲಿ, ಡಿ. 11– 'ನೇತಾಜಿ ಸುಭಾಷ ಚಂದ್ರ ಬೋಸರು ಎಲ್ಲಿದ್ದಾರೆಂಬುದನ್ನು ನೀವು ತಿಳಿಸಬಲ್ಲಿರಾದರೆ ಇಡೀ ಸದನಕ್ಕೇ ಸಂತೋಷ ಉಂಟಾಗುವುದು' ಎಂದು ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಲೋಕಸಭೆಯಲ್ಲಿ ಸೋಷಲಿಸ್ಟ್ ಸದಸ್ಯ ಪ್ರೊ. ಸಮರ್ ಗುಹ ಅವರಿಗೆ ತಿಳಿಸಿದರು.

'ನೇತಾಜಿ ಬೋಸರು ವಿಮಾನ ಅಪಘಾತದಲ್ಲಿ ಸಾಯಲಿಲ್ಲ, ಅವರು ಹಾಗೆ ಸಾಯಲು ಸಾಧ್ಯವಿಲ್ಲ' ಎಂದು ಪ್ರೊ. ಗುಹ ಅವರು ಒತ್ತಾಯಪೂರ್ವಕವಾಗಿ ಘೋಷಿಸಿದಾಗ ಶ್ರೀಮತಿ ಗಾಂಧಿ ಅವರು ಈ ರೀತಿ ಸವಾಲು ಹಾಕಿದರು.

'ನೇತಾಜಿ ಅವರು ಎಲ್ಲಿದ್ದಾರೆಂಬುದನ್ನು ಪ್ರೊ. ಗುಹ ತಿಳಿಸಿದರೆ ಇಡೀ ಸದನಕ್ಕೆ ಸಂತೋಷವಾಗುತ್ತದೆ. ಆ ಸುದ್ದಿಯನ್ನು ನಾವು ಸ್ವಾಗತಿಸುತ್ತೇವೆ' ಎಂದು ಪ್ರಧಾನಮಂತ್ರಿಗಳು ಹೇಳಿದಾಗ ಸದಸ್ಯರು ಹರ್ಷಧ್ವನಿ ಮಾಡಿದರು.

ನೇತಾಜಿ ಕುರಿತ ಖೋಸ್ಲಾ ಆಯೋಗದ ವರದಿಯನ್ನು ಸರ್ಕಾರ ಅಂಗೀಕರಿಸಿರುವುದನ್ನು ಪ್ರೊ. ಗುಹ ತೀವ್ರವಾಗಿ ಪ್ರತಿಭಟಿಸುತ್ತಾ ನೇತಾಜಿ ಜೀವಂತರಾಗಿದ್ದಾರೆಂದು ಪದೇ ಪದೇ ಘೋಷಿಸಿದಾಗ ಶ್ರೀಮತಿ ಗಾಂಧಿ ಮಧ್ಯೆ ಮಾತನಾಡಬೇಕಾಯಿತು.

(ನೇತಾಜಿ ಅವರು ತೈವಾನಿನಲ್ಲಿ ವಿಮಾನ ಅಪಘಾತದಲ್ಲಿ ಸತ್ತರೆಂಬುದೇ ಖೋಸ್ಲಾ ಆಯೋಗದ ನಿರ್ಧಾರ)

ನಾಳಿನ ಸಂಪತ್ತಿಗೆ ಕೈಹಾಕಲಿದ್ದೇವೆ; ನಾಳೆಗಳೆಲ್ಲ ಸುಭದ್ರವಾದರೆ ನಾಡಿದ್ದೆಲ್ಲ ಅಭದ್ರವಾದೀತೆ?

ಆಳಸಾಗರದಲ್ಲಿ ವರಾಹ ಪ್ರಹಾರ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

2025ರ ಜನವರಿ 13ರಿಂದ ಆರಂಭವಾಗಲಿರುವ ಮಹಾಕುಂಭ ಮೇಳದ ವೈಭವದ ಕುರಿತು ಭಾರತ ದುದ್ದಕ್ಕೂ ಅಷ್ಟೇ ಅಲ್ಲ ನೇಪಾಳ, ಥಾಯ್ಲೆಂಡ್‌ಗಳಲ್ಲೂ ನಮ್ಮ ರೋಡ್‌ಶೋ ನಡೆಯಲಿದೆ. ರೋಡ್‌ಶೋ ಎಂದರೆ ಚಲಿಸುವ ಟ್ಯಾಬ್ಲೊ ಜಾಹೀರಾತಷ್ಟೇ ಅಲ್ಲ; ಮಿನಿ ಪ್ರದರ್ಶನ, ಸ್ಮರಣಿಕೆ ವಿತರಣೆ, ಜನರೊಂದಿಗೆ ಸಂವಾದ, ಆಸಕ್ತರಿಗೆ ವಿಶೇಷ ಆಮಿಷ ಎಲ್ಲ ಇರುತ್ತವೆ. ಪ್ರವಾಸೋದ್ಯಮದ ಬೆಳವಣಿಗೆಗೆ ಇವೆಲ್ಲ ಬೇಕೇಬೇಕು, ಸರಿ. ಇದೇ ವೇಳೆಗೆ, ಇದೇ ಮಾದರಿಯಲ್ಲಿ, ಭಾರತ ಸರ್ಕಾರವು ಬ್ರಿಟನ್, ನೆದರ್ಲೆಂಡ್ಸ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಬೇರೊಂದು ಬಗೆಯ ರೋಡ್‌ಶೋವನ್ನು ಹಮ್ಮಿಕೊಳ್ಳಲಿದೆ. 'ಇಂಡಿಯಾದ ಸಮುದ್ರತಳದಲ್ಲಿ ಇರುವ ಅಮೋಘ ಖನಿಜ ಖಜಾನೆಯನ್ನು ಮೇಲಕ್ಕೆತ್ತಲು ಹೊರಟಿದ್ದೇವೆ; ಬಂಡವಾಳ ಹೂಡಬನ್ನಿ' ಎಂಬ ಸಂದೇಶ ಅದರಲ್ಲಿ ಇರಲಿದೆ.

ಐದು ಕಿಲೊಮೀಟರ್ ಆಳದ ಸಮುದ್ರತಳಕ್ಕೆ ಯಂತ್ರಗಳನ್ನು ಇಳಿಸಿ ಗಣಿಗಾರಿಕೆ ಮಾಡುವುದೆಂದರೆ ಅದು ಚಂದ್ರಯಾನಕ್ಕಿಂತ ಕ್ಲಿಷ್ಟದ ಸಾಹಸ. ಆದರೆ ನಾವು ಚಂದ್ರಯಾನ ಕೈಗೊಂಡಾಗಲೂ ವಿದೇಶಗಳಲ್ಲಿ ಹೀಗೆಲ್ಲ ಟಾಂ ಟಾಂ ಮಾಡಿರಲಿಲ್ಲ. ಈಗ ಇಂಥ ರೋಡ್‌ಶೋ ಮಾಡಲು ಕಾರಣವೇನು? 'ಇದರಲ್ಲಿ ಹಣವನ್ನು ಹೂಡಿದರೆ ಎಲ್ಲರ ಭವಿಷ್ಯ ಉಜ್ವಲ ಆಗಲಿದೆ. ಹೂಡಿಕೆದಾರರಿಗೆ ಹೇರಳ ಲಾಭವೂ ಇದೆ. ನಮ್ಮ ಬಳಿ ಸುಧಾರಿತ ತಾಂತ್ರಿಕ ಸಾಧನಗಳಿಲ್ಲ; ಆದರೆ ನಿಮ್ಮ ದೇಶಗಳಲ್ಲಿ ಇವೆ. ನಿಮ್ಮ ಗಣಿ ಕಂಪನಿಗಳಲ್ಲಿ ನೀವು ಹಣ ಹೂಡಿದರೆ ಹೊಸ ರತ್ನಗರ್ಭದ ಬಾಗಿಲು ತೆರೆಯಲಿದೆ'– ಇದು ರೋಡ್‌ಶೋ ಉದ್ದೇಶ.

ಅಂಡಮಾನ್, ನಿಕೊಬಾರ್ ದ್ವೀಪಮಾಲೆಯ ಬಳಿ ಸಮುದ್ರದ ತಳದಲ್ಲಿ ಮ್ಯಾಂಗನೀಸ್ ಉಂಡೆಗಳು ಇವೆ. ನೆಲ್ಲಿಕಾಯಿ- ತೆಂಗಿನಕಾಯಿಯಷ್ಟು; ಆದರೆ ಹೆಚ್ಚಿನವೆಲ್ಲ ಆಲೂಗಡ್ಡೆ ಗಾತ್ರದವು. ಇವಕ್ಕೆ 'ಪಾಲಿಮೆಟಾಲಿಕ್ ನೊಡ್ಯೂಲ್ಸ್' (ಬಹುಧಾತ್ವಿಕ ಉಂಡೆಗಳು) ಎನ್ನುತ್ತಾರೆ. ಅವನ್ನು ಮೇಲೆತ್ತಿ, ಕುಟ್ಟಿ ಕರಗಿಸಿದರೆ ಮ್ಯಾಂಗನೀಸ್ ಮತ್ತು ಕಬ್ಬಿಣದ ಜೊತೆ ನಿಕ್ಕೆಲ್, ಕ್ಯಾಡ್ಮಿಯಂ ಮತ್ತು ತಾಮ್ರದ ಲೋಹಗಳು ಸಿಗುತ್ತವೆ. ಈ ಮೂರೂ ಲೋಹಗಳನ್ನು 'ನಾಳಿನ ಸಂಪತ್ತು' ಎನ್ನುತ್ತಾರೆ– ಏಕೆಂದರೆ ಗಾಳಿಯಂತ್ರ, ಸೌರಫಲಕದಂಥ ಆಧುನಿಕ ಪರಿಸರಸ್ನೇಹಿ ಸಾಧನಗಳಿಂದ ಶಕ್ತಿಯನ್ನು ಸಂಗ್ರಹಿಸಲು ಮತ್ತು ವಿದ್ಯುತ್‌ಚಾಲಿತ ವಾಹನಗಳನ್ನು ಓಡಿಸಲು ಬ್ಯಾಟರಿ ಬೇಕೇ ಬೇಕು. ನಮ್ಮ ಮೊಬೈಲ್‌ನಿಂದ ಹಿಡಿದು, ರಡಾರ್‌ಗಳವರೆಗೆ ಬ್ಯಾಟರಿಗಳು ಬೇಕು. ಅದಕ್ಕೆ ಬೇಕಿದ್ದ ನಿಕ್ಕೆಲ್, ಕ್ಯಾಡ್ಮಿಯಂ ಧಾತುಗಳ ನೆಲದ ಮೇಲಿನ ನಿಕ್ಷೇಪಗಳೆಲ್ಲ ಖಾಲಿ ಆಗುತ್ತಿವೆ.

ಭಾರತ ಸರ್ಕಾರ ಇದೇ ಮೊದಲ ಬಾರಿಗೆ, ಅಂಡಮಾನ್ ಸಮುದ್ರದ ಮೂರು ಲಕ್ಷ ಚದರ ಕಿಲೊಮೀಟರ್ ವಿಸ್ತೀರ್ಣದ ತಳದಲ್ಲಿ ಹಾಸಿರುವ ಉಂಡೆಗಳನ್ನು ಮೇಲೆತ್ತಲು ಸಜ್ಜಾಗಿದೆ. ನಾಲ್ಕರಿಂದ ಆರು ಕಿಲೊಮೀಟರ್ ಆಳದ, ನಿಶ್ಚಲ ನೀರಿನಲ್ಲಿ ದಶಕೋಟಿ ವರ್ಷಗಳಿಂದ ಅತಿ ಮೆಲ್ಲಗೆ ಜಿನುಗಿ ಸಂಗ್ರಹವಾದ ಲೋಹಗಳು ಇವು. ಆ ಘೋರ ಕತ್ತಲಿನ, ಭಾರೀ ಒತ್ತಡದ, ಅತಿಶೀತಲ ಪರಿಸರದ, ಹೂಳಿನ ಪದರವನ್ನು ಚದುರಿಸಿ ಉಂಡೆಗಳನ್ನು ಬಾಚಬೇಕು. ಮನುಷ್ಯನಂತೂ ಅಲ್ಲಿಗೆ ಇಳಿಯಲಾರ. ಕೇವಲ 250 ಮೀಟರ್ ಆಳಕ್ಕಿಳಿದರೂ ಒತ್ತಡ ತಾಳಲಾರದೆ ಶ್ವಾಸಕೋಶದ ಅನಿಲ ಕಣಗಳೆಲ್ಲ ಚಿಂದಿಯಾಗಿ ರಕ್ತಕ್ಕೆ ಸೇರಿ ಸಾವು ಅಮುಕುತ್ತದೆ. ಐದು ಕಿ.ಮೀ. ಆಳಕ್ಕೆ ಇಳಿದರೆ ಆತನ ಮೇಲೆ ಸಿಮೆಂಟ್ ಚೀಲಗಳನ್ನು ಹೇರಿಕೊಂಡ 15 ಟ್ರಕ್‌ಗಳನ್ನು ನಿಲ್ಲಿಸಿದಷ್ಟು ಒತ್ತಡ ಬೀಳುತ್ತದೆ. ಚೆನ್ನೈನಲ್ಲಿರುವ 'ಭಾರತೀಯ ಸಾಗರ ತಂತ್ರಜ್ಞಾನ ಸಂಸ್ಥೆ'ಯ ಸಾಹಸಿಗಳು ಎರಡು ತಿಂಗಳ ಹಿಂದೆ 'ವರಾಹ-3' ಹೆಸರಿನ ತೆವಳುಗಾಡಿಯನ್ನು ಅಂಡಮಾನ್ ಸಾಗರದಲ್ಲಿ ಇಳಿಸಿದರು. 1,193 ಮೀಟರ್ ಆಳದಲ್ಲಿ ಅದನ್ನು ಓಡಾಡಿಸಿ, ಒಂದಿಷ್ಟು ಉಂಡೆಗಳನ್ನು ಬಾಚಿ ಮೇಲೆತ್ತಿದ್ದಾರೆ. ಈಗ ದೊಡ್ಡ ಪ್ರಮಾಣದಲ್ಲಿ ಮೇಲೆತ್ತಲು ಗುರುತಿಸಿದ ತಾಣ ಇನ್ನೂ ದೂರದ, ಈಗಿಗಿಂತ ಐದು ಪಟ್ಟು ಆಳದ ಸಪಾಟು ಕಂದಕದಲ್ಲಿದೆ. ಅಲ್ಲಿಗೆ ವೀಕ್ಷಣಾ ಯಂತ್ರಗಳನ್ನು ಇಳಿಸುವುದೂ ಸದ್ಯಕ್ಕೆ ನಮ್ಮ ಎಂಜಿನಿಯರ್‌ಗಳಿಗೆ ಸವಾಲಿನ ಪ್ರಶ್ನೆಯಾಗಿದೆ.

ಜಗತ್ತಿನ ಎಲ್ಲ ಸಾಗರಗಳ ಎಲ್ಲ ತಳಗಳಲ್ಲೂ ಇದು ಹಾಸಿರುವುದಿಲ್ಲ. ಎಲ್ಲೆಲ್ಲಿ ಎಷ್ಟೆಷ್ಟು ನಿಕ್ಷೇಪಗಳಿವೆ ಎಂಬುದನ್ನು 'ಅಂತಾರಾಷ್ಟ್ರೀಯ ತಳಸಾಗರ ಪ್ರಾಧಿಕಾರ' (ಸೀಬೆಡ್ ಅಥಾರಿಟಿ- ಐಎಸ್‌ಎ) ಈಗಾಗಲೇ ಸಮೀಕ್ಷೆ ಮಾಡಿದೆ. ಯಾವ ದೇಶಕ್ಕೂ ಸೇರಿಲ್ಲದ ಜಲಧಿಯಲ್ಲೇ ಹೆಚ್ಚಿನ ನಿಕ್ಷೇಪಗಳಿದ್ದು, ಅವನ್ನು ಮೇಲಕ್ಕೆತ್ತಲು ಕಟ್ಟುನಿಟ್ಟಿನ ನಿಬಂಧನೆಗಳಿವೆ. ಅಲ್ಲಿರುವ ನಿಧಿಯು ಎಲ್ಲರ ಸೊತ್ತೂ ಆಗಿರುವುದರಿಂದ ಮತ್ತು ಅಲ್ಲಿನ ಪರಿಸರ ಅತ್ಯಂತ ಸೂಕ್ಷ್ಮ ಇರುವುದರಿಂದ ಅಂಥ ನಿಬಂಧನೆಗಳನ್ನು ಹಾಕಲಾಗಿದೆ. ಭಾರತ ತನ್ನದೇ ಸಮುದ್ರದ ಖಾಸಾ ಆರ್ಥಿಕ ವಲಯದಲ್ಲಿ ಗಣಿಗಾರಿಕೆ ಮಾಡುವುದಾದರೂ ಐಎಸ್‌ಎ ಅನುಮತಿ ಬೇಕೇಬೇಕು; ಪಡೆದಿದೆ.

ಆಳ ಸಾಗರಗಳ ತಳವೆಂದರೆ ಅಚ್ಚರಿಗಳ ಆಗರ. ಅಂಥ ದಟ್ಟ ಚಳಿಯಲ್ಲೂ ಬಿಸಿ ಕೊಳವೆಗಳಿವೆ. ಗಂಧಕದ ರಸದಲ್ಲೇ ಬದುಕುವ ಜೀವಿಗಳಿವೆ. ಘೋರ ಒತ್ತಡದಲ್ಲೂ ದೈತ್ಯಗಾತ್ರದ ಸ್ಕ್ವಿಡ್‌ಗಳಿವೆ. ಮಿನುಗುವ ಜೆಲ್ಲಿಮೀನುಗಳೂ ಪಾರಕ ಶರೀರದ 'ಯೆತಿ' ಏಡಿಗಳೂ ಇವೆ. ಅದು ಬೇರೆಯದೇ ಲೋಕ. ನಾವಿನ್ನೂ ನೋಡಿಲ್ಲದ ಅಲ್ಲಿನ ಆ ವಿಶಿಷ್ಟ ಜೀವಲೋಕದಲ್ಲಿ ಹಸ್ತಕ್ಷೇಪ ಬೇಡವೆಂದು ಒಕ್ಕೊರಲಿನ ಒತ್ತಡಗಳಿವೆ. ಗ್ರೀನ್‌ಪೀಸ್ ಯೋಧರಂತೂ ಶೋಧನೌಕೆಗಳ ಕೆಳಗೇ ನುಗ್ಗಿ ಅಹಿಂಸಾತ್ಮಕ ನೌಕಾರೋಕೊ ಮಾಡಿದ್ದರು. ಅಂಥ ಪ್ರತಿರೋಧಗಳ ನಡುವೆಯೇ 31 ತಾಣಗಳಲ್ಲಿ ಗಣಿಗಾರಿಕೆ ನಡೆಸಲು ಹನ್ನೊಂದು ದೇಶಗಳು (ಚೀನಾ, ಭಾರತ, ಪಾಪುವಾ ನ್ಯೂಗಿನಿ, ದ.ಕೊರಿಯಾ...) ಗುತ್ತಿಗೆ ಪಡೆದಿವೆ. ಕೂಕ್ ಐಲ್ಯಾಂಡ್ಸ್ ಹೆಸರಿನ ಬರೀ 15 ಸಾವಿರ ಪ್ರಜೆಗಳ ದ್ವೀಪದೇಶದ ಸುತ್ತ ಭಾರೀ ದೊಡ್ಡ ನಿಕ್ಷೇಪವಿದ್ದು, ಅದಕ್ಕೂ (ಬೇನಾಮಿ) ಗುತ್ತಿಗೆ ಸಿಕ್ಕಿದೆ. ಆದರೆ ವಾಣಿಜ್ಯ ವಹಿವಾಟಿಗೆ ಬೇಕಷ್ಟು ಉಂಡೆಗಳನ್ನು ಯಾರೂ ಇನ್ನೂ ಎತ್ತಿಲ್ಲ.

ಮನುಷ್ಯರ ಗಾಳಿಯನ್ನೂ ತಟ್ಟಿಸಿಕೊಳ್ಳದ ಜೀವಲೋಕಕ್ಕೆ ಯಂತ್ರಗಳನ್ನು ಕಳಿಸಿ, ಸದ್ದು- ಬೆಳಕು, ಇಂಗಾಲದ ಬಗ್ಗಡಗಳ ಗದ್ದಲ ಎಬ್ಬಿಸಿದರೆ ಅದೆಷ್ಟು ವ್ಯಾಪಕ ಪರಿಣಾಮ ಆಗುತ್ತದೊ ಗೊತ್ತಿಲ್ಲ. ಅದನ್ನು ಊಹಿಸಿಯೇ ದಕ್ಷಿಣ ಕೊರಿಯಾದ ಸ್ಯಾಮ್‌ಸಂಗ್, ಜರ್ಮನಿಯ ಬಿಎಮ್‌ಡಬ್ಲ್ಯೂ ಕಂಪನಿಗಳು ತಾವೆಂದೂ ಈ ಉಂಡೆಗಳಿಂದ ಲಭಿಸಿದ ಧಾತುಗಳನ್ನು ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಿವೆ. ಯಾರಿಗೆ ಗೊತ್ತು, ಭಾರತ ತನ್ನ ಸಾಗರತಳದ ಗಣಿಗಾರಿಕೆಯ ಸಾಹಸದ ಪ್ರಚಾರಕ್ಕೆಂದು ಯುರೋಪ್‌ನಲ್ಲಿ ರೋಡ್‌ಶೋ ಮಾಡುವಾಗ, ಪ್ರತಿಭಟನೆಯ ಶೋಗಳೂ ಮುಖಾಮುಖಿ ಆಗಬಹುದು.

ಹತ್ತು ವರ್ಷಗಳ ಹಿಂದೆ ಭಾರತದ ಆಳಸಮುದ್ರದ ಮತ್ಸ್ಯಸಂಪತ್ತನ್ನು ಬಾಚಿ ಸಾಗಿಸಲು ವಿದೇಶಿ ಕಂಪನಿಗಳಿಗೆ ಗುತ್ತಿಗೆ ನೀಡಿ ₹3000 ಕೋಟಿ ಗಳಿಸಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಸಿದ್ಧತೆ ನಡೆಸಿತ್ತು. 'ಆಳ ಸಾಗರದಲ್ಲಿ ಆಧುನಿಕ ಬೀಸುಗತ್ತಿ' ಹೆಸರಿನಲ್ಲಿ ಇದೇ ಅಂಕಣದಲ್ಲಿ (ವಿ.ವಿ., 12.2.2015) ಚರ್ಚಿಸಲಾಗಿತ್ತು. ಅಂದು ನಮ್ಮ ಎಲ್ಲ ಮೀನುಗಾರರ ಸಂಘಟನೆಗಳು ಪ್ರತಿಭಟನೆ ನಡೆಸಿದ್ದರಿಂದ ಆ ಸಂಪತ್ತೆಲ್ಲ ನಮ್ಮಲ್ಲೇ ಉಳಿಯುವಂತಾಯಿತು. ದೂರದ ಅಂಡಮಾನ್ ದ್ವೀಪ ಮಾಲಿಕೆಯಲ್ಲಿ ಈಗಿನ ಈ ಎರಡನೇ ಬೀಸುಗತ್ತಿಯ ಕುರಿತು ಪರವಿರೋಧಗಳ ಸೊಲ್ಲು ಇನ್ನೂ ಎದ್ದಂತಿಲ್ಲ. ನಾಳಿನ ಭವಿಷ್ಯವನ್ನು ಉಜ್ವಲಗೊಳಿಸಲು ನಾಡಿದ್ದಿನ ಭವಿಷ್ಯವನ್ನು ಬಲಿಕೊಡುವ ಬಗ್ಗೆ ಅಲ್ಲಿನವರು ಧ್ವನಿ ಎತ್ತಿದರೂ ಅದು ದಿಲ್ಲಿಗೆ ಕೇಳಿಸುವ ಸಾಧ್ಯತೆ ಇಲ್ಲ. ಗ್ರೇಟ್ ನಿಕೊಬಾರ್ ದ್ವೀಪದಲ್ಲಿ ಈಗಾಗಲೇ ಅಭಿವೃದ್ಧಿಯ ಮಹಾರಥ ಚಲಿಸತೊಡಗಿದೆ. ₹72 ಸಾವಿರ ಕೋಟಿ ವೆಚ್ಚದಲ್ಲಿ ಆಧುನಿಕ ಬಂದರು, ವಿಮಾನ ನಿಲ್ದಾಣ, ಎರಡು ನಗರಗಳು– ಹೀಗೆ ಅಲ್ಲಿ ನಮ್ಮದೇ ಸ್ವಂತದ ಹಾಂಗ್‌ಕಾಂಗ್ ಸೃಷ್ಟಿಯಾಗಲಿದೆ. ಅಲ್ಲಿನ ವಿಶಿಷ್ಟ ಹವಳದ ದಿಬ್ಬ, ಕಡಲಾಮೆ ಗುಂಪು, ಕಾಂಡ್ಲಕಾಡು, ಪಕ್ಷಿಸಮೂಹಕ್ಕೆಲ್ಲ ನಾಳೆಗಳೇ ಮಾಯವಾಗಲಿವೆ.

ಮಹಾಕುಂಭ ಎಂದರೆ ಹಿಮಾಲಯದಿಂದ ಹರಿದುಬರುವ ಪುಣ್ಯಧಾರೆಯಲ್ಲಿ ಮುಳುಗಿ ಪಾಪವನ್ನು ತೊಳೆದುಕೊಳ್ಳಲು ಬಯಸುವವರ ಮೇಳ. ಅತ್ತ, ನಿಕೊಬಾರ್ ಕಡೆ ಹರಿದುಬರುವ ಧನಧಾರೆಯಲ್ಲಿ ಯಂತ್ರಗಳ ಮೇಳ ಮೈದಳೆಯಲಿದೆ.



ಚುರುಮುರಿ

ಇಬ್ಬರಲ್ಲ ಮೂವರು

● ಆನಂದ

'ಇದೇನ್ರಿ, ಹಮ್ ದೊ ಬದಲು ಹಮಾರೆ ತೀನ್ ಅಂತಿದಾರೆ ಇವರು?' ಎಂದು ಮಡದಿ ಆಶ್ಚರ್ಯಪಟ್ಟಳು.

'ಯಾರು?' ಎಂದೆ. 'ಭಗತ್' ಎಂದಳು.

'ಚೇತನ್ ಭಗತ್ ತಾನೆ? ಅವರು ಬರೆದಿದ್ದು 'ತ್ರೀ ಮಿಸ್ಟೇಕ್ಸ್ ಇನ್ ಮೈ ಲೈಫ್' ಕಾದಂಬರಿ. ತ್ರೀ ಕಿಡ್ಸ್ ಅಲ್ಲ' ಎಂದೆ.

'ಆ ಭಗತ್ ಅಲ್ಲಾರಿ. ಆರ್‌ಎಸ್‌ಎಸ್ ಬಾಸ್'.

'ಅವರು ಭಾಗವತ್, ಮೋಹನ್ ಭಾಗವತ್'.

'ಹ್ಞಾಂ! ಅವರೇ. ಎಲ್ಲರಿಗೂ ಮೂವರು ಮಕ್ಕಳಿರಲಿ ಎಂದು ಹಾರೈಸಿದಾರಲ್ಲ ಓದಿದ್ರಾ?'

'ಗೊತ್ತಾಯಿತು. ಭಾರತದ ಜನಸಂಖ್ಯೆ ಕಡಿಮೆ ಆಗ್ತಿದೆ ಎಂದು ಅವರಿಗೆ ಕಳವಳ'.

'ಕಡಿಮೆ? ನಾವು ಚೀನಾವನ್ನು ಹಿಂದಿಕ್ಕಿದೀವಿ ಈ ವಿಷಯದಲ್ಲಿ. ಅವರಿಗೇಕೆ ಕಳವಳ?'

'ಫಲವಂತಿಕೆ ದರ ಕುಸೀತಾ ಇದೆ, ಹೀಗೇ ಮುಂದುವರಿದರೆ ಹಿಂದೂಗಳ ಸಂಖ್ಯೆ ಕುಸಿಯುತ್ತೆ. ಆದ್ದರಿಂದ ಜನಸಂಖ್ಯೆ ಮೇಕಪ್ ಮಾಡಲು ಎಲ್ಲ ಹೆಣ್ಣುಮಕ್ಕಳು ಮೂವರು ಮಕ್ಕಳನ್ನು ಹೆರಬೇಕು ಎಂದು ಕಳಕಳಿಯಿಂದ ಹೇಳಿದ್ದಾರೆ'.

'ಈಗ ಆರತಿಗೊಂದು ಕೀರ್ತಿಗೊಂದು. ಮೂರನೆಯದು? ಆರತಿಗೊ ಕೀರ್ತಿಗೊ?'

'ಆರತಿಗೆ ಎರಡು ಕೀರ್ತಿಗೆ ಒಂದು ಆದರೆ?'

'ಅಥವಾ ಕೀರ್ತಿಗೆ ಎರಡು ಆಗಿ ಆರತಿಗೆ ಒಂದು ಸಹ ಆಗಬಹುದು'.

'ಎರಡೂ ಆರತಿಗೆ ಆಗಿ ಕೀರ್ತಿಗೆ ಒಂದಿರಲಿ ಎಂದು ಪ್ರಯತ್ನಿಸಿದಾಗ ಅದೂ ಎಡವಟ್ಟಾಗಿ ಆರತಿಗೇ ಆದರೆ? ಆಗ ಕೀರ್ತಿಗೆ ಬೇಕೇಬೇಕು ಎಂದು ಮತ್ತೆ ಪ್ರಯತ್ನಿಸಿದರೆ?'

'ಭಾಗವತ್‌ರಿಗೆ ಖುಷ್ ಆಗಬಹುದು. ಜನಸಂಖ್ಯೆ ಜಾಸ್ತಿ ಆಗುತ್ತಲ್ಲ'.

'ಅಪ್ಪ ಅಮ್ಮನ ಪಾಡು? ಹಮ್ ದೊ ಹಮಾರ ದೊ ಪ್ರಕಾರವೇ ಪ್ರತಿವರ್ಷ ಎರಡೆರಡು ಬರ್ತ್‌ಡೇ, ಎರಡೆರಡು ನರ್ಸರಿ ಶಾಲೆಯಲ್ಲಿ ಸೀಟ್, ಎರಡೆರಡು ಕಾಲೇಜು ಅಡ್ಮಿಷನ್‌ಗೆ ಅಲೆದಾಟ, ಎರಡೆರಡು ಡೊನೇಷನ್... ಹೀಗಿರುವಾಗ ಈ ಎರಡು ಮೂರಾದರೆ?'

'ಬರಗಾಲದಲ್ಲಿ ಅಧಿಕಮಾಸದಂತೆ ಆಗುತ್ತೆ'.

'ಅಂದಹಾಗೆ ಭಾಗವತರಿಗೆ ಮಕ್ಕಳೆಷ್ಟು?!'

'ಅವರಿಗೆ ಮದುವೆಯೇ ಆಗಿಲ್ಲ'.

ಸಂಗತ

ಹಂಪಿ ವಿ.ವಿ: ಅಸ್ಮಿತೆ ಉಳಿಯಲಿ

ನಾಡಿನ ಅಸ್ಮಿತೆಯನ್ನು ಎತ್ತಿ ತೋರಿಸುವ ಶಿಖರದಂತೆ ಇರುವ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನೆರವನ್ನು ಒದಗಿಸಲು ಸಾಧ್ಯವಾಗದಷ್ಟು ಬಡವಾಯಿತೇ ಕರ್ನಾಟಕ?

● ನಾಗೇಶ ಡೂಗನವರ

ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತಗಲುವ ಖರ್ಚನ್ನು ಮಿತಗೊಳಿಸಿ, ಆರ್ಥಿಕ ಸಂಕಷ್ಟದಲ್ಲಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ನೆರವು ನೀಡುವಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಮಂಡ್ಯ ಜಿಲ್ಲಾಧಿಕಾರಿಗೆ ಸಲಹೆ ನೀಡಿರುವುದು ಕಳವಳ ಮೂಡಿಸುವ ಮತ್ತು ವಿಷಾದಕ್ಕೆ ಕಾರಣವಾಗುವ ಸಂಗತಿ. ಇಂತಹ ಸಲಹೆಯ ಹಿನ್ನೆಲೆಯಲ್ಲಿ ಅವ್ಯಕ್ತವಾಗಿ ಗೋಚರಿಸುತ್ತಿರುವ ಕರ್ನಾಟಕದ ಶೈಕ್ಷಣಿಕ ವಲಯದ ಸಮಸ್ಯೆಗಳ ಬಗ್ಗೆ ಸರ್ಕಾರ, ಸಾರ್ವಜನಿಕರು ಹಾಗೂ ಶೈಕ್ಷಣಿಕ ವಲಯದ ಫಲಾನುಭವಿಗಳು ಗಂಭೀರವಾಗಿ ಆಲೋಚಿಸಬೇಕಾದ ತುರ್ತಿನ ಸಂದರ್ಭ ಇದಾಗಿದೆ.

ಕನ್ನಡ ಭಾಷೆಯ ಆಮೂಲಾಗ್ರ ಅಧ್ಯಯನಕ್ಕಾಗಿಯೇ ಮೀಸಲಿರುವ ಏಕೈಕ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾದದ್ದು ಕನ್ನಡ ವಿಶ್ವವಿದ್ಯಾಲಯ. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಆಧರಿಸಿ ಬೆಳೆದ ಕಲೆ, ಸಂಸ್ಕೃತಿ, ವಾಸ್ತುಶಿಲ್ಪದಂತಹವನ್ನು ಅಭ್ಯಸಿಸುವುದರೊಂದಿಗೆ ಈ ನಾಡಿನ ಭಾಷೆ ಮತ್ತು ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳು, ಪುರಾವೆಗಳನ್ನು ಸಂಗ್ರಹಿಸಿ, ಸಂಶೋಧಿಸಿ ನಾಡಿನ ಐತಿಹಾಸಿಕ-ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವ ಗುರುತರ ಜವಾಬ್ದಾರಿಯನ್ನು ವಿಶ್ವವಿದ್ಯಾಲಯ ನಿಭಾಯಿಸುತ್ತಾ ಬಂದಿದೆ. ಹಾಗೆಯೇ ನಾಡಿನ ದೇಶಿ ಪರಂಪರೆಯಲ್ಲಿ ಹುಟ್ಟಿಕೊಂಡಿರುವ ಮಣ್ಣಿನ ವಿಜ್ಞಾನ, ಖಗೋಳ ವಿಜ್ಞಾನ, ಸಿದ್ಧವೈದ್ಯದಂತಹ ವಿಜ್ಞಾನವನ್ನು ಆಧುನಿಕ ವಿಜ್ಞಾನದಂತೆ ಅಧ್ಯಯನಕ್ಕೆ ಒಳಪಡಿಸಿ, ದೇಶಿ ಜ್ಞಾನಮಾರ್ಗಗಳನ್ನು ಶೋಧಿಸುವ ಕನಸನ್ನು ಹೊತ್ತಿರುವುದು ಈ ವಿಶ್ವವಿದ್ಯಾಲಯದ ವಿಶಿಷ್ಟ ಕುರುಹಾಗಿದೆ.

ಇದರ ಜೊತೆಗೆ ನಾಡು– ನುಡಿ, ನೆಲ– ಜಲ, ಗಡಿ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಗ್ರಮಾನ್ಯ ಸೇವೆ ಸಲ್ಲಿಸಿರುವ ಸಾಧಕರು, ಗಣ್ಯರಿಗೆ– ಕವಿ ರವೀಂದ್ರನಾಥ ಟ್ಯಾಗೋರ್ ಅವರ ಶಾಂತಿನಿಕೇತನದಲ್ಲಿ ನೀಡಲಾಗುತ್ತಿರುವ 'ದೇಶಿಕೋತ್ತಮ' ಪದವಿಯಿಂದ ಪ್ರೇರಣೆ ಪಡೆದು– ಕನ್ನಡದ ಆದಿಕವಿ ಪಂಪನಿಗೆ ಸಂಬಂಧಿಸಿದ್ದು ಎಂಬ ಹೆಗ್ಗಳಿಕೆಗೆ ಪಾತ್ರವಾದ ನಾಡೋಜ ಪದವಿಯನ್ನು ಕೊಡಮಾಡುತ್ತಾ ಬಂದಿದೆ.

ನಾಡಿನ ಅಸ್ಮಿತೆಯನ್ನು ಎತ್ತಿ ತೋರಿಸುವ ಶಿಖರದಂತೆ ಇರುವ ಇಂಥ ಒಂದು ವಿಶ್ವವಿದ್ಯಾಲಯವನ್ನು ಉಳಿಸಿಕೊಳ್ಳಲು ಆರ್ಥಿಕ ನೆರವನ್ನು ಒದಗಿಸಲು ಸಾಧ್ಯವಾಗದಷ್ಟು ಬಡವಾಯಿತೇ ಕರ್ನಾಟಕ? ಹೀಗೆ ಮಾಡಿದರೆ ಕನ್ನಡ ಸಾಹಿತ್ಯ ಸಮ್ಮೇಳನ ಅರ್ಥಪೂರ್ಣವಾಗುತ್ತದೆಯೇ? ರಾಜ್ಯ ರಾಜಕಾರಣದಲ್ಲಿ ಘಟಿಸುವ ವಿರೋಧಾಭಾಸಗಳು, ದಿನಬೆಳಗಾದರೆ ಸಾಲು ಸಾಲಾಗಿ ಕೇಳಿಬರುವ ಭ್ರಷ್ಟಾಚಾರ ಪ್ರಕರಣಗಳ ನಡುವೆ ವಿದ್ಯೆಯನ್ನು ನೀಡುವ ಮತ್ತು ಹೊಸ ಜ್ಞಾನ ಸೃಷ್ಟಿಸುವ ಕೇಂದ್ರಗಳಾದ ವಿಶ್ವವಿದ್ಯಾಲಯಗಳ ಬಗ್ಗೆ ಆಳುವವರ ಧೋರಣೆ, ಕಾಳಜಿ ಎಂತಹದು ಎಂದೊಮ್ಮೆ ಗಂಭೀರವಾಗಿ ಆಲೋಚಿಸಬೇಕಾಗಿದೆ.

ಹಲವು ಕಾರಣಗಳಿಂದಾಗಿ ಹಂಪಿ ವಿಶ್ವವಿದ್ಯಾಲಯದ ಸಿಬ್ಬಂದಿಗೆ ಕೆಲವು ತಿಂಗಳುಗಳಿಂದ ಸಂಬಳ ನೀಡಲಾಗಿಲ್ಲ. ವಿದ್ಯಾರ್ಥಿವೇತನ ಸಿಗದೆ ಸಂಶೋಧನೆಯ ಕೆಲಸ ಕುಂಠಿತಗೊಂಡಿದೆ... ಹಾಗಾದರೆ ಸಾಹಿತ್ಯ ಸಮ್ಮೇಳನದ ಖರ್ಚನ್ನು ಕಡಿತಗೊಳಿಸಿ ಉಳಿಸಿದ ಹಣದಿಂದ, ಆ ವಿಶ್ವವಿದ್ಯಾಲಯಕ್ಕೆ ಎಷ್ಟು ದಿನ ಆರ್ಥಿಕ ನೆರವು ನೀಡಬಹುದು? ಈ ಸಮಸ್ಯೆಗೆ ಇದು ಸರಿಯಾದ ಪರಿಹಾರವೇ? ಈ ವಿಶ್ವವಿದ್ಯಾಲಯವನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿಯಲ್ಲವೇ? ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದವರು ಹೀಗೆ ಸಲಹೆ ನೀಡುವುದೆಂದರೆ, ಆಡಳಿತಾರೂಢ ಸರ್ಕಾರದ ವೈಫಲ್ಯವನ್ನು ಎತ್ತಿ ತೋರಿಸಿದಂತೆ ಅಲ್ಲವೇ?

ಕರ್ನಾಟಕದ ಅಸ್ಮಿತೆಯಾಗಿರುವ ವಿಶ್ವವಿದ್ಯಾಲಯವೊಂದು ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವುದನ್ನು ನೋಡಿದರೆ, ಮಾರ್ಟಿನ್ ಲೂಥರ್ ಕಿಂಗ್ ಅವರು ಹೇಳಿದ್ದ ಮಾತೊಂದು ನೆನಪಿಗೆ ಬರುತ್ತದೆ. ಅಮೆರಿಕದಲ್ಲಿ ಕಪ್ಪುವರ್ಣೀಯರು ಅನುಭವಿಸುತ್ತಿದ್ದ ನೋವು, ಸಂಕಟದ ಬಗ್ಗೆ ಮಾತನಾಡಿದ್ದ ಅವರು 'ಅಮೆರಿಕ ಎಂಬ ಸಿರಿ ಸಂಪತ್ತಿನಿಂದ ತುಂಬಿಹೋದ ಸಮುದ್ರದ ಮಧ್ಯೆ, ಬಡತನವೆಂಬ ಏಕಾಂಗಿ ದ್ವೀಪದಲ್ಲಿ ಅದೇ ದೇಶದ ಕಪ್ಪುಜನ ನರಳುತ್ತಿದ್ದಾರೆ' ಎಂದಿದ್ದರು. ಈ ಮಾತು ಬಹುಶಃ ಕರ್ನಾಟಕದ ಶಿಕ್ಷಣ ವ್ಯವಸ್ಥೆಗೂ ಅನ್ವಯಿಸುತ್ತದೆ. ಆರ್ಥಿಕವಾಗಿ ಸಬಲವಾಗಿರುವ ಕರ್ನಾಟಕದಲ್ಲಿ ಇಡೀ ಶಿಕ್ಷಣ ವ್ಯವಸ್ಥೆಯು ಸಿಗಬೇಕಾದ ಅನುದಾನ ಸಿಗದೇ ಸೊರಗುತ್ತಿರುವುದು ದುರಂತವೇ ಸರಿ.

ಸರ್ಕಾರಿ ಕನ್ನಡ ಶಾಲೆಗಳು ವರ್ಷದಿಂದ ವರ್ಷಕ್ಕೆ ಆತಂಕಕಾರಿ ಸಂಖ್ಯೆಯಲ್ಲಿ ಮುಚ್ಚುತ್ತಿರುವುದು, ಎಲ್ಲ ಹಂತದ ಶೈಕ್ಷಣಿಕ ಸಂಸ್ಥೆಗಳಲ್ಲಿ ಮೂಲ ಸೌಕರ್ಯಗಳ ಕೊರತೆ, ಶಿಕ್ಷಕರ ಕೊರತೆ, ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಚಟುವಟಿಕೆಗಳನ್ನು ಒಳಗೊಂಡಂತೆ ಸಂಶೋಧನೆಯಂತಹ ಕಾರ್ಯಗಳಿಗೆ ಬೇಕಾದ ಅನುದಾನದ ಕೊರತೆ ಕಣ್ಣಿಗೆ ರಾಚುವಂತೆ ಕಾಣಿಸುತ್ತವೆ.

ಗಂಭೀರವಾದ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಮಾರ್ಗೋಪಾಯಗಳ ಬಗ್ಗೆ ಆಲೋಚಿಸಿ, ಚರ್ಚಿಸಿ ಕಾರ್ಯೋನ್ಮುಖರಾಗಬೇಕಾಗಿದೆ. ದೇಶದ ಅಭಿವೃದ್ಧಿ, ರಾಷ್ಟ್ರ ನಿರ್ಮಾಣ, ಸುಸ್ಥಿರ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರ ವಹಿಸುವ ಶಿಕ್ಷಣ ನಮ್ಮ ಆದ್ಯತೆಯಾಗಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರ, ಸಾರ್ವಜನಿಕರು ಕೈಜೋಡಿಸಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ
ವಿಜಯ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ

ವಾಚಕರ ವಾಣಿ

'ಹ್ಯಾಪಿ ಜರ್ನಿ' ಸಂದೇಶಕ್ಕೆ ಅರ್ಥ ಬರಲಿ

ಹಿರಿಯ ನಾಗರಿಕರಿಗೆ ರೈಲು ಪ್ರಯಾಣ ದರದಲ್ಲಿ ಈ ಹಿಂದೆ ನೀಡುತ್ತಿದ್ದಂತೆ ರಿಯಾಯಿತಿ ಸೌಲಭ್ಯವನ್ನು ಪುನಃ ಆರಂಭಿಸಲು ಕ್ರಮ ಜರುಗಿಸಬೇಕು. ಹಿರಿಯ ನಾಗರಿಕರನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ. ದೊಡ್ಡ ರೈಲು ನಿಲ್ದಾಣಗಳಲ್ಲಿ ಹಿರಿಯರು ಒಂದು ಪ್ಲ್ಯಾಟ್‌ಫಾರ್ಮ್‌ನಿಂದ ಇನ್ನೊಂದು ಪ್ಲ್ಯಾಟ್‌ಫಾರ್ಮ್‌ಗೆ ಹೋಗಲು ಬ್ಯಾಟರಿ ಚಾಲಿತ ವಾಹನ, ಎಸ್ಕಲೇಟರ್, ಲಿಫ್ಟ್‌ನ ಅನುಕೂಲ ಇರುತ್ತದೆ. ಆದರೆ ಮಧ್ಯಮ ಹಂತದ ರೈಲು ನಿಲ್ದಾಣಗಳಲ್ಲಿ ಇಂತಹ ಅನುಕೂಲಗಳಿಲ್ಲ. ವಯಸ್ಸಾದವರು ಹಿಡಿಶಾಪ ಹಾಕುತ್ತಾ ಮೆಟ್ಟಿಲುಗಳನ್ನು ಹತ್ತುತ್ತಾರೆ. ಬರೀ ನಗರಕೇಂದ್ರಿತವಾಗಿ ಅನುಕೂಲಗಳನ್ನು ಕಲ್ಪಿಸದೆ ಪ್ರತಿ ರೈಲು ನಿಲ್ದಾಣದಲ್ಲೂ ಹಿರಿಯರು ಸುಲಭವಾಗಿ ಸಂಚರಿಸಲು ಅನುಕೂಲ ಮಾಡಿಕೊಡಬೇಕು. ಆಗ, ರೈಲು ಟಿಕೆಟ್ ಮೇಲಿರುವ 'ಹ್ಯಾಪಿ ಜರ್ನಿ' ಎಂಬ ಸಂದೇಶಕ್ಕೆ ಅರ್ಥ ಬರುತ್ತದೆ.

ಕೆ.ರಾಜೇಂದ್ರಕುಮಾರ್ ಡಿ. ಮುದ್ನಾಳ್, ಯಾದಗಿರಿ

ಅದೇ ವಿಧಾನ...!

ಬೆಂಗಳೂರಿನಿಂದ ಬೆಳಗಾವಿಗೆ
ಬಲುದೂರ ದೂರ ಬಂತು
ಚಳಿಗಾಲದ ಅಧಿವೇಶನ!
ವಿಧಾನಸೌಧದಿಂದ
ಸುವರ್ಣಸೌಧಕ್ಕೆ...
ಆದರೂ ಬದಲಾಗಲಿಲ್ಲ...
ಅದೇ ಜನ, ಅದೇ ವಿಧಾನ
ಅದೇ ರಾಜಕಾರಣ!

ಮ.ಗು.ಬಸವಣ್ಣ, ಮೈಸೂರು

ಮಾಂಸಾಹಾರದ ಬಗ್ಗೆ ಯಾರಿಗೆ ಸ್ವಾಮಿ ಕೀಳರಿಮೆ?!

ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸದೂಟ ನೀಡಬೇಕೆಂಬ ಬೇಡಿಕೆ ಕೇಳಿಬಂದಿರುವುದರ ಕುರಿತ ಲೇಖನದಲ್ಲಿ (ಪ್ರ.ವಾ., ಡಿ. 11) ನಾರಾಯಣ ಎ. ಅವರು ಮಾಂಸಾಹಾರದ ಬಗ್ಗೆ ಕೆಲವರು ಕೀಳರಿಮೆ ಹೊಂದಿದ್ದಾರೆ ಎಂದು ಹೇಳಿದ್ದಾರೆ. ಸ್ವಾಮಿ, ಬಿರಿಯಾನಿಯ ರುಚಿ, ಅದರಿಂದ ಸಿಗುವ ಆರೋಗ್ಯದ ಗುಟ್ಟನ್ನು ಅದೇ ಒಂದು ಜನವರ್ಗದವರು ಕಂಡುಕೊಂಡಿದ್ದಾರೆ. ಇಷ್ಟೊಂದು ಮಾಂಸಾಹಾರಿ ಹೋಟೆಲುಗಳು ಮತ್ತು ಊರಮ್ಮನ ಜಾತ್ರೆಗಳಲ್ಲಿ ಮಾಂಸಾಹಾರ ಸೇವನೆಗೆ ಬರುವ ಜನಸಾಗರಕ್ಕೆ ಕಾರಣ ಇದೇ ಜನವರ್ಗದವರು. ಹೀಗಿರುವಾಗ, ಇದರಲ್ಲಿ ಕೀಳರಿಮೆ ಏನು ಬಂತು?

ಹೋಳಿಗೆ ಮಾಡಿ ಊಟಕ್ಕೆ ಕರೆದರೆ, ಅದನ್ನು ತಿನ್ನೋಕೆ ಅಷ್ಟು ದೂರ ಯಾರು ಬರುತ್ತಾರೆ ಅನ್ನುವ ಕಾಲ ಇದು. ಈಗ ಸಮಸ್ಯೆ ಇರುವುದು ಮಾಂಸಾಹಾರ ದುಬಾರಿಯಾಗಿ ಎಲ್ಲರ ಕೈಗೆಟಕದಂತೆ ಆಗಿರುವುದರ ಬಗ್ಗೆ.

ಗುರು ಜಗಳೂರು, ಹರಿಹರ

ಕೃಷ್ಣ ಸಾಧನೆಯ ಹಿಂದೆ ಇದೆ ಸ್ವಂತ ಶ್ರಮ

ಎಸ್.ಎಂ.ಕೃಷ್ಣ ಅವರು ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ ಮಾತ್ರದಿಂದ ದೊಡ್ಡವರಾಗಲಿಲ್ಲ. ಹುಟ್ಟಿ ಬೆಳೆದ ಕಾಲಘಟ್ಟ, ಆ ಕಾಲದಲ್ಲಿ ಚಾಲ್ತಿಯಲ್ಲಿದ್ದ ಸಾಮಾಜಿಕ ಮೌಲ್ಯ ಮತ್ತು ಅದಕ್ಕಿಂತಲೂ ಹೆಚ್ಚಾಗಿ, ಆ ಸನ್ನಿವೇಶ, ಸಂಸ್ಥಿತಿಗಳಿಗೆ ತಮ್ಮನ್ನು ತೆರೆದುಕೊಳ್ಳುವ ಸ್ವಂತಿಕೆ (ಪ್ರತಿಭೆ ಎನ್ನಿ!) ಸಹ ಅವರ ಮುಂದಿನ ವ್ಯಕ್ತಿತ್ವದ ಎತ್ತರ– ಬಿತ್ತರಗಳಿಗೆ ಕಾರಣವಾಯಿತು ಎನ್ನಬಹುದು. ತಾವು ಹುಟ್ಟಿನಿಂದಲೇ ತುಂಬಿಕೊಂಡು ಬಂದಿದ್ದನ್ನು ಕಿಂಚಿತ್ತಾದರೂ ಸಮಾಜಕ್ಕೆ ಮರಳಿಸಬೇಕೆಂಬ ಮಾನಸಿಕ ಒಳಸುಳಿ ಎಲ್ಲ ಆಗರ್ಭ ಶ್ರೀಮಂತರಲ್ಲೂ ಇರುವುದಿಲ್ಲ. ಕೃಷ್ಣ ಅವರು 'ವಿದ್ಯೆ'ಯನ್ನು ಸ್ವಂತ ಶ್ರಮ, ಶ್ರದ್ಧೆಯಿಂದಲೇ ಕಲಿತಿದ್ದು. ವಿದ್ಯೆಗೂ (ಬಿ.ಎ, ಎಂ.ಎ ಪದವಿಗಳಿಗೆ ಸಹ!) ಸಾಮಾಜಿಕ ಮರ್ಯಾದೆ ಇದ್ದ ಕಾಲವದು! ಕೃಷ್ಣ ಅವರು ಹಾರ್ವರ್ಡ್ ಯೂನಿವರ್ಸಿಟಿಗೆ ಹೋಗಿದ್ದು ಕೂಡ– ಈಗಿನವರು ಇರುವ ಅಲ್ಪಸ್ವಲ್ಪ ಆಸ್ತಿಯನ್ನು ಅಡವಿಟ್ಟು, ಅಮೆರಿಕದ ವಿಶ್ವವಿದ್ಯಾಲಯದಿಂದ ಪದವಿ ಪಡೆದು, ಡಾಲರ್‌ನ ರುಚಿ ಕಂಡು, ಊರಲ್ಲಿ ಶ್ರೀಮಂತ ಎಂದು ಕರೆಸಿಕೊಳ್ಳುವ– ಹುಲು ಉದ್ದೇಶದಿಂದಲ್ಲ. ಬದಲಿಗೆ ಅಲ್ಲಿನ ಶೈಕ್ಷಣಿಕ, ಸಾಮಾಜಿಕ ಇರಸಣಿಕೆಗೆ ತಮ್ಮನ್ನೇ ತೆರೆದುಕೊಳ್ಳಲು. ಅದೇ ಉದ್ದೇಶಕ್ಕಾಗಿಯೇ ಅವರು ಜಾನ್ ಎಫ್. ಕೆನಡಿ ಅಧ್ಯಕ್ಷೀಯ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದೇ ವಿನಾ ಅದನ್ನೇ ಮುಂದಿಟ್ಟು ಮುಂದೆ ಅಮೆರಿಕದಲ್ಲಿ ನೆಲೆಯೂರಲು ಅಲ್ಲ.

ತಾಯ್ನಾಡಿಗೆ ಮರಳಿದ ಮೇಲೆ ಸಹ ಅವರು ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದು, ಅಧಿಕಾರದ ಕನಸೂ ಇರದಿದ್ದ ಪ್ರಜಾ ಸೋಷಲಿಸ್ಟ್ ಪಾರ್ಟಿ ಕಾರ್ಯಕರ್ತರಾಗಿ! ಸ್ವಾತಂತ್ರ್ಯ ಹೋರಾಟದ ಹಮ್ಮಿಲ್ಲದ, ಬರೀ ಜನಹಿತ ಕಳಕಳಿಯ ಕೆಲವೇ ರಾಜಕೀಯ ಪಕ್ಷಗಳ ಪೈಕಿ ಅದೂ ಒಂದಾಗಿತ್ತು. ಅದರ ಅಭ್ಯರ್ಥಿಯಾಗಿ ನಿಂತು, ನುರಿತ, ನಿಸ್ಪೃಹ, ಜನಾನುರಾಗಿ ರಾಜಕಾರಣಿ ಕೆ.ವಿ.ಶಂಕರೇಗೌಡರನ್ನೇ ಸೋಲಿಸಿದ್ದು ಇವರ ಯುವ ಸಾಹಸ. ಈಗಲಾದರೋ ಜನರ ಹುಂಬತನ, ಆಲಸ್ಯ, ಅವಿದ್ಯೆ, ಸುಲಭ ಶ್ರೀಮಂತಿಕೆಯ ಕನಸೇ ರಾಜಕಾರಣದ ಮೂಲಭೂತ ಹೂರಣ. ಪುಂಡು ಪೋಕರಿಗಳದ್ದೇ ಅಲ್ಲಿ ಮೇಲುಗೈ. ಅಂಥದರ ಜತೆಗೂ ರಾಜಿ ಮಾಡಿಕೊಂಡು ತಮ್ಮ ಪರಿಕಲ್ಪನೆಯ ಪ್ರಗತಿಯನ್ನು ಸ್ವಲ್ಪಮಟ್ಟಿಗಾದರೂ ಸಾಧಿಸಿ ತೋರಿಸಿದ್ದು ಎಸ್.ಎಂ.ಕೃಷ್ಣ ಅವರ ಸಾಧನೆ ಎಂದು, ರಾಜಕೀಯವನ್ನು ದೂರದಿಂದ ನೋಡುವ ನನ್ನಂತಹವರಿಗೆ ಅನ್ನಿಸುತ್ತದೆ.

ಆರ್.ಕೆ.ದಿವಾಕರ, ಬೆಂಗಳೂರು

ವೇತನ ನೀಡಿದ ನೌಕರರಿಗೂ ಸಿಗಲಿ ಸೌಲಭ್ಯ

ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರಿ ನೌಕರರ ಒಂದು ದಿನದ ವೇತನ ಕಡಿತಗೊಳಿಸಲು ಆದೇಶವಾಗಿದೆ. ಗ್ರೂಪ್ 'ಎ'ಯಿಂದ ಗ್ರೂಪ್ 'ಡಿ'ವರೆಗೆ ಅವರ ವೇತನಾನುಸಾರ ಕನಿಷ್ಠ 2 ಸಾವಿರದಿಂದ ಗರಿಷ್ಠ 7 ಸಾವಿರ ರೂಪಾಯಿಯವರೆಗೆ ವೇತನ ಕಟಾವು ಆಗುತ್ತದೆ. ಆದರೆ ಹೀಗೆ ಹಣ ನೀಡುವ ಅಧಿಕಾರಿಗಳು ಮತ್ತು ನೌಕರರನ್ನು ಸಮ್ಮೇಳನದ ಪ್ರತಿನಿಧಿಗಳಾಗಿ ನೋಂದಾಯಿಸಿಕೊಂಡಂತಿಲ್ಲ. ಕಸಾಪಗೆ ₹600 ಕೊಟ್ಟು ಪ್ರತಿನಿಧಿಯಾಗಿ ನೋಂದಣಿ ಮಾಡಿಕೊಂಡವರಿಗೆ ಕೊಡುವ ನೆನಪಿನ ಕಾಣಿಕೆ, ಸಮ್ಮೇಳನದ ಕಿಟ್‌ನಂತಹ ಸೌಲಭ್ಯಗಳನ್ನು ಒಂದು ದಿನದ ವೇತನ ನೀಡುವವರಿಗೆ ಕೊಡುವ ಬಗ್ಗೆ ಪ್ರಸ್ತಾಪ ಇಲ್ಲ. ಇದರಿಂದ, ಈಗಾಗಲೇ ಅಭಿಮಾನದಿಂದ ಒಂದು ದಿನದ ವೇತನ ಪಾವತಿಸಿರುವ ನನ್ನಂತಹ ಹಲವು ನೌಕರರು ಬೇಸರಗೊಂಡಿದ್ದಾರೆ. ಹೀಗಾಗಿ, ಇಂತಹ ನೌಕರರು ವೇತನ ಕೊಡಲು ನಿರಾಕರಿಸಿ, ವೇತನ ಕಡಿತಗೊಳಿಸಬಾರದೆಂದು ಪತ್ರ ಕೂಡ ನೀಡಿದ್ದಾರೆ. ಯಾರು ವೇತನ ನೀಡಿರುವರೋ ಅವರನ್ನು ಪ್ರತಿನಿಧಿಯಾಗಿ ನೋಂದಾಯಿಸಿಕೊಂಡು ಅಗತ್ಯ ಸವಲತ್ತು ನೀಡಬೇಕಾದದ್ದು ಕಸಾಪದ ಧರ್ಮವೂ ಹೌದು, ಜವಾಬ್ದಾರಿಯೂ ಹೌದು. ಸ್ವಾಗತ ಸಮಿತಿಯವರು ಈ ಬಗ್ಗೆ ಸ್ಪಷ್ಟನೆ ನೀಡಿ ಗೊಂದಲ ಪರಿಹರಿಸಲಿ. ಮತ್ತಷ್ಟು ನೌಕರರು ನುಡಿಹಬ್ಬಕ್ಕೆ ಕೈಜೋಡಿಸಲು ಇದರಿಂದ ಸಹಾಯವಾಗುತ್ತದೆ.

ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್.ಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಂಕೆಗೆ ಸಿಗದ ಹಣದುಬ್ಬರ

ದೇಶದ ಹಣದುಬ್ಬರಕ್ಕೂ ಜನರ ಬದುಕಿಗೂ ನೇರ ಸಂಬಂಧವಿದೆ. ಹಣದುಬ್ಬರ ಏರಿದಂತೆ ದಿನಬಳಕೆಯ ವಸ್ತುಗಳು ಮತ್ತು ಸೇವೆಗಳ ಬೆಲೆ ಹೆಚ್ಚಿ ಜನರ ಜೇಬಿಗೆ ಕತ್ತರಿ ಬೀಳುತ್ತದೆ. ಹಣದುಬ್ಬರ ಇಳಿಕೆಯಾದಂತೆ ಆರ್ಥಿಕ ಹೊರೆ ತಗ್ಗುತ್ತದೆ. ದೇಶದ ಹಣದುಬ್ಬರ ಪ್ರಸ್ತುತ ಏರು ಹಾದಿಯಲ್ಲಿದೆ. ಇದೇ ಸಮಯದಲ್ಲಿ ಸಂಜಯ್ ಮಲ್ಹೋತ್ರಾ ಅವರು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದ್ದಾರೆ. ಹಣದುಬ್ಬರವನ್ನು ನಿಯಂತ್ರಿಸುವ ಸವಾಲು ಅವರ ಮುಂದಿದೆ. ಈ ಹಣದುಬ್ಬರವನ್ನು ಹೇಗೆ ಲೆಕ್ಕ ಹಾಕಲಾಗುತ್ತದೆ. ದೇಶದ ಅರ್ಥ ವ್ಯವಸ್ಥೆ ಮೇಲೆ ಅದು ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ

● ಕೆ.ಎಚ್. ಓಬಳೇಶ್

ಕಿಸೆಯಲ್ಲಿ ಕಾಸು ಇಟ್ಟುಕೊಂಡು ಸಂತೆಗೆ ಹೋಗಿ ಬಂಡಿ ತುಂಬಾ ದಿನಸಿ ತರುತ್ತಿದ್ದ ಕಾಲವೊಂದಿತ್ತು. ಸದ್ಯ ಸಂತೆಯ ಚಿತ್ರಣ ಬದಲಾಗಿದೆ. ಈಗಿನದ್ದು ಚೀಲದಲ್ಲಿ ದುಡ್ಡು ತುಂಬಿಕೊಂಡು ಹೋಗಿ ಸಣ್ಣ ಪ್ಲಾಸ್ಟಿಕ್ ಕೈಚೀಲದಲ್ಲಿ ದಿನಸಿ ತರಬೇಕಾಗಿದೆ ಎಂಬುದು ವ್ಯಂಗ್ಯದ ಮಾತಾದರೂ ಪೂರ್ಣ ಅಸತ್ಯವೇನಲ್ಲ. ಸಂತೆ ಮಾತ್ರವಲ್ಲ, ನಗರ, ಪಟ್ಟಣಗಳಲ್ಲಿನ ದೊಡ್ಡ ಅಂಗಡಿಗಳು, ಮಾಲ್‌ಗಳಲ್ಲಿ ಖರೀದಿಸುತ್ತಿದ್ದರೂ ಜೇಬು/ಬ್ಯಾಂಕ್ ಖಾತೆಯಲ್ಲಿ ದೊಡ್ಡ ಮೊತ್ತದ ಹಣವಿರಬೇಕು.

ಕುಟುಂಬವೊಂದರ ವೆಚ್ಚವು ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿದೆ. ಆಹಾರ, ಇಂಧನ, ಶಿಕ್ಷಣ ಮತ್ತಿತರ ವೆಚ್ಚಗಳು ಏರಿಕೆಯಾಗುತ್ತಿವೆ. ದಿನಕ್ಕೊಂದು ಹೊಸ ಸರಕು ಈ ಪಟ್ಟಿಗೆ ಸೇರ್ಪಡೆಯಾಗುತ್ತಿದೆ.

ಈ ವರ್ಷ ಬಿಡುಗಡೆಯಾಗಿರುವ ರಾಷ್ಟ್ರೀಯ ಲೆಕ್ಕಪತ್ರ ಸಾಂಖ್ಯಿಕ ವರದಿ ಪ್ರಕಾರ, ದೇಶದ ಪ್ರತಿ ಕುಟುಂಬವು ಜೀವನ ನಿರ್ವಹಣೆಗೆ ಮಾಡುವ ಖರ್ಚಿನ ಮೊತ್ತವು 2020-21ರಿಂದ 2022-23ರ ನಡುವೆ ಶೇ 19ರಷ್ಟು ಹೆಚ್ಚಾಗಿದೆ. ಇದಕ್ಕೆ ಕಾರಣ ಹಣದುಬ್ಬರದ ಹೆಚ್ಚಳ.

ಏನಿದು ಹಣದುಬ್ಬರ?

ಅರ್ಥಶಾಸ್ತ್ರದ ಪರಿಭಾಷೆಯಲ್ಲಿ ಹಣದುಬ್ಬರ ಎಂದರೆ 'ಬೆಲೆ ಏರಿಕೆ' ಎಂದರ್ಥ. ನಿರ್ದಿಷ್ಟ ಅವಧಿಯಲ್ಲಿ ಸರಕುಗಳು ಮತ್ತು ಸೇವೆಗಳ ಬೆಲೆ ಹೆಚ್ಚಳವು ಹಣದುಬ್ಬರ ಏರಿಕೆಗೆ ಕಾರಣವಾಗುತ್ತದೆ. ಈ ಸರಕು ಮತ್ತು ಸೇವೆಗಳು ಜೀವನಾವಶ್ಯಕ ವಸ್ತುಗಳು. ಹಣದುಬ್ಬರದಲ್ಲಾಗುವ ಹೆಚ್ಚಳವು ಜನರ ಖರೀದಿ ಸಾಮರ್ಥ್ಯಕ್ಕೆ ಕೊಡಲಿ ಪೆಟ್ಟು ನೀಡುತ್ತದೆ. ಹಣದುಬ್ಬರಗಳಲ್ಲಿ ಚಿಲ್ಲರೆ (retail) ಮತ್ತು ಸಗಟು ಹಣದುಬ್ಬರ (whole sale) ಎಂಬ ಎರಡು ವಿಧಗಳಿವೆ.

ಭಾರತವು ಜಾಗತಿಕ ಮಟ್ಟದಲ್ಲಿ ಅತಿವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿದೆ. ಸದ್ಯ ಏರಿಕೆಯ ಪಥದಲ್ಲಿರುವ ಹಣದುಬ್ಬರವು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆಗೆ ಸವಾಲೊಡ್ಡಿದೆ. ಈಗ ದೇಶದಲ್ಲಿ ಈರುಳ್ಳಿ, ಅಕ್ಕಿ, ಹಾಲು, ಅಡುಗೆ ಎಣ್ಣೆ ಸೇರಿ ಜೀವನಾವಶ್ಯಕ ವಸ್ತುಗಳ ಬೆಲೆಯು ದಿನೇ ದಿನೇ ಏರಿಕೆಯಾಗುತ್ತಿದೆ. ಬೆಳ್ಳುಳ್ಳಿ ದರ ಕೆ.ಜಿಗೆ ₹500 ದಾಟಿರುವುದು ಇದಕ್ಕೆ ತಾಜಾ ನಿದರ್ಶನ. ಪೂರೈಕೆ ಕೊರತೆಯಾದ ತಕ್ಷಣವೇ ಚಿಲ್ಲರೆ ಮಾರಾಟ ದರವು ಗಗನಕ್ಕೇರುತ್ತದೆ. ಇದರಿಂದ ಗ್ರಾಹಕರ ಜೇಬಿಗೆ ಹೊರೆ; ಅವರ ಉಳಿತಾಯಕ್ಕೂ ಬರೆ.

ಹಣದುಬ್ಬರವು ಒಂದರ್ಥದಲ್ಲಿ ಉತ್ತರಮುಖಿ. ಯಾವುದೇ ಸರಕು ಮತ್ತು ಸೇವೆಯ ಬೆಲೆ ಏರಿಕೆಯಾದರೆ ತಕ್ಷಣಕ್ಕೆ ಇಳಿಕೆಯಾಗುವ ಸಾಧ್ಯತೆ ತೀರಾ ವಿರಳ. ಇದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಾಗೂ ಕೇಂದ್ರ ಸರ್ಕಾರದ ಪಾಲಿಗೆ ತಲೆನೋವು ಉಂಟುಮಾಡುತ್ತದೆ.

ಲೆಕ್ಕಾಚಾರ ಹೇಗೆ?

ಹಣದುಬ್ಬರ ಲೆಕ್ಕಾಚಾರ ಮಾಡಲು ಎರಡು ಮಾನದಂಡಗಳಿವೆ. ಒಂದು ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ-wholesale price index), ಮತ್ತೊಂದು ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ-consumer price index). ಬೆಲೆ ಏರಿಕೆ ಅಳೆಯಲು ಈ ಎರಡರ ನೆರವು ಪಡೆಯಲಾಗುತ್ತದೆ.

100 ಮೌಲ್ಯ ಹೊಂದಿರುವ ಈ ಸೂಚ್ಯಂಕಗಳಲ್ಲಿ ಹಲವು ಸರಕುಗಳಿಗೆ ಅವುಗಳ ಬಳಕೆ ಮತ್ತು ಬೇಡಿಕೆ ಆಧರಿಸಿ ನಿರ್ದಿಷ್ಟ ತೂಕ/ ಮೌಲ್ಯವು ನಿಗದಿಯಾಗಿರುತ್ತದೆ. ಬೆಲೆ ಸೂಚ್ಯಂಕಗಳಿಗೆ ನಿರ್ದಿಷ್ಟ ಆಧಾರ ವರ್ಷವೂ ಇರುತ್ತದೆ.

ಉದಾಹರಣೆಗೆ, ವರ್ಷದ ಹಿಂದೆ ಕೆ.ಜಿ ತೊಗರಿ ಬೇಳೆಗೆ ₹130 ದರ ಇತ್ತು ಎಂದಿಟ್ಟುಕೊಳ್ಳಿ. ಈ ವರ್ಷ ಬೆಲೆಯು ₹150ಕ್ಕೆ ಮುಟ್ಟಿದೆ ಎಂದರೆ ಎರಡು ವರ್ಷದ ನಡುವೆ ಹಣದುಬ್ಬರವು ಶೇ 20ರಷ್ಟು ಹೆಚ್ಚಾಗಿದೆ ಎಂದರ್ಥ. ರೂಪಾಯಿಯ ಮೌಲ್ಯವೂ ಇಳಿದಿದೆ ಎನ್ನುವುದನ್ನೂ ಇದು ಸೂಚಿಸುತ್ತದೆ.

ಸರಕು ಮತ್ತು ಸೇವೆಗಳ ಬೆಲೆ ಏರಿಕೆಯನ್ನು ವರ್ಷದಿಂದ ವರ್ಷಕ್ಕೆ ಲೆಕ್ಕ ಹಾಕಲಾಗುತ್ತದೆ. ಅಂದರೆ, ಒಂದು ತಿಂಗಳ ಬೆಲೆಯನ್ನು ಹಿಂದಿನ ವರ್ಷದ ಅದೇ ತಿಂಗಳಿನಲ್ಲಿನ ಧಾರಣೆಗೆ ಹೋಲಿಸಿ ಅಳೆಯಲಾಗುತ್ತದೆ. ಸಗಟು ಬೆಲೆ ಸೂಚ್ಯಂಕವು ಸಗಟು ಮಟ್ಟದ ಬೆಲೆಯಲ್ಲಿ ಆಗುವ ವ್ಯತ್ಯಾಸವನ್ನು ಲೆಕ್ಕ ಹಾಕಿದರೆ, ಗ್ರಾಹಕ ಬೆಲೆ ಸೂಚ್ಯಂಕವು ಚಿಲ್ಲರೆ ಮಟ್ಟದಲ್ಲಾಗುವ ಬೆಲೆ ವ್ಯತ್ಯಾಸವನ್ನು ಲೆಕ್ಕ ಹಾಕುತ್ತದೆ.

ಅಮೆರಿಕ, ಬ್ರಿಟನ್ ಸೇರಿ ಅಭಿವೃದ್ಧಿ ಹೊಂದಿದ ಬಹುತೇಕ ರಾಷ್ಟ್ರಗಳಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಬಳಸಿ ಹಣದುಬ್ಬರವನ್ನು ಲೆಕ್ಕ ಹಾಕಲಾಗುತ್ತದೆ. ಭಾರತದಲ್ಲಿ ಈ ಎರಡೂ ಮಾನಕಗಳು ಬಳಕೆಯಲ್ಲಿವೆ. 2013ರಲ್ಲಿ ಉರ್ಜಿತ್ ಪಟೇಲ್ ಸಮಿತಿಯು ಸಗಟು ಬೆಲೆ ಸೂಚ್ಯಂಕದ ಬದಲು ಗ್ರಾಹಕ ಬೆಲೆ ಸೂಚ್ಯಂಕ ಬಳಸಿ ಹಣದುಬ್ಬರ ಲೆಕ್ಕ ಹಾಕಲು ಶಿಫಾರಸು ಮಾಡಿತು. ಈ ಸೂಚ್ಯಂಕದಿಂದಷ್ಟೇ ಬೆಲೆ ಏರಿಕೆಯಿಂದ ಗ್ರಾಹಕರ ಮೇಲಾಗಿರುವ ಪರಿಣಾಮವನ್ನು ನಿಖರವಾಗಿ ಅರಿಯಲು ಸಾಧ್ಯ ಎಂದು ಹೇಳಿತು.





ಹಣದುಬ್ಬರ ಎಷ್ಟಿರಬೇಕು?

ಇದು ಎಲ್ಲಾ ದೇಶಗಳಿಗೂ ಕಾಡುವ ಸವಾಲಿನ ಪ್ರಶ್ನೆ. ಆದರೆ, ಹಣದುಬ್ಬರ ಬೇಕೇ ಬೇಕು. ಕೇಂದ್ರ ಸರ್ಕಾರ ಕೂಡ ಇದಕ್ಕೆ ಕನಿಷ್ಠ ಶೇ 2 ಹಾಗೂ ಗರಿಷ್ಠ ಶೇ 6ರ ಮಿತಿ ನಿಗದಿಪಡಿಸಿದೆ. ಇದು ಹೆಚ್ಚಾದರೆ ದೇಶದ ಅಭಿವೃದ್ಧಿಗೆ ಮಾರಕ. ಜಿಂಬಾಬ್ವೆ, ವೆನೆಜುವೆಲಾ, ಸುಡಾನ್‌ನಲ್ಲಿ ಹಣದುಬ್ಬರವು ಮೂರಂಕಿ ದಾಟಿದೆ.

ಹಣದುಬ್ಬರ ಪ್ರಮಾಣ ಶೇ 2ರಿಂದ ಶೇ 3ರಷ್ಟು ಇರಬೇಕು ಎಂಬುದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಇಷ್ಟಿದ್ದರೆ ತಯಾರಿಕಾ ಚಟುವಟಿಕೆಗಳಿಗೆ ಹೆಚ್ಚು ಅನುಕೂಲ. ಹೆಚ್ಚಿನ ಬೆಲೆಗೆ ಉತ್ಪನ್ನಗಳನ್ನು ಮಾರಾಟ ಮಾಡಬಹುದಾಗಿದೆ. ಇದರಿಂದ ಈ ವಲಯಕ್ಕೂ ಉತ್ತೇಜನ ಸಿಗುತ್ತದೆ. ಇದು ಪರೋಕ್ಷವಾಗಿ ಆರ್ಥಿಕತೆ ಬೆಳವಣಿಗೆಗೆ ಸಹಕಾರಿಯಾಗಲಿದೆ. ಆದರೆ, ಹಣದುಬ್ಬರವು ಮಿತಿ ಮೀರಿದರೆ ಹಣದ ಮೌಲ್ಯ ಕುಗ್ಗುತ್ತದೆ. ಸಂಬಳ, ಕೂಲಿ ಇತ್ಯಾದಿ ಸೀಮಿತ ಆದಾಯ ಹೊಂದಿರುವ ಗ್ರಾಹಕರ ಖರೀದಿ ಶಕ್ತಿ ಕ್ಷೀಣಿಸುತ್ತದೆ. ಮತ್ತೊಂದೆಡೆ ಉದ್ದಿಮೆದಾರರ ಜೇಬು ತುಂಬುತ್ತದೆ. ಇದರಿಂದ ಸಂಪತ್ತಿನ ಹಂಚಿಕೆಯಲ್ಲಿ ಅಸಮಾನತೆ ಸೃಷ್ಟಿಯಾಗಿ, ಜನರ ಬದುಕು ದುಸ್ತರವಾಗುತ್ತದೆ.

ಇತಿಮಿತಿಯಲ್ಲಿದ್ದರೆ ಚೆನ್ನ

ಹಣದುಬ್ಬರವನ್ನು ಮಾನವನ ದೇಹದಲ್ಲಿರುವ ಸಕ್ಕರೆ ಮತ್ತು ಕೊಬ್ಬಿಗೆ ಹೋಲಿಸಬಹುದು. ಸದೃಢ ಆರೋಗ್ಯಕ್ಕೆ ಈ ಎರಡೂ ಇರಬೇಕು. ದೈಹಿಕ ಆರೋಗ್ಯಕ್ಕೆ ಕೊಬ್ಬು ತೀರಾ ಅಗತ್ಯ. ಆದರೆ, ಅತಿಯಾದರೆ ಆರೋಗ್ಯಕ್ಕೆ ಹಾನಿಕರ. ಸೀಮಿತ ಮಟ್ಟದಲ್ಲಿದ್ದರೆ ಚೆನ್ನ. ಅದೇ ರೀತಿ ಆರ್ಥಿಕತೆ ಬೆಳವಣಿಗೆಗೆ ಹಣದುಬ್ಬರವನ್ನು ಸೀಮಿತ ಮಟ್ಟದಲ್ಲಿಯೇ ಕಾಯ್ದುಕೊಳ್ಳಬೇಕು. ಸರಕುಗಳ ಬೆಲೆ ವರ್ಷದಿಂದ ವರ್ಷಕ್ಕೇ ಏರಿಕೆಯಾಗುವುದು ಸಾಮಾನ್ಯ. ಇದಕ್ಕೆ ವ್ಯತಿರಿಕ್ತವಾಗಿ ವರ್ಷದಿಂದ ವರ್ಷಕ್ಕೆ ಇಳಿಕೆಯಾದರೆ ಹಣದಿಳಿತ ಪರಿಸ್ಥಿತಿ ಎನ್ನುತ್ತೇವೆ. ಇದು ಆರ್ಥಿಕ ವೃದ್ಧಿಗೆ ವ್ಯತಿರಿಕ್ತ ಸ್ಥಿತಿ. ಬೆಲೆ ಏರಿಕೆ ಮತ್ತು ಇಳಿಕೆಯನ್ನು ದೇಹದಲ್ಲಿನ ಸಕ್ಕರೆ ಅಂಶಕ್ಕೆ ಅನ್ವಯಿಸಬಹುದು. ಸಕ್ಕರೆ ಅಂಶವು ಕನಿಷ್ಠ ಮಟ್ಟಕ್ಕೆ ಇಳಿದರೆ ಅಪಾಯ. ಹೆಚ್ಚಾದರೆ ಜೀವಕ್ಕೆ ಸಂಚಕಾರ. ಒಂದು ಹಂತದಲ್ಲಿ ನಿಯಂತ್ರಣದಲ್ಲಿ ಇಡಬೇಕು. ಸರಕು ಮತ್ತು ಸೇವೆಗಳ ಬೆಲೆ ಏರಿಕೆಯಾಗದಂತೆ ತಡೆಯಲು ಆರ್‌ಬಿಐ ಬಳಸುವ ಅಸ್ತ್ರವೇ ರೆಪೊ ದರ. ಇದು ಒಂದರ್ಥದಲ್ಲಿ ದೇಹದಲ್ಲಿ ಸಕ್ಕರೆ ಅಂಶ ನಿಯಂತ್ರಿಸಲು ಬಳಸುವ ಇನ್ಸುಲಿನ್ ಇದ್ದಂತೆ ಎಂದರೆ ಅತಿಶಯೋಕ್ತಿಯಲ್ಲ.

ಚಿಲ್ಲರೆ ಹಣದುಬ್ಬರ

ಹೆಸರೇ ಸೂಚಿಸುವಂತೆ ಇದು ಗ್ರಾಹಕರು ಬಳಸುವ ಸರಕು ಮತ್ತು ಸೇವೆಗಳನ್ನು ಆಧರಿಸಿದೆ. ಸರಕು ಮತ್ತು ಸೇವೆಗಳ ಬುಟ್ಟಿಯಲ್ಲಿ 299 ಆಹಾರ ಪದಾರ್ಥಗಳಿದ್ದು, ಅವುಗಳನ್ನು ಆರು ಗುಂಪುಗಳಾಗಿ ವಿಂಗಡಿಸಲಾಗಿದೆ. ಆಹಾರ ಮತ್ತು ಪಾನೀಯಗಳು ಶೇ 54.18, ಪಾನ್- ತಂಬಾಕು ಶೇ 3.26, ಬಟ್ಟೆ ಮತ್ತು ಪಾದರಕ್ಷೆ ಶೇ 7.36, ಇಂಧನ ಮತ್ತು ವಿದ್ಯುತ್ ಶೇ 7.94 ಹಾಗೂ ಇತರೆ ಪದಾರ್ಥಗಳು ಶೇ 27.76ರಷ್ಟು ಮೌಲ್ಯ ಹೊಂದಿವೆ. ಈ ಗುಂಪಿನಲ್ಲಿ ವಸತಿ ಇದ್ದರೂ ಇದರ ಮೌಲ್ಯ ನಿಗದಿಪಡಿಸಿಲ್ಲ. ಇವುಗಳ ಒಟ್ಟು ಮೌಲ್ಯ 100 ಇದ್ದರೆ, ಆಧಾರ ವರ್ಷ 2012 ಆಗಿದೆ.

ಮೊದಲಿಗೆ ಬುಟ್ಟಿಯಲ್ಲಿರುವ ಪ್ರತಿ ಪದಾರ್ಥದ ಸರಾಸರಿ ಮೌಲ್ಯವನ್ನು ಆಧಾರ ವರ್ಷದೊಂದಿಗೆ ಲೆಕ್ಕ ಹಾಕಲಾಗುತ್ತದೆ. ಬಳಿಕ ಪ್ರಸಕ್ತ ವರ್ಷದಲ್ಲಿ ಅವುಗಳ ಚಿಲ್ಲರೆ ಬೆಲೆಯಲ್ಲಿ (ಸರಕು ಮತ್ತು ಸೇವೆ) ಆಗಿರುವ ವ್ಯತ್ಯಾಸವನ್ನು ಒಟ್ಟು ಮೌಲ್ಯದೊಂದಿಗೆ ಗುಣಿಸಿ ಹಣದುಬ್ಬರವನ್ನು ಅಳೆಯಲಾಗುತ್ತದೆ.

ಮಾರುಕಟ್ಟೆಯಲ್ಲಿ ಸರಕುಗಳ ಬೆಲೆ ಇಳಿಕೆಯಾದರೂ ಚಿಲ್ಲರೆ ಬೆಲೆ ಕಡಿಮೆಯಾಗದಿದ್ದರೆ ಅದರಿಂದ ಗ್ರಾಹಕರಿಗೆ ಲಾಭ ಆಗುವುದಿಲ್ಲ. ಜಾಗತಿಕ ಮಟ್ಟದಲ್ಲಿ ಸಗಟು ಬೆಲೆ ನಿರ್ಧರಿತವಾಗುತ್ತದೆ. ಸಗಟು ಹಣದುಬ್ಬರದ ಇಳಿಕೆಗೆ ಜಾಗತಿಕ ಹಣದುಬ್ಬರವು ಕಾರಣವಾಗುತ್ತದೆ. ಇದು ಸರಕುಗಳಿಗೆ ಸೀಮಿತ. ಆದರೆ, ಜನಸಾಮಾನ್ಯರು ಸರಕು ಮತ್ತು ಸೇವೆ ಎರಡನ್ನೂ ಬಳಸುತ್ತಾರೆ. ಹಾಗಾಗಿ, ಚಿಲ್ಲರೆ ಹಣದುಬ್ಬರಕ್ಕೆ ಪ್ರಾಮುಖ್ಯ ಹೆಚ್ಚು. ಆರ್‌ಬಿಐ ಕೂಡ ತನ್ನ ಹಣಕಾಸು ನೀತಿಗಾಗಿ ಚಿಲ್ಲರೆ ಹಣದುಬ್ಬರವನ್ನೇ ಮಾನದಂಡವಾಗಿ ಬಳಸುತ್ತಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ), ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯವು ಚಿಲ್ಲರೆ ಹಣದುಬ್ಬರದ ವಿವರಗಳನ್ನು ಬಿಡುಗಡೆ ಮಾಡುತ್ತದೆ. ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವ್ಯಾಪ್ತಿಯ ನಗರ ಪ್ರದೇಶದ 1,114 ಮಾರುಕಟ್ಟೆಗಳು ಮತ್ತು 1,181 ಹಳ್ಳಿಗಳಲ್ಲಿ ದತ್ತಾಂಶ ಸಂಗ್ರಹಿಸಲಾಗುತ್ತದೆ. ಸಚಿವಾಲಯದ ಅಧಿಕಾರಿಗಳು ಈ ಸ್ಥಳಗಳಿಗೆ ವಾರಕ್ಕೊಮ್ಮೆ ಖುದ್ದಾಗಿ ಭೇಟಿ ನೀಡಿ ಬೆಲೆಯ ಸ್ಥಿತಿಗತಿ ಬಗ್ಗೆ ಮಾಹಿತಿ ಕಲೆ ಹಾಕುತ್ತಾರೆ. ಇದನ್ನು ಆಧರಿಸಿ ಚಿಲ್ಲರೆ ಹಣದುಬ್ಬರವನ್ನು ಲೆಕ್ಕ ಹಾಕಲಾಗುತ್ತದೆ.

ಸಗಟು ಹಣದುಬ್ಬರ

ಈ ಸೂಚ್ಯಂಕವು ಸಗಟು ಮಾರುಕಟ್ಟೆಯನ್ನು ಅವಲಂಬಿಸಿದೆ. ಈ ಬುಟ್ಟಿಯಲ್ಲಿ 697 ಸರಕುಗಳಿದ್ದು, ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಪ್ರಾಥಮಿಕ ಸರಕು ಶೇ 22.62, ಇಂಧನ- ವಿದ್ಯುತ್ ಶೇ 13.15 ಮತ್ತು ಉತ್ಪಾದನಾ ಸರಕು ಶೇ 64.23ರಷ್ಟು ಮೌಲ್ಯ ಹೊಂದಿವೆ. ಇವುಗಳ ಒಟ್ಟು ಮೌಲ್ಯ 100 ಆಗಿದೆ. ಇದರ ಆಧಾರ ವರ್ಷ 2011-12. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಇದನ್ನು ಬಿಡುಗಡೆ ಮಾಡುತ್ತದೆ. ಸರ್ಕಾರ, ಬ್ಯಾಂಕಿಂಗ್ ವಲಯ, ಕೈಗಾರಿಕೆ ಮತ್ತು ವಾಣಿಜ್ಯ ವಲಯವು ಸಗಟು ಧಾರಣೆ ಆಧರಿಸಿದ ಸೂಚ್ಯಂಕವನ್ನು ಹೆಚ್ಚು ಅವಲಂಬಿಸಿವೆ.

ಸಗಟು ಹಣದುಬ್ಬರದ ಅಳತೆಗೆ ನಿಗದಿಪಡಿಸಿರುವ ಆಧಾರ ವರ್ಷವು ದಶಕದಷ್ಟು ಹಳೆಯದು. ಚಿಲ್ಲರೆ ಹಣದುಬ್ಬರದ್ದೂ ಇದೇ ಕಥೆ. ಸಗಟು ಹಣದುಬ್ಬರದ ಆಧಾರ ವರ್ಷವನ್ನು 2017-18ಕ್ಕೆ ನಿಗದಿಪಡಿಸಬೇಕು, ಹೊಸದಾಗಿ 480 ಸರಕುಗಳನ್ನು ಈ ಬುಟ್ಟಿಗೆ ಸೇರ್ಪಡೆಗೊಳಿಸಬೇಕು ಎಂದು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಆಧಾರ: ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯಗಳು

ಸಿನಿ ಬಿಟ್ಸ್

'ಗರ್ಲ್‌ಫ್ರೆಂಡ್' ಆದ ರಶ್ಮಿಕಾ ಮಂದಣ್ಣ

ಟಾಲಿವುಡ್‌ನಲ್ಲಿ ಸಾಲು ಸಾಲು ಸಿನಿಮಾಗಳ ಮೂಲಕ ಖ್ಯಾತಿ ಪಡೆದಿರುವ ನಟಿ ರಶ್ಮಿಕಾ ಮಂದಣ್ಣ ನಟನೆಯ ಮತ್ತೊಂದು ಪ್ಯಾನ್ ಇಂಡಿಯಾ ಸಿನಿಮಾ ರಿಲೀಸ್‌ಗೆ ಸಜ್ಜಾಗಿದೆ.

'ಪುಷ್ಪ–2' ಸಿನಿಮಾ ರಿಲೀಸ್ ಬೆನ್ನಲ್ಲೇ ದೀಕ್ಷಿತ್ ಶೆಟ್ಟಿ ಹಾಗೂ ರಶ್ಮಿಕಾ ಮಂದಣ್ಣ ನಟಿಸಿರುವ 'ದಿ ಗರ್ಲ್‌ಫ್ರೆಂಡ್' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. ನಟ ವಿಜಯ್ ದೇವರಕೊಂಡ ಈ ಸಿನಿಮಾದ ಟೀಸರ್ ಬಿಡುಗಡೆ ಮಾಡಿದ್ದಾರೆ. ಈ ಸಿನಿಮಾವನ್ನು ರಾಹುಲ್ ರವೀಂದ್ರನ್ ನಿರ್ದೇಶನ ಮಾಡಿದ್ದಾರೆ. ಕನ್ನಡದಲ್ಲಿ 'ದಿಯಾ', 'ಬ್ಲಿಂಕ್', 'ಕೆಟಿಎಂ' ಸಿನಿಮಾ ಬಳಿಕ ನಟ ದೀಕ್ಷಿತ್ ಶೆಟ್ಟಿ ತೆಲುಗಿನಲ್ಲಿ 'ದಸರಾ' ಸಿನಿಮಾ ಮೂಲಕ ಗಮನಸೆಳೆದಿದ್ದರು. ಇದೀಗ ಟಾಲಿವುಡ್‌ನಲ್ಲಿ ಹಲವು ಪ್ರಾಜೆಕ್ಟ್‌ಗಳನ್ನು ಒಪ್ಪಿಕೊಂಡಿದ್ದಾರೆ ದೀಕ್ಷಿತ್.

'ದಿ ಗರ್ಲ್‌ಫ್ರೆಂಡ್' ಸಿನಿಮಾದಲ್ಲಿ ರಾವ್ ರಮೇಶ್, ರೋಹಿಣಿ ಸೇರಿದಂತೆ ಹಲವು ಕಲಾವಿದರಿದ್ದಾರೆ. ನಿರ್ಮಾಪಕ ಅಲ್ಲು ಅರವಿಂದ್ ಈ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದು, ಗೀತಾ ಆರ್ಟ್ಸ್, ಮಾಸ್ ಮೂವಿ ಮೇಕರ್ಸ್ ಮತ್ತು ಧೀರಜ್ ಮೊಗಿಲಿನೇನಿ ಎಂಟರ್‌ಟೈನ್‌ಮೆಂಟ್ ಬ್ಯಾನರ್‌ನಡಿ ಧೀರಜ್ ಮೊಗಿಲಿನೇನಿ ಮತ್ತು ವಿದ್ಯಾ ಕೊಪ್ಪಿನೀಡಿ ಈ ಸಿನಿಮಾ ನಿರ್ಮಿಸಿದ್ದಾರೆ. ತೆಲುಗು, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಸಿನಿಮಾ ರಿಲೀಸ್ ಆಗುತ್ತಿದೆ.

'ರುದ್ರ ಗರುಡ ಪುರಾಣ' ರಿಲೀಸ್ ಮುಂದಕ್ಕೆ

ರಿಷಿ

'ಆಪರೇಷನ್ ಅಲಮೇಲಮ್ಮ', 'ಕವಲುದಾರಿ' ಸಿನಿಮಾ ಖ್ಯಾತಿಯ ನಟ ರಿಷಿ ಅಭಿನಯದ 'ರುದ್ರ ಗರುಡ ಪುರಾಣ' ಚಿತ್ರದ ಬಿಡುಗಡೆಯನ್ನು ಮುಂದೂಡಲಾಗಿದೆ.

ಈ ಹಿಂದೆ ಡಿ.27ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಘೋಷಿಸಿತ್ತು. ರಿಲೀಸ್ ಮುಂದೂಡಿಕೆಗೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬಾಕಿ ಉಳಿದಿರುವ ಕಾರಣವನ್ನು ಚಿತ್ರದ ನಿರ್ಮಾಪಕರು ನೀಡಿದ್ದಾರೆ. ಡಿ.27ರ ಬದಲಾಗಿ ಜ.24ರಂದು ಸಿನಿಮಾ ರಿಲೀಸ್ ಮಾಡುತ್ತಿರುವುದಾಗಿ ಚಿತ್ರತಂಡ ತಿಳಿಸಿದೆ. ಡಿ.20ರಂದು ಉಪೇಂದ್ರ ನಟನೆಯ 'ಯುಐ' ಹಾಗೂ ಡಿ.25ರಂದು ಸುದೀಪ್ ನಟನೆಯ 'ಮ್ಯಾಕ್ಸ್' ಸಿನಿಮಾಗಳು ಬಿಡುಗಡೆಯಾಗುತ್ತಿರುವುದರಿಂದ ವರ್ಷಾಂತ್ಯದಲ್ಲಿ ಈ ಸಿನಿಮಾಗಳೇ ತೆರೆ ತುಂಬಿಕೊಂಡಿರಲಿವೆ.

'ರುದ್ರ ಗರುಡ ಪುರಾಣ' ಸಿನಿಮಾದಲ್ಲಿ ರಿಷಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಪ್ರಿಯಾಂಕ ಕುಮಾರ್ ಚಿತ್ರದ ನಾಯಕಿ. ಅಶ್ವಿನಿ ಆರ್ಟ್ಸ್ ಲಾಂಛನದಲ್ಲಿ ಅಶ್ವಿನಿ ಲೋಹಿತ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಈ ಹಿಂದೆ 'ಡಿಯರ್ ವಿಕ್ರಮ್' ಚಿತ್ರವನ್ನು ನಿರ್ದೇಶಿಸಿದ್ದ ಕೆ.ಎಸ್. ನಂದೀಶ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. '25 ವರ್ಷಗಳ ಹಿಂದೆ ಬಸ್ ಅಪಘಾತಕ್ಕೆ ಒಳಗಾಗಿ ಅದರಲ್ಲಿದ್ದ ಎಲ್ಲರೂ ಸಾವನ್ನಪ್ಪಿರುತ್ತಾರೆ. ಆದರೆ ಅದೇ ಬಸ್ಸು ಮತ್ತು ಅದರಲ್ಲಿದ್ದ ಜನಗಳು ಮತ್ತೆ ವಾಪಸ್ ಬರುವ ರೋಚಕ ತಿರುವುಗಳನ್ನು ಅನ್ವೇಷಣೆ ಮಾಡುವ ಚಿತ್ರವಿದು. ಕೆಲವರು ಇದು ತಮಿಳಿನ 'ಡೈರಿ' ಸಿನಿಮಾದ ರಿಮೇಕ್ ಎಂದುಕೊಂಡಿದ್ದಾರೆ. ಆದರೆ ಇದು ರಿಮೇಕ್ ಸಿನಿಮಾವಲ್ಲ' ಎಂದಿದ್ದಾರೆ ನಂದೀಶ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಮೊಘಲ್ ದೊರೆ ಬಾಬರ್‌ನನ್ನು ಹೊಗಳಿದ್ದಾರೆ ಎಂದು ಹೇಳಿಕೊಂಡು, ಮಹಾರಾಷ್ಟ್ರದ ದಿನಪತ್ರಿಕೆ 'ಸಕಾಲ್'ನ ಲಾಂಛನ ಇರುವ ಗ್ರಾಫಿಕ್ ಚಿತ್ರವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಹಂಚಿಕೊಳ್ಳುತ್ತಿದ್ದಾರೆ. 'ಇವತ್ತು ನನ್ನ ಮುಸ್ಲಿಂ ಸಹೋದರರಿಗೆ ದುಃಖದ ದಿನ! ಬಾಬರ್ ದೇಶಕ್ಕಾಗಿ ತನ್ನ ಜೀವವನ್ನು ಕೊಟ್ಟಿದ್ದ' ಎಂದು ಮರಾಠಿಯಲ್ಲಿ ಬರೆದಿರುವ ಹೇಳಿಕೆ ಆ ಗ್ರಾಫಿಕ್‌ನಲ್ಲಿದೆ. ಆದರೆ ಇದು ಸುಳ್ಳು ಸುದ್ದಿ.

✓ ಗ್ರಾಫಿಕ್ಸ್ ಮತ್ತು ಅದರಲ್ಲಿರುವ ಹೇಳಿಕೆಯನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ ಠಾಕ್ರೆ ಅವರು ಆ ರೀತಿ ಹೇಳಿಲ್ಲ ಎಂಬುದು ದೃಢಪಟ್ಟಿತು. ಇದಕ್ಕೆ ಪೂರಕವಾಗಿ ಸಕಾಲ್ ಮಾಧ್ಯಮ ಸಂಸ್ಥೆ ಕೂಡ ಗ್ರಾಫಿಕ್ ಅನ್ನು ನಕಲಿ ಎಂದು ಹೇಳಿದೆ. ಠಾಕ್ರೆ ನೇತೃತ್ವದ ಶಿವಸೇನಾ ಬಣ ಕೂಡ 'ಎಕ್ಸ್'ನಲ್ಲಿ ಈ ಬಗ್ಗೆ ಸ್ಪಷ್ಟನೆ ನೀಡಿದೆ. ಈ ಬಾರಿಯ ಮಹಾರಾಷ್ಟ್ರ ಚುನಾವಣೆಯ ಸಂದರ್ಭದಲ್ಲೂ, ಠಾಕ್ರೆಯವರು 1992ರ ಗಲಭೆಯಲ್ಲಿ ಭಾಗಿಯಾಗಿರುವುದಕ್ಕೆ ಮುಸ್ಲಿಮರ ಕ್ಷಮೆ ಕೇಳಿದ್ದಾರೆ ಎಂಬ ಸುದ್ದಿಯ ಗ್ರಾಫಿಕ್ ಹರಿದಾಡಿತ್ತು. ಆದರೆ ಫ್ಯಾಕ್ಟ್ ಚೆಕ್ ಮಾಡಿದಾಗ ಅದು ಸುಳ್ಳು ಎಂದು ಕಂಡು ಬಂದಿತ್ತು ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ತಾಯಿ ಪ್ರಯತ್ನದಿಂದ ಜಗತ್ತು!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 86

ಮನೆಯಲ್ಲಿ ಅಡುಗೆ ಸಿದ್ಧವಾಗಿದೆ. ಹಾರ್ಲಿಕ್ಸ್, ತಿಂಡಿ, ಬಿಸ್ಕತ್ ಎಲ್ಲವೂ ಸಿದ್ಧವಿದೆ. ಮಗುವಿಗೆ ಊಟ ಮಾಡಿಸಲು ಹೊಂಟರೆ ಮಗು ಊಟ ಮಾಡಲ್ಲ ಅಂತ ಹಟ ಮಾಡ್ತದ. ಅಮ್ಮ ಕತೆ ಹೇಳ್ತಾಳ, ಜೋಗುಳ ಹಾಡ್ತಾಳ. ಚಂದ್ರನನ್ನು ತೋರಿಸ್ತಾಳ. ಗೊಂಬೆ ತೋರಿಸ್ತಾಳ. ಗಿಲಿಗಿಲಿಯನ್ನೂ ಆಡಿಸ್ತಾಳ. ಹೀಗೆ ನಾನಾ ಕಸರತ್ತು ಮಾಡಿ ಮಗುವಿಗೆ ಊಟ ಮಾಡಿಸ್ತಾಳ. ಊಟ ಮಾಡಲ್ಲ ಎಂದು ಹಟ ಮಾಡುವ ಮಗುವಿನ ಹಣೆಬರಹವೇ ಇಷ್ಟು ಎಂದು ಅಮ್ಮ ಸುಮ್ಮನೆ ಕೂಡಲ್ಲ. ಪ್ರಯತ್ನ ಪಟ್ಟು ಊಟ ಕೊಡ್ತಾಳ. ಹಣೆಬರಹ ಎಂದು ಸುಮ್ಮನೆ ಕೂಡದೆ ಊಟ ಮಾಡಿಸಲು ಅಮ್ಮ ಪ್ರಯತ್ನ ಪಟ್ಟಿದ್ದರಿಂದಲೇ ಈ ಜಗತ್ತು ನಡೆದದ. ತಾಯಿಯ ಪ್ರಯತ್ನ ಮಕ್ಕಳನ್ನು ದೊಡ್ಡವರನ್ನಾಗಿ ಮಾಡಿದೆ.

ಒಬ್ಬನ ಮನೆ ಮುಂದೆ ಮಾವಿನ ಮರ ಇತ್ತು. ಅದರ ಕೊಂಬೆಗಳು ಮಾಳಿಗೆಗೆ ಬಾಗಿ ಹಣ್ಣು ಬಿಟ್ಟಿದ್ದವು. ಈತ ಕೆಳಗೆ ಮಲಗಿಕೊಂಡು 'ನನ್ನ ಹಣೆಬರಹದಲ್ಲಿ ಮಾವಿನ ಹಣ್ಣು ಬರೆದಿದ್ದರೆ ಇಲ್ಲಿಗೆ ಬಂದು ಬೀಳತೈತಿ' ಎಂದುಕೊಂಡು ಬಾಯಿ ತೆಕ್ಕೊಂಡು ಕುಳಿತಿದ್ದ. ಅದಕ್ಕೆ ದೇವರು, 'ನಿನ್ನ ಹಣೆಬರಹದಲ್ಲಿ ಬರೆದಿದ್ದರಿಂದಲೇ ನಿನ್ನ ಮನೆಯ ಮಾಳಿಗೆಗೇ ಮಾವಿನಹಣ್ಣು ಬರುವಂತೆ ಮಾಡೀನಿ. ನೀನು ಹೋಗಿ ಕಿತ್ತುಕೊಂಡರೆ ಮಾವಿನ ಹಣ್ಣು ಸಿಗತೈತಿ. ಕೆಳಕ್ಕೆ ಬಾಯಿ ತೆಕ್ಕೊಂಡು ಕುಳಿತುಕೋ ಅಂತ ನಾನು ಬರೆದಿಲ್ಲ' ಎಂದ.

'ಹಣೆಯಬರಹವನ್ನು ಕಷ್ಟಪಟ್ಟು ದುಡಿಯುವ ಬೆವರಿನಿಂದ ಮಾತ್ರ ಅಳಿಸಲು ಸಾಧ್ಯವಿದೆ. ಪ್ರಯತ್ನ ಮಾಡು' ಎಂದು ಶರಣರು ಹೇಳ್ಯಾರ.

ಪಂಜಾಬದೊಳಗ ಒಂದು ಘಟನೆ ನಡೀತು. ಒಂದು ಹುಡುಗಿಗೆ ಮದುವೆ ಮಾಡಿಕೊಟ್ಟರು. ಒಂದು ವರ್ಷ ತುಂಬುವುದರೊಳಗ ಒಂದು ಮಗು ಆತು. ಗಂಡನ ಮನೆಯವರು ಆ ಹುಡುಗಿಯನ್ನು ತವರು ಮನೆಗೆ ಕಳಿಸುವಾಗ 'ನೀನು ಗಂಡು ಮಗು ಹಡೆದುಕೊಂಡೇ ಬರಬೇಕು' ಎಂದು ಹೇಳಿ ಕಳಿಸಿದ್ದರಂತೆ. ಆದರೆ ಆಕೆಗೆ ಹೆಣ್ಣು ಮಗು ಹುಟ್ತು. ಮತ್ತೆ ಎರಡು ವರ್ಷದ ನಂತರ ಆಕಿ ಮತ್ತೆ ಗರ್ಭಿಣಿಯಾದಳು. ಆಗಲೂ, 'ನೀನು ಗಂಡು ಮಗು ಹೆತ್ತು ಬರಬೇಕು' ಎಂದರು. ಆಗಲೂ ಹೆಣ್ಣು ಮಗುವಾತು. ಮತ್ತೆ ಕೆಲವು ವರ್ಷದಲ್ಲಿ ಆಕೆ ಮತ್ತೆ ಗರ್ಭಿಣಿಯಾದಳು. ಆಗ ಗಂಡಿನ ಮನೆಯವರು ಈ ಬಾರಿ ಮತ್ತೆ ಹೆಣ್ಣು ಮಗುವಾದರೆ ಒಂದೋ ಕೂಸು ಬರಬೇಕು ಇಲ್ಲಾ ನೀನೊಬ್ಬಳೇ ಮನೆಗೆ ಬರಬೇಕು ಎಂದು ಷರತ್ತು ಹಾಕಿದ್ರು. ಆಗಲೂ ಹೆಣ್ಣು ಮಗುವಾಯಿತು. ತಾಯಿಗೆ ಬಹಳ ದುಃಖ ಆತು. ಮೂರು ದಿನ ಕಣ್ಣೀರು ಕೂಳಾಯ್ತು. ಆಕಿ ಒಂದು ಗಟ್ಟಿ ನಿರ್ಧಾರ ಮಾಡಿ ಮೂರನೇ ದಿನ ರಾತ್ರಿ ಮಗುವನ್ನು ಕೊರೆಯುವ ಚಳಿಯಲ್ಲಿ ಅಂಗಳದಲ್ಲಿ ಮಲಗಿಸಿದ್ಳು. ಬೆಳಗಿನ ಜಾವ 5 ಗಂಟೆಗೆ ಬಂದು ನೋಡಿದರೆ ಮಗುವಿನ ಮೈಬಣ್ಣ ನೀಲಿಯಾಗಿತ್ತು. ಮಗು ಸತ್ತಿದೆ ಎಂದುಕೊಂಡು ಅದನ್ನು ಎದೆಗೆ ಒತ್ತಿಕೊಂಡರೆ ಮಗುವಿನ ಎದೆಬಡಿತ ಕೇಳಿಸಿತು. ಮೂರು ದಿನದ ಮಗು ಸಾವಿನೊಂದಿಗೆ ಸೆಣಿಸಿ ಗೆದ್ದಿದೆ ಎಂದ ಮೇಲೆ ನಾನು ಈ ಮಗುವಿನೊಂದಿಗೆ ಬದುಕುತ್ತೇನೆ. ಹೆಣ್ಣಾದರೆ ಏನಾತು ಅಂತ ಗಟ್ಟಿ ನಿರ್ಧಾರ ಮಾಡಿದ್ಳು ತಾಯಿ.

ಸಣ್ಣ ಕೂಸಿನೊಳಗೆ ಎಂತಹ ಛಲ ಐತಿ! ನಮ್ಮೊಳಗೆ ಬರೇ ನೆಪಗಳು ಅಷ್ಟೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ | ಗುರುವಾರ ಡಿಸೆಂಬರ್ 12, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ದ್ವಾದಶಿ ಗಂ. 22-27 **ನಕ್ಷತ್ರ:** ಅಶ್ವಿನಿ ಗಂ. 09-53 **ಯೋಗ:** ಪರಿಘ ಗಂ. 15-23 **ಕರಣ:** ಬವ ಗಂ. 11-49, ವೃಶ್ಚಿಕ ಮಾಸದ 26 ನೇ ದಿನ, **ಮಳೆನಕ್ಷತ್ರ:** ಜ್ಯೇಷ್ಠ 4.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-48 **ಸೂರ್ಯಾಸ್ತ:** 06-01
ಮುಸ್ಲಿಂ ದಿನಾಂಕ: 09 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 6, 3

ಮೇಷ: ವಿದ್ಯಾರ್ಥಿಗಳಿಗೆ ವಿಪರೀತ ಅಧ್ಯಯನದಿಂದ ಬೇಸರವಾಗಲಿದ್ದು, ಬದಲಾವಣೆ ಬಯಸುವಂತಾಗಲಿದೆ. ವಾಣಿಜ್ಯ ರಂಗದಲ್ಲಿ ಹೊಸ ತಿರುವುಗಳು ಮೂಡಲಿವೆ.

ವೃಷಭ: ಮಕ್ಕಳಲ್ಲಿ ಹೊಂದಾಣಿಕೆ ಮೂಡಿ, ಕೌಟುಂಬಿಕ ನೆಮ್ಮದಿ ಉಂಟಾಗಲಿದೆ. ಹಿರಿಯರು ಮಾಡಿದ ಪುಣ್ಯದ ಫಲ ಅನುಭವಕ್ಕೆ ಬರಲಿದೆ. ನೂತನ ಯೋಜನೆಯನ್ನು ಧೈರ್ಯವಾಗಿ ಆರಂಭಿಸಬಹುದು.

ಮಿಥುನ: ಕೌಟುಂಬಿಕ ವಿಚಾರಗಳನ್ನು ಚರ್ಚಿಸುವಾಗ ಅನ್ಯ ವ್ಯಕ್ತಿಯ ಹಸ್ತಕ್ಷೇಪವಾಗದಂತೆ ಜಾಗ್ರತೆವಹಿಸಿ. ನಿಮ್ಮ ಸೃಜನಶೀಲ ವ್ಯಕ್ತಿತ್ವವು ಮುಂದಿನ ದಿನಗಳಲ್ಲಿ ಮತ್ತಷ್ಟು ವರ್ಧಿಸಲಿದೆ. ಹಿರಿಯರಿಂದ ದ್ರವ್ಯ ಲಾಭವಿದೆ.

ಕರ್ಕಾಟಕ: ಯಶಸ್ಸಿನ ಮಾರ್ಗದಲ್ಲಿ ಶತ್ರು ಬಾಧೆ ಎದುರಾಗಲಿದ್ದು, ಮಾನಸಿಕ ಅಸಮತೋಲನಕ್ಕೆ ಕಾರಣವಾಗಬಹುದು. ಹಿಂದಿರುಗಿ ಬರಬೇಕಾದ ಹಣ ಸಂಜೆಯ ವೇಳೆಗೆ ಕೈ ಸೇರಲಿದೆ.

ಸಿಂಹ: ತಾಂತ್ರಿಕ ವೃತ್ತಿಯವರಿಗೆ ಕಾರ್ಯರಂಗದಲ್ಲಿ ಮತ್ತು ಕಾರ್ಯ ಸ್ಥಳದಲ್ಲಿ ಹಿತವೆನಿಸುವ ಘಟನೆ ಜರುಗಲಿದೆ. ವ್ಯಾಪಾರಿಗಳಿಗೆ ವ್ಯವಹಾರ ಕುಂಠಿತವಾದರೂ ಮುಂದಿನ ದಿನದಲ್ಲಿ ಅಭಿವೃದ್ಧಿಯಾಗುತ್ತದೆ.

ಕನ್ಯಾ: ಹಳೆಯ ಘಟನೆಗಳಿಂದ ಪಾಠ ಕಲಿಯುವುದು ಹಾಗೂ ಅದನ್ನು ನೆನಪಿಟ್ಟುಕೊಳ್ಳುವುದರಿಂದ ಯಶಸ್ಸು ಲಭಿಸಲಿದೆ. ತಂದೆಯ ಆರೋಗ್ಯದಲ್ಲಿ ಸಣ್ಣ-ಪುಟ್ಟ ವ್ಯತ್ಯಾಸಗಳಾಗಬಹುದು.

ತುಲಾ: ಯಾವುದೇ ಕ್ಷೇತ್ರದಲ್ಲಾದರೂ ನಿಮ್ಮ ಆಕಾಂಕ್ಷೆಗೆ ಅನುಗುಣವಾಗಿ ಮುನ್ನುಗ್ಗುವ ಸಾಮರ್ಥ್ಯ ನಿಮ್ಮಲ್ಲಿದೆ. ದೈವಾನುಗ್ರಹದಿಂದ ನಿಮ್ಮ ಪ್ರಯತ್ನಬಲಕ್ಕೆ ಪುಷ್ಟಿ ಸಿಗಲಿದೆ.

ವೃಶ್ಚಿಕ: ನಿಮ್ಮ ನಿರ್ಧಾರಗಳು ಕುಟುಂಬಕ್ಕೆ ವರವಾಗುವುದಲ್ಲದೆ, ಇತರರಿಗೂ ಮಾದರಿಯಾಗಲಿವೆ. ಮೂರ್ಖತನದಿಂದ ವರ್ತಿಸದಲ್ಲಿ, ಬಂಧು-ಬಾಂಧವರನ್ನು ಕಳೆದುಕೊಳ್ಳುವ ಅಪಾಯವಿದೆ.

ಧನು: ವೃತ್ತಿ ಬದುಕಿನಲ್ಲಿ ಬದ್ಧತೆ ಕಡಿಮೆಯಾಗಿರುವ ಕಾರಣ, ನಿಂದನೆಗೆ ಒಳಗಾಗುವ ಸನ್ನಿವೇಶ ಎದುರಾಗಬಹುದು. ಅನಾರೋಗ್ಯದಿಂದಾಗಿ ಧನ ವ್ಯಯವಾಗಲಿದೆ. ಕಳೆದುಕೊಂಡ ವಸ್ತುಗಳು ಪುನಃ ಕೈಸೇರಲಿವೆ.

ಮಕರ: ಇನ್ನೊಬ್ಬರಿಗೆ ಹಿತ ಬಯಸುವುದು ಸ್ವಯಂ ಏಳಿಗೆಗೂ ಪೂರಕವಾಗಲಿದೆ ಎಂಬುದನ್ನು ಮರೆಯದಿರಿ. ಮಹಿಳಾ ಉದ್ಯೋಗಿಗಳಿಗೆ ಕೆಲಸದ ಒತ್ತಡ ಮತ್ತು ಮಾನಸಿಕ ಒತ್ತಡಗಳು ಹೆಚ್ಚಲಿವೆ.

ಕುಂಭ: ಪತ್ನಿಯ ಆರೋಗ್ಯದ ವಿಚಾರವಾಗಿ ವೈದ್ಯರನ್ನು ಸಂದರ್ಶಿಸಬೇಕಾಗಬಹುದು. ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಿ. ಅಧೀನ ಸಿಬ್ಬಂದಿಯ ಜೊತೆಗೆ ಸಂಯಮದಿಂದ ವರ್ತಿಸುವುದು ಉತ್ತಮ.

ಮೀನ: ಈಗಾಗಲೇ ಸೂಚನೆ ಸಿಕ್ಕಿರುವ ಕೆಲವೊಂದು ಕಹಿ ಘಟನೆಗಳು ಜರುಗಲಿವೆ. ಚಂಚಲ ಮನಸ್ಥಿತಿಯಿಂದಾಗಿ ಕೆಟ್ಟ ಆಲೋಚನೆಗಳು ಬರಲಿವೆ. ಕೌಟುಂಬಿಕವಾಗಿ ನೆಮ್ಮದಿಯಿದ್ದರೂ, ಮಾನಸಿಕ ಕಿರಿಕಿರಿ ತಪ್ಪಿದ್ದಲ್ಲ.

ಪದಬಂಧ 5889

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಕಾಶದಲ್ಲಿ ಸಂಚರಿಸುವವನು (3)
3.ಮುಪ್ಪು ಸಾವು ಇಲ್ಲದಿರುವಿಕೆ (5)
5.ಸರಸದ ಮಾತುಕತೆ (3)
6.ಜೇನು ತುಪ್ಪ ಉಲ್ಟಾ ಕಾಣುತ್ತಿದೆ (3)
7.ಸರಕ್ಕನೇ ಧರಿಸಿರುವ ಮಾಲೆ! (2)
9.ಅಶಕ್ತನ ಹತ್ತಿರವಿರುವ ಆಹಾರ! (3)
11.ಜೀವನಪರ್ಯಂತ ಎಂದು ಹೀಗೆನ್ನಿ (4)
13.ದಮಯಂತಿ ಪತಿ ತಯಾರಿಸಿದ ರುಚಿಕಟ್ಟಾದ ಅಡುಗೆ (4)
14.ಯಮನಿದ್ದಾಗಿನ ಸೂತ್ರ (3)
16.ಕನಸಲ್ಲಿ ಕಾಣಿಸಿದ ಕೊಳೆ (2)
18.ಉತ್ತರದವರ ಮಂಚ (3)
20.ನಾದಿನಿಗೆ ಕೇಳಿದ ಧ್ವನಿ! (3)
21.ರಾಮನ ಮಗನಿದ್ದರೆ ಈ ಹುರುಪು! (5)
22.ಚಾರ ಹೇಳಿದ ಸಂಗತಿ (3)

ಮೇಲಿಂದ ಕೆಳಕ್ಕೆ
1.ವಿದ್ಯಾಧರಿ ಇಲ್ಲಿದ್ದಾಳೆ (3)
2.ರಸ ಒಸರುವ ಜಿಹ್ವೆ (3)
3.ಸಂಸ್ಕೃತದಿಂದ ಹುಟ್ಟಿರುವ ಭಾಷೆ ಅಥವಾ ಪದ (4)
4.ರಾಯರಿಂದ ಬಂದಿರುವ ನಿರೂಪ! (3)
8.ತಿಳುವಳಿಕೆ ಇಲ್ಲದವನು ತಿರುಗಿದ್ದಾನಲ್ಲಾ! (3)
9.ಅವನಿರುವ ಭೂಮಿ! (3)
10.ಮನದಲ್ಲೇವಿಚಾರಮಾಡುವಿಕೆಯು ತಿರುವುಮುರುವಾಗಿದೆ (3)
12.ತರ್ಕ ಮಾಡುತ್ತಿರುವ ವ್ಯಾಪಾರಿ! (3)
15.ವನಿತೆ ತೆರೆದಿಟ್ಟ ಪರದೆ! (4)
17.ಸಲೀಸಾಗಿ ಹಿಡಿದಿಟ್ಟ ನೀರು (3)
18.ಪದ ಹೇಳಿ ಪಡೆದುಕೊಂಡಿರುವ ಡಿಗ್ರಿ! (3)
19.ಗರದಲ್ಲಿ ಕಾಡು ಕಾಣುತ್ತಿದೆಯಲ್ಲಾ! (3)



5888ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭಯದಾನ 3.ಸರ್ಗ
4.ಅಡವಿ 5.ಕರುಮ
7.ವಾರ 8.ರಸ 10.ಣಮರ
11.ಸುಮ 13.ಕಾಗೆ 14.ಣೆಮರ
15.ರವಾನೆ 16.ಪಥ
17.ಆಮ್ಲಜನಕ

ಮೇಲಿಂದ ಕೆಳಕ್ಕೆ:
2.ಭಯಂಕರ 3.ಸವಿಸ್ತಾರ
4.ಅಧಿಕಾರವಾಣಿ 6.ಮರಣದಂಡನೆ
7.ವಾರಸು 9.ಸಜ್ಜಿಗೆ
12.ಮನೋರಥ 13.ಕಾರಸ್ಥಾನ

ಸುಡೊಕು 6274

1		3	5		6		4	
	9			4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6273 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,610
ಇಂದಿನ ಅಂತ್ಯ	24,641
▲	31
ದಿನದ ಗರಿಷ್ಠ	24,691

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹350-636
ದ್ವಿತಳಿ (ಬಿ.ವಿ)	₹268-750

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹22750
ಎಸಿ	₹11600
ಆರ್‌ಪಿ	₹19500
ಆರ್‌ಸಿ	₹10790

ವಿನಿಮಯ ದರ

$ ಡಾಲರ್	84.84
£ ಪೌಂಡ್	108.03
€ ಯುರೊ	89.10
¥ ಯೆನ್ (100ಕ್ಕೆ)	56

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಎ. ಮುನಿಕೃಷ್ಣ (ಕಿಟ್ಟಿ)

ಇವರು ದಿನಾಂಕ: 02/12/2024ರಂದು ದೈವಾಧೀನರಾಗಿದ್ದಾರೆಂದು ತಿಳಿಸಲು ವಿಷಾಧಿಸುತ್ತೇವೆ. ದಿನಾಂಕ: 12/12/2024ನೇ ಗುರುವಾರ ಬೆಳಿಗ್ಗೆ 10:00ರಿಂದ 11:00 ಗಂಟೆಯವರೆಗೆ ಪುಣ್ಯಾಹ ಮತ್ತು ಮಧ್ಯಾಹ್ನ 12ಕ್ಕೆ ವೈಕುಂಠ ಸಮಾರಾಧನೆಯನ್ನು ಅವರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಬಂಧು–ಮಿತ್ರರು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ವಿನಂತಿ.

ವಿಳಾಸ: #301, ಎಂ.ಎಸ್.ಸಿ ಆರ್ಕಿಡ್ ವಾಸಾವನಿ ಲೇಔಟ್, ಚಲ್ಲಘಟ್ಟ, ಬೆಂಗಳೂರು–560037

ಇಂತಿ ದುಃಖತಪ್ತರು:
ಪತ್ನಿ ಕಾಂತಾ ಮುನಿಕೃಷ್ಣ, ಮಕ್ಕಳು, ಅಳಿಯಂದಿರು ಹಾಗೂ ಊರ ಬಾಗಿಲು ಕುಟುಂಬದವರು
ಮೊ: 7022375765, 9901940416

ಕೃಷಿ ಸುಧಾರಣೆಗೆ ‘ಅಗ್ರಿ–ಸ್ಟ್ಯಾಕ್’ ವರದಾನ: ಸಚಿವೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಕೃಷಿ ಕ್ಷೇತ್ರದ ಸುಧಾರಣೆಗಾಗಿ ವಿವಿಧ ಕ್ಷೇತ್ರಗಳ ಪಾಲುದಾರರನ್ನು ಒಂದೇ ವೇದಿಕೆಯಡಿ ತರಲು ಅಗ್ರಿ–ಸ್ಟ್ಯಾಕ್ ಡಿಜಿಟಲ್ ಪೋರ್ಟಲ್ ಅನ್ನು ರೂಪಿಸಲಾಗುತ್ತಿದೆ. ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಬಳಿಕ ದೇಶದಲ್ಲಿ ರೂಪುಗೊಳ್ಳಲಿರುವ ಹೊಸ ಅನ್ವೇಷಣೆ ಇದಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟದ ಜಾಗತಿಕ ಆರ್ಥಿಕ ನೀತಿ ವೇದಿಕೆಯಿಂದ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸರ್ಕಾರ ರೂಪಿಸುತ್ತಿರುವ ಈ ಡಿಜಿಟಲ್ ಫೌಂಡೇಶನ್‌ನಿಂದ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ’ ಎಂದರು.

ಜುಲೈನಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ನಿರ್ಮಲಾ ಅವರು ಮುಂದಿನ ಮೂರು ವರ್ಷಗಳಲ್ಲಿ ಅಗ್ರಿ–ಸ್ಟ್ಯಾಕ್ ಅನ್ನು ಅನುಷ್ಠಾನಗೊಳಿಸುವುದಾಗಿ ಪ್ರಕಟಿಸಿದ್ದರು. ಈ ವ್ಯವಸ್ಥೆ ಮೂಲಕ 6 ಕೋಟಿಗೂ ಹೆಚ್ಚು ರೈತರನ್ನು ಔಪಚಾರಿಕ ಭೂ ನೋಂದಣಿ ವ್ಯವಸ್ಥೆಯಡಿ ತರುವುದು ಸರ್ಕಾರದ ಉದ್ದೇಶವಾಗಿದೆ.

‘ಅಗ್ರಿ–ಸ್ಟ್ಯಾಕ್’ ಎಂದರೆ ರೈತರ ಮಾಹಿತಿಯ ಭಂಡಾರವಾಗಿದೆ. ಇದರಡಿ ಅವರ ಭೂ ದಾಖಲೆಗಳನ್ನು ಆಧಾರ್‌ಗೆ ಲಿಂಕ್ ಮಾಡಲಾಗುತ್ತದೆ.

ಹಣದುಬ್ಬರ: ‘ಜಾಗತಿಕ ಮಟ್ಟದಲ್ಲಿ ಸರಕುಗಳ ಪೂರೈಕೆ ಸರಪಳಿಯಲ್ಲಿ ಎದುರಾಗಿರುವ ತೊಂದರೆಯೇ ಹಣದುಬ್ಬರ ಏರಿಕೆಗೆ ಮೂಲ ಕಾರಣ. ಇದನ್ನು ಬೇರ್ಪಡಿಸುವಿಕೆಗೆ ಯಾವ ರಾಷ್ಟ್ರದಿಂದಲೂ ಸಾಧ್ಯವಿಲ್ಲ’ ಎಂದು ನಿರ್ಮಲಾ ಹೇಳಿದರು.

ಜನರ ನಂಬಿಕೆ ಕಾಪಾಡಲು ಬದ್ಧ: ಸಂಜಯ್ ಮಲ್ಹೋತ್ರಾ

ಆರ್ಥಿಕ ಸ್ಥಿರತೆಗೆ ಜಪ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) 26ನೇ ಗವರ್ನರ್ ಆಗಿ ಬುಧವಾರ ಸಂಜಯ್ ಮಲ್ಹೋತ್ರಾ ಅವರು ಅಧಿಕಾರ ಸ್ವೀಕರಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ದೇಶದ ಜನರು ಏನನ್ನು ಎದುರು ನೋಡುತ್ತಿದ್ದಾರೆ ಎಂಬ ಸ್ಪಷ್ಟ ಅರಿವಿದೆ. ಅವರ ನಂಬಿಕೆ ಬಗ್ಗೆಯೂ ತಿಳಿದಿದೆ. ಯಾವುದು ಆರ್ಥಿಕ ಬೆಳವಣಿಗೆ, ಯಾವುದು ಸ್ಥಿರ ಹಾಗೂ ನಿಶ್ಚಿತ ನೀತಿ ಎನ್ನುವ ತಿಳಿವಳಿಕೆಯಿದೆ. ಆ ಗುರಿ ಸಾಧನೆಯ ಹಾದಿಯಲ್ಲಿ ಜನರ ಹಿತಾಸಕ್ತಿ ಕಾಪಾಡಲು ಒತ್ತು ನೀಡುತ್ತೇನೆ’ ಎಂದು ಭರವಸೆ ನೀಡಿದರು.

‘ಆರ್ಥಿಕ ಸ್ಥಿರತೆಗೆ ಆರ್‌ಬಿಐ ಒತ್ತು ನೀಡಿದೆ. ಇದಕ್ಕೆ ಸಂಬಂಧಿಸಿದ ನಿಲುವುಗಳನ್ನು ಮುಂದುವರಿಸಲಾಗುವುದು. ಪ್ರಸಕ್ತ ಜಾಗತಿಕ ಆರ್ಥಿಕತೆ ಮತ್ತು ಬಿಕ್ಕಟ್ಟಿನ ಬಗ್ಗೆ ಜಾಗರೂಕವಾಗಿದ್ದೇವೆ. ಬಿಕ್ಕಟ್ಟಿನಿಂದ ಎದುರಾಗುವ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸುವ ಸಾಮರ್ಥ್ಯ ಹೊಂದಿದ್ದೇವೆ’ ಎಂದು ಹೇಳಿದರು.

‘ಸೆಬಿ, ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಸೇರಿ ಎಲ್ಲಾ ಹಣಕಾಸು ಸಂಸ್ಥೆಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳೊಟ್ಟಿಗೆ ನಿರಂತರವಾಗಿ ಸಂವಹನ ನಡೆಸಲಾಗುವುದು. ಆರ್‌ಬಿಐನ ಪರಂಪರೆಯನ್ನು ಮುಂದುವರಿಸುತ್ತೇನೆ’ ಎಂದು ಹೇಳಿದರು.

‘ಎಲ್ಲದರ ಬಗ್ಗೆ ಸಂಪೂರ್ಣ ಜ್ಞಾನ ಹೊಂದಿಲ್ಲ. ಹಾಗಾಗಿ, ಎಲ್ಲಾ ವಲಯಗಳ ಪ್ರಮುಖರ ಜೊತೆಗೆ ಸಮಾ ಲೋಚನೆ ನಡೆಸಲಾಗುವುದು’ ಎಂದರು.

ಈಗಾಗಲೇ, ಆರ್ಥಿಕ ಸೇರ್ಪಡೆಗೆ ಸಂಬಂಧಿಸಿದಂತೆ ಆರ್‌ಬಿಐ ಹಲವು ಕ್ರಮ ಕೈಗೊಂಡಿದೆ. ಇದನ್ನು ಮುಂದುವರಿಸಲು ವ್ಯಾಪಕವಾಗಿ ತಂತ್ರಜ್ಞಾನದ ನೆರವು ಪಡೆಯಲಾಗುವುದು’ ಎಂದರು.

ಮುಂಬೈನಲ್ಲಿ ಬುಧವಾರ ಭಾರತೀಯ ರಿಸರ್ವ್ ಬ್ಯಾಂಕ್‌ನ ನೂತನ ಗವರ್ನರ್ ಆಗಿ ಸಂಜಯ್ ಮಲ್ಹೋತ್ರಾ ಅವರು ಅಧಿಕಾರ ಸ್ವೀಕರಿಸಿದರು. ಡೆಪ್ಯುಟಿ ಗವರ್ನರ್‌ಗಳು ಹಾಜರಿದ್ದರು —ಪಿಟಿಐ ಚಿತ್ರ

ನೂತನ ಗವರ್ನರ್‌ಗೆ ಸವಾಲುಗಳೇನು?

ಗವರ್ನರ್ ಆಗಿದ್ದ ಶಕ್ತಿಕಾಂತ ದಾಸ್ ಅವರ ಪ್ರಕಾರ, ದೇಶದ ಆರ್ಥಿಕತೆ ಬೆಳವಣಿಗೆ ಮತ್ತು ಚಿಲ್ಲರೆ ಹಣದುಬ್ಬರದ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಸವಾಲಾಗಿದೆ. ಇಂತಹ ಸಂಧಿಕಾಲದಲ್ಲಿ ರಾಜಸ್ಥಾನ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಮಲ್ಹೋತ್ರಾ ಅವರು, ಆರ್‌ಬಿಐನ ಸಾರಥ್ಯವಹಿಸಿದ್ದಾರೆ.

ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಎರಡು ವರ್ಷದ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ಶೇ 6.21ರಷ್ಟು ದಾಖಲಾಗಿದೆ. ಇದು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಶೇ 6ರ ಗುರಿಗಿಂತಲೂ ಹೆಚ್ಚಿದೆ.

ಈ ನಡುವೆಯೇ ದಾಸ್ ಅಧ್ಯಕ್ಷತೆಯ ಹಣಕಾಸು ನೀತಿ ಸಮಿತಿ ಸಭೆಯು (ಎಂಪಿಸಿ) ಸತತ 11 ಬಾರಿ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಅಲ್ಲದೆ, ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಕನಿಷ್ಠಮಟ್ಟಕ್ಕೆ ಕುಸಿದಿದೆ. ಇವುಗಳನ್ನು ಸಮರ್ಥವಾಗಿ ನಿಭಾಯಿಸುವ ಸವಾಲು ಮಲ್ಹೋತ್ರಾ ಅವರ ಮುಂದಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಮುಂದಿನ ವರ್ಷದ ಫೆಬ್ರುವರಿಯಲ್ಲಿ ನಡೆಯಲಿರುವ ಎಂಪಿಸಿ ಸಭೆಯಲ್ಲಿ ರೆಪೊ ದರ ಕಡಿತಗೊಳಿಸಬಹುದು ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ. ಮಲ್ಹೋತ್ರಾ ಅವರ ನೇಮಕವು ಈ ಬಗ್ಗೆ ಮತ್ತಷ್ಟು ಆಶಾಭಾವ ಮೂಡಿಸಿದೆ ಎಂದು ಹೇಳಲಾಗಿದೆ.

ಗೋಧಿ ದಾಸ್ತಾನಿಗೆ ಮಿತಿ

ನವದೆಹಲಿ (ಪಿಟಿಐ): ಚಿಲ್ಲರೆ ಮಾರುಕಟ್ಟೆಯಲ್ಲಿ ಗೋಧಿ ಬೆಲೆ ಏರಿಕೆ ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು, ದಾಸ್ತಾನಿಗೆ ಮಿತಿ ಹೇರಿದೆ.

ಈ ಮೊದಲು ಸಗಟು ವರ್ತಕರಿಗೆ 2 ಸಾವಿರ ಟನ್ ಗೋಧಿ ದಾಸ್ತಾನಿಗೆ ಅವಕಾಶ ನೀಡಲಾಗಿತ್ತು. ಈಗ 1 ಸಾವಿರ ಟನ್‌ಗೆ ತಗ್ಗಿಸಿದೆ. ಚಿಲ್ಲರೆ ಮತ್ತು ದೊಡ್ಡ ಮಾರಾಟಗಾರರು ಪ್ರತಿ ಮಳಿಗೆಗೆ 5 ಟನ್ ಮಾತ್ರ ದಾಸ್ತಾನು ಮಾಡಿಕೊಳ್ಳಬೇಕಿದೆ. ಈ ಹಿಂದೆ 10 ಟನ್ ದಾಸ್ತಾನಿಗೆ ಅನುಮತಿ ನೀಡಲಾಗಿತ್ತು. ಈ ಆದೇಶವು ಮುಂದಿನ ವರ್ಷದ ಮಾರ್ಚ್ 31ರ ವರೆಗೆ ಅನ್ವಯವಾಗಲಿದೆ.

ಆಹಾರ ಸಂಸ್ಕರಣೆ ಮಾಡುವವರು ತಿಂಗಳ ಸಾಮರ್ಥ್ಯದ ಶೇ 50ರಷ್ಟನ್ನು ಮಾತ್ರ ದಾಸ್ತಾನು ಮಾಡಿಕೊಳ್ಳಬಹುದಾಗಿದೆ. ಈ ಆದೇಶವು ಮುಂದಿನ ವರ್ಷದ ಏಪ್ರಿಲ್‌ವರೆಗೆ ಅನ್ವಯ ಆಗಲಿದೆ ಎಂದು ಕೇಂದ್ರ ಆಹಾರ ಸಚಿವಾಲಯ ಬುಧವಾರ ತಿಳಿಸಿದೆ.

ಗೋಧಿ ದಾಸ್ತಾನು ಮಾಡುವವರು ಪ್ರತಿ ಶುಕ್ರವಾರ ಇಲಾಖೆಯ ಪೋರ್ಟಲ್‌ನಲ್ಲಿ ದಾಸ್ತಾನು ಪ್ರಮಾಣದ ಬಗ್ಗೆ ನಮೂದಿಸಬೇಕು. ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚು ದಾಸ್ತಾನು ಇದ್ದರೆ ಅಧಿಸೂಚನೆ ಪ್ರಕಟವಾದ 15 ದಿನದಲ್ಲಿ ನಿಗದಿಪಡಿಸಿದ ಪ್ರಮಾಣಕ್ಕೆ ತಗ್ಗಿಸಬೇಕು. ಆದೇಶ ಉಲ್ಲಂಘಿಸಿದರೆ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಆಹಾರ ಪದಾರ್ಥಗಳ ದರ ಏರಿಕೆ ನಿಯಂತ್ರಿಸಲು ಹಾಗೂ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಇದೇ ವರ್ಷದ ಜೂನ್ 24 ಮತ್ತು ಸೆಪ್ಟೆಂಬರ್ 9ರಂದು ದಾಸ್ತಾನು ಮಿತಿ ನಿಯಂತ್ರಿಸಲು ಆದೇಶವನ್ನು ಸರ್ಕಾರ ಜಾರಿ ಮಾಡಿತ್ತು. ಈಗ ಮತ್ತೆ ಪರಿಷ್ಕೃತ ಆದೇಶ ಹೊರಡಿಸಿದೆ.

‘ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ’

ನವದೆಹಲಿ (ಪಿಟಿಐ): ಗಿಗ್ ಮತ್ತು ಆನ್‌ಲೈನ್ ವೇದಿಕೆಯಡಿ ಕೆಲಸ ನಿರ್ವಹಿಸುವವರಿಗೆ ಸಾಮಾಜಿಕ ಭದ್ರತೆ ಸಂಬಂಧ ಹೊಸ ಯೋಜನೆ ರೂಪಿಸಲು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಕಾರ್ಯತತ್ಪರವಾಗಿದೆ.

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಜಾಗತಿಕ ಆರ್ಥಿಕ ನೀತಿ ವೇದಿಕೆಯಿಂದ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವಾಲಯದ ಕಾರ್ಯದರ್ಶಿ ಸುಮಿತಾ ದಾವ್ರಾ, ಗಿಗ್, ಆನ್‌ಲೈನ್ ವೇದಿಕೆಯ ಅರ್ಥವ್ಯವಸ್ಥೆಯಲ್ಲಿ ಕೆಲಸ ಮಾಡುವವರಿಗೆ ಸೌಲಭ್ಯ ಕಲ್ಪಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಈ ವರ್ಗದ ಕಾರ್ಮಿಕರು ಸಾಂಪ್ರದಾಯಿಕವಾದ ಉದ್ಯೋಗ ದಾತ–ಉದ್ಯೋಗಿ ನಡುವಿನ ಕೆಲಸದ ವ್ಯವಸ್ಥೆಯಿಂದ ದೂರ ಇರುತ್ತಾರೆ. ಅವರಿಗೆ ಸಾಮಾಜಿಕ ಭದ್ರತೆ ಕಲ್ಪಿಸಿದರೆ ದೇಶದ ಆರ್ಥಿಕತೆಗೆ ಮತ್ತಷ್ಟು ಬೆಂಬಲ ನೀಡಿದಂತಾಗುತ್ತದೆ. ಅಲ್ಲದೆ, ಇ–ಕಾಮರ್ಸ್ ಮತ್ತು ಸೇವಾ ವಲಯವು ಮತ್ತಷ್ಟು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು. 2030ರ ವೇಳೆಗೆ ಗಿಗ್ ಮತ್ತು ಆನ್‌ಲೈನ್ ವೇದಿಕೆ ಅರ್ಥವ್ಯವಸ್ಥೆಯಡಿ ಕೆಲಸ ನಿರ್ವಹಿಸುವವರ ಸಂಖ್ಯೆಯು 3 ಕೋಟಿ ದಾಟುವ ಬಗ್ಗೆ ಅಂದಾಜಿಸಲಾಗಿದೆ ಎಂದರು.

ಈ ವರ್ಗದ ಕೆಲಸಗಾರರಿಗೆ ಪಿಂಚಣಿ ಮತ್ತು ಆರೋಗ್ಯ ಸೇವೆ ಕಲ್ಪಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಇತ್ತೀಚೆಗೆ ಹೇಳಿದ್ದರು.

ಜಿಡಿಪಿ ಶೇ 6.5ರಷ್ಟು ಪ್ರಗತಿ: ಎಡಿಬಿ

ನವದೆಹಲಿ (ಪಿಟಿಐ): ದೇಶದ ಆರ್ಥಿಕ ಮುನ್ನೋಟವನ್ನು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಪರಿಷ್ಕರಿಸಿದೆ. ಏಷ್ಯಾ ಮತ್ತು ಪೆಸಿಫಿಕ್ ರಾಷ್ಟ್ರಗಳ ಮುನ್ನೋಟವನ್ನು ತಗ್ಗಿಸಿದೆ.

2024–25ನೇ ಆರ್ಥಿಕ ವರ್ಷದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಈ ಮೊದಲು ಅಂದಾಜಿಸಿತ್ತು. ಈಗ ಶೇ 6.5ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಿದೆ.

2025–26ನೇ ಆರ್ಥಿಕ ವರ್ಷದಲ್ಲಿ ಶೇ 7.2ರಷ್ಟು ಬೆಳವಣಿಗೆ ಆಗಲಿದೆ ಎಂದು ಹೇಳಿತ್ತು. ಇದನ್ನು ಶೇ 7ಕ್ಕೆ ಪರಿಷ್ಕರಿಸಿದೆ. ಖಾಸಗಿ ವಲಯದಲ್ಲಿ ಹೂಡಿಕೆ ಪ್ರಮಾಣ ಮತ್ತು ವಸತಿಗೆ ಬೇಡಿಕೆಯು ನಿರೀಕ್ಷೆಗಿಂತಲೂ ಕಡಿಮೆಯಾಗಲಿದೆ. ಹಾಗಾಗಿ, ಬೆಳವಣಿಗೆಯು ಇಳಿಕೆಯಾಗಲಿದೆ ಎಂದು ಬುಧವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಏಷ್ಯಾ ಮತ್ತು ಪೆಸಿಫಿಕ್ ರಾಷ್ಟ್ರಗಳ ಆರ್ಥಿಕತೆ ಬೆಳವಣಿಗೆಯನ್ನು ಶೇ 5 ರಿಂದ ಶೇ 4.9ಕ್ಕೆ ಪರಿಷ್ಕರಿಸಿದೆ ಎಂದು ಹೇಳಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಿದ್ಯಾಸಾಗರ್, ಶಿರಸಿ.

- **ಪ್ರಶ್ನೆ: ನಾನು ಕಳೆದ ಕೆಲವು ತಿಂಗಳಿನಿಂದ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಇದರಲ್ಲಿ ಅನೇಕ ಈಕ್ವಿಟಿ ವಿಭಾಗದ ಎಸ್‌ಐಪಿ ಹೂಡಿಕೆ ಮತ್ತು ಕೆಲವು ಏಕ ಕಂತಿನ ಹೂಡಿಕೆ ಮಾಡುತ್ತಿದ್ದೇನೆ. ಈ ಎಸ್‌ಐಪಿ ಹೂಡಿಕೆಗಳಿಗಿಂತ ಏಕ ಕಂತಿನ ಹೂಡಿಕೆಗಳಲ್ಲಿ ಅಧಿಕ ಲಾಭ ಬಂದಂತೆ ಕಂಡು ಬರುತ್ತಿದೆ. ನಾನು ಓದಿ ತಿಳಿದ ಪ್ರಕಾರ, ಬಹುತೇಕ ಮಂದಿ ಏಕ ಕಂತಿನ ಹೂಡಿಕೆಗಿಂತ ಎಸ್‌ಐಪಿ ಹೂಡಿಕೆಗಳನ್ನೇ ಹೆಚ್ಚಾಗಿ ಸೂಚಿಸುತ್ತಾರೆ. ಜೊತೆಗೆ, ಆ ವರ್ಗದ ಹೂಡಿಕೆಗಳನ್ನು ಇಷ್ಟಪಡುತ್ತಾರೆ.**

  ಬಹುತೇಕ ಮಂದಿಯ ಅನುಭವಕ್ಕಿಂತ ನನ್ನ ವೈಯಕ್ತಿಕ ಅನುಭವ ಭಿನ್ನವಾಗಿದೆ. ಹೀಗಿರುವಾಗ, ಇನ್ನು ಮುಂದೆ ಎಸ್‌ಐಪಿ ನಿಲ್ಲಿಸಿ ಸಕಾಲದಲ್ಲಿ ಏಕ ಕಂತಿನ ಹೂಡಿಕೆ ಮಾಡುವುದೇ ಸೂಕ್ತ ಎನ್ನುವ ಅಭಿಪ್ರಾಯ ತಳೆದಿದ್ದೇನೆ. ನನ್ನ ಜೊತೆ ನನ್ನ ಕೆಲವು ಸ್ನೇಹಿತರು ಕೂಡ ಇದೇ ಗೊಂದಲದಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಈ ಬಗ್ಗೆ ನಿಮ್ಮ ಸಲಹೆ ಬಯಸುತ್ತೇನೆ.

ಉತ್ತರ: ಯಾವುದೇ ಹೂಡಿಕೆಗಳಾಗಿರಲಿ, ಅವು ಒಂದು ನಿರ್ದಿಷ್ಟ ವರ್ಗದ ಹೂಡಿಕೆದಾರರ ವಿವಿಧ ಆಕಾಂಕ್ಷೆ, ಹೂಡಿಕೆಯ ಸಮಯ ಹಾಗೂ ಅದರ ಅಧ್ಯಯನದ ಬಗ್ಗೆ ಅವರು ಕೊಡಬಹುದಾದ ಸಮಯವನ್ನು ಆಧರಿಸಿರುತ್ತದೆ. ಮ್ಯೂಚುವಲ್ ಫಂಡ್ ಹೂಡಿಕೆಗಳಿಗೂ ಈ ಮಾದರಿ ಅನ್ವಯಿಸುತ್ತದೆ. ಸಾಮಾನ್ಯವಾಗಿ ಎಸ್‌ಐಪಿ ಮಾಡುವುದರ ಮೂಲ ಉದ್ದೇಶ ಏನೆಂದು ಅವಲೋಕಿಸಿದರೆ ಮೊದಲನೆಯದು, ನಮ್ಮ ಗಳಿಕೆಯ ಒಂದಷ್ಟು ಭಾಗ ಉಳಿತಾಯವಾಗಬೇಕು. ಆ ಹೂಡಿಕೆ ನಿರಂತರವಾಗಿ ಹಾಗೂ ಶಿಸ್ತುಬದ್ಧವಾಗಿ ಇರಬೇಕು ಎಂಬುದಾಗಿದೆ.

ಇದು ನಮ್ಮ ಗಳಿಕೆಯನ್ನು ಅನಗತ್ಯ ಖರ್ಚುಗಳಿಗೆ ಎಡೆ ಮಾಡಿಕೊಡುವುದನ್ನು ಒಂದರ್ಥದಲ್ಲಿ ನಿಯಂತ್ರಿಸುತ್ತದೆ. ಎರಡನೆಯದು ಯಾರಿಗೆ ಹೂಡಿಕೆ ಕ್ಷೇತ್ರದಲ್ಲಿ ಅಷ್ಟೊಂದು ಪರಿಣತಿ ಇಲ್ಲವೋ ಅಂಥವರು, ಫಂಡ್ ಹೌಸ್ ನಿರ್ವಹಿಸುವ ವಿವಿಧ ಉತ್ಪನ್ನಗಳಲ್ಲಿ ಹೂಡಿಕೆ ಮಾಡುವುದು ಹಾಗೂ ತಮಗಿಂತ ಅನುಭವಿಗಳು ನಮಗಾಗಿ ಲಾಭ ಮಾಡಿಕೊಡುವ ಆಕ್ಟಿವ್ ಫಂಡ್‌ಗಳನ್ನು ಖರೀದಿಸುವುದು ಇದರ ಭಾಗವಾಗಿದೆ.

ಈ ಹಂತದಲ್ಲಿ ನಮಗಿರುವ ಸಾಮಾನ್ಯ ಗೊಂದಲ ಏನೆಂದರೆ ಎನ್‌ಎವಿ ಬೆಲೆ ಕಡಿಮೆ ಇದ್ದಾಗ ಖರೀದಿಸಿದರೆ ಸಿಗುವ ಲಾಭದ ಪ್ರಮಾಣ ಪ್ರತಿಶತ ದರದಲ್ಲಿ ಹೆಚ್ಚಿರುತ್ತದೆ ಎಂಬುದಾಗಿದೆ. ಅದೇ ರೀತಿ ಎಸ್‌ಐಪಿ ಹೂಡಿಕೆಗಳ ಸರಾಸರಿ ಬೆಲೆ ಎನ್‌ಎವಿ ಮೌಲ್ಯ ವರ್ಧಿಸುತ್ತಿದ್ದಂತೆ ಏರುತ್ತಾ ಹೋಗಿ ಶೇಕಡಾವಾರು ಲಾಭ ಕಡಿಮೆಯಾಗುತ್ತದೆ. ಇದು ಹೊರ ನೋಟಕ್ಕೆ ಗಣನೀಯವಾಗಿ ಹೌದಾದರೂ, ವಾಸ್ತವದಲ್ಲಿ ಅನೇಕ ಬಾರಿ ಸಮಯಾವಕಾಶ ಹೊಂಚು ಹಾಕಿ ಅಥವಾ ನಿಖರವಾದ ಕನಿಷ್ಠ ಎನ್‌ಎವಿ ಇದುವೇ ಎಂದು ಊಹಿಸಿ ವ್ಯವಹರಿಸುವುದು ಪರಿಣತರಿಗೂ ಕಷ್ಟ. ಹೀಗಾಗಿ, ಇವೆರಡೂ ಹೂಡಿಕೆಯ ಪಥಗಳು ಬೇರೆ ಬೇರೆ ರೀತಿಯ ಹೂಡಿಕೆದಾರರಿಗೆ ಇರುವಂಥವು.

ನಿಮ್ಮಲ್ಲಿ ಸಾಕಷ್ಟು ಸಮಯ ಇದ್ದು ಎಲ್ಲ ಹಂತಗಳ ಆರ್ಥಿಕ ಅಪಾಯಗಳ ನಿರ್ವಹಣೆ ಹಾಗೂ ಹೂಡಿಕೆ ನಿರ್ವಹಣೆ ಮಾಡುವ ಅವಕಾಶ ಇದ್ದರೆ ಏಕ ಕಂತಿನ ಹೂಡಿಕೆ ಸೂಕ್ತ. ಆದರೆ, ಯಾರಿಗೆ ನಿಶ್ಚಿತ ಹಣದ ಗಳಿಕೆ ಇದೆಯೋ ಮತ್ತು ಉಳಿತಾಯವನ್ನೇ ಉದ್ದೇಶವಾಗಿಸಿ ದೀರ್ಘಾವಧಿಯಲ್ಲಿ ಒಂದು ಸಂಚಿತ ನಿಧಿ ಏಕೀಕರಿಸುವ ಉದ್ದೇಶ ಹೊಂದಿದ್ದರೆ ಎಸ್‌ಐಪಿಗಳು ಸೂಕ್ತ.

ಇನ್ನೂ ಒಂದು ವಿಚಾರ ಗಮನದಲ್ಲಿರಲಿ. ನಿಮ್ಮ ಯಾವುದೇ ಎಸ್‌ಐಪಿ ಹೂಡಿಕೆಗಳು ನಿರೀಕ್ಷಿತ ಲಾಭ ನೀಡುತ್ತಿಲ್ಲ ಎಂದಾದರೆ, ಅಲ್ಲಿಗೇ ಸುಮ್ಮನಿರದಿರಿ. ಅಂತಹ ಹೂಡಿಕೆಗಳನ್ನು ನೀವು ಪೋರ್ಟ್ ಫೋಲಿಯೊ ವಿಮರ್ಶೆಗೆ ಒಳಪಡಿಸಿ. ಈಗ ಇರುವ ಮೊತ್ತವನ್ನು ಉತ್ತಮ ಲಾಭ ನೀಡಬಹುದಾದ ಫಂಡ್‌ಗೆ ವರ್ಷಕ್ಕೊಮ್ಮೆ ಏಕ ಕಂತಿನಲ್ಲಿ, ಸೂಕ್ತ ಸಮಯದಲ್ಲಿ ವರ್ಗಾಯಿಸಿ ಮುಂದೆ ಅಧಿಕ ಲಾಭ ಪಡೆಯಿರಿ.

ಇದು ನಿಮ್ಮ ಪೋರ್ಟ್ ಫೋಲಿಯೊವನ್ನು ಇನ್ನಷ್ಟು ಸಶಕ್ತವನ್ನಾಗಿಸಲು ನೆರವಾಗುತ್ತದೆ. ಇಲ್ಲಿ ಯಾವುದು ಸರಿ, ತಪ್ಪು ಎನ್ನುವುದಕ್ಕಿಂತ ಹೆಚ್ಚಾಗಿ ನಷ್ಟದಿಂದ ಲಾಭದೆಡೆಗೆ, ಮುಂದೆ ಹೆಚ್ಚಿನ ಮೌಲ್ಯವರ್ಧನೆ ಕಡೆಗೆ ನಾವು ಮಾಡುವ ನಮ್ಮ ನಿರಂತರ ಹುಡುಕಾಟ ಹಾಗೂ ಸಮರ್ಪಕ ನಿರ್ಧಾರವು ಹೆಚ್ಚು ಫಲ ನೀಡಬಲ್ಲದು.

ಚಂದ್ರಶೇಖರ್, ತುಮಕೂರು.

- **ಪ್ರಶ್ನೆ: ನಾನು ನಿವೃತ್ತ ಸರ್ಕಾರಿ ನೌಕರ. ವಯಸ್ಸು 60. ನಾನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಲೈಫ್ ಇನ್ಶೂರೆನ್ಸ್‌ಗೆ ಪ್ರತಿವರ್ಷ ₹1.25 ಲಕ್ಷ ಪಾವತಿಸುತ್ತಿದ್ದೇನೆ. ಇದರ ಲಾಭಾಂಶ ಕುರಿತು ವಿವರಿಸಲು ಮನವಿ. ಅಲ್ಲದೆ, ನನಗೆ ಒಂದು ರಾಷ್ಟ್ರೀಕೃತ ಬ್ಯಾಂಕ್‌ಗೆ ಲೈಫ್ ಇನ್ಶೂರೆನ್ಸ್ ಏಜೆನ್ಸಿ ಪರವಾಗಿ ಕನ್ಸಲ್ಟೆನ್ಸಿ ಕೆಲಸ ಮಾಡಲು ಸಲಹೆ ನೀಡಲಾಗಿದೆ. ಗ್ರಾಹಕರನ್ನು ಪರಿಚಯಿಸಿದರೆ ಒಂದು ಲಕ್ಷಕ್ಕೆ ಇಂತಿಷ್ಟು ಇನ್ಸೆಂಟಿವ್ ಹಣ ನೀಡುವುದಾಗಿ ನನಗೆ ಏಜೆನ್ಸಿಯವರು ಭರವಸೆ ನೀಡಿದ್ದಾರೆ. ನಿವೃತ್ತಿ ಅವಧಿಯಲ್ಲಿ ನನಗೂ ಹಣಕಾಸಿನ ಅಗತ್ಯವಿದೆ. ಇಂತಹ ಸೇವೆ ಮಾಡಲು ಇಚ್ಛಿಸಿರುತ್ತೇನೆ. ಈ ಕುರಿತು ಸಲಹೆ ನೀಡಲು ಮನವಿ.**

ಉತ್ತರ: ನೀವು ವಾರ್ಷಿಕ ವಿಮಾ ಮೊತ್ತ ಪಾವತಿಸುತ್ತಿರುವ ಪಾಲಿಸಿಗಳ ಷರತ್ತು ಹಾಗೂ ನಿಯಮಗಳನ್ನು ಆಧರಿಸಿ ಲಾಭಾಂಶ ನಿರ್ಧಾರವಾಗುತ್ತದೆ. ಕೆಲವು ಪಾಲಿಸಿಗಳು ನಿಶ್ಚಿತ ಲಾಭ ಕೊಡುವ ಪಾಲಿಸಿಗಳಾಗಿದ್ದರೆ ಇನ್ನು ಕೆಲವು ಯಾವುದೇ ನಿಶ್ಚಿತ ಲಾಭ ಮೊದಲೇ ನೀಡುವ ಭರವಸೆ ಕೊಡುವುದಿಲ್ಲ. ಈ ವಿಚಾರವನ್ನು ನಿಮ್ಮ ಪಾಲಿಸಿ ಬಾಂಡ್‌ಗಳಲ್ಲಿ ಉಲ್ಲೇಖಿಸಿರುತ್ತಾರೆ.

ಸಾಮಾನ್ಯವಾಗಿ ನಿಶ್ಚಿತ ಲಾಭ ಅಥವಾ ಬೋನಸ್ ಸಿಗುವ ಪಾಲಿಸಿಗಳಾಗಿದ್ದರೆ ವಾರ್ಷಿಕವಾಗಿ ಶೇ 5ರಿಂದ ಶೇ 7ರಷ್ಟು ಲಾಭ ನೀಡಬಹುದು. ಈ ಬಗ್ಗೆ ನೀವು ಪಾಲಿಸಿ ದಾಖಲೆ ಪರಿಶೀಲಿಸಿಕೊಳ್ಳಿ ಅಥವಾ ಸಂಬಂಧಿತ ವಿಮಾ ಕಂಪನಿಗೆ ಇ–ಮೇಲ್ ಮೂಲಕ ಅಥವಾ ಸಂಬಂಧಿತ ಏಜೆಂಟ್‌ಗಳನ್ನು ಸಂಪರ್ಕಿಸುವ ಮೂಲಕ ನಿಖರ ಮಾಹಿತಿ ಪಡೆದುಕೊಳ್ಳಬಹುದು.

ಇನ್ನು ನಿಮಗೆ ರಾಷ್ಟ್ರೀಕೃತ ಬ್ಯಾಂಕ್‌ನ ಲೈಫ್ ಇನ್ಶೂರೆನ್ಸ್ ಏಜೆನ್ಸಿ ಕಡೆಯಿಂದ ಗ್ರಾಹಕರನ್ನು ಪರಿಚಯಿಸುವುದಕ್ಕಾಗಿ ಆಹ್ವಾನ ಬಂದದ್ದು ಒಳ್ಳೆಯದು. ಅವರು ನಿಮಗೆ ಪಾವತಿಸುವ ಕಮಿಷನ್ ಅಥವಾ ಶುಲ್ಕಕ್ಕೆ ಸಂಬಂಧಿತ ಯಾವುದೇ ಪಾವತಿಗೆ ಆದಾಯ ತೆರಿಗೆಯ ಸೆಕ್ಷನ್ 194ಡಿಎ ಅಡಿ ಶೇ 2ರ ತೆರಿಗೆ ಕಡಿತ ಇರುತ್ತದೆ. ನಿಮ್ಮ ಕಮಿಷನ್ ಮೊತ್ತ ಇತ್ಯಾದಿ ವಿವರವನ್ನು ಸಂಬಂಧಿತ ಕಂಪನಿಯ ಜೊತೆ ಒಪ್ಪಂದ ಮಾಡಿಕೊಂಡು ವ್ಯವಹರಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ತಾಯ್ನಾಡಿಗೆ ಮರಳಿ: ಬಶೀರ್

ದೇಶದ ಆರ್ಥಿಕ ಸ್ಥಿತಿ ಸರಿಯಿಲ್ಲ: ಸಿರಿಯಾ ಹೊಸ ಪ್ರಧಾನಿ

ಡಮಾಸ್ಕಸ್/ರೋಮ್ (ರಾಯಿಟರ್ಸ್/ಎಎಫ್‌ಪಿ): ವಿವಿಧ ದೇಶಗಳಲ್ಲಿ ಆಶ್ರಯ ಪಡೆದಿರುವ ಸಿರಿಯಾ ಪ್ರಜೆಗಳು ಸ್ವದೇಶಕ್ಕೆ ಮರಳಿ ಎಂದು ಸಿರಿಯಾದ ಹೊಸ ಮಧ್ಯಂತರ ಸರ್ಕಾರದ ಪ್ರಧಾನಿ ಮೊಹಮದ್ ಅಲ್ ಬಶೀರ್ ಮನವಿ ಮಾಡಿದ್ದಾರೆ.

ದೇಶವನ್ನು ಮಾರ್ಚ್‌ವರೆಗೂ ಮುನ್ನಡೆಸಲು ಹೋರಾಟಗಾರರ ಗುಂಪು ಬಶೀರ್ ಅವರನ್ನು ಮಧ್ಯಂತರ ಸರ್ಕಾರದ ಮುಖ್ಯಸ್ಥರನ್ನಾಗಿ ನೇಮಿಸಿದೆ.

ಇಟಲಿಯ ದೈನಿಕ ‘ಕೊರಿಯೆರೆ ಡೆಲ್ಲಾ ಸೆರಾ’ಗೆ ಸಂದರ್ಶನ ನೀಡಿರುವ ಅವರು, ‘ದೇಶದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ. ದೇಶ ಹೊಂದಿರುವ ಸಾಲ ಮತ್ತು ಇತರ ಹೊಣೆಗಾರಿಕೆಗಳ ಕುರಿತು ದತ್ತಾಂಶ ಸಂಗ್ರಹಿಸಲಾಗುತ್ತಿದೆ’ ಎಂದು ಹೇಳಿದ್ದಾರೆ. ಸಿರಿಯಾದಲ್ಲಿ ಎಲ್ಲ ಜನರು ಮತ್ತು ಸಮುದಾಯದವರ ಹಕ್ಕುಗಳನ್ನು ಖಾತರಿಪಡಿಸುತ್ತೇವೆ ಎಂದಿದ್ದಾರೆ.

‘ಸ್ನೇಹ, ಗೌರವ ಇರಲಿ’

ವ್ಯಾಟಿಕನ್ ಸಿಟಿ (ಎಎಫ್‌ಪಿ): ಸಿರಿಯಾದಲ್ಲಿನ ವಿವಿಧ ಧರ್ಮದ ಜನರ ನಡುವೆ ಪರಸ್ಪರ ಸ್ನೇಹ ಮತ್ತು ಗೌರವ ಇರಲಿ ಎಂದು ಕ್ಯಾಥೋಲಿಕ್ ಚರ್ಚ್‌ನ ಮುಖ್ಯಸ್ಥ ಪೋಪ್ ಫ್ರಾನ್ಸಿಸ್ ಕರೆ ನೀಡಿದ್ದಾರೆ.

‘ಸಿರಿಯಾದ ಜನರು ತಮ್ಮ ಪ್ರೀತಿಯ ದೇಶದಲ್ಲಿ ಶಾಂತಿ ಮತ್ತು ಸುರಕ್ಷತೆಯಿಂದ ಬದುಕಬೇಕು. ಹಲವು ವರ್ಷಗಳ ಯುದ್ಧ ಪೀಡಿತ ದೇಶದ ಒಳಿತಿಗಾಗಿ ವಿವಿಧ ಧರ್ಮಗಳ ಜನರು ಪರಸ್ಪರ ಸ್ನೇಹ ಮತ್ತು ಗೌರವದಿಂದ ಒಟ್ಟಾಗಿ ಸಾಗಬೇಕು ಎಂದು ಪ್ರಾರ್ಥಿಸುವುದಾಗಿ’ ಅವರು ವ್ಯಾಟಿಕನ್‌ನಲ್ಲಿ ಹೇಳಿದ್ದಾರೆ.

‘ಅಮೆರಿಕ, ಇಸ್ರೇಲ್ ಜಂಟಿ ಯೋಜನೆ’

ಟೆಹ್ರಾನ್ (ಎಪಿ): ಸಿರಿಯಾದಲ್ಲಿ ಸರ್ಕಾರದ ಪತನ ಸೇರಿದಂತೆ ಇತ್ತೀಚೆಗೆ ನಡೆದಿರುವ ಘಟನೆಗಳು ಅಮೆರಿಕ ಮತ್ತು ಇಸ್ರೇಲ್‌ನ ಜಂಟಿ ಯೋಜನೆಯ ಭಾಗ ಎಂದು ಇರಾನ್ ಪರಮೋಚ್ಚ ನಾಯಕ ಅಯಾತ್ ಉಲ್ಲಾ ಅಲಿ ಖಮೇನಿ ಆರೋಪಿಸಿದ್ದಾರೆ.

‘ಅಮೆರಿಕ ಮತ್ತು ಜಿಯೋನಿಸ್ಟ್ ಯೋಜನೆಯ ಭಾಗವಾಗಿ ಸಿರಿಯಾದಲ್ಲಿ ಇಷ್ಟೆಲ್ಲಾ ನಡೆದಿದೆ ಎಂಬ ಬಗ್ಗೆ ಯಾವುದೇ ಸಂಶಯವಿಲ್ಲ’ ಎಂದು ಅವರು ತಿಳಿಸಿದ್ದಾರೆ.

ತ್ವರಿತ ವಿಚಾರಣೆ: ದಾಸ್ ಅರ್ಜಿ ತಿರಸ್ಕರಿಸಿದ ಕೋರ್ಟ್

ಢಾಕಾ (ಪಿಟಿಐ/ಎಪಿ): ತಮ್ಮ ಅರ್ಜಿಯ ವಿಚಾರಣೆಯನ್ನು ನಿಗದಿತ ದಿನಕ್ಕಿಂತ ಮೊದಲೇ ನಡೆಸುವಂತೆ ಕೋರಿ, ದೇಶದ್ರೋಹ ಪ್ರಕರಣದಡಿ ಬಂಧನದಲ್ಲಿರುವ ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಸಲ್ಲಿಸಿದ್ದ ಅರ್ಜಿಯನ್ನು ಚಟ್ಟೋಗ್ರಾಮ ನ್ಯಾಯಾಲಯ ಬುಧವಾರ ತಿರಸ್ಕರಿಸಿದೆ.

‘ಚಿನ್ಮಯಿ ಕೃಷ್ಣದಾಸ್ ಪರ ವಕೀಲರು ಈ ನಿವೇದನೆ ಮಾಡುವುದಕ್ಕಾಗಿ ‘ಪವರ್ ಆಫ್ ಅಟಾರ್ನಿ’ ಹೊಂದಿಲ್ಲ. ಹೀಗಾಗಿ ಈಗಾಗಲೇ ನಿಗದಿ ಮಾಡಿರುವಂತೆ ಜ.2ರಂದೇ ಅರ್ಜಿ ವಿಚಾರಣೆ ನಡೆಸಲಾಗುವುದು’ ಎಂದು ಮೆಟ್ರೊಪಾಲಿಟನ್ ಸೆಷನ್ಸ್ ನ್ಯಾಯಾಧೀಶ ಸೈಫುಲ್ ಇಸ್ಲಾಂ ಹೇಳಿದರು.

ವಕೀಲ ರವೀಂದ್ರ ಘೋಷ್, ದಾಸ್ ಪರ ಹಾಜರಿದ್ದರು.

ರ‍್ಯಾಲಿ: ಭಾರತದಲ್ಲಿನ ಬಾಂಗ್ಲಾದೇಶ ಹೈಕಮಿಷನ್ ಕಚೇರಿ ಮೇಲಿನ ದಾಳಿ ಖಂಡಿಸಿ ಹಾಗೂ ದೇಶದ ಬಾವುಟಕ್ಕೆ ಅವಮಾನಿಸಲಾಗಿದೆ ಎಂದು ಆರೋಪಿಸಿ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿಯ (ಬಿಎನ್‌ಪಿ) ಸಾವಿರಾರು ಕಾರ್ಯಕರ್ತರು, ಬೆಂಬಲಿಗರು ಕಾರುಗಳಲ್ಲಿ ಸಾಗಿ ಬುಧವಾರ ಪ್ರತಿಭಟಿಸಿದರು.

ಯಾದವ್ ವಿರುದ್ಧ ಗೊತ್ತುವಳಿ ಮಂಡಿಸಲು ಸಿದ್ಧತೆ

ಒಂದನೇ ಪುಟದಿಂದ...

ಗೊತ್ತುವಳಿ ನೋಟಿಸ್‌ಗೆ 40ಕ್ಕೂ ಹೆಚ್ಚು ಸದಸ್ಯರು ಈಗಾಗಲೇ ಸಹಿ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ನ್ಯಾಯಮೂರ್ತಿ ಯಾದವ್ ಅವರು ವಿಎಚ್‌ಪಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಡಿದ ಮಾತುಗಳನ್ನು ನೋಟಿಸ್‌ನಲ್ಲಿ ವಿಸ್ತೃತವಾಗಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ಹೇಳಿವೆ. ನ್ಯಾಯಮೂರ್ತಿಗಳ (ವಿಚಾರಣಾ) ಕಾಯ್ದೆ – 1968 ಹಾಗೂ ಸಂವಿಧಾನದ 124(4)ನೆಯ ವಿಧಿಯ ಅಡಿಯಲ್ಲಿ ನೋಟಿಸ್ ಸಿದ್ಧಪಡಿಸಲಾಗಿದೆ.

ನ್ಯಾಯಮೂರ್ತಿ ಯಾದವ್ ವಿರುದ್ಧ ನಿರ್ದಿಷ್ಟವಾಗಿ ಮೂರು ಆರೋಪಗಳನ್ನು ಗುರುತಿಸಲಾಗಿದೆ. ದ್ವೇಷ ಭಾಷಣ ಮಾಡಿರುವುದು, ಕೋಮು ಸೌಹಾರ್ದವನ್ನು ಕದಡಲು ಯತ್ನಿಸಿರುವುದು ಅವರ ಮೇಲಿನ ಮೊದಲ ಆರೋಪ. ಅಲ್ಪಸಂಖ್ಯಾತರ ಬಗ್ಗೆ ನಿಂದನಾತ್ಮಕವಾಗಿ ಮಾತನಾಡುವ ಮೂಲಕ ಅವರು ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿ ಕೊಂಡಿದ್ದಾರೆ ಎಂಬುದು ಎರಡನೆಯ ಆರೋಪ. ರಾಜಕೀಯ ವಿಚಾರಗಳ ಬಗ್ಗೆ ಅವರು ನಿರ್ದಿಷ್ಟ ನಿಲುವೊಂದನ್ನು ಬೆಂಬಲಿಸಿದ್ದಾರೆ ಎಂಬುದು ಮೂರನೆಯ ಆರೋಪ.

‘ದೇಶವು ಬಹಳ ಬೇಗ ಏಕರೂಪ ನಾಗರಿಕ ಸಂಹಿತೆಯನ್ನು ಹೊಂದಲಿದೆ. ಆ ದಿನ ದೂರವಿಲ್ಲ. ಭಾರತವು ಬಹುಸಂಖ್ಯಾತರ ಇಚ್ಛೆಗೆ ಅನುಗುಣವಾಗಿ ಇರಬೇಕು. ಇದು ಕಾನೂನು’ ಎಂದು ನ್ಯಾಯಮೂರ್ತಿ ಯಾದವ್ ಅವರು ಹೇಳಿದ್ದರು.

ಲಂಡನ್: ಭಂಡಾರಿ ಅರ್ಜಿ ವಿಚಾರಣೆ

ಲಂಡನ್ (ಪಿಟಿಐ): ಹಣ ಅಕ್ರಮ ವರ್ಗಾವಣೆ ಹಾಗೂ ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿ ತಮ್ಮನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಮ್ಯಾಜಿಸ್ಟ್ರೇಟ್ ಕೋರ್ಟ್ ನೀಡಿದ್ದ ಅನುಮತಿ ಪ್ರಶ್ನಿಸಿ, ಶಸ್ತ್ರಾಸ್ತ್ರ ವಿತರಕ ಸಂಜಯ್ ಭಂಡಾರಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆಯನ್ನು ಲಂಡನ್ ಹೈಕೋರ್ಟ್ ಆರಂಭಿಸಿದೆ.

ಮಂಗಳವಾರದಿಂದಲೇ ವಿಚಾರಣೆ ಆರಂಭವಾಗಿದ್ದು, ಜನವರಿಯಲ್ಲಿ ತೀರ್ಪು ಹೊರಬೀಳುವ ಸಾಧ್ಯತೆ ಇದೆ.

‘ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ತೀರ್ಪು ಪ್ರಶ್ನಿಸಿ, ಭಂಡಾರಿ ಸಲ್ಲಿಸಿರುವ ಮೇಲ್ಮನವಿಯು ಪರಿಗಣನೆಗೆ ಯೋಗ್ಯವಾಗಿಲ್ಲ. ಹಾಗಾಗಿ, ಪ್ರಕರಣದ ವಿಚಾರಣೆಗೆ ನೀಡಿರುವ ಅನುಮತಿಯನ್ನು ರದ್ದುಗೊಳಿಸಬೇಕು’ ಎಂದು ಭಾರತ ಸರ್ಕಾರದ ಪರ ವಾದ ಮಂಡಿಸುತ್ತಿರುವ ಕ್ರೌನ್ ಪ್ರಾಸಿಕ್ಯೂಷನ್ ಸರ್ವೀಸ್ (ಸಿಪಿಎಸ್), ಪೀಠಕ್ಕೆ ಮನವಿ ಮಾಡಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

Wanted

ಮನೆ ಕೆಲಸಕ್ಕೆ (15,000-18,000), ಹೋಂ ನರ್ಸ್ (18,000- 22,000) ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಉಡುಪಿ : 9845276452

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈಯಕ್ತಿಕ

Lost

ಕಳೆದಿದೆ
ಹುಣಸೂರು ತಾಲ್ಲೂಕು ಬಿಳಿಕೆರೆ. ಹೋಬಳಿ, ಮನುಗನಹಳ್ಳಿ ಗ್ರಾಮ ಪಂಚಾಯಿತಿ ಖಾತಾ ಸಂಖ್ಯೆ. 152200200705125355, ಸ್ವತ್ತಿನ ಸಂಖ್ಯೆ1ಎ, ಈ ನಿವೇಶನಕ್ಕೆ ಸಂಬಂಧಿಸಿದ ದಿನಾಂಕ. 24.08.2012 ರಂದು ಶ್ರೀ.ರಾಮಚಂದ್ರ ಹೆಚ್. ಎಸ್ ರವರ ಹೆಸರಿನಲ್ಲಿ ಹುಣಸೂರಿನಲ್ಲಿ ಕ್ರಯಪತ್ರ 1ನೇ ಪುಸ್ತಕದ ಸಿ.ಡಿ.ನಂ. ಹೆಚ್‌ಯುಎನ್‌ಡಿ 104 ರಲ್ಲಿ ನಂ. ಹೆಚ್‌ಯುಎನ್–1–05123–2012–13 ಆಗಿ ನೋಂದಣಿಯಾಗಿರುತ್ತದೆ ಈ ಅಸಲು ಕ್ರಯಪತ್ರ ಕಳೆದು ಹೋಗಿದ್ದು. ಸಿಕ್ಕಿದವರು ದಯವಿಟ್ಟು ಸಂಪರ್ಕಿಸಿ.
Contact : Nandakumar 6360674486

ವ್ಯಾಪಾರ

Business to Business

Finance

LOAN AGAINST PROPERTY- MORTGAGE LOAN (All KHATA's) LOAN AMOUNT:- 60%- 75% of Market Value. Interest rate-9.5% onwards, Source: Banks and NBFC's. Call 9071013506 EKTAA LOANS.

ಭವಿಷ್ಯ

Astrology

ಓಂಶ್ರೀ ಮಹಾಗಣಪತಿ ಜ್ಯೋತಿಷ್ಯಾಲಯ. ಪಂಡಿತ. ವೆಂಕಟೇಶ ರಾವ್ ಶಾಸ್ತ್ರೀಜೀ. ಕೇರಳದ ಪ್ರಸಿದ್ಧ ಜ್ಯೋತಿಷಿಗಳು. ಧನವಶಜನವಶ ಶತ್ರುನಾಶ ಸ್ತ್ರೀಪುರುಷ ವಶೀಕರಣ ಇನ್ನೂ ಹಲವಾರು ಸಮಸ್ಯೆಗಳಿಗೆ 2 ದಿನಗಳಲ್ಲಿ ಶಾಶ್ವತ ಪರಿಹಾರ. 9606064461

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಪ್ರವಾಸ

Travel

04.01.2025 12.03.2025 ಸಿಂಗಾಪುರ್,ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 13.01.2025 11.02.2025 10.03.2025 ದುಬೈ,ಅಬುದಾಬಿ 6 ದಿನಗಳು. 11.03.2025 ಭೂತಾನ್ 8 ದಿನಗಳು. 08.01.2025 11.02.2025 ಶ್ರೀಲಂಕಾ 7 ದಿನಗಳು. 14.01.2025 11.02.2025 ಗುಜರಾತ್/ಉಜ್ಜಯಿನಿ 8/11 ದಿನಗಳು. 23.01.2025 20.02.2025 ರಾಜಸ್ಥಾನ್ 9 ದಿನಗಳು. ಇದಲ್ಲದೆ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿರಿ ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

★ಆರ್ಕಿಡ್ ಟ್ರಾವೆಲ್★ 6ದಿನಗಳ ದುಬೈ,ಅಬುದಾಬಿ ಶಾರ್ಜಾ. 18 ದಿನಗಳ ಯುಕೆ ಮತ್ತು ಯುರೋಪ್. 6 ದಿನಗಳ ಶ್ರೀಲಂಕಾ (ರಾಮಾಯಣ ವಿಶೇಷ) 5/9 ದಿನಗಳ ಕಾಶಿ,ಗಯಾ ಅಯೋಧ್ಯಾ,ಅಲಹಾಬಾದ್. 9 ದಿನಗಳ ಗುಜರಾತ್ ವಿಶೇಷ. 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 8 ದಿನಗಳ ಮುಕ್ತಿನಾಥ (ನೇಪಾಳ ವಿಶೇಷ) ಸಂಪರ್ಕಿಸಿ: 9880079588 9900080793 080-26617178

6 ದಿನಗಳ ದುಬೈ. 6 ದಿನಗಳ ಬಾಲಿ. 6 ದಿನಗಳ ಶ್ರೀಲಂಕಾ. 7/11 ದಿನಗಳ ಸಿಂಗಪುರ್ ಮಲೇಷ್ಯಾ, ಥೈಲ್ಯಾಂಡ್. 7 ದಿನಗಳ ಜಪಾನ್. ಭಟ್ ಟ್ರಾವೆಲ್ 9844037295

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE
ADS IN PRAJAVANI
ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮಹಾರಾಷ್ಟ್ರದ ಹೆಚ್ಚುವರಿ ಮುಖ್ಯ ಚುನಾವಣಾ ಅಧಿಕಾರಿ ಕಿರಣ್ ಕುಲಕರ್ಣಿ ಹೇಳಿಕೆ

ವಿವಿಪ್ಯಾಟ್ ಪರಿಶೀಲನೆ: ಇವಿಎಂಗೆ ತಾಳೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಳಸಿದ್ದ ಎಲ್ಲ 1,440 ವಿವಿಪ್ಯಾಟ್‌ಗಳನ್ನು ಪರಿಶೀಲಿಸಲಾಗಿದ್ದು, ಇವಿಎಂಗಳ ಮತ ಎಣಿಕೆಗೆ ಅವು ಸಂಪೂರ್ಣ ತಾಳೆಯಾಗಿವೆ ಎಂದು ಮಹಾರಾಷ್ಟ್ರದ ಹೆಚ್ಚುವರಿ ಮುಖ್ಯ ಚುನಾವಣಾ ಅಧಿಕಾರಿ ಕಿರಣ್ ಕುಲಕರ್ಣಿ ತಿಳಿಸಿದ್ದಾರೆ.

ಕೆಲವು ವಿರೋಧ ಪಕ್ಷಗಳು ಇವಿಎಂಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದ್ದು, ಪುನಃ ಮತಪತ್ರ ವ್ಯವಸ್ಥೆಗೆ ಮರಳುವಂತೆ ಒತ್ತಾಯಿಸುತ್ತಿವೆ. ಈ ಸಂದರ್ಭದಲ್ಲಿ ಇವಿಎಂಗಳ ವಿಶ್ವಾಸಾರ್ಹತೆಯ ಬಗ್ಗೆ ಭರವಸೆ ನೀಡಿದ ಅವರು, ಅವು ಹ್ಯಾಕಿಂಗ್ ಮಾಡಲು ಯಾವುದೇ ಅವಕಾಶ ಗಳಿಲ್ಲದ ಸ್ವತಂತ್ರ ಸಾಧನಗಳಾಗಿವೆ ಎಂದು ಪ್ರತಿಪಾದಿಸಿದ್ದಾರೆ.

‘ವಿಧಾನಸಭಾ ಚುನಾವಣೆಯ 288 ಕ್ಷೇತ್ರಗಳಲ್ಲಿ ಬಳಕೆ ಮಾಡಲಾದ 1,440 ವಿವಿಪ್ಯಾಟ್‌ಗಳನ್ನು ಪರಿಶೀಲಿಸಿದ್ದೇವೆ. ವಿವಿಪ್ಯಾಟ್‌ಗಳು ಎಲ್ಲ ಇವಿಎಂಗಳ ಫಲಿತಾಂಶಗಳಿಗೆ ಸಂಪೂರ್ಣ ಹೊಂದಿಕೆಯಾಗಿವೆ. ಇದು ಇವಿಎಂ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಮತ್ತಷ್ಟು ಬಲವಾಗಿಸುತ್ತದೆ’ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕೆಲವು ಇವಿಎಂಗಳು ಶೇ 99ರಷ್ಟು ಬ್ಯಾಟರಿ ಚಾರ್ಜ್ ತೋರಿಸುವ ಮತ್ತು ಸಂಭವನೀಯ ತಿರುಚುವಿಕೆ ಸಾಧ್ಯತೆಯ ಬಗ್ಗೆ ಕೇಳಿದಾಗ, ‘ಇದು ಮೊಬೈಲ್ ಬ್ಯಾಟರಿಯಂತೆ ಅಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಬ್ಯಾಟರಿ ಬಾಳಿಕೆ ಸಾಮರ್ಥ್ಯ ಐದು ವರ್ಷಗಳ ಅವಧಿಯದ್ದಾಗಿದೆ. ಈ ಯಂತ್ರಗಳು ಯಾವುದೇ ಬಾಹ್ಯ ಸಂಪರ್ಕವಿಲ್ಲದ ಸ್ವತಂತ್ರ ಸಾಧನಗಳು. ಹ್ಯಾಕಿಂಗ್ ಅಥವಾ ತಿರುಚುವಿಕೆ ಅಸಾಧ್ಯ. ಇವಿಎಂಗಳಲ್ಲಿನ ಚಿಪ್ ಒಂದು ಬಾರಿ ಪ್ರೋಗ್ರಾಮೆಬಲ್ ಆಗಿದ್ದು, ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ. ಕಟ್ಟುನಿಟ್ಟಿನ ಭದ್ರತೆ ಮತ್ತು ಆಡಳಿತಾತ್ಮಕ ಶಿಷ್ಟಾಚಾರಗಳು ಯಾವುದೇ ತಿರುಚುವಿಕೆ, ದುರುಪಯೋಗಕ್ಕೆ ಅನುವು ಮಾಡಿಕೊಡುವುದಿಲ್ಲ’ ಎಂದು ಅವರು ಒತ್ತಿಹೇಳಿದರು. ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಮಾದರಿ ನೀತಿ ಸಂಹಿತೆ (ಎಂಸಿಸಿ) ಉಲ್ಲಂಘನೆಗೆ ಸಂಬಂಧಿಸಿದಂತೆ 659 ಪ್ರಕರಣಗಳು ದಾಖಲಾಗಿದ್ದು, ಅವು ತನಿಖೆ ಹಂತದಲ್ಲಿವೆ.

ಲೋಕಸಭಾ ಚುನಾವಣೆ ವೇಳೆ ರಾಜ್ಯದಲ್ಲಿ 366 ಪ್ರಕರಣಗಳು ದಾಖಲಾಗಿದ್ದವು. ಈ ಪ್ರಕರಣಗಳ ಪೈಕಿ 300 ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

14ಕ್ಕೆ ‘ಮಹಾ’ ಸಂಪುಟ ವಿಸ್ತರಣೆ?

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನೇತೃತ್ವದ ಸರ್ಕಾರದ ಸಂಪುಟ ವಿಸ್ತರಣೆಯು ಡಿಸೆಂಬರ್ 14ರಂದು ನಡೆಯುವ ಸಾಧ್ಯತೆ ಇದೆ ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಬುಧವಾರ ತಿಳಿಸಿದರು.

ದೇವೇಂದ್ರ ಫಡಣವೀಸ್

ಫಡಣವೀಸ್ ಅವರು ಬುಧವಾರ ದೆಹಲಿಗೆ ತೆರಳಿದ್ದು, ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಭೇಟಿ ಮಾಡಿದರು. ಇದು ಸೌಜನ್ಯದ ಭೇಟಿಯಷ್ಟೆ ಎಂದು ಮುಖ್ಯಮಂತ್ರಿಗಳ ಕಚೇರಿ ತಿಳಿಸಿದೆ.

‘ಶಿವಸೇನಾಗೆ (ಶಿಂದೆ ಬಣ) ಗೃಹ ಖಾತೆ ಸಿಗುವುದಿಲ್ಲ ಮತ್ತು ಕಂದಾಯ ಖಾತೆಯನ್ನು ನೀಡುವ ಸಾಧ್ಯತೆ ಸಹ ಇಲ್ಲ. ನಗರಾಭಿವೃದ್ಧಿ ಇಲಾಖೆ ಖಾತೆ ಲಭಿಸಬಹುದು’ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದರು.

ಮುಖ್ಯಮಂತ್ರಿ ಸೇರಿದಂತೆ 21ರಿಂದ 22 ಸಚಿವರ ಸಂಪುಟ ರಚನೆಯನ್ನು ಬಿಜೆಪಿ ನಿರೀಕ್ಷಿಸುತ್ತಿದೆ. ನಾಲ್ಕರಿಂದ ಐದು ಸಚಿವ ಸ್ಥಾನ ಖಾಲಿ ಬಿಡುವ ಸಾಧ್ಯತೆ ಇದೆ ಎಂದರು.

ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದ ಮೂವರು ನಾಯಕರಿಗೆ ಮತ್ತೆ ಅವಕಾಶ ನೀಡುವುದಿಲ್ಲ ಎಂದು ಶಿವಸೇನಾ ಪಕ್ಷದ ನಾಯಕರೊಬ್ಬರು ತಿಳಿಸಿದ್ದಾರೆ.

ನಿಗದಿತ ಕಕ್ಷೆಗೆ ಉಪಗ್ರಹ ತಂತ್ರಜ್ಞಾನ ಅಭಿವೃದ್ಧಿ

ನವದೆಹಲಿ (ಪಿಟಿಐ): ನಿಗದಿತ ಕಕ್ಷೆಗೆ ಉಪಗ್ರಹಗಳನ್ನು ಸೇರಿಸಲು ಬಳಸುವ ‘ಗ್ರೀನ್ ಪ್ರೊಪಲ್ಷನ್ ಟೆಕ್ನಾಲಜಿ’ಯನ್ನು ಮುಂಬೈನ ನವೋದ್ಯಮ ಮನಸ್ತು ಸ್ಪೇಸ್ ಟೆಕ್ನಾಲಜಿಯು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ (ಡಿಆರ್‌ಡಿಒ) ಹಸ್ತಾಂತರಿಸಿತು.

ಸಂಸ್ಥೆಯ ತುಷಾರ್ ಜಾಧವ್, ಆಶ್ತೇಶ್ ಕುಮಾರ್ ಅವರು ಐಬೂಸ್ಟರ್ ಗ್ರೀನ್ ಪ್ರೊಪಲ್ಷನ್ ಸಿಸ್ಟಮ್ ಅನ್ನು ಡಿಆರ್‌ಡಿಒ ಅಧ್ಯಕ್ಷ ಸತೀಶ್ ಕಾಮತ್ ಅವರಿಗೆ ಬುಧವಾರ ಒಪ್ಪಿಸಿದರು.

100–500 ಕೆ.ಜಿ. ತೂಕದ ಉಪಗ್ರಹಗಳಿಗಾಗಿ ಈ ತಂತ್ರಜ್ಞಾನ ರೂಪಿಸಲಾಗಿದೆ. ಕಕ್ಷೆಗೆ ಉಪಗ್ರಹ ಸೇರಿಸುವುದು, ಕಕ್ಷೆಯ ಎತ್ತರ ಏರಿಸುವಿಕೆ, ಕಕ್ಷೆಯಿಂದ ನಿರ್ಗಮನ ಪ್ರಕ್ರಿಯೆ ನಿರ್ವಹಣೆಗೆ ಇದು ಸಹಕಾರಿ. ಉಲ್ಲೇಖಿತ ತಂತ್ರಜ್ಞಾನವನ್ನು ಇಸ್ರೊ, ತನ್ನ ಮುಂದಿನ ಪಿಎಸ್‌ಎಲ್‌ವಿ ಬೆಂಬಲಿತ ಉಪಗ್ರಹ ಉಡಾವಣಾ ಕಾರ್ಯಕ್ರಮಗಳಲ್ಲಿ ಪರೀಕ್ಷೆಗೊಳಪಡಿಸಲಿದೆ. ಹೈಡ್ರೋಜನ್ ಪೆರಾಕ್ಸೈಡ್ ಆಧಾರಿತ ಇಂಧನವನ್ನು ಈ ತಂತ್ರಜ್ಞಾನದಡಿ ಬಳಸಲಾಗುವುದು. ಇದು ಅಧಿಕ ಸಾಮರ್ಥ್ಯ, ಸುರಕ್ಷತೆ ಮತ್ತು ಸುಸ್ಥಿರತೆಯ ಖಾತರಿಯನ್ನು ನೀಡಲಿದೆ.

ಹೊಸ ತಂತ್ರಜ್ಞಾನವು ದಕ್ಷತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸಲಿದ್ದು, ಡಿಆರ್‌ಡಿಒದ ಉಪಗ್ರಹ ಉಡಾವಣೆ ಕಾರ್ಯಕ್ರಮಗಳಿಗೆ ಅನುಕೂಲಕರವಾಗಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಮರ್ಥ್ಯವನ್ನು ಇದು ವೃದ್ಧಿಸಲಿದೆ ಎಂದು ಹೇಳಿಕೆ ತಿಳಿಸಿದೆ.

2017ರಲ್ಲಿ ಸ್ಥಾಪನೆಯಾಗಿರುವ ಮನಸ್ತು ಸ್ಪೇಸ್ ಟೆಕ್ನಾಲಜೀಸ್ ಸಂಸ್ಥೆಯು ಅಂತರಿಕ್ಷ ಸುರಕ್ಷತೆ, ಸುಸ್ಥಿರತೆ ಕುರಿತು ಗಂಭೀರ ಸವಾಲುಗಳಿಗೆ ಪರಿಹಾರ ಕಲ್ಪಿಸುವ ಗುರಿ ಹೊಂದಿದೆ.

ಬಡವರ ಭೂಮಿ ಆಕ್ರಮಿಸಿದವರಿಗೆ ತಕ್ಕ ಪಾಠ: ಯೋಗಿ

ಗೋರಖಪುರ (ಪಿಟಿಐ): ಬಡವರ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಂಡಿದ್ದಲ್ಲಿ ಅದನ್ನು ತೆರವುಗೊಳಿಸಿ, ಅತಿಕ್ರಮಣಕಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ಭೂ ಒತ್ತುವರಿ ಪ್ರಕರಣಗಳ ಬಗ್ಗೆ ಅಧಿಕಾರಿಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ಬಡವರನ್ನು ಶೋಷಿಸುವ ಭೂ ಮಾಫಿಯಾಗಳು ಹಾಗೂ ಗೂಂಡಾಗಳನ್ನು ಯಾವುದೇ ಕಾರಣಕ್ಕೂ ಸುಮ್ಮನೆ ಬಿಡಬಾರದು’ ಎಂದು ಸೂಚನೆ ನೀಡಿದ್ದಾರೆ.

‘ದುರ್ಬಲರ ಮೇಲೆ ದಬ್ಬಾಳಿಕೆ ನಡೆಸುವ ಅಪರಾಧಿಗಳ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಕೈಗೊಂಡು, ಸಂತ್ರಸ್ತರಿಗೆ ನ್ಯಾಯ ದೊರಕಿಸಲು ಸರ್ಕಾರ ಕಟಿಬದ್ಧವಾಗಿದೆ’ ಎಂದು ಆದಿತ್ಯನಾಥ ಅವರು ಗೋರಕನಾಥ್ ದೇವಸ್ಥಾನದಲ್ಲಿ ನಡೆದ ‘ಜನತಾ ದರ್ಶನ’ ಕಾರ್ಯಕ್ರಮದಲ್ಲಿ ಹೇಳಿದರು.

ಸಂವಿಧಾನ ಪ್ರತಿಕೃತಿ ಧ್ವಂಸ: ಹಿಂಸಾಚಾರ

ಡಿ.ಸಿ ಕಚೇರಿಗೆ ಹಾನಿ ● ಪೊಲೀಸರಿಂದ ಅಶ್ರುವಾಯು ಶೆಲ್ ಪ್ರಯೋಗ

ಛತ್ರಪತಿ ಸಂಭಾಜಿನಗರ (ಪಿಟಿಐ): ಸಂವಿಧಾನದ ಪ್ರತಿಕೃತಿ ನಾಶಗೊಳಿಸಿರುವುದನ್ನು ಖಂಡಿಸಿ ಮಹಾರಾಷ್ಟ್ರದ ಪರ್ಭಣಿ ನಗರದಲ್ಲಿ ನಡೆಯುತ್ತಿರುವ ಪ್ರತಿಭಟನೆಯು ಬುಧವಾರ ಕೂಡ ಹಿಂಸಾ ಸ್ವರೂಪ ಪಡೆಯಿತು.

ಪರ್ಭಣಿ ರೈಲು ನಿಲ್ದಾಣದ ಆವರಣದಲ್ಲಿನ ಅಂಬೇಡ್ಕರ್ ಮೂರ್ತಿಯ ಬಳಿ ಇರಿಸಲಾಗಿದ್ದ ಸಂವಿಧಾನದ ಪ್ರತಿಕೃತಿಯನ್ನು ದುಷ್ಕರ್ಮಿಗಳು ಮಂಗಳವಾರ ಧ್ವಂಸಗೊಳಿಸಿದ್ದರು. ಅದನ್ನು ಖಂಡಿಸಿ ಆರಂಭಗೊಂಡಿದ್ದ ಪ್ರತಿಭಟನೆಗಳು ಹಿಂಸಾಚಾರಕ್ಕೆ ತಿರುಗಿದ್ದವು.

‘ಅಂಬೇಡ್ಕರ್ ಅಭಿಮಾನಿಗಳು ನಡೆಸುತ್ತಿದ್ದ ಬಂದ್ ಮಧ್ಯೆ ಗುಂಪೊಂದು ಜಿಲ್ಲಾಧಿಕಾರಿಗಳ ಕಚೇರಿಯನ್ನು ಧ್ವಂಸಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರತಿಕೃತಿ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿ ಒಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಆದರೆ, ಬುಧವಾರ ಬೆಳಿಗ್ಗೆ ಮತ್ತೆ ಪ್ರತಿಭಟನೆ ಆರಂಭಗೊಂಡಿದೆ.

ಮುಖ್ಯಾಂಶಗಳು
- ಮಂಗಳವಾರ ಆರಂಭಗೊಂಡಿದ್ದ ಪ್ರತಿಭಟನೆ
- ಸಮಗ್ರ ತನಿಖೆಗೆ ಪ್ರತಿಭಟನಕಾರರಿಂದ ಆಗ್ರಹ
- ಬೆಂಕಿ ಹಚ್ಚಿ ಆಕ್ರೋಶ

ಅಂಗಡಿಯೊಂದರ ಹೊರಗೆ ಇರಿಸಲಾಗಿದ್ದ ಪೈಪ್‌ನ ರಾಶಿಗೆ ಮಧ್ಯಾಹ್ನದ ವೇಳೆ ಬೆಂಕಿ ಹಚ್ಚಲಾಗಿದೆ. ಪ್ರತಿಭಟನೆ ತೀವ್ರವಾಗುತ್ತಿದ್ದಂತೆ ಪೊಲೀಸರು ಅಶ್ರುವಾಯು ಶೆಲ್ ಪ್ರಯೋಗ ಮಾಡಿ ಪ್ರತಿಭಟನಕಾರರನ್ನು ಚದುರಿಸಿದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂವಿಧಾನ ಪ್ರತಿಕೃತಿ ಧ್ವಂಸ ಪ್ರಕರಣದಲ್ಲಿ ಯಾರ ಕೈವಾಡವಿದೆ ಎಂದು ಪತ್ತೆಹಚ್ಚಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

ಪರ್ಭಣಿಯಲ್ಲಿ ಪ್ರತಿಭಟನಕಾರರು ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು — ಪಿಟಿಐ ಚಿತ್ರ

ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ನೂರಾರು ಪ್ರತಿಭಟನಕಾರರು ಜಮಾಯಿಸಿದ್ದರು. ಅವರಲ್ಲಿ ಕೆಲವರು ಕಚೇರಿಯ ಒಳಗೆ ನುಗ್ಗಿ ಪೀಠೋಪಕರಣ ಮತ್ತು ಕಿಟಕಿ ಗಾಜುಗಳನ್ನು ಒಡೆದು ಹಾಕಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ವಸ್ಮತ್ ಪ್ರದೇಶದಲ್ಲೂ ಬಂದ್ ನಡೆದಿದೆ. ಮಂಗಳವಾರ ಸಂಜೆ ಪರ್ಭಣಿ ರೈಲು ನಿಲ್ದಾಣದ ಬಳಿ ರೈಲು ತಡೆ ನಡೆಸಿದ ಪ್ರತಿಭಟನಕಾರರು ಲೋಕೋಪೈಲಟ್ ಮೇಲೆ ಹಲ್ಲೆ ನಡೆಸಿದ್ದಾರೆ.

ವಿಮಾನಯಾನ ಸುರಕ್ಷತೆಗೆ ಕಾಯ್ದೆ ತಿದ್ದುಪಡಿ: ಸಚಿವ

ಹೈದರಾಬಾದ್ (ಪಿಟಿಐ): ವಿಮಾನಯಾನ ಸುರಕ್ಷತೆಯನ್ನು ಮತ್ತಷ್ಟು ಹೆಚ್ಚಿಸಲು ‘ನಾಗರಿಕ ವಿಮಾನಯಾನ ಸುರಕ್ಷತಾ ಕಾಯ್ದೆ 1982’ಕ್ಕೆ ತಿದ್ದುಪಡಿ ತರಲಾಗುತ್ತಿದೆ. ಪ್ರಸ್ತಾವಿತ ತಿದ್ದುಪಡಿಗೆ ವಿವಿಧ ಸಚಿವಾಲಯಗಳಿಂದ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ ಎಂದು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಬುಧವಾರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗರಿಕ ವಿಮಾನಯಾನ ಸಚಿವಾಲಯದಿಂದ ‘ಡಿಜಿ ಯಾತ್ರಾ’ದಂತಹ ಸೌಲಭ್ಯಗಳ ಮೂಲಕ ಎಲ್ಲ ದತ್ತಾಂಶವನ್ನು ಸಂಗ್ರಹಿಸಿ, ಯಾವುದೇ ನೀತಿ ನಿರ್ಧಾರಗಳಿಗೆ ಅವುಗಳನ್ನು ಬಳಸಲು ಅನುಕೂಲ ಆಗುವಂತೆ ‘ಕೇಂದ್ರೀಕೃತ ದತ್ತಾಂಶ ಕೋಶ’ವನ್ನು ರಚಿಸುವ ಪ್ರಕ್ರಿಯೆ ನಡೆದಿದೆ ಎಂದು ತಿಳಿಸಿದ್ದಾರೆ.

‘ನಾಗರಿಕ ವಿಮಾನಯಾನಕ್ಕೆ ಸಂಬಂಧಿಸಿದ ಅಪರಾಧ ತಡೆಗೆ ಎಸ್‌ಯುಎಎಸ್‌ಸಿಎ ಕಾಯ್ದೆ ನಮ್ಮಲ್ಲಿ ಇದೆ. ಇದಕ್ಕೆ ನಾವು ಒಂದು ಸಣ್ಣ ತಿದ್ದುಪಡಿಯನ್ನು ಪ್ರಸ್ತಾಪಿಸಿದ್ದೇವೆ. ವಿವಿಧ ಸಚಿವಾಲಯ ಗಳ ಜತೆಗೆ ಈ ಕುರಿತು ಸಮಾಲೋಚನೆ ನಡೆಯುತ್ತಿದೆ’ ಎಂದೂ ಅವರು ಹೇಳಿದ್ದಾರೆ. ವಿಮಾನ ಭದ್ರತಾ ನಿಯಮಗಳ ತಿದ್ದುಪಡಿಯನ್ನು ಗೆಜೆಟ್‌ನಲ್ಲಿ ಪ್ರಕಟಿಸಿದ ನಂತರ, ಹುಸಿ ಕರೆ ಅಪರಾಧಿಗಳನ್ನು ‘ನೋ-ಫ್ಲೈ’ ಪಟ್ಟಿಗೆ ಸೇರಿಸಲಾಗುವುದು ಎಂದರು.

ವಿಮಾನಗಳ ಸಂಖ್ಯೆ ಏರಿಕೆಯಾಗಲಿದೆ: ದೇಶದಲ್ಲಿರುವ 800 ವಿಮಾನಗಳ ಸಂಖ್ಯೆಯು ಸದ್ಯವೇ 2,300ಕ್ಕೆ ಏರಿಕೆಯಾಗುವ ನಿರೀಕ್ಷೆ ಇದೆ. ಪೈಲಟ್‌ಗಳ ಬೇಡಿಕೆ ಹೆಚ್ಚುತ್ತಿದ್ದು, ಇದನ್ನು ಪೂರೈಸಲು ಹೆಚ್ಚಿನ ಸಂಖ್ಯೆಯಲ್ಲಿ ಫ್ಲೈಯಿಂಗ್ ತರಬೇತಿ ಸಂಸ್ಥೆಗಳನ್ನು (ಎಫ್‌ಟಿಒ) ಸ್ಥಾಪಿಸಲು ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಸಚಿವ ಕೆ.ರಾಮಮೋಹನ್ ನಾಯ್ಡು ಹೇಳಿದರು.

ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏರ್‌ಪೋರ್ಟ್ ಪ್ರಿಡಿಕ್ಟಿವ್ ಆಪರೇಷನ್ ಸೆಂಟರ್ (ಎಪಿಒಸಿ) ಉದ್ಘಾಟನೆ ನಂತರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಭಾರತದಲ್ಲಿ ವಿಮಾನ ಪ್ರಯಾಣಿಕರ ದಟ್ಟಣೆಯು ಹೊಸ ಎತ್ತರವನ್ನು ತಲುಪುತ್ತಿದೆ ಎಂದರು.

ಭಾರತೀಯ ವಿಮಾನ ನಿಲ್ದಾಣಗಳು ಈ ವರ್ಷದ ಅಕ್ಟೋಬರ್‌ನಲ್ಲಿ ಶೇ 5.3ರಷ್ಟು ಬೆಳವಣಿಗೆ ದಾಖಲಿಸಿದೆ. ಕಳೆದ ವರ್ಷದ ಇದೇ ತಿಂಗಳಿಗೆ ಹೋಲಿಸಿದರೆ, ವಿಮಾನ ಸಂಚಾರ ಮಾಡಿದ ದೇಸಿ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗಿದ್ದು, 1.36 ಕೋಟಿ ಮುಟ್ಟಿದೆ.

ಸಂಕ್ಷಿಪ್ತ ಸುದ್ದಿ

ಗುರುವಾಯೂರು ದೇಗುಲ: ಅರ್ಜಿ ವಿಚಾರಣೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಕೇರಳದ ಗುರುವಾಯೂರು ಶ್ರೀಕೃಷ್ಣ ದೇಗುಲದಲ್ಲಿ ಏಕಾದಶಿಯಂದು ‘ಉದಯಾಸ್ತಮಾನ ಪೂಜೆ’ಯನ್ನು ಕೈಬಿಡಲು ನಿರ್ಧರಿಸಿದ ಆಡಳಿತ ಮಂಡಳಿಯ ನಿರ್ಧಾರವನ್ನು ಎತ್ತಿಹಿಡಿದ ಕೇರಳ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ಬುಧವಾರ ಒಪ್ಪಿಗೆ ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ರಾಜೇಶ್ ಬಿಂದಾಲ್ ಅವರನ್ನು ಒಳಗೊಂಡ ನ್ಯಾಯಪೀಠವು, ಈ ಸಂಬಂಧ ಗುರುವಾಯೂರು ದೇವಸ್ವ ಮಂಡಳಿ, ಕೇರಳ ಸರ್ಕಾರ ಮತ್ತು ಇತರರಿಗೆ ನೋಟಿಸ್ ರವಾನಿಸಿದೆ.

‘ನಿತ್ಯವೂ ನಡೆಯುವ ಪೂಜೆಗಳ ಬಗ್ಗೆ ದೇಗುಲದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಕೋಷ್ಟಕವನ್ನು ಬದಲಾಯಿಸುವಂತಿಲ್ಲ’ ಎಂದು ಕೋರ್ಟ್ ತಿಳಿಸಿದೆ. ‘ಈಗಲೇ ನಾವು ಮಧ್ಯಪ್ರದೇಶ ಮಾಡುವುದಿಲ್ಲ. ಪ್ರತಿವಾದಿಗಳಿಗೆನೋಟಿಸ್ ರವಾನಿಸುತ್ತೇವೆ’ ಎಂದು ನ್ಯಾಯಪೀಠ ತಿಳಿಸಿತು.

ಎನ್‌ಕೌಂಟರ್ ನಕ್ಸಲ್ ಸಾವು

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯ ಮುಂಗಾ ಗ್ರಾಮದ ಅರಣ್ಯದಲ್ಲಿ ಬುಧವಾರ ಭದ್ರತಾ ಪಡೆ ಮತ್ತು ನಕ್ಸಲರ ನಡುವಿನ ಎನ್‌ಕೌಂಟರ್‌ನಲ್ಲಿ ಒಬ್ಬ ನಕ್ಸಲ್ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಈ ಪ್ರದೇಶದಲ್ಲಿ ನಕ್ಸಲರು ಅಳವಡಿಸಿದ್ದ ಕಚ್ಚಾಬಾಂಬ್ ಸ್ಫೋಟಗೊಂಡು ಇಬ್ಬರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ನಕ್ಸಲರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದರು.

ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ) ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ಗುಂಡಿನ ಚಕಮಕಿ ನಡೆದಿದೆ. ಮಾವೋವಾದಿಗಳ ವಿಭಾಗೀಯ ಸಮಿತಿ ಸದಸ್ಯ ದಿನೇಶ್ ಮೊಡಿಯಂ, ಕಂಪನಿ ನಂ. 2 ಕಮಾಂಡರ್ ವೆಲ್ಲಾ ಸೇರಿ 30–40 ನಕ್ಸಲರು ಇರುವ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಯುತ್ತಿತ್ತು ಎಂದರು. ಸ್ಥಳದಿಂದ ಒಬ್ಬ ನಕ್ಸಲನ ಮೃತದೇಹ, ಒಂದು 9 ಎಂ.ಎಂ ಪಿಸ್ತೂಲ್, ಕಚ್ಚಾ ಬಾಂಬ್‌ಗಳು, ಆರು ರಿಮೋಟ್ ಸ್ವಿಚ್‌ಗಳು ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದೂ ಅವರು ತಿಳಿಸಿದರು.

ಕೊಳವೆಬಾವಿಗೆ ಬಿದ್ದಿದ್ದ ಬಾಲಕನ ರಕ್ಷಣೆ

55 ತಾಸುಗಳ ಕಾರ್ಯಾಚರಣೆ ಯಶಸ್ವಿ

ಜೈಪುರ (ಪಿಟಿಐ): ರಾಜಸ್ಥಾನದ ದೌಸಾದಲ್ಲಿ 150 ಅಡಿ ಆಳದ ಕೊಳವೆಬಾವಿಗೆ ಬಿದ್ದಿದ್ದ ಐದು ವರ್ಷದ ಬಾಲಕ ಆರ್ಯನ್‌ನನ್ನು ಸತತ 55 ಗಂಟೆಗಳ ಕಾರ್ಯಾಚರಣೆ ನಡೆಸಿ ರಕ್ಷಿಸಲಾಗಿದೆ.

ಕೊಳವೆಬಾವಿಗೆ ಸಮಾನಾಂತರವಾಗಿ 160 ಅಡಿ ಆಳದಷ್ಟು ಭೂಮಿಯನ್ನು ಅಗೆದು, ಬಾಲಕನನ್ನು ಹೊರತರಲಾಯಿತು. ಬಾಲಕನನ್ನು ತಕ್ಷಣವೇ ಆಂಬುಲೆನ್ಸ್‌ನಲ್ಲಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಯಿತು. ಬಾಲಕನ ಆರೋಗ್ಯದ ಸ್ಥಿತಿಯ ಬಗ್ಗೆ ಅಧಿಕಾರಿಗಳು ಯಾವುದೇ ಮಾಹಿತಿ ನೀಡಿಲ್ಲ.

‘ಕೊಳವೆಬಾವಿಯಲ್ಲಿ ಬಾಲಕ ಬಿದ್ದಿರುವ ಸ್ಥಳ ತಲುಪಲು ಪರ್ಯಾಯವಾಗಿ ಕಂದಕ ತೋಡಬೇಕಾಯಿತು. 160 ಅಡಿ ಆಳದಲ್ಲಿ ನೀರಿನ ಮೂಲವಿತ್ತು. ಇದರಿಂದಾಗಿ ಬಾಲಕನ ಚಲನವಲನವನ್ನು ಗುರುತಿಸುವುದು ಕಷ್ಟಕರವಾಯಿತು. ಈ ರಕ್ಷಣಾ ಕಾರ್ಯಾಚರಣೆ ಅತ್ಯಂತ ಸವಾಲಿನಿಂದ ಕೂಡಿತ್ತು’ ಎಂದು ಎನ್‌ಡಿಆರ್‌ಎಫ್ ಕಮಾಂಡೆಂಟ್ ಯೋಗೇಶ್ ಕುಮಾರ್ ತಿಳಿಸಿದರು.

ಬಾಲಕ ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಕೊಳವೆ ಬಾವಿಗೆ ಬಿದ್ದಿದ್ದ.

ನಕ್ಸಲರಿಂದ ಬಿಜೆಪಿ ಕಾರ್ಯಕರ್ತನ ಹತ್ಯೆ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು ಬಿಜೆಪಿ ಕಾರ್ಯಕರ್ತನನ್ನು ಪೊಲೀಸ್ ಮಾಹಿತಿದಾರನೆಂದು ಭಾವಿಸಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಈ ಘಟನೆ ಮಂಗಳವಾರ ಫರ್ಸೇಗಢದ ಸೋಮನಪಲ್ಲಿ ಗ್ರಾಮದಲ್ಲಿ ನಡೆದಿದೆ. ಮೃತನನ್ನು ಕುಡಿಯಾಮ್ ಮಾಡೋ (35) ಎಂದು ಗುರುತಿಸಲಾಗಿದೆ. ನಕ್ಸಲರ ಗುಂಪು ಮಾಡೋ ಅವರ ಮನೆಗೆ ನುಗ್ಗಿ ಅವರನ್ನು ಹೊರಗೆ ಎಳೆದು ಕತ್ತು ಹಿಸುಕಿ ಕೊಂದಿದೆ ಎಂದು ತಿಳಿಸಿದ್ದಾರೆ.

‘ಪತ್ರಕರ್ತನ ಮೇಲೆ ನಟ ಮೋಹನ್ ಬಾಬು ಹಲ್ಲೆ’

ಹೈದರಾಬಾದ್ (ಪಿಟಿಐ): ತೆಲುಗು ಹಿರಿಯ ನಟ ಮೋಹನ್ ಬಾಬು ಅವರು ಪತ್ರಕರ್ತರೊಬ್ಬರ ಮೇಲೆ ಹಲ್ಲೆ ನಡೆಸಿದ್ದು, ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆಸ್ತಿ ಹಂಚಿಕೆ ವಿಚಾರವಾಗಿ ಮೋಹನ್ ಬಾಬು ಅವರ ಕುಟುಂಬದಲ್ಲಿ ಸಂಘರ್ಷ ಉಂಟಾಗಿದ್ದು, ಬೀದಿ ಜಗಳ ನಡೆಯುತ್ತಿದೆ. ಪತ್ರಕರ್ತರು ಈ ಬಗ್ಗೆ ವರದಿ ಮಾಡಲು, ಹೈದರಾಬಾದ್‌ನ ಜಲಪಲ್ಲಿಯಲ್ಲಿರುವ ಮೋಹನ್ ಬಾಬು ಅವರ ನಿವಾಸಕ್ಕೆ ಮಂಗಳವಾರ ರಾತ್ರಿ ತೆರಳಿದ್ದರು. ಈ ವೇಳೆ, ಪತ್ರಕರ್ತರ ಪ್ರಶ್ನೆಗೆ ಸಿಟ್ಟಾದ ಅವರು, ಮೈಕ್ರೋಫೋನ್ ಕಸಿದು, ಹಲ್ಲೆ ನಡೆಸಿದ್ದಾರೆ ಎಂದು ದೂರಲಾಗಿದೆ.

ಕೃತ್ಯವನ್ನು ಖಂಡಿಸಿರುವ ಪತ್ರಕರ್ತರು, ‘ಮೋಹನ್ ಬಾಬು ಅವರು ಕ್ಷಮೆ ಕೋರಬೇಕು’ ಎಂದು ಆಗ್ರಹಿಸಿ ಬುಧವಾರ ಪ್ರತಿಭಟಿಸಿದ್ದಾರೆ. ಈ ಮಧ್ಯೆ, ಮೋಹನ್ ಬಾಬು ಅವರು ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎನ್ನಲಾಗಿದೆ.

ಮೋಹನ್ ಬಾಬು

ನೋಟಿಸ್: ಬೀದಿಯಲ್ಲಿ ಜಗಳ ಮಾಡಿ ಶಾಂತಿ ಭಂಗಗೊಳಿಸಿರುವ ಪ್ರಕರಣ ಸಂಬಂಧ ಬುಧವಾರ ವಿಚಾರಣೆಗೆ ಹಾಜರಾಗುವಂತೆ ಮೋಹನ್ ಬಾಬು ಹಾಗೂ ಅವರ ಇಬ್ಬರು ಪುತ್ರರಾದ ವಿಷ್ಣು ಹಾಗೂ ಮನೋಜ್ ಅವರಿಗೆ ಪೊಲೀಸರು ನೋಟಿಸ್ ನೀಡಿದ್ದರು. ವಿಚಾರಣೆಗೆ ಹಾಜರಾಗಿದ್ದ ಮನೋಜ್, ಮಾತುಕತೆ ಮೂಲಕ ಕೌಟುಂಬಿಕ ಕಲಹವನ್ನು ಇತ್ಯರ್ಥಗೊಳಿಸಿಕೊಳ್ಳುವುದಾಗಿ ಪ್ರತಿಕ್ರಿಯಿಸಿದರು.

‘ಪುರುಷರಿಗೂ ಘನತೆ, ಗೌರವ ಇದೆ’

ಕೊಚ್ಚಿ (ಪಿಟಿಐ): ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ನಟಿಯೊಬ್ಬರ ಮೇಲೆ ಲೌಂಗಿಕ ದೌರ್ಜನ್ಯ ಎಸಗಿದ ಆರೋಪ ಪ್ರಕರಣದಲ್ಲಿ ಹಿರಿಯ ನಟ, ನಿರ್ದೇಶಕ ಬಾಲಚಂದ್ರ ಮೆನನ್ ಅವರಿಗೆ ಕೇರಳ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ವಿಚಾರಣೆ ಸಂದರ್ಭದಲ್ಲಿ ನ್ಯಾಯಾಲಯವು, ‘ಮಹಿಳೆಯರಿಗೆ ಮಾತ್ರವಲ್ಲ ಪುರುಷರಿಗೂ ಘನತೆ ಮತ್ತು ಗೌರವ ಇರುತ್ತದೆ’ ಎಂದು ಹೇಳಿದೆ.

ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ಬಳಿಕ ಕಳೆದ ಸೆಪ್ಟೆಂಬರ್‌ನಲ್ಲಿ ಮೆನನ್ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಈ ಬೆನ್ನಲ್ಲೇ ಅವರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ‘ಮಾನಹಾನಿ ನಡೆದಿದ್ದು 2007ರಲ್ಲಿ ಎಂದು ಆರೋಪಿಸಲಾಗಿದೆ. ಆದರೆ 17 ವರ್ಷಗಳ ಬಳಿಕ ದೂರು ನೀಡಲಾಗಿದೆ. ನನ್ನ ಘನತೆಗೆ ಧಕ್ಕೆ ತರುವುದು ಇದರ ಉದ್ದೇಶ’ ಎಂದು ಅರ್ಜಿಯಲ್ಲಿ ಪ್ರತಿಪಾದಿಸಿದ್ದರು.

ಟೆನಿಸ್: ದಿಯಾ, ನಿಶಾ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿಯಾ ರವಿಕುಮಾರ್ ಜಾನಕಿ ಅವರು ಕೆಎಸ್‌ಎಲ್‌ಟಿಎ-ಏಷ್ಯನ್ ಜೂನಿಯರ್ (14 ವರ್ಷದೊಳಗಿನವರು) ಟೆನಿಸ್ ಟೂರ್ನಿಯಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ಜಾಹ್ನವಿ ತಮ್ಮಿನಿದಿ ವಿರುದ್ಧ ಜಯಿಸಿದರು.

ಬುಧವಾರ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ನಡೆದ ಬಾಲಕಿಯರ ವಿಭಾಗದ ಪಂದ್ಯದಲ್ಲಿ ದಿಯಾ 6–3, 6–1ರಿಂದ ಜಾಹ್ನವಿ ವಿರುದ್ಧ ಜಯಿಸಿದರು. ಅದರೊಂದಿಗೆ ಸೆಮಿಫೈನಲ್ ಪ್ರವೇಶಿಸಿದರು. ಅವರು ಸೆಮಿ ಹಂತದಲ್ಲಿ ನೀಶಾ ಇಂಜಾ ವಿರುದ್ಧ ಆಡಲಿದ್ದಾರೆ.

ನಿಶಾ 6–2, 6–2ರಿಂದ ಅಮೆರಿಕನ್ ಮಿತ್ರವಿಂದಾ ಸತೀಶ್ ವಿರುದ್ಧ ಗೆದ್ದರು.

ಬಾಲಕರ ವಿಭಾಗದಲ್ಲಿ ಕಿಯಾನ್ ಪಟೇಲ್ 4–6, 6–1, 6–0ಯಿಂದ ಮೂರನೇ ಶ್ರೇಯಾಂಕದ ಸಂಜಯ್ ಗಿರೀಶಕುಮಾರ್ ಅವರನ್ನು ಸೋಲಿಸಿ ಸೆಮಿಗೆ ಸಾಗಿದರು.

ನೀಶಾ ಇಂಜಾ ಆಟದ ವೈಖರಿ — ಪ್ರಜಾವಾಣಿ ಚಿತ್ರ

ಪ್ರೊ ಕಬಡ್ಡಿ: ಹರಿಯಾಣ ಸ್ಟೀಲರ್ಸ್‌ಗೆ 15ನೇ ಜಯ, ಬುಲ್ಸ್‌ಗೆ ಮತ್ತೆ ನಿರಾಸೆ

ಪುಣೆ (ಪಿಟಿಐ): ರೇಡರ್ ವಿನಯ್ ಅವರ ಅದ್ಭುತ ಆಟದ ಜತೆಗೆ ಸಾಂಘಿಕ ಪ್ರದರ್ಶನ ಮುಂದುವರಿಸಿದ ಹರಿಯಾಣ ಸ್ಟೀಲರ್ಸ್ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವನ್ನು 11 ಅಂಕಗಳಿಂದ ಮಣಿಸಿತು.

ಬಾಲೇವಾಡಿ ಕ್ರೀಡಾ ಸಂಕೀರ್ಣದಲ್ಲಿ ಬುಧವಾರ ನಡೆದ ಮೊದಲ ಪಂದ್ಯದಲ್ಲಿ ಹರಿಯಾಣ ತಂಡವು 37-26 ಅಂಕಗಳಿಂದ ಬುಲ್ಸ್‌ಗೆ ಸೋಲುಣಿಸಿತು.

ಇದರೊಂದಿಗೆ ಇದುವರೆಗೆ ಆಡಿದ 19 ಪಂದ್ಯಗಳ ಪೈಕಿ 15ನೇ ಜಯ ದಾಖಲಿಸಿದ ಹರಿಯಾಣ ತಂಡ, ಒಟ್ಟು 77 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿಅಗ್ರಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿತು. ಅತ್ತ ಆಡಿದ 18 ಪಂದ್ಯಗಳ ಪೈಕಿ 15ನೇ ಸೋಲಿಗೆ ಗುರಿಯಾದ ಬುಲ್ಸ್, ನಿರಾಶಾದಾಯಕ ಪ್ರದರ್ಶನವನ್ನು ಮುಂದುವರಿಸಿತು.

ಸ್ಥಿರ ಪ್ರದರ್ಶನ ಮುಂದುವರಿಸಿದ ಹರಿಯಾಣ ತಂಡದ ಪರ ವಿನಯ್ 9 ಅಂಕ ಗಳಿಸಿ ಜಯದಲ್ಲಿನಿರ್ಣಾಯಕ ಪಾತ್ರವಹಿಸಿದರು.

ಶಿವಂ ಪತಾರೆ ಮತ್ತು ಮೊಹಮ್ಮದ್ ರೇಝಾ ಶಾದ್ಲುಯಿ ಕ್ರಮವಾಗಿ 8 ಮತ್ತು 6 ಅಂಕಗಳನ್ನು ತಂದಿತ್ತರು. ದಿನದ ಎರಡನೇ ಪಂದ್ಯದಲ್ಲಿ ಯು ಮುಂಬಾ 47–31 ಅಂಕಗಳಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು. 18 ಪಂದ್ಯಗಳಲ್ಲಿ ಹತ್ತನೇ ಗೆಲುವು ದಾಖಲಿಸಿದ ಮುಂಬಾ ಅಂಕ ಪಟ್ಟಿಯಲ್ಲಿ 60 ಅಂಕಗಳೊಡನೆ ಎರಡನೇ ಸ್ಥಾನಕ್ಕೆ ಏರಿತು.

ಗುರುವಾರದ ಪಂದ್ಯಗಳು: ದಬಾಂಗ್ ಡೆಲ್ಲಿ– ತೆಲುಗು ಟೈಟನ್ಸ್ (ರಾತ್ರಿ 8.00); ಯು.ಪಿ. ಯೋಧಾಸ್– ಬೆಂಗಾಲ್ ವಾರಿಯರ್ಸ್ (ರಾತ್ರಿ 9.00)

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಕರ್ನಾಟಕ ಸಂಭವನೀಯರ ತಂಡ

ಅನುಭವಿ ಮನೀಷ್ ಪಾಂಡೆಗಿಲ್ಲ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಭವಿ ಬ್ಯಾಟರ್ ಮನೀಷ್ ಪಾಂಡೆ ಅವರನ್ನು ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಟ್ರೋಫಿ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ಸಂಭವನೀಯರ ತಂಡದಿಂದ ಕೈಬಿಡಲಾಗಿದೆ.

2008ರಲ್ಲಿ ಕರ್ನಾಟಕ ತಂಡಕ್ಕೆ ರಣಜಿ ಟ್ರೋಫಿಯಲ್ಲಿ ಪದಾರ್ಪಣೆ ಮಾಡಿದ್ದ ಪಾಂಡೆ ಭಾರತ ತಂಡವನ್ನೂ ಪ್ರತಿನಿಧಿಸಿದ್ದಾರೆ. ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ಗಮನ ಸೆಳೆದವರು. ಕಳೆದ ಒಂದೂವರೆ ದಶಕದಿಂದ ತಂಡದಲ್ಲಿದ್ದರು. ಈಚೆಗೆ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಮತ್ತು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯಗಳಲ್ಲಿ ಮನೀಷ್ ಫಾರ್ಮ್‌ನಲ್ಲಿರಲಿಲ್ಲ. ಅದರಿಂದಾಗಿ ಅವರನ್ನು ಏಕದಿನ ಟೂರ್ನಿಗೆ ಆಯ್ಕೆ ಮಾಡಿಲ್ಲ ಎಂದು ಕೆಎಸ್‌ಸಿಎ ಮೂಲಗಳು ತಿಳಿಸಿವೆ.

ಮನೀಷ್ ಪಾಂಡೆ

35 ವರ್ಷದ ಮನೀಷ್ ಕರ್ನಾಟಕ ತಂಡದ ಹಲವು ಸ್ಮರಣೀಯ ಸಾಧನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮೂರು ಮಾದರಿಗಳಲ್ಲಿಯೂ ಕರ್ನಾಟಕವು ಟ್ರೋಫಿ ಜಯಿಸಲು ಅವರ ಕಾಣಿಕೆಯೂ ಇತ್ತು. ಅವರು 118 ಪ್ರಥಮ ದರ್ಜೆ ಪಂದ್ಯಗಳಿಂದ 7973 ರನ್ ಗಳಿಸಿದ್ದಾರೆ.

ಅದರಲ್ಲಿ 25 ಶತಕ, 32 ಅರ್ಧಶತಕಗಳು ಇವೆ. 50.78ರ ಸರಾಸರಿಯಲ್ಲಿ ರನ್ ಕಲೆಹಾಕಿದ್ದಾರೆ.

ಲಿಸ್ಟ್ ಎ ಮಾದರಿಯಲ್ಲಿ 192 ಪಂದ್ಯಗಳಿಂದ 6310 ರನ್ ಪೇರಿಸಿದ್ದಾರೆ. 10 ಶತಕ, 39 ಅರ್ಧಶತಕಗಳು ಇವೆ. 45.39 ಸರಾಸರಿ ಹೊಂದಿದ್ದಾರೆ.

ಸಂಭವನೀಯರ ತಂಡದಲ್ಲಿ ಹೊಸಪ್ರತಿಭೆಗಳಿಗೆ ಮಣೆ ಹಾಕಲಾಗಿದೆ. ಶಿಖರ್ ಶೆಟ್ಟಿ, ಹರ್ಷಿಲ್ ಧಮಾನಿ, ಕೃತಿಕ್ ಕೃಷ್ಣ ಅವರಿಗೆ ಅವಕಾಶ ನೀಡಲಾಗಿದೆ.

ಜೆ. ಅಭಿರಾಮ್ ನೇತೃತ್ವದ ಆಯ್ಕೆ ಸಮಿತಿಯು 32 ಆಟಗಾರರ ಸಂಭಾವ್ಯ ತಂಡವನ್ನು ಆಯ್ಕೆ ಮಾಡಿದೆ.

ಸಂಭಾವ್ಯ ತಂಡ: ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಪ್ರಸಿದ್ಧ ಎಂ ಕೃಷ್ಣ, ದೇವದತ್ತ ಪಡಿಕ್ಕಲ್, ಎಲ್.ಆರ್. ಚೇತನ್, ಮೆಕ್‌ನಿಲ್ ಎಚ್ ನೊರೊನಾ, ಶ್ರೇಯಸ್ ಗೋಪಾಲ್, ಕೆ.ಎಲ್. ಶ್ರೀಜಿತ್ (ವಿಕೆಟ್‌ಕೀಪರ್), ಅಭಿನವ್ ಮನೋಹರ್, ಮನೋಜ್ ಬಾಂಢಗೆ, ಹಾರ್ದಿಕ್ ರಾಜ್, ವಿ. ಕೌಶಿಕ್, ವಿದ್ಯಾಧರ್ ಪಾಟೀಲ, ಶುಭಾಂಗ್ ಹೆಗ್ಡೆ, ಅಭಿಲಾಷ್ ಶೆಟ್ಟಿ, ಮೊಹಸೀನ್ ಖಾನ್, ಆರ್. ಸ್ಮರಣ್, ಲವನೀತ್ ಸಿಸೊಡಿಯಾ (ವಿಕೆಟ್‌ಕೀಪರ್), ವೈಶಾಖ ವಿಜಯಕುಮಾರ್, ಎಲ್. ಮನ್ವಂತ್ ಕುಮಾರ್, ಯಶೋವರ್ಧನ್ ಪರಂತಾಪ್, ಪ್ರವೀಣ ದುಬೆ, ಎಂ. ವೆಂಕಟೇಶ್, ನಿಕಿನ್ ಜೋಸ್, ಕೆ.ವಿ. ಅನೀಶ್, ಕೆ. ಶಶಿಕುಮಾರ್, ಪಾರಸ್ ಗುರುಭಕ್ಷ್ ಆರ್ಯ, ಶಿಖರ್ ಶೆಟ್ಟಿ, ಕಿಶನ್ ಬೆದಾರೆ, ಹರ್ಷಿಲ್ ಧರ್ಮಾನಿ, ವಿದ್ವತ್ ಕಾವೇರಪ್ಪ, ಕೃತಿಕ್ ಕೃಷ್ಣ (ವಿಕೆಟ್‌ಕೀಪರ್).

ಕೋಚ್: ಯರೇಗೌಡ, ಬೌಲಿಂಗ್ ಕೋಚ್: ಮನ್ಸೂರ್ ಅಲಿಖಾನ್, ಫೀಲ್ಡಿಂಗ್ ಕೋಚ್: ಶಬರೀಶ್ ಮೋಹನ್, ಮ್ಯಾನೇಜರ್: ಎ. ರಮೇಶ್ ರಾವ್, ಫಿಸಿಯೊ: ಜಾಬ ಪ್ರಭು, ಸ್ಟ್ರೆಂಥ್-ಕಂಡಿಷನಿಂಗ್ ಕೋಚ್: ಎ. ಕಿರಣ, ಮಸಾಜ್: ಸಿ.ಎಂ. ಸೋಮಸುಂದರ್, ವಿಡಿಯೊ ಅನಾಲಿಸ್ಟ್: ಗಿರಿಪ್ರಸಾದ್.

ಮಹಿಳಾ ಹಾಕಿ: ಚೀನಾಕ್ಕೆ ಮಣಿದ ಭಾರತ

ಮಸ್ಕತ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡ, ಮಹಿಳಾ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿ ಪಂದ್ಯದಲ್ಲಿ ಬುಧವಾರ ಮೂರು ಬಾರಿಯ ಚಾಂಪಿಯನ್ ಚೀನಾ ತಂಡದ ಎದುರು 1–2 ಗೋಲುಗಳ ಸೋಲು ಅನುಭವಿಸಿತು.

ಚೀನಾ 9 ಪಾಯಿಂಟ್‌ಗಳೊಂದಿಗೆ ‘ಎ’ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಭಾರತ ಆರು ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಭಾರತ ಗುರುವಾರ ನಡೆಯುವ ಗುಂಪಿನ ಕೊನೆಯ ಪಂದ್ಯದಲ್ಲಿ ಥಾಯ್ಲೆಂಡ್ ತಂಡವನ್ನು ಎದುರಿಸಲಿದೆ.

ಹಾಕಿ ಒಮಾನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಚೀನಾ ಪರ ನಾಯಕಿ ತಾನ್ ಜಿಂಘುಹುವಾಂಗ್ (32ನೇ ನಿಮಿಷ) ‘ಪೆನಾಲ್ಟಿ ಸ್ಟ್ರೋಕ್’ ಮೂಲಕ ಮೊದಲ ಗೋಲು ಗಳಿಸಿದರು. ವಾಂಗ್ ಲಿಹಾಂಗ್ 42 ನಿಮಿಷ ಮುನ್ನಡೆ ಹೆಚ್ಚಿಸಿದರು. ಭಾರತ ಕಡೆ ಕೊನೆಯ ಕ್ವಾರ್ಟರ್‌ನಲ್ಲಿ ದೀಪಿಕಾ (56ನೇ ನಿಮಿಷ) ಸೋಲಿನ ಅಂತರ ಕಡಿಮೆ ಮಾಡಿದರು.

ಶನಿವಾರ ಸೆಮಿಫೈನಲ್ ಪಂದ್ಯಗಳು ನಿಗದಿಯಾಗಿವೆ. ಭಾನುವಾರ ಫೈನಲ್ ಪಂದ್ಯ ನಡೆಯಲಿದೆ.

ವಿಶ್ವ ಚೆಸ್: 13ನೇ ಪಂದ್ಯ ಡ್ರಾ

ಅಂತಿಮ ಸುತ್ತಿಗೆ ತಲುಪಿದ ಗುಕೇಶ್– ಲಿರೆನ್ ಹಣಾಹಣಿ

ಸಿಂಗಪುರ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಗೆಲುವಿಗೆ ತಮ್ಮೆಲ್ಲಾ ಪ್ರಯತ್ನ ಹಾಕಿದರೂ, ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಅವರ ಚಾಚೂತಪ್ಪದ ರಕ್ಷಣೆಯ ಆಟದೆದುರು ಅನ್ಯಮಾರ್ಗವಿಲ್ಲದೇ ಪಾಯಿಂಟ್ ಹಂಚಿಕೊಳ್ಳಬೇಕಾಯಿತು. ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ 13ನೇ ಪಂದ್ಯ ಬುಧವಾರ 68 ನಡೆಗಳಷ್ಟು ದೀರ್ಘಕಾಲ ನಡೆದರೂ ಅಂತಿಮವಾಗಿ 'ಡ್ರಾ' ಆಯಿತು.

ಕೇವಲ ಒಂದು ಪಂದ್ಯ ಉಳಿದಿರುವಂತೆ ಸ್ಕೋರ್ 6.5–6.5ರಲ್ಲಿ ಸಮಬಲವಾಗಿದೆ. ಸೆಂಟೋಸಾ ದ್ವೀಪದ ಐಷಾರಾಮಿ ರೆಸಾರ್ಟ್‌ನಲ್ಲಿ ಗುರುವಾರ ನಡೆಯುವ ಅಂತಿಮ ಪಂದ್ಯವೂ ಡ್ರಾ ಆದಲ್ಲಿ ಶುಕ್ರವಾರ ಅಲ್ಪ ಅವಧಿಯ ಟೈಬ್ರೇಕರ್ ಪಂದ್ಯಗಳನ್ನು ಆಡಿಸಲಾಗುವುದು.

ಒಂದು ವೇಳೆ ನಿರ್ಣಾಯಕ ಫಲಿತಾಂಶ ಬಂದರೆ ಗೆದ್ದ ಆಟಗಾರ ಚಾಂಪಿಯನ್ ಆಗಲಿದ್ದಾರೆ.

14ನೇ ಪಂದ್ಯದಲ್ಲಿ 32 ವರ್ಷ ವಯಸ್ಸಿನ ಲಿರೆನ್ ಬಿಳಿ ಕಾಯಿಗಳಲ್ಲಿ ಆಡಲಿದ್ದು, ಚಾಂಪಿಯನ್ ಪಟ್ಟ ಉಳಿಸಿಕೊಳ್ಳುವ ಯತ್ನ ನಡೆಸಲಿದ್ದಾರೆ.

ಬಿಳಿ ಕಾಯಿಗಳಲ್ಲಿ ಆಡಿದ ಚಾಲೆಂಜರ್, 18 ವರ್ಷ ವಯಸ್ಸಿನ ಗುಕೇಶ್ 'ಕಿಂಗ್ ಪಾನ್' ಓಪನಿಂಗ್ ಅನುಸರಿಸಿದರೆ, ಲಿರೆನ್ ಫ್ರೆಂಚ್ ಡಿಫೆನ್ಸ್ ತಂತ್ರದ ಮೊರೆಹೋದರು.

ಎಂದಿನಂತೆ ಲಿರೆನ್ ನಡೆಗಳಿಗೆ ಹೆಚ್ಚು ಸಮಯ ತೆಗೆದುಕೊಂಡರು. ಮಧ್ಯಮ ಹಂತದ ಆಟದಲ್ಲಿ ಕೆಲವು 'ಎಕ್ಸ್‌ಚೇಂಜ್‌ಗಳು' ನಡೆದವು.

ಇಬ್ಬರೂ ಎರಡು ಪಾನ್‌ಗಳನ್ನು, ಒಂದೊಂದು 'ನೈಟ್' (ಅಶ್ವ), 'ಬಿಷಪ್' (ರಥ) ಕಳೆದುಕೊಂಡರು.

ಕಪ್ಪುಕಾಯಿಗಳಲ್ಲಿ ಆಡಿದ್ದ ಲಿರೆನ್ ಈ ಹಂತದಲ್ಲಿ ಸಹಜವಾಗಿ ರಕ್ಷಣೆಯ ಆಟಕ್ಕೆ ಆದ್ಯತೆ ಕೊಟ್ಟರು.

ಚೆಸ್ ಎಂಜಿನ್ ಕೂಡ 'ಸಮಬಲ'ದ ಆಟ ನಡೆದಿದೆ ಎಂದು ತೋರಿಸಿತು.

ಫೈನಲ್‌ನ 14 ಆಟಗಳಲ್ಲಿ ಕೊನೆಯ ಬಾರಿ ಬಿಳಿ ಕಾಯಿಗಳಲ್ಲಿ ಆಡಿದ ಗುಕೇಶ್ ಗೆಲುವಿಗೆ ಇನ್ನಿಲ್ಲದ ಯತ್ನ ನಡೆಸಿದರು.

ಆದರೆ ಧೃತಿಗೆಡದ ಚೀನಾದ ಆಟಗಾರ ಅಪಾಯಕ್ಕೆ ಆಹ್ವಾನ ನೀಡದೇ ಕರಾರುವಾಕ್ ನಡೆಗಳನ್ನಿರಿಸಿದರು.

ಅಂತಿಮವಾಗಿ ನಡೆಗಳ ಪುನರಾವರ್ತನೆಯಿಂದ (ತ್ರೀ ಫೋಲ್ಡ್ ರಿಪಿಟೇಶನ್) ಸುದೀರ್ಘ ಪಂದ್ಯ ಸಮಬಲದಲ್ಲೇ ಮುಗಿಯಿತು.

ಪಂದ್ಯ ಡ್ರಾ ಆದಾಗ ಇಬ್ಬರ ಬಳಿಯೂ ಒಂದೊಂದು ರೂಕ್ (ಗಜ), ಗುಕೇಶ್ ಬಳಿ ಮೂರು ಕಾಲಾಳುಗಳು, ಲಿರೆನ್ ಬಳಿ ಎರಡು ಕಾಲಾಳುಗಳು (ಪಾನ್ಸ್) ಉಳಿದಿದ್ದವು.

ಗುಕೇಶ್ ಫಿಡೆ ವೆಬ್‌ಸೈಟ್ ಚಿತ್ರ

ಲಿರೆನ್

ಟೈಬ್ರೇಕ್ ಹೇಗಿರುತ್ತೆ...

ಒಂದೊಮ್ಮೆ ಉಭಯ ಆಟಗಾರರ ನಡುವಣ ಸ್ಕೋರ್ 7–7 ಸಮನಾದಲ್ಲಿ ಶುಕ್ರವಾರ ಟೈಬ್ರೇಕ್ ಪಂದ್ಯಗಳನ್ನು ಆಡಿಲಾಗುತ್ತದೆ. ಮೊದಲು, ತಲಾ 15 ನಿಮಿಷಗಳ ನಾಲ್ಕು ರ್‍ಯಾಪಿಡ್ ಮಾದರಿಯ ಪಂದ್ಯಗಳನ್ನು ಆಡಲಾಗುವುದು. ಇದರ ನಂತರವೂ ಸ್ಕೋರ್ ಸಮನಾದಲ್ಲಿ 10 ನಿಮಿಷಗಳ ಎರಡು ಮಿನಿ ರ್‍ಯಾಪಿಡ್ ಪಂದ್ಯಗಳನ್ನು ಆಡಿಲಾಗುವುದು. ಅಲ್ಲೂ ಸಮನಾದಲ್ಲಿ ಎರಡು ಬ್ಲಿಟ್ಜ್ (ವೇಗದ ಆಟ) ಗೇಮ್ ಆಡಿಸಲಾಗುವುದು. ಮತ್ತೆ ನಿರ್ಣಾಯಕ ಫಲಿತಾಂಶ ಬರದಿದ್ದರೆ 'ಸಡನ್‌ಡೆತ್ ಬ್ಲಿಟ್ಸ್' (ಯಾರಾದರೊಬ್ಬರು ಗೆಲ್ಲುವವರೆಗೆ) ಆಡಲಾಗುವುದು.

ಮುಖ್ಯಾಂಶಗಳು

- ಇಂದು ಫೈನಲ್‌ನ 14ನೇ ಅಂತಿಮ ಪಂದ್ಯ
- ಸ್ಕೋರ್ ಸಮಬಲ ಆದಲ್ಲಿ ಶುಕ್ರವಾರ ಟೈಬ್ರೇಕ್ ಪಂದ್ಯ
- ಫೈನಲ್‌ನ ಒಟ್ಟು ಬಹುಮಾನ ಒಟ್ಟು 21 ಕೋಟಿ

ಭಾರತೀಯ ಬೌಲರ್‌ಗಳಿಗೆ ದಿಗ್ಗಜ ಕ್ರಿಕೆಟಿಗ ಮ್ಯಾಥ್ಯೂ ಹೇಡನ್ ಕಿವಿಮಾತು

ಬೌನ್ಸಿ ಪಿಚ್; ಬ್ಯಾಟರ್‌ಗಳಿಗೆ ಸವಾಲು

ಬ್ರಿಸ್ಬೇನ್ (ಪಿಟಿಐ): ಗಾಬಾ ಕ್ರೀಡಾಂಗಣದ ಪಿಚ್‌ನಲ್ಲಿ ಚೆಂಡು ಬೌನ್ಸ್ ಆಗುವ ಗುಣ ಹೊಂದಿದೆ. ಅದರಿಂದ 'ನಾಲ್ಕು ಮತ್ತು ಐದನೇ ಸ್ಟಂಪ್' ಲೈನ್‌ನಲ್ಲಿ ಬೌಲಿಂಗ್ ಮಾಡಿದರೆ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡಲು ಸಾಧ್ಯವಿದೆ ಎಂದು ಆಸ್ಟ್ರೇಲಿಯಾದ ದಿಗ್ಗಜ ಕ್ರಿಕೆಟಿಗ ಮ್ಯಾಥ್ಯೂ ಹೇಡನ್ ಅವರು ಭಾರತದ ಬೌಲರ್‌ಗಳಿಗೆ ಸಲಹೆ ನೀಡಿದ್ದಾರೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ಮೂರನೇ ಪಂದ್ಯವು ಇದೇ ಶನಿವಾರ ಆರಂಭವಾಗಲಿದೆ. ಸರಣಿಯಲ್ಲಿ ಉಭಯ ತಂಡಗಳು 1–1ರಿಂದ ಸಮಬಲ ಸಾಧಿಸಿವೆ. ಪರ್ತ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ ಮತ್ತು ಅಡಿಲೇಡ್‌ನಲ್ಲಿ ನಡೆದಿದ್ದ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಜಯಿಸಿದವು. ಇದರಿಂದಾಗಿ ಸರಣಿಯು ಈಗ ಕುತೂಹಲ ಕೆರಳಿಸಿದೆ.

'ಭಾರತ ತಂಡವು ಬೌಲಿಂಗ್ ಅವಕಾಶ ಪಡೆದಾಗ ವೇಗಿಗಳು ನಾಲ್ಕು, ಐದನೇ ಸ್ಟಂಪ್ ಲೈನ್ ನಲ್ಲಿ ಎಸೆತಗಳನ್ನು ಹಾಕಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಬೌನ್ಸ್‌ಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಬ್ರಿಸ್ಬೇನ್‌ನಲ್ಲಿ ವೇಗಿಗಳು ಯಶಸ್ವಿಯಾಗಲು ಇದು ಪ್ರಮುಖ ಅಸ್ತ್ರವಾಗಿದೆ. ಭಾರತವು ಕೆಂಬಣ್ಣದ ಚೆಂಡು ಬಳಸುವ ಟೆಸ್ಟ್ ಕ್ರಿಕೆಟ್‌ನಲ್ಲಿ ಪರಿಣತಿ ಹೊಂದಿದೆ. ಅದೇ ಆಸ್ಟ್ರೇಲಿಯಾ ಪಿಂಕ್ ಬಾಲ್‌ನಲ್ಲಿ ಹೆಚ್ಚು ಹಿಡಿತ ಸಾಧಿಸಿದೆ' ಎಂದು ಹೇಡನ್ ಅವರು ಸ್ಟಾರ್ ಸ್ಪೋರ್ಟ್ಸ್ ವಾಹಿನಿಯ ಕಾರ್ಯಕ್ರಮದಲ್ಲಿ ವಿಶ್ಲೇಷಿಸಿದ್ದಾರೆ.

'ಭಾರತ ತಂಡವು ಬ್ಯಾಟಿಂಗ್ ಉತ್ತಮವಾಗಿ ಮಾಡಬೇಕು. ಹೆಚ್ಚು ಅವಧಿಯವರೆಗೆ ಬ್ಯಾಟಿಂಗ್ ಮಾಡಬೇಕು. ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಕನಿಷ್ಠ ಒಂದು ದಿನವಾದರೂ ಬ್ಯಾಟಿಂಗ್ ಮಾಡಬೇಕು. ಒಂದೇ ದಿನದಲ್ಲಿ ಇನಿಂಗ್ಸ್ ಮುಗಿಸುವುದು ಒಪ್ಪಲಾಗದು. 350 ರನ್‌ಗಳ ಆಸುಪಾಸಿನಲ್ಲಿ ರನ್ ಗಳಿಸಬೇಕು.

ಎಂತಹದೇ ಸವಾಲಿನ ಪರಿಸ್ಥಿತಿಯಲ್ಲಿಯೂ ಭಾರತವು ಮೊದಲು ಬ್ಯಾಟಿಂಗ್ ಮಾಡಬೇಕು' ಎಂದೂ 53 ವರ್ಷದ ಹೇಡನ್ ಹೇಳಿದರು.

'ಬ್ರಿಸ್ಬೇನ್‌ನಲ್ಲಿ ಆಡುವುದು ವಿಭಿನ್ನವಾದ ಸಂಗತಿ. ಅಲ್ಲದೇ ಭಾರತದ ಪಾಲಿಗೆ ಇದು ಉತ್ತಮವಾದ ಅವಕಾಶ. ಏಕೆಂದರೆ ಕಳೆದ ಸಲ ಭಾರತ ಇಲ್ಲಿ ಆಸ್ಟ್ರೇಲಿಯಾ ಎದುರು ಮೇಲುಗೈ ಸಾಧಿಸಿತ್ತು' ಎಂದು ಹೇಳಿದರು.

2021ರಲ್ಲಿ ಭಾರತ ತಂಡವು ಇಲ್ಲಿ ಆಸ್ಟ್ರೇಲಿಯಾ ಎದುರು ಜಯಿಸಿತ್ತು. ಆ ಸಲ 2–1ರಿಂದ ಸರಣಿಯನ್ನೂ ಗೆದ್ದಿತು.

ಭಾರತ ತಂಡದವರ ಅಭ್ಯಾಸ

ವೇಗ, ಬೌನ್ಸ್ ಇರುವ ಪಿಚ್: ಕ್ಯುರೇಟರ್

ಬ್ರಿಸ್ಬೇನ್ (ಪಿಟಿಐ): ಗಾಬಾದ ಪಿಚ್ ಎಂದಿನಂತೆ ವೇಗ ಮತ್ತು ಬೌನ್ಸ್ ಎಸೆತಗಳ ಪ್ರಯೋಗಕ್ಕೆ ವೇದಿಕೆಯಾಗಲಿದೆ ಎಂದು ಪಿಚ್ ಕ್ಯುರೇಟರ್ ಡೇವಿಡ್ ಸ್ಯಾಂಡರ್ಸ್‌ಕಿ ಹೇಳಿದ್ದಾರೆ.

'ಬೇಸಿಗೆಯ ಆರಂಭ ಮತ್ತು ಕ್ರಿಸ್‌ಮಸ್‌ಗಿಂತ ಮೊದಲಿನ ವಾತಾವರಣದಲ್ಲಿ ಟೆಸ್ಟ್ ನಡೆಯಲಿದೆ. ಅದರಿಂದಾಗಿ ಪಿಚ್ ಗುಣಮಟ್ಟ ಇರುವ ಪ್ರಕಾರ ಚೆಂಡು ಹೆಚ್ಚು ಬೌನ್ಸ್ ಮತ್ತು ವೇಗವಾಗಿ ಚಲಿಸುವ ಸಾಧ್ಯತೆ ಇದೆ' ಎಂದು ಅವರು ಕ್ರಿಕೆಟ್ ಡಾಟ್ ಕಾಮ್ ಡಾಟ್ ಎಯು ವೆಬ್‌ಸೈಟ್‌ಗೆ ಹೇಳಿದ್ದಾರೆ.

'ಸಾಮಾನ್ಯವಾಗಿ ಹೇಳುವುದಾದರೆ; ಪ್ರತಿ ಸಲದಂತೆಯೇ ಈ ಬಾರಿಯೂ ಪಿಚ್ ಸಿದ್ಧಗೊಳಿಸುತ್ತಿದ್ದೇವೆ. ಉತ್ತಮ ಬೌನ್ಸ್, ವೇಗ ಮತ್ತು ಚಲನೆಗೆ ಅವಕಾಶ ನೀಡುವುದು ನಮ್ಮ ಉದ್ದೇಶ' ಎಂದರು.

ಕ್ರಿಕೆಟ್: ಅಜಿಂಕ್ಯ ರಹಾನೆ ಮಿಂಚಿನ ಅರ್ಧಶತಕ; ಮಧ್ಯಪ್ರದೇಶ–ಡೆಲ್ಲಿ ಹಣಾಹಣಿ

ನಾಲ್ಕರ ಘಟ್ಟದಲ್ಲಿ ಮುಂಬೈ, ಬರೋಡಾ ಮುಖಾಮುಖಿ

ಬೆಂಗಳೂರು: ಶ್ರೇಯಸ್ ಅಯ್ಯರ್ ನಾಯಕತ್ವದ ಮುಂಬೈ ಮತ್ತು ಆಲ್‌ರೌಂಡರ್ ಕೃಣಾಲ್ ಪಾಂಡ್ಯ ನೇತೃತ್ವದ ಬರೋಡಾ ತಂಡ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಬುಧವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಮುಂಬೈ ತಂಡವು 6 ವಿಕೆಟ್‌ಗಳಿಂದ ವಿದರ್ಭ ಎದುರು ಜಯಿಸಿತು.ಬರೋಡಾ ತಂಡವು 41 ರನ್‌ಗಳಿಂದ ಬಂಗಾಳ ವಿರುದ್ಧ ಗೆದ್ದಿತು.

ನಗರದ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅಜಿಂಕ್ಯ ರಹಾನೆ (84; 45ಎ, 4X10, 6X3) ಗೆಲುವಿನ ರೂವಾರಿಯಾದರು. ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ವಿದರ್ಭ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 221 ರನ್ ಗಳಿಸಿತು. ಈ ಬೃಹತ್ ಗುರಿಯನ್ನು ಮುಂಬೈ ತಂಡವು 19.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ದಾಟಿತು.

ಅಜಿಂಕ್ಯ ಮತ್ತು ಒಂದು ರನ್ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡ ಪೃಥ್ವಿ ಶಾ (49; 26ಎ, 4X5, 6X4) ಮೊದಲ ವಿಕೆಟ್ ಜೊತೆಯಾಟದಲ್ಲಿ ಕೇವಲ ಏಳು ಓವರ್‌ಗಳಲ್ಲಿ 83 ರನ್ ಕಲೆಹಾಕಿದರು.

ಹಾರ್ದಿಕ್–ಮೆರಿವಾಲಾ ಮಿಂಚು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಬರೋಡಾ ತಂಡವು 41 ರನ್‌ಗಳಿಂದ ಬಂಗಾಳ ಎದುರು ಗೆದ್ದಿತು. ಹಾರ್ದಿಕ್ ಪಾಂಡ್ಯ ಮತ್ತು ಲುಕ್ಮನ್ ಮೆರಿವಾಲ ತಲಾ ಮೂರು ವಿಕೆಟ್ ಗಳಿಸಿ ಗೆಲುವಿನ ರೂವಾರಿಯಾದರು.

ಮತ್ತೊಂದು ಪಂದ್ಯದಲ್ಲಿ ವೆಂಕಟೇಶ್ ಅಯ್ಯರ್ ಆಲ್‌ರೌಂಡ್ ಆಟದಿಂದ ಮಧ್ಯಪ್ರದೇಶ ತಂಡವು 6 ವಿಕೆಟ್‌ಗಳಿಂದ ಸೌರಾಷ್ಟ್ರ ಎದುರು ಗೆದ್ದಿತು.

ಚಿನ್ನಸ್ವಾಮಿ ಅಂಗಳದಲ್ಲಿ ಸಂಜೆ ನಡೆದ ಪಂದ್ಯದಲ್ಲಿ ಅನುಜ್ ರಾವತ್ (ಔಟಾಗದೆ 73; 33ಎ) ಅವರ ಅಜೇಯ ಅರ್ಧಶತಕದ ಬಲದಿಂದ ಡೆಲ್ಲಿ ತಂಡವು 19 ರನ್‌ಗಳಿಂದ ಉತ್ತರಪ್ರದೇಶವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರುಗಳು

ಆಲೂರು ಕ್ರೀಡಾಂಗಣ: ವಿದರ್ಭ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 221 (ಅಥರ್ವ ತೈಡೆ 66, ಕರುಣ್ ನಾಯರ್ 26, ಅಪೂರ್ವ ವಾಂಖೆಡೆ 51, ಶುಭಂ ದುಬೆ ಔಟಾಗದೆ 43, ಅಥರ್ವ ಅಂಕೋಲೆಕರ್ 32ಕ್ಕೆ2, ಸೂರ್ಯಾಂಶ್ ಶೆಡ್ಗೆ 36ಕ್ಕೆ2) ಮುಂಬೈ: 19.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 224 (ಪೃಥ್ವಿ ಶಾ 49, ಅಜಿಂಕ್ಯ ರಹಾನೆ 84, ಶಿವಂ ದುಬೆ ಔಟಾಗದೆ 37, ಸೂರ್ಯಾಂಶ್ ಶೆಡಗೆ ಔಟಾಗದೆ 36, ದೀಪೇಶ್ ಪರವಾನಿ 33ಕ್ಕೆ2) ಫಲಿತಾಂಶ: ಮುಂಬೈ ತಂಡಕ್ಕೆ 6 ವಿಕೆಟ್ ಜಯ. ಪಂದ್ಯಶ್ರೇಷ್ಠ: ಅಜಿಂಕ್ಯ ರಹಾನೆ.

ಸೌರಾಷ್ಟ್ರ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 173 (ಚಿರಾಗ್ ಜಾನಿ ಔಟಾಗದೆ 80, ಆವೇಶ್ ಖಾನ್ 61ಕ್ಕೆ2, ವೆಂಕಟೇಶ್ ಅಯ್ಯರ್ 23ಕ್ಕೆ2) ಮಧ್ಯಪ್ರದೇಶ: 19.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 174 (ಅರ್ಪಿತ್ ಗೌಡ 42, ಸುಧ್ರಾಂಶು ಸೇನಾಪತಿ 24, ವೆಂಕಟೇಶ್ ಅಯ್ಯರ್ ಔಟಾಗದೆ 38, ರಜತ್ ಪಾಟೀದಾರ್ 28, ಹರಪ್ರೀತ್ ಸಿಂಗ್ ಭಾಟಿಯಾ ಔಟಾಗದೆ 22) ಫಲಿತಾಂಶ:ಮಧ್ಯಪ್ರದೇಶ ತಂಡಕ್ಕೆ 6 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ವೆಂಕಟೇಶ್ ಅಯ್ಯರ್.

ಮೊಹಮ್ಮದ್ ಶಮಿ 43ಕ್ಕೆ2, ಕನಿಷ್ಕ ಸೇಠ್ 39ಕ್ಕೆ2, ಪ್ರದಿಪ್ತ ಪ್ರಾಮಾಣಿಕ್ 6ಕ್ಕೆ2) ಬಂಗಾಳ: 18 ಓವರ್‌ಗಳಲ್ಲಿ 131 (ಅಭಿಷೇಕ್ ಪೊರೆಲ್ 22, ಋತ್ವಿಕ್ ಚೌಧರಿ 29, ಶಹಬಾಜ್ ಅಹಮದ್ 55, ಹಾರ್ದಿಕ್ ಪಾಂಡ್ಯ 27ಕ್ಕೆ3, ಲುಕ್ಮನ್ ಮೆರಿವಾಲಾ 17ಕ್ಕೆ3, ಅತಿಥ್ ಶೇಠ್ 41ಕ್ಕೆ3) ಫಲಿತಾಂಶ: ಬರೋಡಾ ತಂಡಕ್ಕೆ 41 ರನ್‌ಗಳ ಜಯ. ಪಂದ್ಯಶ್ರೇಷ್ಠ: ಲುಕ್ಮನ್ ಮೆರಿವಾಲಾ.

ಡೆಲ್ಲಿ: 20 ಓವರ್‌ಗಳಲ್ಲಿ 3ಕ್ಕೆ193 (ಪ್ರಿಯಾಂಶ್ ಆರ್ಯ 44, ಯಶ್ ಧುಳ್ 42, ಆಯುಷ್ ಬಡೋಣಿ 25, ಅನುಜ್ ರಾವತ್ ಔಟಾಗದೆ 73, ಮೊಹಸೀನ್ ಖಾನ್ 27ಕ್ಕೆ1) ಉತ್ತರಪ್ರದೇಶ: 20 ಓವರ್‌ಗಳಲ್ಲಿ 174 (ಪ್ರಿಯಂ ಗರ್ಗ್ 54, ಸಮೀರ್ ರಿಜ್ವಿ 26, ಭುವನೇಶ್ವರ್ ಕುಮಾರ್ 20, ಸುಯಶ್ ಶರ್ಮಾ 36ಕ್ಕೆ2, ಆಯುಷ್ ಬಡೋನಿ 37ಕ್ಕೆ2, ಪ್ರಿನ್ಸ್ ಯಾದವ್ 36ಕ್ಕೆ3) ಫಲಿತಾಂಶ:ಡೆಲ್ಲಿ ತಂಡಕ್ಕೆ 19 ರನ್ ಜಯ. ಪಂದ್ಯಶ್ರೇಷ್ಠ: ಅನುಜ್ ರಾವತ್.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಬರೋಡಾ ತಂಡದ ನಾಯಕ ಕೃಣಾಲ್ ಪಾಂಡ್ಯ ಅವರು ಹಾರ್ದಿಕ್ ಪಾಂಡ್ಯ ಹಾಗೂ ಲುಕ್ಮನ್ ಮೆರಿವಾಲಾ ಅವರೊಂದಿಗೆ ಮಾತುಕತೆ ನಡೆಸಿದರು ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಸೆಮಿಫೈನಲ್‌ಗಳು
ಬರೋಡಾ–ಮುಂಬೈ (ಬೆಳಿಗ್ಗೆ 11ರಿಂದ)
ಮಧ್ಯಪ್ರದೇಶ–ಡೆಲ್ಲಿ (ಸಂಜೆ 4.30ರಿಂದ)
ಸ್ಥಳ: ಚಿನ್ನಸ್ವಾಮಿ ಕ್ರೀಡಾಂಗಣ
ದಿನಾಂಕ: ಡಿಸೆಂಬರ್ 13

ಸೌದಿಗೆ 2034ರ ಫಿಫಾ ವಿಶ್ವಕಪ್ ಆತಿಥ್ಯ

ಜ್ಯೂರಿಚ್ (ಎಪಿ): ಸೌದಿ ಅರೇಬಿಯಾ ದೇಶವು 2034ರ ಫಿಫಾ ವಿಶ್ವಕಪ್ ಟೂರ್ನಿ ಆಯೋಜಿಸಲಿದೆ. ಸ್ಪೇನ್, ಪೋರ್ಚುಗಲ್ ಮತ್ತು ಮೊರಾಕ್ಕೊ ದೇಶಗಳು ಜಂಟಿಯಾಗಿ 2030ರ ಫಿಫಾ ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸಲಿವೆ.

ಬುಧವಾರ ಜ್ಯೂರಿಚ್‌ನಲ್ಲಿ ನಡೆದ ಆನ್‌ಲೈನ್ ಸಭೆಯಲ್ಲಿ ಫಿಫಾದ 200 ಸದಸ್ಯ ಫೆಡರೇಷನ್‌ಗಳು ರಿಮೋಟ್ ಮೂಲಕ ಭಾಗವಹಿಸಿದ್ದವು. ಫಿಫಾ ಅಧ್ಯಕ್ಷ ಗಿಯಾನಿ ಇನ್ಫಾಂಟಿನೊ ಅಧ್ಯಕ್ಷತೆ ವಹಿಸಿದ್ದರು.

ಸೌದಿಯ ರಾಜ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅವರ ಮಹತ್ವಾಕಾಂಕ್ಷೆಯಿಂದಾಗಿ ಈ ಬಿಡ್ ಲಭಿಸಿದೆ. ಇದರಿಂದಾಗಿ ಶ್ರೀಮಂತ ಸೌದಿ ದೇಶವು ಅಪಾರ ಪ್ರಮಾಣದ ಸಂಪನ್ಮೂಲ ವಿನಿಯೋಗಿಸಿ ವಿಶ್ವಕಪ್ ಟೂರ್ನಿಯನ್ನು ಯಶಸ್ವಿಗೊಳಿಸುವ ನಿರೀಕ್ಷೆ ಗರಿಗೆದರಿದೆ. ಸೌದಿಯ ರಾಜಧಾನಿ ರಿಯಾದ್‌ನಲ್ಲಿ ಟೂರ್ನಿ ನಡೆಯಲಿದೆ.

15 ತಿಂಗಳುಗಳ ಬಿಡ್ ಪ್ರಕ್ರಿಯೆಯಲ್ಲಿ ಸೌದಿ ಅವಿರೋಧವಾಗಿ ಆಯ್ಕೆಯಾಯಿತು. ಆದರೆ ಟೂರ್ನಿಗಾಗಿ ಮೂಲಸೌಲಭ್ಯಗಳ ನಿರ್ಮಾಣ ಮತ್ತು ಸಿದ್ಧತೆಗಾಗಿ ವಲಸೆ ಕಾರ್ಮಿಕರು ಬಲಿಆಗುತ್ತಾರೆ ಎಂದು ಮಾನವ ಹಕ್ಕುಗಳ ಸಂಘಟನೆಗಳು ಸೌದಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿವೆ. ಸೌದಿಗೆ ಬಿಡ್ ನೀಡಬಾರದು ಎಂದೂ ಆಗ್ರಹಿಸಿದ್ದವು.

ಆದರೆ ಈ ಕುರಿತು ಸೌದಿಯನ್ನು ಯಾವುದೇ ಪ್ರಶ್ನೆಯನ್ನೂ ಕೇಳದೇ ಬಿಡ್ ನೀಡಲಾಗಿದೆ.

ಮಹಿಳಾ ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ ಸರಣಿ

ಪರ್ತ್ (ಪಿಟಿಐ): ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರ ಶತಕ ಫಲ ನೀಡಲಿಲ್ಲ. ಇದರಿಂದಾಗಿ ಆತಿಥೇಯ ಆಸ್ಟ್ರೇಲಿಯಾ ಬುಧವಾರ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ಭಾರತ ತಂಡವನ್ನು 83 ರನ್‌ಗಳಿಂದ ಸೋಲಿಸಿ ಸರಣಿಯನ್ನು 3–0ಯಿಂದ ಗೆದ್ದಿತು.

'ವಾಕಾ' ಕ್ರೀಡಾಂಗಣದಲ್ಲಿ ಎದುರಾಳಿಯನ್ನು ಆಡಲು ಕಳಿಸಿದ್ದ ಭಾರತ ಒಂದು ಹಂತದಲ್ಲಿ ಆಸ್ಟ್ರೇಲಿಯಾದ 4 ವಿಕೆಟ್‌ಗಳನ್ನು 78 ರನ್‌ಗಳಾಗುಷ್ಟರಲ್ಲಿ ಉತ್ತಮ ಆರಂಭ ಮಾಡಿತ್ತು. ವೇಗಿ ಅರುಂಧತಿ ರೆಡ್ಡಿ (26ಕ್ಕೆ4) ಇದಕ್ಕೆ ಕಾರಣರಾಗಿದ್ದರು. ಆದರೆ ಮಧ್ಯಮ ಕ್ರಮಾಂಕದ ಆಟಗಾರ್ತಿ ಅನ್ನಾಬೆಲ್ ಸದರ್‌ಲ್ಯಾಂಡ್ ಅವರು 95 ಎಸೆತಗಳಲ್ಲಿ 110 ರನ್ ಬಾರಿಸಿ ತಂಡವನ್ನು ಉತ್ತಮ ಸ್ಥಿತಿಗೆ ತಲುಪಿಸಿದರು. ಅವರಿಗೆ ಅನುಭವಿ ಆ್ಯಶ್ಲೆ ಗಾರ್ಡನರ್ (50) ಮತ್ತು ನಾಯಕಿ ತಾಹಿಲಾ ಮೆಕ್‌ಗ್ರಾ (ಔಟಾಗದೇ 56) ಅವರಿಂದ ಉತ್ತಮ ಬೆಂಬಲ ದೊರೆಯಿತು. ಹೀಗಾಗಿ ತಂಡ 50 ಓವರುಗಳಲ್ಲಿ 8 ವಿಕೆಟ್‌ಗೆ 298 ರನ್ ಗಳಿಸಿತು. ಭಾರತ 45.1 ಓವರುಗಳಲ್ಲಿ 215 ರನ್‌ಗಳಿಗೆ ಆಲೌಟ್ ಆಯಿತು.ಮಂದಾನ 109 ಎಸೆತಗಳಲ್ಲಿ 105 ರನ್‌ಗಳ ಸೊಗಸಾದ ಆಟವಾಡಿದರು. ಅವರು ಕ್ರೀಸಿನಲ್ಲಿರುವವರೆಗೆ ಭಾರತದ ಅವಕಾಶ ಜೀವಂತವಾಗಿತ್ತು. ಎರಡನೇ ವಿಕೆಟ್‌ಗೆ ಮಂದಾನ ಮತ್ತು ಹರ್ಲೀನ್ (39, 64 ಎಸೆತ) 118 ರನ್ ಸೇರಿಸಿದರು.

ಸ್ಕೋರುಗಳು: ಆಸ್ಟ್ರೇಲಿಯಾ: 50 ಓವರುಗಳಲ್ಲಿ 6 ವಿಕೆಟ್‌ಗೆ 298 ಅನ್ನಾಬೆಲ್ ಸದರ್‌ಲ್ಯಾಂಡ್ 110, ಆ್ಯಶ್ಲೆ ಗಾರ್ಡನರ್ 50, ತಹಿಲಾ ಮೆಕ್‌ಗ್ರಾ ಔಟಾಗದೇ 56; ಅರುಂಧತಿ ರೆಡ್ಡಿ 26ಕ್ಕೆ4; ಭಾರತ: 45.1 ಓವರುಗಳಲ್ಲಿ 215 (ಸ್ಮೃತಿ ಮಂದಾನ 105, ಹರ್ಲೀನ್ ಡಿಯೋಲ್ 39, ಆಶ್ಲೆ ಗಾರ್ಡನರ್ 30ಕ್ಕೆ5, ಅಲನಾ ಕಿಂಗ್ 27ಕ್ಕೆ2). ಪಂದ್ಯದ ಮತ್ತು ಸರಣಿಯ ಆಟಗಾರ್ತಿ: ಅನ್ನಾಬೆಲ್ ಸದರ್‌ಲ್ಯಾಂಡ್.

ಕ್ರೀಡಾಂಗಣಕ್ಕೆ ಶುದ್ಧ ನೀರು: ಎನ್‌ಜಿಟಿ ಅಸಮಾಧಾನ

ನವದೆಹಲಿ (ಪಿಟಿಐ): ಚಿನ್ನಸ್ವಾಮಿ ಕ್ರೀಡಾಂಗಣದ ನಿರ್ವಹಣೆಗೆ ನೀರು ಹಾಯಿಸಲು ಶುದ್ಧ ನೀರನ್ನು ಬಳಸುತ್ತಿರುವುದರ ಕುರಿತು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ಎನ್‌ಜಿಟಿ) ಅಸಮಾಧಾನ ವ್ಯಕ್ತಪಡಿಸಿದೆ.ಕ್ರೀಡಾಂಗಣಕ್ಕೆ ಸಂಸ್ಕರಿತ ನೀರು ಬಳಕೆಯಾಗುತ್ತಿದೆಯೇ ಎಂದು ಈ ಹಿಂದೆ, ಏಪ್ರಿಲ್‌ನಲ್ಲಿ ಎನ್‌ಜಿಟಿಯು ಕೆಎಸ್‌ಸಿಎಯಿಂದ ವಿವರಣೆ ಕೇಳಿತ್ತು. ಕ್ರೀಡಾಂಗಣಕ್ಕೆ ಬೇರೆ ಬೇರೆ ಮೂಲಗಳಿಂದ ನೀರು ಪಡೆಯಲಾಗುತ್ತಿದೆ ಎಂದು ಕ್ರಿಕೆಟ್ ಸಂಸ್ಥೆ ತನ್ನ ಪ್ರತಿಕ್ರಿಯೆಯಲ್ಲಿ ತಿಳಿಸಿದೆ ಎಂದು ನವೆಂಬರ್ 26ರಂದು ಎನ್‌ಜಿಟಿ ಅಧ್ಯಕ್ಷ ನ್ಯಾ. ಪ್ರಕಾಶ್ ಶ್ರೀವಾಸ್ತವ ಆದೇಶದಲ್ಲಿ ತಿಳಿಸಿದ್ದಾರೆ. ಐಪಿಎಲ್ ಪಂದ್ಯಗಳ ವೇಳೆ ಕ್ರೀಡಾಂಗಣಕ್ಕೆ 75,000 ಲೀಟರ್ ನೀರು ಬಳಕೆಯಾಗುತ್ತಿದೆ. ಬೆಂಗಳೂರಿನಲ್ಲಿ ನಿತ್ಯ 500 ದಶಲಕ್ಷ ಲೀಟರ್ ನೀರಿನ ಕೊರತೆಯಿದೆ ಎಂದು ಜಲತಜ್ಞರು ಅಂದಾಜಿಸಿದ್ದಾರೆ.

ಬ್ರೂಕ್, ಬೂಮ್ರಾಗೆ ಅಗ್ರಸ್ಥಾನ

ದುಬೈ (ಪಿಟಿಐ): ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಪಟ್ಟದಲ್ಲಿದ್ದ ಇಂಗ್ಲೆಂಡ್‌ನ ಜೋ ರೂಟ್ ಅವರನ್ನು ಆರು ತಿಂಗಳ ನಂತರ ಅದೇ ದೇಶದ ಹ್ಯಾರಿ ಬ್ರೂಕ್ ಹಿಂದೆ ಹಾಕಿದ್ದಾರೆ.

ಬೂಮ್ರಾ

ಬುಧವಾರ ಪ್ರಕಟ ವಾದ ಕ್ರಮಾಂಕ ಪಟ್ಟಿಯಲ್ಲಿ ಜಸ್‌ಪ್ರೀತ್ ಬೂಮ್ರಾ ಅವರು ಟೆಸ್ಟ್ ಬೌಲರ್‌ಗಳ ವಿಭಾಗ ದಲ್ಲಿ ಮತ್ತು ರವೀಂದ್ರ ಜಡೇಜ ಅವರು ಆಲ್‌ರೌಂಡರ್‌ಗಳ ವಿಭಾಗ ದಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ.

25 ವರ್ಷ ವಯಸ್ಸಿನ ಬ್ರೂಕ್ (898 ಪಾಯಿಂಟ್) ನ್ಯೂಜಿಲೆಂಡ್ ವಿರುದ್ಧ ವೆಲಿಂಗ್ಟನ್‌ನಲ್ಲಿ ಶತಕ ಬಾರಿಸಿದ್ದರು. ಅವರು ಈಗ ರೂಟ್ (897) ಅವರಿಗಿಂತ ಒಂದು ಪಾಯಿಂಟ್ ಮುಂದಿದ್ದಾರೆ.